ಶ್ರೀ ಪಿ.ಜಿ.ಆರ್. ಸಿಂಧ್ಯ:- ಗೊತ್ತಿಲ್ಲದ ವಿಚಾರ ಯಾವುದೂ ಇಲ್ಲ, ಹಾಗಾದರೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಭರವಸೆಯನ್ನು ಏಕೆ ಕೊಟ್ಟರು? ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದಾಗ, ಅಂತಹ ಕಾಗದಪತ್ರಗಳು ಯಾವುದನ್ನೂ ಸಭೆಯ ಮುಂದೆ ಇಡಬೇಡಿ ಎಂದು ಹೇಳಿರಲಿಲ್ಲವೇ? ನಾನು ಹೇಳುತ್ತಾ ಇರತಕ್ಕಂಥಾದ್ದು ಕಾನೂನುಗಳ ತಿದ್ದುಪಡಿ ವಿಚಾರ ಅಲ್ಲ. ಪ್ರತಿ ನಿತ್ಯವೂ ಸಹಿತ ಸದನದ ಕಾರ್ಯಕಲಾಪಕ್ಕೆ ಸಂಬಂಧಪಟ್ಟ ಹಾಗೆ, ಸರ್ಕಾರಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ಇಡುವುದನ್ನು, ಮಂತ್ರಿಗಳು ಇಲ್ಲದೇ ಹೋದರೆ ಇಡಬೇಡಿ, ಮಂತ್ರಿಮಂಡಲದಲ್ಲಿ ಒಂದು ಶಿಸ್ತು ಬರಬೇಕೆಂದು ನಾವು ವಿನಂತಿ ಮಾಡಿದ್ದು; ಅದನ್ನು ತಾವು ಜ್ಞಾಪಿಸಿಕೊಳ್ಳುವುದಕ್ಕಾಗಿ ಹೇಳ ಬಯಸುತ್ತೇನೆ.

ಅಧ್ಯಕ್ಷರು:- ಆಯಿತು, ಇನ್ನೊಂದು ಸಲ ಹಾಗೆ ಮಾಡುವುದಕ್ಕೆ ಏರ್ಪಾಡು ಮಾಡೋಣ.

3. ವಿಸ್ತೀಯ ಕಾರ್ಯಕಲಾಪ

2002-2003ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಬಿ.ಸೋಮಶೇಖರ್(ಮಳವಳ್ಳಿ):- ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ಈ 2002-2003ನೇ ಆಯವ್ಯಯದ ಮೇಲೆ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ. ನಾನು ಮೊನ್ನೆ ಪ್ರಾರಂಭ ಮಾಡಿದ್ದೆ, ಇವತ್ತು ಅದನ್ನು ಮುಂದುವರಿಸುತ್ತೇನೆ. ಮೊದಲನೆಯದಾಗಿ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಈ ಸರ್ಕಾರ ಇದುವರೆಗೆ ಮೂರು ಆಯವ್ಯಯಗಳನ್ನು ಮಂಡಿಸಿದೆ. 2000-01, 2001-02, ಮತ್ತು ಮೂರನೇ ಸಾಲಿಗೆ 2002-03ನೇ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳೇ ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಇವತ್ತು ಮಂಡಿಸಿದ್ದಾರೆ. ಈ ಮೂರು ಆಯವ್ಯಯಗಳಲ್ಲಿ ನಾನು ಕೆಲವು ಮುಖ್ಯವಾದಂಥ ಅಂಶಗಳನ್ನು ಸ್ವಲ್ಪ ಗಮನಿಸಿ ನೋಡಿದ್ದೇನೆ. ಹಾಗೆ ಇದರಲ್ಲಿ ನೋಡುವುದಾದರೆ ಬಹಳ ಪ್ರಮುಖವಾದಂಥ ಅಂಶ, ನಾನೇನು ತಿಳಿದುಕೊಂಡಿದ್ದೆ ಅಂದರೆ, ಈ ಸರ್ಕಾರ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಅನೇಕ ಸುಧಾರಣೆಗಳನ್ನು ಮಾಡಬಹುದು ಮತ್ತು ನಮ್ಮ ರಾಜ್ಯದ ಬೆಳವಣಿಗೆ ಹೆಚ್ಚು ಮಾಡಬಹುದು ಎನ್ನತಕ್ಕ ನಿರೀಕ್ಷೆ ಮಾಡಿದ್ದೆ.

ಆದರೆ ಅದು ಹುಸಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ರಾಜ್ಯದ ಸ್ಟೇಟ್ ಡೊಮೆಸ್ಟಿಕ್ ಪ್ರಾಡೆಕ್ಟ್ಸ್ ಎಂದೇನು ನಾವು ಕರೆಯುತ್ತೇವೆ, ನಮ್ಮ ರಾಜ್ಯದ ಜಿಡಿಪಿ ನಮ್ಮ ರಾಷ್ಟ್ರದಗಿಂತ ನಾವು ಜಾಸ್ತಿ ಇದ್ದೇವೆ. ರಾಷ್ಟ್ರದ್ದು 5.7 ಇದ್ದರೆ, ನಾವು 6.4 ರಲ್ಲಿದ್ದೇವೆ. ಈ ವರ್ಷದಲ್ಲಿ ಅದು 5.4ಕ್ಕೆ ಇಳಿದಿದೆ. ಅಂದರೆ ರಾಜ್ಯದ ಒಟ್ಟು ಬೆಳವಣಿಗೆ ಶೇಕಡ 1ರಷ್ಟು ಇಳಿದಿದೆ. 6.4 ಇದ್ದುದು ಇವೊತ್ತು 5.4ಕ್ಕೆ ಇಳಿದಿರತಕ್ಕಂಥಾದ್ದು ಬಹಳ ಆತಂಕಕಾರಿಯಾದಂಥ ವಿಚಾರವಾಗಿದೆ. ಇದಕ್ಕೆ ಕಾರಣಗಳೇನಿರಬಹುದು? ನಮ್ಮ ರಾಜ್ಯದ ಬೆಳವಣಿಗೆಯನ್ನು ಯಾವ ದೃಷ್ಟಿಕೋನದಲ್ಲಿ ನೋಡುತ್ತಿದ್ದೇವೆ ಅಂದರೆ, ನಮ್ಮ ಸ್ಟೇಟ್ ಡೊಮೆಸ್ಟಿಕ್ ಪ್ರಾಡೆಕ್‌ನ್ನು ಆಧಾರದ ಮೇಲೆ ನಾವು ಅಳೆಯುತ್ತೇವೆ. ಕೃಷಿ ಕ್ಷೇತ್ರದಲ್ಲಿ ಯಾವರೀತಿಯ ಬೆಳವಣಿಗೆಯಾಗಿದೆ, ಉದ್ಯೋಗದಲ್ಲಿ ಯಾವರೀತಿಯ ಬೆಳವಣಿಗೆಯಾಗಿದೆ ಮತ್ತು ಸಾಮಾಜಿಕ ಕಾರ್ಯಕ್ರಮಗಳು, ಅಂದರೆ ಬಡವರ ಕಲ್ಯಾಣಕ್ಕೋಸ್ಕರವಾಗಿ ಯಾವ ಯಾವ ಬೆಳವಣಿಗೆಯ ಕಾರ್ಯಗಳು ಆಗಿವೆ, ಕೈಗಾರಿಕಾ

ಬೆಳವಣಿಗೆಯು ಯಾವ ರೀತಿಯಲ್ಲಿ ಆಗಿದೆ, ಈ ಎಲ್ಲಾ ವಿಚಾರಗಳನ್ನು ಗಣನೆಯಲ್ಲಿಟ್ಟುಕೊಂಡು ನಾವು ಸ್ಟೇಟ್ ಡೊಮೆಸ್ಟಿಕ್ ಪ್ರಾಡೆಕ್ಟ್‌ನ್ನು ಅಳತೆ ಮಾಡುತ್ತೇವೆ. ಇದು ಹೀಗೆ ಕಡಿಮೆಯಾಗಲು ಎರಡು ಮೂರು ಕಾರಣಗಳಿವೆ. ಮೊದಲನೆಯದಾಗಿ ನಮ್ಮ ಆಡಳಿತದಲ್ಲಿ ಅದರೆ ಗವರ್ನೆನ್ಸ್, ಅದರಲ್ಲಿ ಏನೋ ನ್ಯೂನತೆಗಳು ಇರಬಹುದು. ದುರ್ಬಲವಾದಂಥ ಆಡಳಿತವಿದ್ದರೆ, ನಮ್ಮ ಆರ್ಥಿಕ ಬೆಳವಣಿಗೆ ಕಡಿಮೆಯಾಗುತ್ತದೆ. ಗ್ರೋಥ್ ಓರಿಯೆಂಟೆಡ್ ಆಯವ್ಯಯವನ್ನು ಮಂಡಿಸಬೇಕಾದರೆ, ರಾಜ್ಯಾಡಳಿತದಲ್ಲಿ ಸ್ವಲ್ಪ ಬಿಗಿಯಾದಂಥ ಆಡಳಿತ, ಭ್ರಷ್ಟಾಚಾರ ರಹಿತವಾದಂಥ ಆಡಳಿತ, ಮತ್ತು ದಕ್ಷತೆಯಿಂದ ಕೂಡಿರತಕ್ಕಂಥ ಆಡಳಿತ,- ಇವುಗಳು ಇದ್ದಾಗ ಮಾತ್ರ ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆ ಅಭಿವೃದ್ಧಿಯಾಗುತ್ತದೆ. ಹಾಗೆಯೇ ನಮ್ಮ ಹಣಕಾಸಿನ ವ್ಯವಹಾರದಲ್ಲಿ ನಮ್ಮ ಸರಕಾರವು ಯಾವರೀತಿಯಲ್ಲಿ ನಡೆದುಕೊಂಡಿದೆ, ಅದು ಒಳ್ಳೆಯ ಆರ್ಥಿಕ ವ್ಯವಹಾರವನ್ನು ಮಾಡಿದೆಯೇ? ಈ ಆರ್ಥಿಕ ಮೆನೇಜ್ ಮೆಂಟ್ ಸರಿಯಾಗಿ ಆಗದೇ ಇರತಕ್ಕಂಥಾದ್ದು ಮತ್ತು ಅದಕ್ಕೆ ಬೇರೆ ಕಾರಣಗಳನ್ನು ಕೊಡಬಹುದು. ಮತ್ತೆ ಸರಕಾರ ಇದರ ಬಗ್ಗೆ ಯಾವುದೇ ಅಧ್ಯಯನವನ್ನು ಮಾಡಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಆರ್ಥಿಕ ಬೆಳವಣಿಗೆಯು ಹಿಂದೆ ಹೋಗಬೇಕಾದರೆ, ಅದಕ್ಕೆ ಯಾವ್ಯಾವ ಅಂಶಗಳು ಕಾರಣವಾಗಿವೆ, ಸರಕಾರ ಯಾವ ಯಾವ ಹಂತದಲ್ಲಿ ಎಡವಿದೆ ಎನ್ನತಕ್ಕಂಥದ್ದನ್ನು ಅಧ್ಯಯನ ಮಾಡಿಲ್ಲವೆಂಬುದು ನನ್ನ ಒಂದು ಅನಿಸಿಕೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟರು.

``The Karnataka Government upset over the Centre's decision to cut the grant of the State about Rs. 600 crores for the year 2000-01 to 2001-02, today decided not to resort to overdraft facility. The cabinet which discussed at length the State financial health as well as the possible implications of the cut in the central grants, directed the Finance Department to find alternative ways of mobilising funds for the planned works without going in for the overdraft."

ಇದರಲ್ಲಿ ಅವರು ಒಂದು ಆಶ್ವಾಸನೆಯನ್ನು ಕೊಟ್ಟರು. ನಮ್ಮ ಸರಕಾರ ಯಾವುದೇ ಕಾರಣಗಳಿಂದ ಯೋಜನೆಯ ಗಾತ್ರವನ್ನು, ಯೋಜನೆಯ ವೆಚ್ಚವನ್ನು ಕಡಿತ ಮಾಡುವುದಿಲ್ಲ; ಯಾವ ಯಾವ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಎಷ್ಟೆಷ್ಟು ಹಣವನ್ನು ನಾವು ಒದಗಿಸಿಕೊಡುತ್ತೇವೆ, ಅದನ್ನು ನಾವು ಸಂಪೂರ್ಣವಾಗಿ ವಿನಿಯೋಗ ಮಾಡುತ್ತೇವೆ. ಅದರಲ್ಲಿ ಯಾವುದೇ ಒಂದು ಕಡಿತವನ್ನು ನಾವು ಮಾಡುವುದಿಲ್ಲವೆಂದು ಮೊದಲಿಂದಲೂ ಇವರು ಹೇಳಿಕೊಂಡು ಬಂದಿದ್ದಾರೆ. ಆದರೆ 2001-02ರ ಯೋಜನಾ ವೆಚ್ಚವನ್ನು ನಾವು ತೆಗೆದುಕೊಂಡರೆ, ಸುಮಾರು 8588 ಕೋಟಿ ರೂ.ಗಳಷ್ಟು ಯೋಜನಾ ವೆಚ್ಚ ಇದೆ; ಅದರಲ್ಲಿ ಈ ವರ್ಷ, 2002-03ರಲ್ಲಿ 8610 ಕೋಟಿ ರೂಪಾಯಿಗಳಿವೆ. ಅಂದರೆ ಕೇವಲ 22 ಕೋಟಿ ರೂಪಾಯಿಗಳು ಮಾತ್ರ ಯೋಜನ ವೆಚ್ಚಕ್ಕೆ ಹೆಚ್ಚಿಗೆ ಮಾಡಿದ್ದಾರೆ. ಅಂದರೆ ಶೇಕಡಾ ಒಂದಕ್ಕಿಂತ ಕಡಿಮೆ ಯೋಜನಾ ವೆಚ್ಚಕ್ಕೆ ನಿಗದಿ ಮಾಡಿರತಕ್ಕಂಥಾದ್ದು ಆಗಿದೆ. ನಾವು ಇದನ್ನು ಶೇಕಡಾವಾರು ಯೋಜನೆ ಮಾಡುವುದಾದರೆ, ಯೋಜನಾ ವೆಚ್ಚದ ಬೆಳವಣಿಗೆಯು ಕೇವಲ 0.002ರಷ್ಟು, ಅಂದರೆ ಒಂದು ಪರ್‌ಸೆಂಟ್‌ಗಿಂತಲೂ ಕಡಿಮೆ.

The growth in public expenditure is insignificant.

ಇದನ್ನು ಯೋಜನೆ ಮಾಡುವುದಾದರೆ, ಈ ಒಂದು ಬಜೆಟ್ it is notg growth oriented budget. ಅದನ್ನು ಎಲ್ಲರೂ ಒಪ್ಪಲೇಬೇಕಾಗುತ್ತದೆ. ಇದಕ್ಕೆ ಕಾರಣಗಳನ್ನು ನಾವು ಹೇಳುತ್ತಾ ಹೋದರೆ, ಯಾವ ಯಾವುದಕ್ಕೆ ಕಡಿಮೆ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾವು ಯೋಜನೆ ಮಾಡುವುದಾದರೆ, ಆ ಕುರಿತು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಶಿಕ್ಷಣ ಕ್ಷೇತ್ರವು ಬಹಳ ಪ್ರಮುಖವಾದಂಥ ಕ್ಷೇತ್ರ; ನಂತರ ಆರೋಗ್ಯ. ಕುಡಿಯುವ ನೀರು, ನೈರ್ಮಲ್ಯ, ಸಾಮಾಜಿಕ ಕಲ್ಯಾಣ, ಪೌಷ್ಟಿಕ ಆಹಾರಾಂಶ ಮುಂತಾಗಿ 3-4 ಅಂಶಗಳನ್ನು ನಾವು ತೆಗೆದುಕೊಂಡರೆ, ಇದರಲ್ಲಿಯೂ ಕೂಡ ಯಾವುದೇ ರೀತಿಯ ಪರಿಣಾಮಕಾರಿಯಾದಂಥ ಬೆಳವಣಿಗೆಯನ್ನು ಮತ್ತು ಹೆಚ್ಚು ಹಣವನ್ನು ಒದಗಿಸಿರುವಂಥಾದ್ದನ್ನು ನಾವು ಕಾಣುವುದಕ್ಕೆ ಆಗುತ್ತಾ ಇಲ್ಲ. ಶಿಕ್ಷಣ ಕ್ಷೇತ್ರಕ್ಕೆ ನಾವು ಹೋದವರ್ಷ 544.75 ಕೋಟಿ ರೂಪಾಯಿಗಳು ಅಂದರೆ ಶೇಕಡ 6.34 ಪರ್‌ಸೆಂಟ್ ಇಟ್ಟಿದ್ದೆವು. ಈ ವರ್ಷ, 463.87 ಕೋಟಿಗಳು; ಅಂದರೆ ಸಾಮಾನ್ಯವಾಗಿ ಈ ಒಂದು ವಲಯಗಳಲ್ಲಿ ಇದು ವರ್ಷೇ, ವರ್ಷೇ ಹೆಚ್ಚಾಗುತ್ತಾ ಹೋಗಬೇಕು. ಆದರೆ ಈ ವರ್ಷದಲ್ಲಿ 111 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಅಂದರೆ 5.36 ಅಂದರೆ ಶೇಕಡ ಒಂದು ಮಾತ್ರ ಆಗಿದ್ದು 111 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಆರೋಗ್ಯ ವಲಯದಲ್ಲಿ ತೆಗೆದುಕೊಂಡರೆ, ಹೋದ ವರ್ಷ ಸುಮಾರು 268.80 ಕೋಟಿ ರೂಪಾಯಿಗಳು ಆಗಿದ್ದರೆ, ಅಂದರೆ 3.13 ಪರ್‌ಸೆಂಟ್ ಆಗಿದ್ದರೆ, ಈ ವರ್ಷ 192.46 ಕೋಟಿ ರೂಪಾಯಿಗಳು ಅಂದರೆ, 2.24 ಪರ್‌ಸೆಂಟ್ ಆಗಿದೆ. ಇದರಲ್ಲಿಯೂ ಕೂಡ ಒಂದು ಪರ್‌ಸೆಂಟ್ ಕಡಿಮೆಯಾಗಿದೆ. ಹೋದವರ್ಷಕ್ಕೂ ಈ ವರ್ಷಕ್ಕೂ 64 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಅದೇ ರೀತಿಯಲ್ಲಿ ವಾಟರ್‌ಸಪ್ಲೈ ಮತ್ತು ಸ್ಯಾನಿಟೇಷನ್ ತೆಗೆದುಕೊಂಡರೆ 610.97 ಕೋಟಿ ರೂಪಾಯಿಗಳು ಹೋದ ವರ್ಷ ಇದ್ದರೆ, ಈ ವರ್ಷ 529.80 ಕೋಟಿ ರೂಪಾಯಿಗಳು; ಅಂದರೆ ಇದು 6.15 ಪರ್‌ಸೆಂಟ್, ಹೋದ ವರ್ಷ 7.10 ಪರ್‌ಸೆಂಟೇಜ್, ಇದರಲ್ಲಿಯೂ 71ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಅದೂ ಕೂಡ ಒಂದು ಪರ್‌ಸೆಂಟ್ ಕಡಿಮೆಯಾಗಿದೆ. ಸಾಮಾಜಿಕ ಕಲ್ಯಾಣ್ ಮತ್ತು ಪೌಷ್ಟಿಕ ಆಹಾರಾಂಶದಲ್ಲಿ 33 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಅಂದರೆ ಅದು 0.39 ಪರ್‌ಸೆಂಟ್‌ನಷ್ಟು ಕಡಿಮೆಯಾಗಿದೆ. ಎಲ್ಲಕ್ಕಿಂತಲೂ ಪ್ರಾಮುಖ್ಯವಾದುದು ಉದ್ಯೋಗದ ವಿಚಾರ. ಮಾನ್ಯ ಮುಖ್ಯಮಂತ್ರಿಯವರು ಪ್ರಥಮದಲ್ಲಿಯೇ ಏನು ಹೇಳಿದ್ದಾರೆ ಅಂದರೆ; "ಕಳೆದ ಎರಡು ವರ್ಷಗಳಲ್ಲಿ ನಮ್ಮ ಸರಕಾರದ ಕಾರ್ಯನಿರ್ವಹಣೆಯ ತಳಹದಿಯ ಮೇಲೆ, ಈ ವರ್ಷದ ನಮ್ಮ ಮುಂಗಡಪತ್ರವನ್ನು ನಾವು ನಿರೂಪಿಸಿದ್ದೇವೆ. ಜನತೆಯ ಪಾಲ್ಗೊಳ್ಳುವಿಕೆಯನ್ನು ಬಲಗೊಳಿಸುವುದು, ಪ್ರಗತಿಗೆ ಪ್ರಚೋದನೆ ನೀಡುವುದು ಮತ್ತು ಉದ್ಯೋಗ ಸೃಜಿಸುವುದು ನಮ್ಮ ಆಶಯಗಳಾಗಿವೆ" ಎಂದು ಹೇಳಿದ್ದಾರೆ; ಅಂದರೆ ಉದ್ಯೋಗ ಸೃಷ್ಟಿ ಮಾಡತಕ್ಕಂಥಾದಕ್ಕೆ ಆಧ್ಯತೆ ಎಂದು ಹೇಳಿ, ಇಲ್ಲಿ ಉದ್ಯೋಗಕ್ಕೆ ಒದಗಿಸಿರತಕ್ಕಂಥಾದ್ದು ಏನಿದೆ, ಅದರಲ್ಲಿಯೂ ಮೂರೂವರೆ ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಹೋದ ವರ್ಷ 18.80 ಕೋಟಿ ರೂಪಾಯಿಗಳು ಇದ್ದರೆ, ಈ ವರ್ಷ 15.30 ಕೋಟಿ ರೂಪಾಯಿಗಳು ಆಗಿದೆ. ಇದರಲ್ಲಿಯೂ ಕೂಡ ತಾವೇನು ಹೇಳುತ್ತಾ ಬಂದಿದ್ದೀರಿ,

ಸಾಮಾಜಿಕ ನ್ಯಾಯವನ್ನು ಒದಗಿಸಿತಕ್ಕಂಥ ವಲಯದಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ, ಸಾಮಾಜಿಕ ಕಲ್ಯಾಣ ಇದರಲ್ಲೆಲ್ಲಾ, ಈ ಪಾಲಿಸಿ ಏನಿದೆ, it is inconsistent with the financial support, ಅದನ್ನು ನಾವು ನೋಡಬಹುದು. ಇನ್ನು ಆದಾಯದ ವಿಚಾರಕ್ಕೆ ಬರುವುದಾದರೆ, ಹೋದ ವರ್ಷಗಳಲ್ಲಿ 23232 ಕೋಟಿ ರೂಪಾಯಿಗಳು ಆದಾಯ ಎಂದು ತೋರಿಸಿದ್ದರು. ಅದಕ್ಕೆ ಮಾರುಕಟ್ಟೆ ಸಾಲ 5900 ಕೋಟಿ ರೂಪಾಯಿಗಳು. ಇದರಲ್ಲಿ ಹೋದ ಸಾರಿ ಮಾರುಕಟ್ಟೆ ಸಾಲ 25.41 ಪರ್‌ಸೆಂಟ್ ಆಗಿದೆ. ಈ ವರ್ಷ ಆದಾಯವು 25542 ಕೋಟಿಗಳಿದ್ದರೆ, ಮಾರುಕಟ್ಟೆ ಸಾಲ 6743 ಕೋಟಿ ರೂಪಾಯಿಗಳು. ಅಂದರೆ ಈ ವರ್ಷವೂ 26.41 ಪರ್‌ಸೆಂಟ್ ಆಯಿತು. ಅಂದರೆ ಮಾರ್ಕೆಟ್ ಬಾರೋಇಂಗ್ ಏನಿದೆ ಇದರ ಬಗ್ಗೆ. ತಾವು ಸ್ಟೇಟ್‌ಮೆಂಟ್ ಕೊಟ್ಟಿರುವುದನ್ನೂ ಇಲ್ಲಿರುವುದನ್ನೂ ನೋಡಿದರೆ ಮಾರ್ಕೆಟ್ ಬಾರೋಯಿಂಗ್ ಜಾಸ್ತಿ ಮಾಡಿದ್ದೀರಿ. ಅಂದರೆ ಇದರಿಂದ ಶೇಕಡ ಒಂದರಷ್ಟು ಮಾರ್ಕೆಟ್ ಬಾರೋಯಿಂಗ್ ಜಾಸ್ತಿಯಾಯಿತು. ಆದ್ದರಿಂದ ಇದು ಇನ್ ಫ್ಲೇಷನರಿ ಬಜೆಟ್ ಅಂತ ಹೇಳಬಹುದು. ಹೋದವರ್ಷಕ್ಕಿಂತ ಒಂದು ಪರ್ಸೆಂಟ್ ಈ ಸಾಲಿನಲ್ಲಿ ಅದು ಜಾಸ್ತಿಯಾಯಿತು. ಅಂದರೆ ನಮ್ಮ ರಾಜ್ಯದಲ್ಲಿ ಮಾರ್ಕೆಟ್ ಶೇರ್ ಮೂರು ವರ್ಷಗಳದ್ದು ತೆಗೆದುಕೊಂಡರೆ ಒಂದೊಂದು ವರ್ಷದಲ್ಲೂ ಒಂದು, ಎರಡು ಪರ್ಸೆಂಟ್ ಜಾಸ್ತಿಯಾಗುತ್ತಾ ಹೋಗುತ್ತಿದೆ. ಅಂದರೆ ಇದುವರೆಗೂ 4 ಪರ್ಸೆಂಟ್ ಜಾಸ್ತಿಯಾದಂತಾಯಿತು.

ನಮ್ಮಲ್ಲಿ ರೆವಿನ್ಯೂ ಅಕೌಂಟ್ ಮತ್ತು ಕ್ಯಾಪಿಟಲ್ ಅಕೌಂಟ್ ಎಂದು ಎರಡು ಇವೆ. ರೆವಿನ್ಯೂ ಅಕೌಂಟಿನಲ್ಲಿ ನೀವೇನು ಆದಾಯ ನಿರೀಕ್ಷೆ ಮಾಡಿದ್ದೀರಿ ಮತ್ತು ಏನು ಸಾಧನೆ ಆಗಿದೆ ಎಂಬುದನ್ನೂ ನೋಡಿದರೆ ನಿಮ್ಮ ನಿರೀಕ್ಷಣೆಯೇ ಅಧಿಕವಾಗಿದೆ, ಅಂದರೆ ಓವರ್ ಎಸ್ಟಿಮೆಟ್ ಮಾಡಿರುವುದನ್ನು ಪ್ರತಿ ಬಜೆಟಿನಲ್ಲೂ ನೋಡಬಹುದಾಗಿದೆ. ಮೂರು ಬಜೆಟ್‌ಗಳಲ್ಲೂ ಇದನ್ನ ಕಾಣಬಹುದು. ಅದಕ್ಕೆ ಕಾರಣಗಳೇನು? ಮತ್ತು ರೆವಿನ್ಯೂ ಅಕೌಂಟಿನಲ್ಲಿ ಎಸ್ಟಿಮೇಟನ್ನು ಮಾಡುವಾಗ ನೀವು ಜಾಸ್ತಿ ಎಸ್ಟಿಮೇಟ್ ಮಾಡಿ ಅದರಲ್ಲಿ ಕಡಿಮೆ ಸಾಧಿಸಲು ಕಾರಣಗಳು ಏನು? ಇದನ್ನು ನಾವು ವಿಶ್ಲೇಷಣೆ ಮಾಡಿ ನೋಡಿದಾಗ 2001-02ರಲ್ಲಿ ರೆವಿನ್ಯೂ ಅಕೌಂಟಿನಲ್ಲಿ 17328 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಲಾಗಿತ್ತು, ಅದರಲ್ಲಿ ರಿಮೈಸ್ ಮಾಡಿದ್ದು 15924 ಕೋಟಿ ರೂ. ಮಾತ್ರ; ಅದರಲ್ಲಿ 1400 ಕೋಟಿ ರೂಪಾಯಿ ಬ್ಯಾಲೆನ್ಸನ್ನು ತೋರಿಸಿದ್ದೀರಿ. 2000-01ರಲ್ಲಿ 15212 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿ ರಿವೈಸ್ ಮಾಡಿರುವುದು 14911.89 ಕೋಟಿ ರೂಪಾಯಿ ಅಂದರೆ 300 ಕೋಟಿ ರೂಪಾಯಿ ಬ್ಯಾಲೆನ್ಸ್ ತೋರಿಸಲಾಗಿದೆ. ಈ ವರ್ಷ 1400 ಕೋಟಿ ರೂ. ತೋರಿಸಿರುವುದು ನಾಲ್ಕು ಪಟ್ಟು ಎಸ್ಟಿಮೇಟನ್ನು ಮಾಡಿದಂತೆ ಆಗಿದೆ. ಆದ್ದರಿಂದ ಇದರಲ್ಲಿ ಬಹಳ ಅಂಬಿಶಿಯಸ್ ಎಸ್ಟಿಮೇಟ್ ಮಾಡಿದ್ದೀರಿ ಎಂದಾಯಿತು. ಮತ್ತೆ ರಿವೈಸ್ಡ್ ಮಾಡಿರತಕ್ಕದ್ದು ಬಹಳ ಕಡಿಮೆ. ಅದರಲ್ಲಿ ಸೇಲ್ಸ್ ಟ್ಯಾಕ್ಸ್ ಇರಬಹುದು, ಸೆಂಟ್ರಲ್ ಟ್ಯಾಕ್ಸ್ ಕಾಂಟ್ರಿ ಬ್ಯೂಷನ್ ಇರಬಹುದು ಇವನ್ನು ನಾವು ನೋಡುತ್ತಾ ಬಂದರೆ. ಸೆಂಟ್ರಲ್ ಟ್ಯಾಕ್ಸ್‌ನಲ್ಲಿ ನೀವು ಎಸ್ಟಿಮೇಟ್ ಮಾಡಿದ್ದು 10851 ಕೋಟಿ ರೂ.ಗಳು ಅಕ್ಚುಯಲ್ ಕಲೆಕ್ಷನ್ ಆಗಿರುವುದು 10115 ಕೋಟಿ, ರೂ.ಗಳು ಅಂದರೆ 736 ಕೋಟಿ ರೂ.ಗಳನ್ನು ಇವತ್ತು ಬ್ಯಾಲೆನ್ಸ್ ಇದೆ. ಸೆಂಟ್ರಲ್ ಟ್ಯಾಕ್ಸ್ ಎಸ್ಟಿಮೇಟ್ ಮಾಡಿರುವುದು 3080 ಕೋಟಿ ರೂ. ಅಚ್ಯುಯಲ್ ಕಲೆಕ್ಷನ್

ಆಗಿರುವುದು 2520 ಕೋಟಿ ರೂಪಾಯಿಗಳು ಅದರಲ್ಲಿ 555 ಕೋಟಿ ರೂ. ಕಡಿಮೆ ಆಯಿತು. ಅಂದರೆ ಇವೆರಡೂ ಸೇರಿಸಿದರೆ 1300 ಕೋಟಿ ರೂಪಾಯಿ ಬ್ಯಾಲೆನ್ಸ್ ಆಯಿತು. ಹಾಗೆಯೇ ಬಂಡವಾಳ ಲೆಕ್ಕವನ್ನು ನೋಡಿದರೆ ಇಲ್ಲಿ ಅದಕ್ಕೆ ವಿರುದ್ಧವಾಗಿದೆ. ಅಲ್ಲಿ ಓವರ್ ಎಸ್ಟಿಮೇಟ್ ಮಾಡಿ ರಿವೈಸ್ ಮಾಡಿದ್ದೀರಿ, ಇಲ್ಲಿ ಹೆಚ್ಚು ಸಾಲ ಮಾಡಿ ಕಡಿಮೆ ಅಂದಾಜು ತೋರಿಸಿದ್ದೀರಿ. ಹೋದ ವರ್ಷ 2000-01ರಿಂದ 4457 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ 4582 ಕೋಟಿ ರೂ. ತೋರಿಸಿದಿರಿ, ಅಂದರೆ 130 ಕೋಟಿ ರೂಪಾಯಿ ಕಡಿಮೆ ಎಸ್ಟಿಮೇಟ್ ಮಾಡಲಾಯಿತು. ಅಂದರೆ ಎಸ್ಟಿಮೇಟ್‌ನಲ್ಲಿ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಸಾಲ ಮಾಡಿದಿರಿ. ಮತ್ತೆ ಕೇಂದ್ರ ಸರ್ಕಾರದಿಂದ ನೀವು 1227 ಕೋಟಿ ರೂ. ತರುತ್ತೇವೆಂದು ಹೇಳಿದ್ದಿರಿ, ಆದರೆ ನೀವು ತಂದಿದ್ದು ಕೇವಲ 1071 ಕೋಟಿ-ರೂಪಾಯಿ ಈ ಸಾಲ ಸಾಫ್ಟ್ ಲೋನ್, ಅದಕ್ಕೆ ಬಡ್ಡಿ ದರ ಕಡಿಮೆ ಇರುತ್ತದೆ. ಈ ಸಾಫ್ಟ್ ಲೋನ್‌ಅನ್ನು ನೀವು ಹೆಚ್ಚು ಮಾಡಿದ್ದಿದ್ದರೆ ಏನೂ ತೊಂದರೆ ಇರುತ್ತಿರಲಿಲ್ಲ. ಆದರೆ ಅದರಲ್ಲೂ 156 ಕೋಟಿ ರೂಪಾಯಿಗಳು ಕಡಿಮೆಯನ್ನು ತೋರಿಸಿದ್ದೀರಿ. ಅದರ ಬದಲು ನೀವು ಪಬ್ಲಿಕ್ ಅಕೌಂಟಿನಿಂದ ಜಾಸ್ತಿ ಡ್ರಾ ಮಾಡಿಕೊಂಡಿದ್ದೀರಿ. 448 ಕೋಟಿ ರೂಪಾಯಿ ನೀವು ತೋರಿಸಿದಿರಿ, ಆದರೆ ನೀವು ಡ್ರಾ ಮಾಡಿದ್ದು ಕೇವಲ 960 ಕೋಟಿ ರೂ. ಮಾತ್ರ, ಅಂದರೆ 512 ಕೋಟಿ ರೂ.ಗಳನ್ನು ಹೆಚ್ಚಿಗೆ ಪಬ್ಲಿಕ್ ಅಕೌಂಟಿನಿಂದ ಡ್ರಾ ಮಾಡಿದಿರಿ. 2001-02ರಲ್ಲಿ ಕೇಂದ್ರದಿಂದ ಪಡೆದಂತಹ ಸಾಲ 2106 ಕೋಟಿ ರೂ.ಗಳು ಆದರೆ ತಂದಿರುವುದು 1965 ಕೋಟಿ ರೂ.ಗಳು ಮಾತ್ರ, ಅಂದರೆ ಅದರಲ್ಲೂ 141 ಕೋಟಿ ರೂಪಾಯಿ ಕಡಿಮೆಯಾಗಿದೆ. ಅಂದರೆ ಎರಡೂ ವರ್ಷಗಳಲ್ಲಿ ಕೇಂದ್ರದಿಂದ ತರುವ ಸಾಲದ ಬಾಬ್ತು ಎಸ್ಟಿಮೇಟ್ ಮಾಡಿದ್ದಕ್ಕಿಂತ ಎಷ್ಟು ಎಸ್ಟಿಮೇಟ್ ಮಾಡಿದ್ದೀರಿ, ಅದಕ್ಕಿಂತ ಕಡಿಮೆ ಪಡೆದಿದ್ದೀರಿ. ಆದರೆ ಹೆಚ್ಚು ಬಡ್ಡಿ ಕೊಡಬೇಕಾದ ಓಪನ್ ಮಾರ್ಕೆಟ್ ಬಾರೋಯಿಂಗ್‌ನಲ್ಲಿ ರೂ.ಗಳು ಹೆಚ್ಚು ಹಣವನ್ನು ಪಡೆದುಕೊಂಡಿರುವುದನ್ನು ನಾವು ಇಲ್ಲಿ ನೋಡಬಹುದು. ಅಂದರೆ 2001-02ರಲ್ಲಿ ಎಸ್ಟಿಮೇಟ್ ಮಾಡಿರುವುದು 738 ಕೋಟಿ, ನೀವು ಪಡೆದಿರುವುದು 1047 ಕೋಟಿ ರೂ.ಗಳು ಅಂದರೆ 309 ಕೋಟಿ ರೂ.ಗಳು ಹೆಚ್ಚು ಸಾಲ ಮಾಡಿದ್ದೀರಿ. ಎಲ್‌ಐಸಿ, ಆರ್‌ಬಿಐ ಎನ್‌ಸಿಡಿಸಿ, ನಂತಹ ಹೆಚ್ಚು ಬಡ್ಡಿ ವಸೂಲು ತರಲು ಎಸ್ಟಿಮೇಟ್ ಮಾಡಿದ್ದ ಮಾಡಲು ಹಣಕಾಸು ಸಂಸ್ಥೆಗಳಿಂದ, ರೂ. 1637 ಕೋಟಿ ರೂ.ಗಳಲ್ಲಿ ನೀವು ತಂದಿರುವುದು 1697 ಕೋಟಿ-ರೂ. ಅದರಲ್ಲೂ 60 ಕೋಟಿ, ರೂ. ಹೆಚ್ಚಿಗೆ ಮಾಡಿದಿರಿ. ಮತ್ತೆ ವಸೂಲಾತಿ ಮಾಡುವ ಹೆಡ್ ಏನಿದೆ ಅದರಲ್ಲೂ ವಸೂಲಾತಿಯನ್ನು ಏನು ತೋರಿಸಿದ್ದಿರಿ, ಅದಕ್ಕಿಂತ ಕಡಿಮೆ ವಸೂಲಾತಿ ಮಾಡಿರುವಿರಿ. 202 ಕೋಟಿ ರೂ. ವಸೂಲಾತಿ ಮಾಡಬೇಕಾಗಿದ್ದುದು 185 ಕೋಟಿ ರೂ. ಮಾತ್ರ ಮಾಡಿದಿರಿ. 17 ಕೋಟಿ ರೂಪಾಯಿಗಳು ಕಡಿಮೆ ಆಯಿತು. ಇದರಿಂದ ಆಡಳಿತದಲ್ಲಿ ಅಷ್ಟು ಬಿಗಿ ಇಲ್ಲ, ಎಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಆರ್ಥಿಕ ಮ್ಯಾನೇಜ್ ಮೆಂಟ್‌ನಲ್ಲಿ ಯಾವ ರೀತಿ ನಡೆಸ ಬೇಕಾಗಿತ್ತೋ ಆ ರೀತಿ ನಡೆಸಿಲ್ಲ. ಅಂದರೆ ಈ ವರ್ಷ ರೆವಿನ್ಯೂ ಅಕೌಂಟ್‌ನಲ್ಲಿ 15966 ಕೋಟಿ ರೂಪಾಯಿಗಳ ಅಕ್ಚುಯಲ್ ರಿಯಲೈಜೇಷನ್; ಎಸ್ಟಿಮೇಟ್ ಮಾಡಿದ್ದು 18798 ಕೋಟಿ, ರೂ.ಗಳು ಅಂದರೆ 2870 ಕೋಟಿ ರೂಪಾಯಿಗಳ ಹೆಚ್ಚು ಸಂಗ್ರಹಣೆ ಮಾಡುತ್ತೇವೆಂದು ತಾವು ಹೇಳಿದ್ದಿರಲ್ಲಾ, ಹಿಂದಿನ ವರ್ಷದ ಅನುಭವದ ಮೇಲೆ ಈ 2870 ಕೋಟಿ ರೂ.ಗಳನ್ನು ಯಾವ ರೀತಿ ನೀವು ಸಂಗ್ರಹಣೆ ಮಾಡಲು ಸಾಧ್ಯ? ಯಾವ್ಯಾವ ಮೂಲದಿಂದ

ಮಾಡುವಿರಿ ಎಂಬುದನ್ನು ನೀವು ಇವತ್ತು ಎಲ್ಲೂ ಹೇಳಿಲ್ಲ. ಅಂದರೆ 2001ರಲ್ಲಿ ನೀವು 300 ಕೋಟಿ ರೂಪಾಯಿ ಕಡಿಮೆ ಮಾಡಿದಿರಿ, 2002ರಲ್ಲಿ 1400 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಕ್ಕಿಂತ ಹೆಚ್ಚು ತೋರಿಸಿದ್ದೀರಿ. ಆಯಿತು; 2003ರಲ್ಲಿ 1870 ಕೋಟಿ ರೂ. ಮತ್ತು ಈ ಬಂಡವಾಳದ ಲೆಕ್ಕದಲ್ಲಿ ನೋಡಿದರೆ ಎಸ್ಟಿಮೇಟ್ ಮಾಡಿರುವುದು ಈ ವರ್ಷಕ್ಕೆ 6743 ಕೋಟಿ, ರೂ.ಗಳು ಆಕ್ಚುಯಲ್ ರಿಯಲೈಜೇಷನ್ ಆಗಿರುವುದು 5885 ಕೋಟಿ, ರೂಪಾಯಿಗಳು ಅಂದರೆ 858 ಕೋಟಿ ರೂ.ಗಳು ಇದರಲ್ಲು ಸಹ ನೀವು ಏನು ಹೇಳಿದ್ದೀರಿ ಅದಕ್ಕಿಂತ ಸಾಲ ಮಾಡಲು ಹೊರಟಿದ್ದೀರಿ. ಅದರಲ್ಲು ಕೇಂದ್ರ ಸರ್ಕಾರದಿಂದ ಬರತಕ್ಕದ್ದು ಅಲ್ಲ. ಮಾರುಕಟ್ಟೆ ಸಾಲದಲ್ಲಿ ಅಂದರೆ ಆರ್ಥಿಕ ಸಂಸ್ಥೆಗಳಿಂದ ಹೆಚ್ಚು ಬಡ್ಡಿ ಕೊಟ್ಟು ಸಾಲವನ್ನು ತರಲು ನೀವು ಹೊರಟಿದ್ದೀರಿ. ಈ ವರ್ಷ ಕೆಲವು ಪ್ರಸ್ತಾಪಗಳನ್ನು ಮಾಡಿದ್ದಾರೆ. ಮೊದಲನೆಯದಾಗಿ ಆರ್ಥಿಕ ಬೆಳವಣಿಗೆಗೆ ಬಹಳ ಪ್ರಮುಖ ಕ್ಷೇತ್ರ ಯಾವುದೆಂದರೆ ಕೃಷಿ ರಂಗ.

ಈ ಕೃಷಿ ಕ್ಷೇತ್ರವನ್ನು ನಾವು ಬಲಪಡಿಸಿದರೆ, ಅದರ ಆರ್ಥಿಕ ಬೆಳವಣಿಗೆಯನ್ನು ನಾವು ಕಂಡಾಗ ಅದರಿಂದ ಸ್ವಲ್ಪ ಬೆಳವಣಿಗೆಯಾಗುತ್ತದೆ ಮತ್ತು ಸರ್ಕಾರದವರು ನೀವು ಅದಕ್ಕೆ ಬೇಕಾದ ಉತ್ತೇಜನಗಳನ್ನು ಯಾವರೀತಿ ಕೊಟ್ಟಿದ್ದೀರಿ? ಕೃಷಿ ಉತ್ಪನ್ನಗಳನ್ನು ಹೆಚ್ಚು ಮಾಡುವ ಒಂದು ರೀತಿಯಲ್ಲಿ ಯಾವ ಯಾವರೀತಿ ಹೆಚ್ಚು ಒತ್ತು ಕೊಟ್ಟಿದ್ದೀರಿ? ಯಾವ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಹೇಳಿದರೆ ನೀವು ಹೇಳಿರತಕ್ಕಂದ್ದು ಒಂದು ಸಾಲದ ಮೊತ್ತವನ್ನು ಜಾಸ್ತಿ ಮಾಡುತ್ತೇವೆ, ಅಂದರೆ ಸಾಲದ ಅವಶ್ಯಕತೆ ಎಷ್ಟು ಅಂದಾಜು ಮಾಡಿದ್ದೀರಿ? ಡಾಕ್ಟರ್ ನಂಜುಂಡಪ್ಪನವರ ವರದಿಯನ್ನು ಒಂದು ಸಾರಿ ನೋಡಿದೆ; ಅದರಲ್ಲಿ ಐದು ಸಾವಿರ ಕೋಟಿ ರೂಪಾಯಿಗಳಷ್ಟು ಒಂದು ವರ್ಷಕ್ಕೆ ಸಾಲದ ಅವಶ್ಯಕತೆ ಇದೆ ಎಂದು ಅವರು ಹೇಳಿದ್ದಾರೆ. ಒಂದು ವರ್ಷಕ್ಕೆ ರೈತರಿಗೆ ಈ ನಮ್ಮ ಸಂಘ ಸಂಸ್ಥೆಗಳ ಮುಖಾಂತರ ಕೊಡಬೇಕಾದ ಸಾಲ ಐದು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಅದು ಸುಮಾರು ಎರಡು-ಮೂರು ವರ್ಷಗಳ ಹಿಂದೆ 3700 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿ ಅಂದಾಜು ಮಾಡಿದ್ದಾರೆ. ಆದರೆ ತಾವು ಅದಕ್ಕೆ ಕೊಡುತ್ತಿರುವುದು, ಅದಕ್ಕಾಗಿ ತೋರಿಸಿರುವುದು ಸುಮಾರು 2265 ಕೋಟಿ ರೂಪಾಯಿಗಳು, ಅಂದರೆ ಶೇಕಡ 47ರಷ್ಟು ಮಾತ್ರ ನೀವು ಇದನ್ನು ಕವರ್ ಮಾಡುತ್ತಿದ್ದೀರಿ. ಇನ್ನು 53ರಷ್ಟು ರೈತರಿಗೆ ಸಾಲವನ್ನು ಯಾವರೀತಿ ಒದಗಿಸುತ್ತೀರಿ ಎಂಬುದನ್ನು ಹೇಳಿಲ್ಲ. ಅಂದರೆ ಇದರಲ್ಲಿ "5100 ಕೋಟಿ ರೂಪಾಯಿಗಳ ವೆಚ್ಚ ಮಾಡುವುದನ್ನು ಮಾನ್ಯ ಸದಸ್ಯರು ಮೆಚ್ಚುತ್ತಾರೆಂದು ಭಾವಿಸಿದ್ದೇನೆ" ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಬಹಳ ಮೆಚ್ಚುಗೆಯಿಂದ ಹೇಳಿಕೊಂಡಿದ್ದಾರೆ; ನಾನು ಈ ವಲಯಗಳಿಗೆ ಸದಾ ಅತಿಹೆಚ್ಚು ಆದ್ಯತೆ ನೀಡುತ್ತಿದ್ದೇನೆ, ನಮ್ಮ ಸರ್ಕಾರ, ಕೃಷಿಗಾಗಿ 5100 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ, ಇದರಲ್ಲಿ 2000 ಕೋಟಿ ರೂಪಾಯಿಗಳ ವಿದ್ಯುತ್ ಸಹಾಯಧನ ಮತ್ತು 2900 ಕೋಟಿ ರೂಪಾಯಿಗಳ ನೀರಾವರಿ ಸೇರಿದೆ ಎಂದು ಹೇಳಿದ್ದಾರೆ. ಇದನ್ನು ಕಳೆದರೆ ಅದರಲ್ಲಿ ಉಳಿದಿರುವುದು ಎಷ್ಟು? ನಿಮಗೆ ಕೇವಲ 2900 ಕೋಟಿ ರೂಪಾಯಿಗಳು ನೀರಾವರಿಗೆ, 2000 ಕೋಟಿ ರೂಪಾಯಿಗಳು ವಿದ್ಯುತ್ ಸಹಾಯಧನಕ್ಕೆ ಹೋದರೆ ಇನ್ನು ರೈತರ ಸಾಲವನ್ನು ಸುಮಾರು 53 ಪರ್‌ಸೆಂಟ್ ಉಳಿದಿರುವುದರಲ್ಲಿ ಎಷ್ಟು ಮಾಡುತ್ತೀರಿ? ಅದರಲ್ಲಿ 47 ಪರ್‌ಸೆಂಟ್‌ನ್ನು 5100

ಕೋಟಿ ರೂಪಾಯಿಗಳನ್ನು ಯಾವ ರೀತಿ ತರುತ್ತಿದ್ದೀರಿ ಎನ್ನುವುದನ್ನು ತಾವು ಹೇಳಿಲ್ಲ. ಅದು ಬಹಳ ಪ್ರಮುಖವಾದಂಥ ಅಂಗ. ರೈತರು ತಮ್ಮ ಆರ್ಥಿಕ ಬೆಳೆಗಳನ್ನು ಹೆಚ್ಚು ಬೆಳೆಯಬೇಕಾದರೆ ಅವರು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕಾದರೆ ಈ ಒಂದು ಪ್ರಮುಖ ಅಂಗ ಏನಿದೆ, ಅದಕ್ಕೆ ಬೇಕಾದ ಸಾಲಸೌಲಭ್ಯವನ್ನು ಯಾವ ರೀತಿ ನಿರ್ವಹಣೆ ಮಾಡುತ್ತೀರಿ ಎನ್ನುವುದನ್ನೂ ಸಹ ಹೇಳಿಲ್ಲ ಮತ್ತು ಕೋ-ಆಫರೇಟಿವ್ ಸ್ಟ್ರಕ್ಚರ್ ಬಗ್ಗೆ ತಾವು ಹೇಳಿದ್ದೀರಿ, ಆ ಆಲೋಚನೆ ಬಹಳ ಒಳ್ಳೆಯದು. ಅಂದರೆ ಇವತ್ತೇನು ಇದೆ, ರೈತರಿಗೆ ಸಿಗತಕ್ಕ ಸಾಲ ಅಪೆಕ್ಸ್ ಬಾಡಿಯಿಂದ ಕೆಳಗಡೆ ಬರಬೇಕಾದರೆ ಸುಮಾರು ನಾಲ್ಕೈದು ಹಂತಗಳನ್ನು ಹಾದು ಹೋಗಬೇಕಾಗುತ್ತದೆ.ಅದು ಅಪೆಕ್ಸ್ ಬ್ಯಾಂಕ್ ಇರಬಹುದು, ನಂತರ ಡಿಸಿಸಿ ಬ್ಯಾಂಕ್ ಇರಬಹುದು, ತಾಲ್ಲೂಕು ಮಟ್ಟದಲ್ಲಿ ಟಿಎಪಿಸಿಎಂಎಸ್ ಇರಬಹುದು ಮತ್ತು ಅಲ್ಲಿಂದ ಪ್ರೈಮರಿ ಲೆವೆಲ್ ಸೊಸೈಟೀಸ್ ಇರಬಹುದು; ಇಷ್ಟು ಹಂತಗಳನ್ನು ಧಾಟಿ ಬರಬೇಕಾದರೆ ರೈತರಿಗೆ ಬಡ್ಡಿ ಬಹಳ ಜಾಸ್ತಿಯಾಗುತ್ತದೆ. ಅದನ್ನು ಕಡಿಮೆ ಮಾಡಬಹುದು ಎನ್ನುವ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಈ ಆಲೋಚನೆ ಬಹಳ ಒಳ್ಳೆಯದು. ಇದರಿಂದ ಶೇಕಡವಾರು ಎರಡು-ಮೂರರಷ್ಟು ಕಡಿಮೆಯಾಗುತ್ತದೆ ಎನ್ನುವುದು ನಿಜ. ಆದರೆ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ತಾವೇನು ಹೊರಟಿದ್ದೀರಿ, ಇದರ ಒಂದು ಪರಿಣಾಮ, ರ್ಯಾಮಿಫಿಕೇಷನ್ಸ್ ಏನಾಗಬಹುದು? ಈ ಮಧ್ಯದಲ್ಲಿ ಇರತಕ್ಕ ಒಂದು ಸಂಸ್ಥೆಗಳಲ್ಲಿ ಇವತ್ತು ಆಗಲೇ ಇನ್‌ಫ್ರಾಸ್ಟ್ರಕ್ಚರ್ ಇದೆ, ಎಸ್ಟಾಬ್ಲಿಷ್ ಇನ್ಸ್ ಟಿಟ್ಯೂಷನ್ಸ್, ಅದನ್ನು ನೀವು ಯಾವ ರೀತಿ ಮಾಡುತ್ತೀರಿ? ಅದರ ಪರಿಣಾಮವನ್ನು ಯಾವ ರೀತಿ ಎದುರಿಸುತ್ತೀರಿ ಮತ್ತು ಅಪೆಕ್ಸ್ ಬ್ಯಾಂಕ್‌ಗಳಿಂದ ನೇರವಾಗಿ ಕೊಡತಕ್ಕಂಥಾದ್ದಕ್ಕೆ ಯಾವ ರೀತಿ ಕೊಡಬಹುದು ಎನ್ನುವುದನ್ನು ಏನಾದರೂ ಅಧ್ಯಯನ ಮಾಡಿದ್ದೀರಾ ಮತ್ತು ಅಲ್ಲಿರುವ ಎಂಪ್ಲಾಯೀಸ್ ಇರಬಹುದು, ಅವರಿಗೆ ಕೊಡುವ ಸವಲತ್ತುಗಳು ಇರಬಹುದು, ಇದನ್ನು ಯಾವರೀತಿ ಮಾಡುತ್ತೀರಿ? ಇದರ ಬಗ್ಗೆ ನೀವು ಅಧ್ಯಯನ ಮಾಡಿ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಇದರ ಬಗ್ಗೆ ಒಂದು ನಿರ್ಣಯವಾಗಬೇಕಾಗಿತ್ತು. ಇದು ಏನು ಇಲ್ಲದೆ ಘೋಷಣೆ ಮಾಡಿದ್ದೀರಿ. ಇನ್ನು ಎರಡು ವರ್ಷಗಳಾದರೂ ಈ ಒಂದು ಘೋಷಣೆಯನ್ನು ನೀವು ಕಾರ್ಯ ರೂಪಕ್ಕೆ ತರುವುದು ಬಹಳ ಕಷ್ಟವಾಗುತ್ತದೆ. ಅದನ್ನು ಮೊದಲೇ ಅಧ್ಯಯನ ಮಾಡಿ ಮಾಡಬೇಕಾಗಿತ್ತು ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಇದರಿಂದ ಈ ಮಧ್ಯ ಇರುವ ಸಂಸ್ಥೆಗಳ ನೌಕರ ವರ್ಗದವರಿಂದ ಸ್ಟ್ರೈಕ್‌ಗಳು ಆಗಬಹುದು ಮತ್ತು ಇರತಕ್ಕಂಥ ಸವಲತ್ತುಗಳನ್ನು ಏನು ಮಾಡುತ್ತೀರಿ ಎನ್ನತಕ್ಕಂಥದ್ದು; ಇದನ್ನು ಅಧ್ಯಯನ ಮಾಡಿ ಮಾಡಿದ್ದರೆ ಆಗುತ್ತಿತ್ತು. ಈಗ ಇದು ಕೇವಲ ಒಂದು ಘೋಷಣೆಯಾಗುತ್ತದೆ ಎಂದು ನನ್ನ ಒಂದು ಅನಿಸಿಕೆ. ಮತ್ತೆ ಇನ್ನೊಂದು ವಿಚಾರವನ್ನು ತಾವು ಹೇಳಿದ್ದೀರಿ. ಬೆಳೆಗಳಿಗೆ ನಾವು ಮಾರುಕಟ್ಟೆ ಬೆಲೆಯನ್ನು ಕೊಡುತ್ತೇವೆ ಎಂದು. ಇದರಲ್ಲಿ ಬೆಳೆಗಳು ಎಂದರೆ ತಾವು ಸೇರಿಸಿರುವುದು ಕೇವಲ ನಾಲ್ಕೈದು ಬೆಳೆಗಳು ಮಾತ್ರ. ಇನ್ನು ಬಹಳ ಪ್ರಮುಖವಾದ ಬೇಳೆಕಾಳು, ನಮ್ಮ ಹಳ್ಳಿಗಾಡಿನಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಅದಕ್ಕೆ ಬೆಲೆಗಳನ್ನು ಇನ್ನೂ ನಿಗದಿ ಮಾಡಿಲ್ಲ. ತೊಗರಿ ಬೇಳೆಗೆ, ಜೋಳ ಮತ್ತೆ ಇನ್ನು ಕೆಲವುಗಳ ಬಗ್ಗೆ ತಾವು ನಿಗದಿ ಮಾಡಿರಬಹುದು. ಇನ್ನು ಹುರುಳಿ ಇರಬಹುದು, ಉದ್ದು ಇರಬಹುದು, ಹಲಸಂದಿ, ಅವರೆ, ಈ ಎಲ್ಲಾ ಕಾಳುಗಳು ಗ್ರಾಮೀಣ ಪ್ರದೇಶದಲ್ಲಿ ಬಹಳ ಪ್ರಮುಖವಾದಂಥ ಕಾಳುಗಳು; ಬಡವರು ಉಪಯೋಗಿಸತಕ್ಕ ಮತ್ತು ಬಡವರು ಬೆಳೆಯತಕ್ಕಂಥ ಕಾಳುಗಳು. ಇದರ ಬಗ್ಗೆ ನೀವು ಯಾವುದೇ ಚಿಂತನೆಯನ್ನು ಮಾಡಿಲ್ಲ

ಮತ್ತು ಬೇಳೆ ಮಂಡಳಿಯನ್ನು ಮಾಡಬೇಕೆಂದಿದ್ದೀರಿ. ಅದು ಬಹಳ ಸ್ವಾಗತಾರ್ಹವಾದಂಥ ವಿಚಾರ. ಆದರೆ ಅದರ ಜೊತೆಗೆ ನನ್ನ ಸಲಹೆ ಏನೆಂದರೆ ಈ ಬೇರೆ ಕಾಳುಗಳನ್ನು ಸಹ ಸೇರಿಸಬೇಕು. ಇಲ್ಲದಿದ್ದರೆ ಬೇರೆ ಕಾಳುಗಳಿಗೆ ಒಂದು ಮಂಡಳಿಯನ್ನು ಮಾಡಬೇಕೆನ್ನುವುದು ನನ್ನ ಅನಿಸಿಕೆ. ಮತ್ತು ಇನ್ನೊಂದು ವಿಚಾರವನ್ನು ತಾವು ಹೇಳಿದ್ದೀರಿ, ರಾಜ್ಯದಲ್ಲಿ ಒಣ ಭೂಮಿ ವಲಯದಲ್ಲಿ ಅಭಿವೃದ್ಧಿಗಾಗಿ ಸುಮಾರು 690 ಕೋಟಿ ರೂಪಾಯಿಗಳ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ 61,882 ಹೆಕ್ಟೇರ್ ಪ್ರದೇಶದಲ್ಲಿ ನೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕೆ ನಬಾರ್ಡ್ ಸಾಲವನ್ನು ಪಡೆಯುತ್ತೇವೆಂದು ತಾವು ಹೇಳಿದ್ದೀರಿ. ಅಂದರೆ ಇದು ಬಹಳ ಕನ್‌ಸರ್‌ವೇಟಿವ್ ಎಸ್ಟಿಮೇಟ್ ಎಂದು ನಾನು ಅಂದುಕೊಂಡಿದ್ದೇನೆ ನಮ್ಮ ರಾಜ್ಯದಲ್ಲಿ ಜಲಾನಯನ ಪ್ರದೇಶ ಲಕ್ಷಾಂತರ ಹೆಕ್ಟೇರ್‌ನಷ್ಟು ಇದೆ; ಇದನ್ನು ತಾವು ಅಧ್ಯಯನ ಮಾಡಿ, ಎಷ್ಟು ಇರಬಹುದು? ಹಂತ ಹಂತವಾಗಿ ಪ್ರತಿ ವರ್ಷ, ಒಂದು ವರ್ಷಕ್ಕೆ ಎಷ್ಟೆಷ್ಟು ಜಲಾನಯನ ಪ್ರದೇಶವನ್ನು ಅಭಿವೃದ್ಧಿ ಮಾಡುತ್ತೇವೆ, ಅಷ್ಟು ಮಾಡಬೇಕಾದರೆ ಎಲ್ಲಿಂದ ಹಣವನ್ನು ಪಡೆದುಕೊಂಡು ಯಾವ ರೀತಿ ಮಾಡುತ್ತೇವೆಂಬುದನ್ನು ಹೇಳಿಲ್ಲ. ಇದು ಕೇವಲ ಒಂದು ಸಣ್ಣ ಪ್ರದೇಶವನ್ನು ಅಭಿವೃದ್ಧಿ ಪಡಿಸತಕ್ಕಂಥ ಒಂದು ಕಾರ್ಯಕ್ರಮವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಈ ನಿರುದ್ಯೋಗದ ಬಗ್ಗೆ ಹೇಳುವುದಾದರೆ, ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗದ ಸಮಸ್ಯೆ ಬಹಳ ಜಾಸ್ತಿಯಾಗುತ್ತಿದೆ. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಈ ಸಾರ್ವಜನಿಕ ವೆಚ್ಚ ಬಹಳ ಕಡಿಮೆಯಾಗುತ್ತಿರುವುದರಿಂದ, ಕೃಷಿ ಕ್ಷೇತ್ರಗಳಿರಬಹುದು ಮತ್ತು ಬೇರೆ ಬೇರೆ ಕ್ಷೇತ್ರಗಳು ಇರಬಹುದು, ಅಲ್ಲಿ ನೈಪುಣ್ಯತೆ ಇಲ್ಲದೇ ಇರುವ ನಿರುದ್ಯೋಗ ಜಾಸ್ತಿ ಇದೆ. ಉದ್ಯೋಗ ಎಲ್ಲಿ ಸೃಷ್ಟಿಯಾಗುತ್ತಿದೆ ಎಂದರೆ ನೈಪುಣ್ಯತೆಯನ್ನು ಪಡೆದಿರುವ ಸ್ಕಿಲ್ಡ್ ಮೆನ್ ಎಲ್ಲಿ ಸಿಗುತ್ತಾರೆ, ಅದು ಸೈಬರ್ ಇಂಡಸ್ಟ್ರೀ ಇರಬಹುದು, ಮತ್ತು ಬೇರೆ ಬೇರೆ ಮಲ್ಟಿ ನ್ಯಾಷನಲ್ ಕಂಪನಿಗಳಲ್ಲಿ ಏನೇನು ಚಟುವಟಿಕೆಗಳು ಇದೆ, ಅದಕ್ಕೋಸ್ಕರ ಅದು ಕೇವಲ ಮೇಲ್ವರ್ಗದ ಜನರು, ಪಟ್ಟಣ ಪ್ರದೇಶದಲ್ಲಿರುವ ನಿರುದ್ಯೋಗ ಯುವಕರಿಗೆ ಬಹಳ ಸಹಾಯ ಆಗುತ್ತಾ ಇದೆ. ಹಳ್ಳಿಗಾಡಿನಲ್ಲಿ ನೈಪುಣ್ಯತೆ ಇಲ್ಲದೇ ಇರುವ ಅನ್‌ಸ್ಕಿಲ್ಡ್ ಲೇಬರ್ಸ್ ಇದ್ದಾರೆ. ಆದಕ್ಕೆ ಸಾರ್ವಜನಿಕ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ ಕಡಿಮೆಯಾಗುತ್ತಿರುವುದರಿಂದ ಆ ಒಂದು ಕ್ಷೇತ್ರದಲ್ಲಿ ನೀವು ನಿರುದ್ಯೋಗವನ್ನು ಹೋಗಲಾಡಿಸುತ್ತೇವೆ, ಉದ್ಯೋಗವನ್ನು ಸೃಜಿಸುತ್ತೇವೆಂದು ತಾವೇನು ಹೇಳಿದ್ದೀರಿ, ಅದು ಏನೂ ಆಗುವುದಿಲ್ಲ ಎನ್ನತಕ್ಕಂಥದ್ದು ನಮ್ಮ ಒಂದು ಅನಿಸಿಕೆ. ಅದೇ ರೀತಿ ನೀವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ 25 ಸಾವಿರ ಉದ್ಯೋಗಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದೀರಿ. ಸುಮಾರು 25 ಲಕ್ಷ ಇರುವ ನಿರುದ್ಯೋಗಿಗಳಿಗೆ ಕೇವಲ ಒಂದು 25 ಸಾವಿರದ, ಕಾರ್ಯಕ್ರಮವನ್ನು ಹಾಕಿಕೊಂಡರೆ ಅದು ಒಂದು ಪರ್‌ಸೆಂಟ್‌ಗಿಂತಲೂ ಕಡಿಮೆಯಾಗುತ್ತದೆ ಎನ್ನುವುದು ನಮ್ಮ ಒಂದು ಅನಿಸಿಕೆ.

ಮತ್ತೆ ಹಳ್ಳಿ ಜನರಿಗೆ ಸೈಟ್ ಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟನ್ನು ನಾನು ಮೂರು ವರ್ಷದಿಂದಲೂ ನೋಡುತ್ತಿದ್ದೇನೆ. 11 ಲಕ್ಷ ನಿವೇಶನಗಳನ್ನು ಗ್ರಾಮೀಣ ಪ್ರದೇಶದಲ್ಲಿ ಹಂಚುತ್ತೇವೆ ಎಂದು ಹೇಳಿದ್ದಾರೆ ಅದಕ್ಕಾಗಿ ಎಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೆ?

ಎಷ್ಟು ಸೈಟ್‌ಗಳಿಗೆ ಎಂದು ನೋಡುವುದಾದರೆ, 11 ಲಕ್ಷ ಒದಗಿಸಿಕೊಡಬೇಕಾದರೆ, ಮೂರು ವರ್ಷಗಳಲ್ಲಿ ಈಗ ನಮಗೆ ಇರತಕ್ಕ ಬೇಡಿಕೆ, 28 ಲಕ್ಷ ನಿವೇಶನಗಳನ್ನು ಇದುವರೆವಿಗೂ ಕೊಟ್ಟಿದ್ದೇವೆ; ಇನ್ನೂ 15 ಲಕ್ಷ ನಿವೇಶನಗಳನ್ನು ರಾಜ್ಯದಲ್ಲಿ ಕೊಡಬೇಕೆಂಬ ಉದ್ದೇಶ ಇದೆ. ಎಕನಾಮಿಕ್ ಸರ್ವೆ ವರದಿ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶದಲ್ಲಿ ಒಟ್ಟು 28 ಲಕ್ಷ ನಿವೇಶನಗಳನ್ನು ಕೊಟ್ಟಿದ್ದಾರೆ. ಇನ್ನೂ 15 ಲಕ್ಷ ನಿವೇಶನಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ ಇವತ್ತು ಪ್ರಾಯೋಗಿಕವಾಗಿ 15-20 ತಾಲ್ಲೂಕುಗಳನ್ನು ತೆಗೆದುಕೊಂಡು ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ಎಂಟು ಪಂಚಾಯಿತಿಗಳಲ್ಲಿ ಸುಮಾರು 300-300 ಮನೆಗಳನ್ನು ಕೊಡಬೇಕು ಎನ್ನುವಂತಹ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದವು. ಅದು 300 ಮನೆಗಳು ಹೋಗಿ ಇವತ್ತು 100 ಮನೆಗಳಿಗೆ ಇಳಿದಿದೆ. 300 ಮನೆಗಳು ಏನಿದೆ ಅದು ಎಲ್ಲಾ ಪಂಚಾಯತಿಗಳಿಗೆ ಅಲ್ಲ. ಒಂದು ಆಯ್ದ 15 ತಾಲ್ಲೂಕುಗಳಲ್ಲಿ ಎಂಟು ಪಂಚಾಯತಿಗಳಿಗೆ 300 ಮನೆಗಳನ್ನು ಕೊಡತಕ್ಕ ಕಾರ್ಯಕ್ರಮವನ್ನು ಮೊದಲು ಪ್ರಯೋಗಿಕವಾಗಿ ಘೋಷಣೆ ಮಾಡಿ ಇವತ್ತು ಕೇವಲ 100 ಮನೆಗಳಿಗೆ ಇಳಿಸಿದ್ದೇವೆ. ಅಂದರೆ ತಾವೇನು 11 ಲಕ್ಷ ನಿವೇಶನಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ, ಅದನ್ನು ಇನ್ನು ಮೂರು ವರ್ಷಗಳಲ್ಲಿ ಯಾವ ರೀತಿ ನಿರ್ವಹಣೆ ಮಾಡುತ್ತೀರಿ ? ಅದಕ್ಕೆ ನೀವು ಹಣವನ್ನು ಒದಗಿಸಿ ಕೊಟ್ಟಿಲ್ಲ. ಏಕೆಂದರೆ ನನ್ನ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ತೆಗೆದುಕೊಂಡಿರುವುದನ್ನು ನೋಡಿದರೆ 300 ಮನೆಗಳನ್ನು ತೆಗೆದುಕೊಂಡಿರುವುದನ್ನು ಇವತ್ತು 100 ಮನೆಗಳಿಗೆ ಇಳಿಸಿದ್ದೇವೆ. ತಾವು ಏನು ಗುರಿ ಇಟ್ಟುಕೊಂಡಿದ್ದೀರಿ, ಅದನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕದ್ದು ನನ್ನ ಒಂದು ಅನಿಸಿಕೆ. ಪ್ರತಿ ಒಂದು ಘೋಷಣೆಗಳನ್ನು ಮಾಡಿ ಅದನ್ನು ಅನುಷ್ಠಾನಕ್ಕೆ ತರದೇ ಇದ್ದರೆ ಬಹುಶಃ ಅದು ಘೋಷಣೆಗಳಾಗಿಯೇ ಉಳಿಯುತ್ತದೆ ಎಂದು ನನ್ನ ಒಂದು ಅನಿಸಿಕೆ. ಅದಕ್ಕೆ ಉದಾಹರಣೆ ಹೇಳಬೇಕಾದರೆ ಹೋದ ವರ್ಷ ಒಂದು ಘೋಷಣೆ ಮಾಡಿದರು. Minister for Information, Tourism and Youth Services - "The Right to information Act has been passed and the rules will be implemented in the next 90 days." ಅದಕ್ಕಾಗಿ ನಾವು ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದೆವು: ಮಾನ್ಯ ಚಂದ್ರಶೇಖರ್ ಅವರು ಇಲ್ಲಿ ಇದ್ದಾರೇನೋ ಗೊತ್ತಿಲ್ಲ. ಪ್ರೆಸ್ ಕಾನ್‌ಫರೆನ್ಸ್‌ಗಳನ್ನು ಮಾಡಿದ್ದೇ ಮಾಡಿದ್ದು; ನಮ್ಮ ಸರ್ಕಾರ ಪಾರದರ್ಶಕವಾದಂತಹ ಸರ್ಕಾರ, ನಾವು ಮಾಹಿತಿ ಪಡೆಯತಕ್ಕಂಥ ಹಕ್ಕನ್ನು ಜನರಿಗೆ ಕೊಡುತ್ತೇವೆ. ಅದರ ಬಗ್ಗೆ ರೂಲ್ಸನ್ನು ಈಗಾಗಲೇ ಫ್ರೇಮ್ ಮಾಡುತ್ತಿದ್ದೇವೆಂದು ಹೇಳಿದ್ದೇ ಹೇಳಿದ್ದು. ಏನೇ ಸ್ವತಃ ಈ ಸರ್ಕಾರ ಇಂತಹ ಒಂದು ಕ್ರಾಂತಿಕಾರಕವಾದಂತಹ ಮಸೂದೆಯನ್ನು ತರುತ್ತಿದೆ ಎಂದು ನಾವು ತಿಳಿದುಕೊಂಡರೆ ಅದು ಇವರದ್ದು ಅಲ್ಲ. ವರ್ಲ್ಡ್ ಬ್ಯಾಂಕ್‌ನವರು, ಆರ್ಥಿಕ ಸಂಸ್ಥೆಯವರು ಹಾಕಿರತಕ್ಕಂಥ ನಿಬಂಧನೆಗಳನ್ನು ಪಾಲನೆ ಮಾಡುವುದಕ್ಕೋಸ್ಕರ ಇವತ್ತು ತಂದಿದ್ದೀರಿ; ಸಂತೋಷ, ಯಾರೇ ಅಧಿಕಾರದಲ್ಲಿರಲಿ ಇಂತಹ ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ಯಾರದ್ದೇ ಶಿಫಾರಸ್ ಮೇಲೆ ತಂದರೂ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ತಾವು 90 ದಿವಸಗಳ ಒಳಗೆ ಎಂದು ಹೋದ ವರ್ಷ ಹೇಳಿದ್ದೀರಿ. ಇವತ್ತು 360 ದಿವಸಗಳಾಯಿತು. 90 ದಿವಸಗಳು ಎಲ್ಲಿ? 360 ದಿವಸಗಳು ಎಲ್ಲಿ ಅದಕ್ಕೆ ಇನ್ನೂ ರೂಲ್ಸನ್ನು ಕೊಟ್ಟಿಲ್ಲ. ಇದನ್ನು ಕೇವಲ ಪ್ರಚಾರಕ್ಕಾಗಿ ಮಾಡಿರತಕ್ಕದ್ದು ಎಂದು ನಾನು ಹೇಳಬಯಸುತ್ತೇನೆ. ಅದರ ಬಗ್ಗೆ ಈ ಒಂದು

ಬಜೆಟ್‌ನಲ್ಲಿ 2002-2003ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಇದರ ಬಗ್ಗೆ ನಾನು ಹೋದ ವರ್ಷ ಆಶ್ವಾಸನೆ ಕೊಟ್ಟಿದ್ದೆ, ಈಗಾಗಲೇ ರೂಲ್ಸನ್ನು ಹೊರಡಿಸಿದ್ದೇವೆ. ಅದು ಈಗಾಗಲೇ ಜಾರಿಯಲ್ಲಿದೆ ಎಂದು ಹೇಳುತ್ತಾರೆ ಎಂದು ನಾವು ತಿಳಿದುಕೊಂಡಿದ್ದರೆ, ಅದರ ಬಗ್ಗೆ ಒಂದು ಚಕಾರನೂ ಇಲ್ಲ. ರೈಟ್ ಟು ಇನ್‌ಫರ್ಮೇಷನ್ ಬಗ್ಗೆ ಚಕಾರ ಇಲ್ಲ. ಮತ್ತೆ ಇನ್ನೊಂದು ವಿಚಾರ ಹೇಳಿದರು. ಅದು ಬಹಳ ಉತ್ತಮವಾದಂತಹ ಘೋಷಣೆ, ಎಲ್ಲರೂ ಮೆಚ್ಚತಕ್ಕಂತಹ ಘೋಷಣೆ. ಅದು ಟ್ರಾನ್ಸ್‌ಫರ್ ಪಾಲಿಸಿ ಮಾಡುತ್ತೇವೆಂದರು. ಅಡ್ಮಿನಿಸ್ಟ್ರೇಟೀವ್ ರಿಫಾರ್ ಕಮೀಷನ್ ಮಾಡಿರತಕ್ಕದ್ದು, ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆದಂತಹ ಆಯೋಗದವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಚಾಚೂ ತಪ್ಪದೆ ನಾವು ಅನುಷ್ಠಾನಕ್ಕೆ ತರುತ್ತೇವೆ. ಟ್ರಾನ್ಸ್‌ಫರ್ ಪಾಲಿಸಿ ಮಾಡುತ್ತೇವೆ. ಈ ವರ್ಗಾವರ್ಗಿಯಲ್ಲಿ ರಾಜಕೀಯ ಹಸ್ತಕ್ಷೇಪ ಇರುವುದಿಲ್ಲ ಎಂದು ಹೇಳಿದ್ದನ್ನು ಕೇಳಿ ನನೆಗ ಬಹಳ ಖುಷಿ ಆಯಿತು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹ ಗುಲ್ಬರ್ಗಾದಲ್ಲಿ ಹೇಳಿರತಕ್ಕ ಮಾತು, 1.4.2002ರಿಂದ ಒಂದು ಹೊಸ ವರ್ಗಾವಣೆ ನೀತಿ ಜಾರಿಗೆ ಬರುತ್ತದೆ ಎಂದು ಹೇಳಿದರು. ಅದರ ಬಗ್ಗೆ ಏನಾದರೂ ಈ ವರ್ಷ ಹೇಳಿರುತ್ತಾರೇನೋ ಎಂದು ನೋಡಿದರೆ ಈ ವರ್ಷದ ಬಜೆಟ್‌ನಲ್ಲಿ ಏನೂ ಚಕಾರ ಎತ್ತಿಲ್ಲ. ಅದು ಸುಮ್ಮನೆ ಹೇಳಿರತಕ್ಕದ್ದು, ನಿರ್ಣಯ ಮಾತ್ರ ಪ್ರತಿ ಒಂದೂ ರಾಜಕೀಯ ವರ್ಗಾವರ್ಗಿಗಳೇ. ಮತ್ತೆ ಇನ್ನೊಂದು ವಿಚಾರ ಹೇಳಿದರು. ಅದು ಒಳ್ಳೆಯ ಘೋಷಣೆ. ಕರ್ನಾಟಕದ ಮಟ್ಟಿಗೆ ಒಂದು ರೈಲ್ವೆ ಕಾರ್ಪೊರೇಷನ್ ಮಾಡುತ್ತೇವೆ, ಕೇಂದ್ರ ಸರ್ಕಾರದವರು ರೈಲ್ವೆಗೆ ಏನು ಬಜೆಟ್‌ನಲ್ಲಿ ಹಣ ಕೊಡುತ್ತಾರೆ, ಅದು ಸಾಕಾಗುವುದಿಲ್ಲ. ನಾವು ಕೇಂದ್ರ ರೈಲ್ವೆ ಇಲಾಖೆಯಿಂದಲೂ ಹಣವನ್ನು ಪಡೆದು ನಮ್ಮದೇ ಆಗಿರತಕ್ಕಂತಹ ಒಂದು ಕಾರ್ಪೊರೇಷನ್ ಮಾಡಿ ಕೆಲವು ಪ್ರಮುಖವಾದಂತಹ ಮಾರ್ಗಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದಿರಿ. ಇದು ಬಹಳ ಸಂತೋಷಕರವಾದಂತಹ ವಿಚಾರ. ಆದರೆ ಇಲ್ಲಿಯವರೆಗೂ ಪ್ರಗತಿ ಎರಡು ವರ್ಷಗಳಿಂದ ಆಗಿರತಕ್ಕದ್ದು ಬಹಳ ಕಡಿಮೆ. ಈ ವರ್ಷ ತಾವೇನು ಹೇಳಿದಿರಿ? ಗದಗ್ ಮತ್ತು ಶೋಲಾಪುರ, ಮಂಗಳೂರು ಮತ್ತು ಸಕಲೇಶಪುರದ ವಿಚಾರ; ಈ ಎರಡು ದಾರಿಗಳನ್ನು ತಾವು ತೋರಿಸಿದ್ದೀರಿ. ಇನ್ನೂ ಪ್ರಮುಖವಾದಂತಹ ಎರಡು ಮಾರ್ಗಗಳಾದ ಹುಬ್ಬಳ್ಳಿ-ಅಂಕೋಲಾ, ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಮತ್ತು ಬೆಂಗಳೂರು-ಮೈಸೂರು, ಅದನ್ನು ಡಬಲ್ ಟ್ರಾಕ್ ಮಾಡುತ್ತೇವೆ ಎಂದು ಹೇಳಿದರು. ಎಲೆಕ್ಟ್ರಿಫಿಕೇಶನ್ ಮಾಡುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಅದರ ಬಗ್ಗೆ ಕೆಂಗೇರಿಯಿಂದ ರಾಮನಗರದವರೆಗೆ ಮಾಡಿದರು. ಇನ್ನೂ ಪೂರ್ತಿ ಮಾಡಿಲ್ಲ ಎನ್ನತಕ್ಕದ್ದು ನನ್ನ ಒಂದು ಅನಿಸಿಕೆ.

ಮಾನ್ಯ ಅಧ್ಯಕ್ಷರೆ, ಇನ್ನು ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಬಗ್ಗೆ ಒಂದು ವಿಚಾರ; ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ - ಬಿಳಿ ಕಾಗದದಲ್ಲಿ ನೋಂದಣಿ ಮಾಡತಕ್ಕಂಥ ಯೋಜನೆಯನ್ನು ಜಾರಿಗೆ ತರುತ್ತೇವೆ. ಸಂಪೂರ್ಣವಾಗಿ ಸ್ಟಾಂಪ್ ಪೇಪರ್ಸ್ ರದ್ದು ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಇಲ್ಲೇ ಇದ್ದೀರಿ, ಅವರು ಘೋಷಣೆ ಮಾಡಿದಾಗ ಇರಲಿಲ್ಲ. ಹೊಸದಾಗಿ ತಾವೇನಾದರೂ ಈ ಪಾಲಿಸಿಯನ್ನು ಘೋಷಣೆ ಮಾಡುತ್ತಿದ್ದೀರಾ ಅಥವಾ ಬದಲಾವಣೆ ಏನು ತಾವು ಮಾಡುತ್ತಿದ್ದೀರಿ ಎಂಬುದನ್ನು ನನಗೆ ಹೇಳಬೇಕಾಗುತ್ತದೆ.

01.04 1999ರಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957ಕ್ಕೆ ಒಂದು ತಿದ್ದುಪಡಿ ತಂದು, ಅದರಲ್ಲಿ ಸೆಕ್ಷನ್ 10-ಎ ಅದಕ್ಕೆ ತಿದ್ದುಪಡಿ ತಂದೆವು. ಎರಡು ಆಕ್ಟ್ ಇಲ್ಲಿದೆ. ಒಂದು ಸೆಂಟ್ರಲ್ ಆಕ್ಟ್, ಇನ್ನೊಂದು ಸ್ಟೇಟ್ ಆಕ್ಟ್ ಎಂದು ಇದೆ. ಸೆಂಟ್ರಲ್ ಆಕ್ಟ್‌ನಲ್ಲಿ ಇಂಡಿಯನ್ ಸ್ಟಾಂಪ್ ಆಕ್ಟ್ 1899, ಅಂದರೆ ಸುಮಾರು 100 ವರ್ಷ ಹಳೆಯದಾದಂತಹ ಸೆಂಟ್ರಲ್ ಆಕ್ಟ್; ಈ ಸೆಂಟ್ರಲ್ ಆಕ್ಟ್ ಕೆಳಗಡೆ ಕೆಲವು ಬಿಲ್ ಆಫ್ ಎಕ್ಸ್‌ಛೇಂಜ್ ಇರಬಹುದು, ಪ್ರಾಮಿಸರಿ ನೋಟ್ ಇರಬಹುದು, ಅಥವಾ ಬಿಲ್ ಆಫ್ ಲ್ಯಾಂಡಿಂಗ್ ಇರಬಹುದು, ಲೆಟರ್ ಆಫ್ ಕ್ರೆಡಿಟ್ ಇರಬಹುದು, ಪಾಲಿಸಿ ಆಫ್ ಇನ್ಶ್ಯೂರೆನ್ಸ್ ಇರಬಹುದು; ಟ್ರಾನ್ಸ್‌ಫರ್ ಆಫ್ ಶೇರ್ಸ್ ಇರಬಹುದು, ಡಿಬೆಂಚರ್ಸ್ ಇರಬಹುದು; ಈ ಎಲ್ಲಾ ಯೂನಿಯನ್ ಲಿಸ್ಟ್ ಎಂಟ್ರಿ 91ರಲ್ಲಿ ಈ ಒಂದು ಸೆಂಟ್ರಲ್ ಆಕ್ಟ್ ಪ್ರಕಾರ ಬರುತ್ತದೆ. ಅದರಲ್ಲಿ ಸ್ಟಾಂಪ್ ಆಕ್ಟ್ ಸಹ ಒಂದು. ಅದರ ಕೆಳಗಡೆ ನಾವು 1957ರಲ್ಲಿ ನಮ್ಮದೇ ಆದಂತಹ ಒಂದು ಆಕ್ಟ್ ನ್ನು ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸ್ವಲ್ಪ ದಯವಿಟ್ಟು ಕೇಳಬೇಕು. 1957ರಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ ಎಂದು ಹೇಳಿ ನಮ್ಮದೇ ಆದಂತಹ ಒಂದು ಆಕ್ಟ್ ಇತ್ತು. ಈ ಸ್ಟಾಂಪ್ ಆಕ್ಟ್ ಪ್ರಕಾರ ಸೆಕ್ಷನ್ 10ರಲ್ಲಿ ಏನು ಇತ್ತು? ಈ ಸ್ಟಾಂಪ್ ಪೇಪರನ್ನು ಪ್ರಿಂಟ್ ಮಾಡಿ ಉಪಯೋಗಿಸತಕ್ಕದ್ದು, ಕೇಂದ್ರ ಸರ್ಕಾರದ ಇಂಡಿಯನ್ ಸ್ಟಾಂಪ್ ಆಕ್ಟ್ ಏನು ಇದೆ ಅದರ ಕೆಳಗಡೆ ಇರತಕ್ಕಂತಹ ವ್ಯವಸ್ಥೆ. ಅಂದರೆ Stamp papers are printed in the Government of India press. ಇದರಲ್ಲಿ ಏನು ಬೇರೆ ಮಾತಿಲ್ಲ. ನಾಗಪುರದಲ್ಲಿ ಪ್ರಿಂಟ್ ಮಾಡುತ್ತಾರೆ. ಅದನ್ನು ಎಲ್ಲಾ ರಾಜ್ಯಗಳವರೂ ಉಪಯೋಗಿಸುತ್ತಾರೆ. ಪ್ರತಿ ರಾಜ್ಯದವರೂ ಕೇಂದ್ರದವರು ಒದಗಿಸತಕ್ಕ ಸ್ಟಾಂಪ್ ಪೇಪರ್‌ಗಳನ್ನು ನಾವು ಸ್ಟಾಂಪ್ ವೆಂಡರ್ಸ್ ಮುಖಾಂತರ ಪ್ರತಿ ಒಂದು ಡಾಕ್ಯುಮೆಂಟ್ ಅನ್ನು ರಿಜಿಸ್ಟರ್ ಮಾಡಬೇಕಾದರೆ ಆ ಸ್ಟಾಂಪ್ ಪೇಪರ್‌ಗಳನ್ನು ಉಪಯೋಗಿಸುತ್ತಿದ್ದೆವು. ಅದರಲ್ಲಿ ನಾವು ತಿದ್ದುಪಡಿ ಮಾಡುವಂತಹ ಅಧಿಕಾರ ನಮಗೆ ಇಲ್ಲ. ಇಂಡಿಯನ್ ಸ್ಟಾಂಪ್ ಆಕ್ಟ್‌ಗೆ ತಿದ್ದುಪಡಿ ತರತಕ್ಕಂತಹ ಅಧಿಕಾರ ನಮಗೆ ಇಲ್ಲ. ನಾವು ಏನು ಇದ್ದರು ಕರ್ನಾಟಕ ಸ್ಟಾಂಪ್ ಆಕ್ಟ್‌ಗೆ ತಿದ್ದುಪಡಿ ತರತಕ್ಕದ್ದು. ನಮ್ಮ ಸರ್ಕಾರದಲ್ಲಿ ಸನ್ಮಾನ್ಯ ಜೆ.ಎಚ್. ಪಟೇಲ್ ಅವರು ಮಾನ್ಯ ಮುಖ್ಯಮಂತ್ರಿ ಆಗಿದ್ದಾಗ, 1999ರಲ್ಲಿ ಜನತಾದಳದ ಸರ್ಕಾರ ಇದ್ದಾಗ ನಾವು ಒಂದು ತಿದ್ದುಪಡಿ ತಂದೆವು. ಆಗಲೂ ಸ್ಟಾಂಪ್ ಪೇಪರ್‌ನ ಹಾವಳಿ ಇತ್ತು. ಫೇಕ್ ಸ್ಟಾಂಪ್ ಪೇಪರ್ಸ್ ಚಲಾವಣೆಯಲ್ಲಿ ಇವತ್ತೇನು ಇದೆ ಅಷ್ಟು ಇರಲಿಲ್ಲವಾದರೂ ಸ್ವಲ್ಪ ಇತ್ತು. ಅದು ನಮ್ಮ ಗಮನಕ್ಕೆ ಬಂದಮೇಲೆ ಇದನ್ನು ತಡೆಗಟ್ಟತಕ್ಕ ವಿಧಾನ ಹೇಗೆ ಎಂದು ಹೇಳಿ ವಿಚಾರ ಮಾಡಿದೆವು. ಕೂರ್ಗ್‌ನಲ್ಲಿ ಒಂದು ಹಗರಣ ಆಯಿತು. ಅದರ ಬಗ್ಗೆ ಸಿ ಓಡಿ ಎನ್‌ಕ್ವೈರಿನೂ ಆಗುತ್ತಿತ್ತು ಮತ್ತು ಬೇರೆ ಬೇರೆ ಕಡೆಯಲ್ಲಿ ನಡೆಯುತ್ತಿತ್ತು. ಆಗ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿತ್ತು. ಅಥವಾ ನಡೆಯುತ್ತಿದ್ದುದು ಸರಿಯಾಗಿ ಬಯಲಿಗೆ ಬರುತ್ತಿರಲಿಲ್ಲ. ಆ ಪ್ರಕರಣಗಳು ಬಯಲಿಗೆ ಬಂದ ತಕ್ಷಣ ಅದನ್ನು ನಾವು ಎನ್‌ಕ್ವೈರಿ ಮಾಡುತ್ತಿದ್ದೆವು. ಅದಕ್ಕೆ ವಿಧಾನಗಳನ್ನು ಏನು ಕಂಡು ಹಿಡಿಯಬೇಕು? ಸ್ಟಾಂಪ್ ಪೇಪರ್ಸ್‌ನ್ನು ಉಪಯೋಗಿಸತಕ್ಕದ್ದನ್ನು ಕಡಿಮೆ ಮಾಡುವುದು ಹೇಗೆ? ಈ ಒಂದು ಹಗರಣವನ್ನು ತಪ್ಪಿಸತಕ್ಕ ವಿಧಾನ ಹೇಗೆ ಎಂದು ನಾವು ವಿಚಾರ ಮಾಡಿದೆವು. ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವ ವಿಚಾರ ಕೇಳಿದರೆ ನಾನು ಅವರಿಗೆ ಭಾರೀ ಅಭಾರಿ ಆಗುತ್ತೇನೆ; I will be grateful to you, You have not been properly briefed by your officers. ಸಂಬಂಧಪಟ್ಟ ಮಿನಿಸ್ಟರ್‌ಗಂತೂ ಬಹುಶಃ ಅದರ ಬಗ್ಗೆ ಏನೂ ಗೊತ್ತಿಲ್ಲ. ನಮಗೆ ಏನಾಗುತ್ತದೆ ಎಂದರೆ, ನಿಮ್ಮ ಪಕ್ಷದ ಮಾಜಿ ಮುಖ್ಯಮಂತ್ರಿಗಳು, ಆರ್ಥಿಕ ತಜ್ಞರು, ಈ ಮಾನ್ಯ ಕೃಷ್ಣ ಅವರ ಸರ್ಕಾರ ಕ್ರಾಂತಿಕಾರಕವಾದ ಬದಲಾವಣೆಯನ್ನು ತಂದಿದ್ದಾರೆ ಎಂದು ಹೇಳಿದರಲ್ಲ, ಅದರ ಬಗ್ಗೆ ಸ್ವಲ್ಪ ವಿವರಣೆ ತಮಗೆ ಹೇಳಬೇಕಾಗುತ್ತದೆ. ಅದನ್ನು ತಾವು ದಯವಿಟ್ಟು ಕೇಳಬೇಕು. ಕೇಂದ್ರ ಸರ್ಕಾರದ ಸ್ಟ್ಯಾಂಪ್ ಆ್ಯಕ್ಟ್‌ಗೆ ತಿದ್ದುಪಡಿ ತರುವ ಅಧಿಕಾರ ನಮಗಿಲ್ಲ. 1957ರ ಕರ್ನಾಟಕ ಸ್ಟ್ಯಾಂಪ್ ಆ್ಯಕ್ಟ್ ಸೆಕ್ಷನ್ 10ರನ್ವಯ ಸ್ಟ್ಯಾಂಪ್ ಪೇಪರ್ ಉಪಯೋಗಿಸಬೇಕೆಂದಿದ್ದರೂ ಸಹ ಇದರಿಂದರಾಗುತ್ತಿರುವ ಹಗರಣವನ್ನು ತಪ್ಪಿಸಿ ನಕಲಿ ಸ್ಟ್ಯಾಂಪ್ ಪೇಪರ್ ಅನ್ನು ತಡೆಗಟ್ಟುವ ದೃಷ್ಟಿಯಿಂದ 10(ಎ)ಸೆಕ್ಷನ್ ಅನ್ನು ಇನ್‌ಸರ್ಟ್ ಮಾಡುವ ಮೂಲಕ ತಿದ್ದುಪಡಿ ತಂದೆವು. ಇದರಲ್ಲಿ ನಾವು ಏನು ಮಾಡಿದೆವು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕಾಗುತ್ತದೆ. Using of stamp paper was made optional. ಇದರ ಜೊತೆಗೆ ಸ್ಟ್ಯಾಂಪ್ ಡ್ಯೂಟಿ ಕಟ್ಟುವ ವಿಧಾನವೇನಿದೆ, ಕೇವಲ ಸ್ಟ್ಯಾಂಪ್ ಪೇಪರ್ ಮುಖಾಂತರ ಕಟ್ಟುವ ಅವಶ್ಯಕತೆಯಿಲ್ಲ. ಉದಾಹರಣೆಗೆ, ಒಬ್ಬ ಹತ್ತು ಲಕ್ಷ ರೂಪಾಯಿಗಳಷ್ಟು ಆಸ್ತಿಯನ್ನು ಬೇರೆಯವರಿಗೆ ಮಾರುತ್ತಿದ್ದಾನೆಂದರೆ, ಈ ಸಂಬಂಧವಾಗಿ ಸ್ಟ್ಯಾಂಪ್ ಪೇಪರ್ ಕೊಂಡುಕೊಳ್ಳುವ ಅವಶ್ಯಕತೆಯಿಲ್ಲ. ಏಕೆಂದರೆ, ಅದರಲ್ಲಿ ನಕಲಿ ಸ್ಟ್ಯಾಂಪ್ ಪೇಪರ್ ಇರಬಹುದು. ಆದುದರಿಂದ , ನೀವು ಒಂದು ಸಾವಿರ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕಾಗುತ್ತದೆ. ಕೇವಲ ಒಂಬೈನೂರು ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯೂಟಿಯನ್ನು ಚಲನ್ ಮುಖಾಂತರ ಇಲವೇ ಡಿ.ಡಿ. ಮೂಲಕ ತೆಗೆದುಕೊಳ್ಳಬಹುದಾಗಿದೆ. You use only Rs. 100 stamp paper. That is all. ಇಲ್ಲದೆ ಇದ್ದರೆ, ಬಿಳಿಕಾಗದದಲ್ಲಿ ಮೆಷಿನ್ ಮೂಲಕ ಒಂದು ಸಾವಿರ ರೂಪಾಯಿಗಳಿಗೆ ಅವಕಾಶ ಮಾಡಿಕೊಟ್ಟೆವು. ಡಿಡಿ ಚಲನ್ ಸಿಸ್ಟಂ ಮಾಡಿದರೆ you can completely avoid using stamp paper also. But, we did not completely dispense with the stamp paper, because the power of dispensing with the stamp paper cannot be implemented by our State Government. ಹೊಸೂರಿನಲ್ಲಿ ಕೊಂಡುಕೊಂಡು ಬಂದ ಸ್ಟ್ಯಾಂಪ್ ಪೇಪರ್ ಅನ್ನು ನಾವು ಇಲ್ಲಿ ಹಾನರ್ ಮಾಡುವುದಕ್ಕಾಗುವುದಿಲ್ಲ. ಆದರೆ, ಅಲ್ಲಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಗವರ್ನಮೆಂಟ್ ಆಫ್ ಇಂಡಿಯಾದ ಸ್ಟ್ಯಾಂಪ್ ಆ್ಯಕ್ಟ್ ಪ್ರಕಾರ ಸ್ಟ್ಯಾಂಪ್ ಪೇಪರ್ ಅನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬೇಕಾದರೂ ನಾವು ಉಪಯೋಗಿಸಬಹುದಾಗಿರುತ್ತದೆ. ಅದಕ್ಕೋಸ್ಕರ ನಮ್ಮ ರಾಜ್ಯದವರು ಏನು ಮಾಡಿದರೆಂದರೆ, we don't buy stamp papers from the Govt. of India. We will discourage buying stamp papers from the Govt. of India, Instead, we will use franking machines. The stamp duty can be paid by way of D.D. or challan. ಇದಕ್ಕೆಲ್ಲಾ ತಿದ್ದುಪಡಿ ತರಲಾಯಿತು. ಇವೊತ್ತು ಮುಖ್ಯಮಂತ್ರಿಗಳು ಸ್ಟ್ಯಾಂಪ್ ಪೇಪರ್ ಆ್ಯಕ್ಟ್‌ಗೆ ತಿದ್ದುಪಡಿ ತರುತ್ತೇವೆಂದು ಹೇಳಿದ್ದು, ಇದಕ್ಕೆ ತಿದ್ದುಪಡಿ ತರುವುದಕ್ಕಾಗುತ್ತದೆಯೇ? It is only a popular measure. You cannot bring any amendment other than what we have already done. ಬೇಕಾದರೆ ಈ ಕುರಿತಂತೆ ತಾವು ಲೀಗಲ್ ಒಪಿನಿಯನ್ ತೆಗೆದುಕೊಳ್ಳಬಹುದು. We have made an option.

ಶ್ರೀ ಎಸ್.ಎಂ. ಕೃಷ್ಣ: ನಾನು ಎಲ್ಲಿಯೂ ತಿದ್ದುಪಡಿ ತರುತ್ತೇನೆಂದು ಹೇಳಿಲ್ಲ. "ನಕಲಿ ಛಾಪಾ ಕಾಗದದ ಚಲಾವಣೆಯನ್ನು ತೊಡೆದುಹಾಕಲು ಮುಂದಿನ ವರ್ಷದಿಂದ ನಾನು ಛಾಪಾ ಕಾಗದಗಳ ಬಳಕೆಯನ್ನು ರದ್ದುಗೊಳಿಸಲು ಉದ್ದೇಶಿಸಿದ್ದೇನೆ, ವಿವರಗಳನ್ನು ಮುಂದೆ ನೀಡಲಾಗುವುದು" ಎಂದು ತಿಳಿಸಿದ್ದೇನೆ. ಅದನ್ನು ಯಾವ ರೂಪದಲ್ಲಿ ತರಬೇಕೆಂಬ ಬಗ್ಗೆ ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ. ತಾವು ಆಗಲೇ ಮಾತನಾಡುತ್ತಾ 'ಈಗಾಗಲೇ ಶೇಕಡ 50ರಷ್ಟು ಆಪ್ಷಷನಲ್ ಆಗಿದೆ' ಎಂದು. ಅದಕ್ಕೆ ಯಾವುದಾದರೂ ತಿದ್ದುಪಡಿ ಮೂಲಕ ಮಾಡಿದರೇನು? ಈಗ ಆಪ್ಸ ಷನಲ್ ಮಾಡಿರುವುದು ಹೇಗೆ 50 ಪರ್ಸೆಂಟ್‌ಗೆ ಈಗಾಗಲೇ ಅದು ಅನ್ವಯವಾಗುತ್ತಿದೆಯೋ ಹಾಗೆಯೇ ಇನ್ನೂ 50 ಪರ್ಸೆಂಟ್‌ಗೂ ಅದರ ಅನ್ವಯವನ್ನು ವಿಸ್ತಾರಗೊಳಿಸುತ್ತೇವೆ. As simple as that.

ಶ್ರೀ ಬಿ. ಸೋಮಶೇಖರ್: 50 ಪರ್ಸೆಂಟ್ ಉಳಿದಿರುವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ it does not require amendment. That amendment enabling to fulfil the other 50% , it is already there.

ಶ್ರೀ ಎಸ್.ಎಂ. ಕೃಷ್ಣ ಅದಕ್ಕೆ ವಿವರಗಳನ್ನು ಮುಂದೆ ಕೊಡುತ್ತೇನೆ. Any programme which is announced in the budget, ಆ ಕುರಿತಂತೆ ಕಾರ್ಯಕ್ರಮಗಳನ್ನು ಗುರ್ತಿಸುತ್ತೇವೆ. ಉಳಿದಿರುವ 50 ಪರ್ಸೆಂಟ್ ಅನ್ನು ಈ ಸಾರಿ ಅಚೀವ್ ಮಾಡಿಕೊಳ್ಳೋಣ.

ಶ್ರೀ ಬಿ. ಸೋಮಶೇಖರ್: ನಾವು ಫ್ರಾಂಕಿಂಗ್ ಮೆಷಿನ್ ಸಿಸ್ಟಂ ಅನ್ನು ತಂದೆವಲ್ಲಾ ಇದರ ಬಗ್ಗೆ ಮುಖ್ಯಮಂತ್ರಿಯವರು ಕೇಳಬೇಕು; ಇದನ್ನು ತಂದ ಉದ್ದೇಶವೇನೆಂದರೆ, ಬ್ಯಾಂಕ್‌ನವರು, ಐಸಿಐಸಿಐನವರು, ಬಿಡಿಎನವರು ಕಾರ್ಪೊರೇಷನ್‌ರವರು ಹಾಗೂ ಫೈನಾನ್ಶಿಯಲ್ ಇನ್‌ಸ್ಟಿಟ್ಯೂಷನ್‌ರವರು ಸ್ಟ್ಯಾಂಪ್ ಪೇಪರ್ ಅನ್ನು ಕೋಟ್ಯಾಂತರ ರೂಪಾಯಿಗಳಷ್ಟು ಮೊತ್ತದಲ್ಲಿ ಬಲ್ಕ್ ಆಗಿ ಪರ್ಚೇಸ್ ಮಾಡುತ್ತಾರೆ. ಇಂತಹ ಕಡೆಗಳಲ್ಲಿಯೇ ಜಾಸ್ತಿ ವ್ಯವಹಾರ ನಡೆದಿರುವುದು. ಕರೀಂ ಲಾಲಾ ಅವರಂತಹ ಏಜೆಂಟ್‌ಗಳಿರುತ್ತಾರಲ್ಲಾ, ಅವರು ಬ್ಯಾಂಕ್‌ನವರ ಹತ್ತಿರ ಹೋಗಿ "ನಮ್ಮದು ಅಷ್ಟು ಸ್ಟ್ಯಾಂಪ್ ಪೇಪರ್ ತೆಗೆದುಕೊಳ್ಳಿ, ಕಮೀಷನ್ ಕೊಡುತ್ತೇವೆ" ಎಂದು ವ್ಯವಹರಿಸುತ್ತಿದ್ದರು. ಆ ಒಂದು ಹಿನ್ನೆಲೆಯಲ್ಲಿ ರೂಲ್ಸ್ ಇಶ್ಯೂ ಮಾಡುವ ಮೂಲಕ 1.4.1999ರಿಂದ ನಾವು ಫ್ರಾಂಕಿಂಗ್ ಮೆಷಿನ್ ಸಿಸ್ಟಂ ಅನ್ನು ಜಾರಿಗೆ ತಂದೆವು. ಆದರೆ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಅದನ್ನು ಜಾರಿಗೆ ಕೊಟ್ಟಿದ್ದರೆ ನಕಲಿ ಸ್ಟ್ಯಾಂಪ್ ಪೇಪರ್ ಅನ್ನು ಕೊಂಡುಕೊಳ್ಳಲು ಅವಕಾಶವಿರುತ್ತಿರಲಿಲ್ಲ. ಎಲ್ಲಾ ಬ್ಯಾಂಕ್‌ಗಳವರು ಫ್ರಾಂಕಿಂಗ್ ಮೆಷಿನ್ ಸಿಸ್ಟಂ ಅಳವಡಿಸಿಕೊಂಡು ಉಪಯೋಗಿಸುತ್ತಿದ್ದರು. ಅದನ್ನೂ ನೀವು ಮಾಡಿಲಿಲ್ಲ, ಜೊತೆಗೆ ಈ ಕುರಿತಾದ ವ್ಯವಸ್ಥೆಗೆ ಪ್ರಚಾರವನ್ನೂ ನೀಡಲಿಲ್ಲ. ತಾವು ಫ್ರಾಂಕಿಂಗ್ ಮೆಷಿನ್ ಅನ್ನು ಹಾಗೆಯೇ ಮೂಲೆಯಲ್ಲಿ ಇಟ್ಟುಕೊಂಡಿದ್ದರಿಂದ 50 ಪರ್ಸೆಂಟ್ ಹಾಗೆಯೇ ಬೆಳೆಯಿತು. ಮಾನ್ಯ ಜೆ.ಹೆಚ್.ಪಟೇಲ್ ನೇತೃತ್ವದ ಸರ್ಕಾರದಲ್ಲಿದ್ದ ನಾವು ಏನು ವ್ಯವಸ್ಥೆಯನ್ನು ಜಾರಿಗೆ ತಂದಿದ್ದೆವೋ ಅದರ 50 ಪರ್ಸೆಂಟ್ ತಾನೇ ಇಂಪ್ಲಿಮೆಂಟ್ ಆಗಿದೆ. ಫ್ರಾಂಕಿಂಗ್ ಮೆಷಿನ್ ಉಪಯೋಗಿಸದೆ, ಡಿ.ಡಿ. ಚಲನ್ ಉಪಯೋಗಿಸದೆ ಸ್ಟ್ಯಾಂಪ್ ಡ್ಯೂಟಿ ಕಟ್ಟುವ ವ್ಯವಸ್ಥೆ ಕೇವಲ 50 ಪರ್ಸೆಂಟ್ ಅನುಷ್ಠಾನವಾಗಿದ್ದು, ಪೂರ್ತಿಯಾಗಿ ಮಾಡಿದ್ದರೆ

ನೂರಕ್ಕೆ ನೂರರಷ್ಟು ಅನುಷ್ಠಾನವಾಗುತ್ತಿತ್ತು, ಮತ್ತು ಇಂದು ಒಂದು ರೂಪಾಯಿಯ ನಕಲಿ ಛಾಪಾ ಕಾಗದಗಳು ಚಲಾವಣೆಯಲ್ಲಿರುತ್ತಿರಲಿಲ್ಲ. ಇದರಲ್ಲಿ ನೀವು ಹೊಸದಾದ ಯಾವುದಾದರೂ ಕಾನೂನನ್ನು ತರುವುದಕ್ಕಾಗುತ್ತದೆಯೇ? ಇರುವ ಕಾನೂನನ್ನೇ ನೀವು ಇಂಪ್ಲಿಮೆಂಟ್ ಮಾಡಿರಲಿಲ್ಲ. "ಈ ಹಿಂದೆ ಜನತಾದಳ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀ ಸೋಮಶೇಖರ್‌ರವರು ಈ ಕುರಿತು ಏನೇನು ಸುಧಾರಣೆಗಳನ್ನು ತಂದಿದ್ದಾರೋ ಅದನ್ನು ರದ್ದುಗೊಳಿಸುವ ಪ್ರಶ್ನೆಯೇ ಇಲ್ಲ, ನಾವು ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ" ಎಂದು ಹೇಳಿರುವುದು ನನಗೆ ಬಹಳ ಸಂತೋಷವಾಯಿತು. ಇದಕ್ಕಾಗಿ ನಾನು ಅಭಿನಂದನೆಗಳನ್ನು ಸಲ್ಲಿಸಿದೆ. ಆದರೆ, ಇಲ್ಲಿ ತಾವು ಏನು ಮಾಡಿದ್ದೀರೆಂದರೆ, as if you are introducing a new scheme, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು 'ಕ್ರಾಂತಿಕಾರಕ ಬದಲಾವಣೆ' ಎಂದರು.

ಶ್ರೀ ಎಸ್.ಎಂ. ಕೃಷ್ಣ: ನಾನು 'ಕ್ರಾಂತಿಕಾರಕ ಬದಲಾವಣೆ' ಎಂದು ಹೇಳಲಿಲ್ಲ.

ಶ್ರೀ ಬಿ. ಸೋಮಶೇಖರ್: ನೀವು ಹೇಳಿದಿರಿ ಎಂದು ನಾನು ಹೇಳಲಿಲ್ಲ. ನಿಮ್ಮ ಪಕ್ಷದ ಪ್ರತಿಯೊಬ್ಬ ಮುಖಂಡರುಗಳು ಎಷ್ಟು ಸೈಕೋಫ್ಯಾನ್ಸಿ ಆಗಿರುತ್ತಾರೆಂದರೆ, ಮುಖ್ಯಮಂತ್ರಿಗಳು ಮಾಡಿದ್ದನ್ನೆಲ್ಲಾ ಹೊಗಳುತ್ತಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಬೇರೆಯವರು ಮಾಡಿದ್ದನ್ನು ತಾನು ಮಾಡಿದ್ದೇನೆಂದು ಹೇಳಿಕೊಳ್ಳುವುದರಲ್ಲಿ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ನಿಸ್ಸೀಮರಾಗಿದ್ದಾರೆ.

ಶ್ರೀ ಬಿ. ಸೋಮಶೇಖರ್: ನಮ್ಮ ಸರ್ಕಾರ ರಾಯಚೂರಿನಲ್ಲಿ ವಿದ್ಯುತ್ ಘಟಕವನ್ನು ರೆಕಾರ್ಡ್ ಪೀರಿಯಡ್‌ನಲ್ಲಿ ಮಾಡಿದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದೇ ರೀತಿ ಜನತಾದಳ ಸರ್ಕಾರ ಕ್ರಾಂತಿಕಾರಕ ಸುಧಾರಣೆಯನ್ನು ತಂದಿದ್ದಾರೆ. ಇದನ್ನು ತಡೆಗಟ್ಟಲಿಕ್ಕೆ ನಾವು ಮುಂದುವರೆಸಿಕೊಂಡು ಹೋಗುತ್ತೇವೆಂದು ಸೌಜನ್ಯಕ್ಕಾಗಿ ಒಂದು ಶಬ್ದ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು 'ದಾನ ಪತ್ರ' ಕುರಿತಂತೆ ಜನತಾದಳ ಸರ್ಕಾರ ಕ್ರಾಂತಿಕಾರಕ ಬದಲಾವಣೆ ತಂದಿರುವುದನ್ನೇ ಮತ್ತೆ ಹೊಸದಾಗಿ ತಾವು ಇಂಟ್ರಡ್ಯೂಸ್ ಮಾಡಿದ್ದೀರಿ. ತಮಗೆಲ್ಲಾ ತಿಳಿದಿರುವಂತೆ ಮಕ್ಕಳಿಗೆ ಆಸ್ತಿಯನ್ನು ದಾನ ಮಾಡಬೇಕಾದರೆ ಹಿಂದೆ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕಾಗಿತ್ತು ಅದಕ್ಕೆ ಕನ್ಸಿಡರೇಶನ್ ಇರುತ್ತಿರಲಿಲ್ಲ. ತಂದೆ ಮಗಳಿಗೆ ದಾನ ಕೊಡಬೇಕಾದರೆ ಮಗಳು ಕೊಂಡುಕೊಳ್ಳತ್ತಾಳೆಯೇ? Why should we insist the stamp duty? ಅದಕ್ಕೋಸ್ಕರ ಯಾರೂ ಸಹ ರಿಜಿಸ್ಟರ್ ಮಾಡಿಸುತ್ತಿರಲಿಲ್ಲ. ಅದನ್ನು 'ಪಾಲು ಪಾರಿಖತ್ತು' ಇಲ್ಲವೇ 'ದಾನಪತ್ರ' ಎಂದು ಬರೆದುಕೊಳ್ಳುತ್ತಿದ್ದುದ್ದರಿಂದ ಲೀಗಲ್ ಪ್ರಾಬ್ಲಂ ಉಂಟಾಗಿ ಕೋರ್ಟುಕಚೇರಿಗಳಲ್ಲಿ ವರ್ಷಾನುಗಟ್ಟಲೆ ಪ್ರಕರಣಗಳು ಜರುಗುತ್ತಿತ್ತು. ನಾವು ಸ್ಟ್ಯಾಂಪ್ ಡ್ಯೂಟಿ ತೆಗೆದುಹಾಕುವ ಮೂಲಕ ರದ್ದುಗೊಳಿಸಿ 2 ಪರ್ಸೆಂಟ್ ಇದ್ದ ಸ್ಟ್ಯಾಂಪ್ ರಿಜಿಸ್ಟ್ರೇಷನ್ ಫೀ ಅನ್ನು ಕೇವಲ ಐದುನೂರು ರೂಪಾಯಿಗಳಿಗೆ ಮಾಡಿದೆವು. ಅಂದರೆ, 2.250 ರೂಪಾಯಿಗಳಿಗೆ ದಾನಪತ್ರಗಳು ರಿಜಿಸ್ಟರ್ ಆಗುತ್ತಿದ್ದವು. ಅನಂತರ, ನೀವು ಅಧಿಕಾರಕ್ಕೆ ಬಂದ ತಕ್ಷಣ ಈ ಕುರಿತ ಕಾನೂನಿಗೆ ನಾವು ತಂದಿದ್ದ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡಿರಿ. ಆದರೆ, 2000-01ರಲ್ಲಿ ನೀವು ತೆಗೆದುಹಾಕಿದ ಸಂದರ್ಭದಲ್ಲಿ ಸಾರ್ವಜನಿಕರಿಂದ ಪ್ರತಿಭಟನೆ ಬಂದು ವಿಧಾನಸಭೆಯಲ್ಲಿ ಪ್ರಸ್ತಾಪವಾದಾಗ 2001-02ನೇ ಸಾಲಿನಲ್ಲಿ ಮತ್ತೆ ರೀ-ಇಂಟ್ರಡ್ಯೂಸ್ ಮಾಡಿದಿರಿ. ಇದರಿಂದ

ತಂದೆ ಇಲ್ಲದೇ ಇರುವಾಗ ತನ್ನ ಮೊಮ್ಮೊಕ್ಕಳಿಗೆ ದಾನ ಕೊಡತಕ್ಕ ಅವಕಾಶವಿರಲಿಲ್ಲ. ಅದನ್ನು ತಾವು ಇಂಟ್ರಡ್ಯೂಸ್ ಮಾಡಿದಿರಿ. ಶೇಕಡ 2ರಷ್ಟು ಟೇಬಲ್ ಆಫ್ ರಿಜಿಸ್ಟ್ರೇಷನ್ ಅಂಶ ತಾಂತ್ರಿಕವಾಗಿ ಬಿಟ್ಟುಹೋಗಿತ್ತು. ನೀವು ಪುನಃ ರೀ-ಇಂಟ್ರಡ್ಯೂಸ್ ಮಾಡಿ ಮೊಮ್ಮಕ್ಕಳಿಗೆ ಕೊಡುವಾಗ ಐದುನೂರು ರೂಪಾಯಿಗಳು ಏನಿತ್ತು, ಆ 2 ಪರ್ಸೆಂಟ್ ಹಾಗೆಯೇ ಉಳಿದುಹೋಯಿತು. ಆ ಬಗೆಗಿನ ಅಮೆಂಡ್‌ಮೆಂಟ್ ತರುವುದರಲ್ಲೂ ತಾವು ತಪ್ಪು ಮಾಡಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ: ತಾವು ಮಾಡಿದ್ದಿರಿ. ನಾವು ವಿತ್ ಡ್ರಾ ಮಾಡಿದೆವು. ಎಂದು ಹೇಳಿದಿರಿ. ನಮ್ಮ ಸರ್ಕಾರ ಎಷ್ಟು ಪಾರದರ್ಶಕ ಇದೆ. ಎಷ್ಟು ಸೆನ್ ಸಿಟೀವ್ ಇದೆ ಎಂಬುದು ಗೊತ್ತಾಗುತ್ತದೆ. ಸರಿಯಾದ ವಿಚಾರ ಬಂದಾಗ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ಅಷ್ಟೇ ಅಲ್ಲ. ನೀವು ಮಾಡಿದ ಕೆಲಸದಲ್ಲಿ ನಾವು ಸುಧಾರಣೆ ಮಾಡಿದ್ದನ್ನು ನೀವು ಮೆಚ್ಚಬೇಕು.

11.20 ಎಎಂ

ಶ್ರೀ ಬಿ. ಸೋಮಶೇಖರ್: ನೀವು ಅದನ್ನಲ್ಲ ಮಾಡಿದ್ದು. ನಾವು ತಂದಿರತಕ್ಕಂದ್ದನ್ನು ಹಿಂದಕ್ಕೆ ತೆಗೆದು, ಮತ್ತೆ ಹೊಸದಾಗಿ ತಂದು ಪ್ರಚಾರ ತೆಗೆದುಕೊಳ್ಳಲು ಮಾಡಿದಿರಷ್ಟೆ. ಹಿಂದೆ ಮಾಡಿರಲಿಲ್ಲ, ನಾವು ಮಾಡಿದೆವು ಎಂಬ ಪ್ರಚಾರಕ್ಕಾಗಿ ಮಾಡಿದಿರಷ್ಟೆ. ಹಿಂದೆ ಇದ್ದುದ್ದನ್ನು ಮುಂದುವರೆಸಿದ್ದರೆ ಆಗುತ್ತಿತ್ತು, ಅದನ್ನೇಕೆ ವಾಪಸ್ ತೆಗೆದಿರಿ? ಇಂಥ ಕ್ರಾಂತಿಕಾರಕ ಸುಧಾರಣೆಯನ್ನು ಇಡೀ ದೇಶದಲ್ಲೇ ಪ್ರಪ್ರಥಮವಾಗಿ ತಂದದ್ದನ್ನು ತಾವು ತೆಗೆದದ್ದು ಏಕೆ? ಈ ಕಾರ್ಯಕ್ರಮ ಒಂದು ಫ್ಯಾಮಿಲಿಯನ್ನು ಬಿಟ್ಟಿದೆಯೇ ಹೇಳಿ? ದಾನ ಕೊಡತಕ್ಕವರು ಒಂದು ಜಾತಿಗೆ ಸಂಬಂಧಪಟ್ಟವರೇ? ಒಂದು ವರ್ಗಕ್ಕೆ ಸಂಬಂಧಪಟ್ಟಿದ್ದೇ ಪ್ರತಿಯೊಬ್ಬರೂ ಮಕ್ಕಳಿಗೂ ದಾನವನ್ನು ಕೊಡುತ್ತಾರೆ. ಇದರಲ್ಲಿ ಕನ್‌ಸಿಡರೇಷನ್ ಇಲ್ಲ. ರಿಜಿಸ್ಟ್ರೇಷನ್ ಆಗುತ್ತಿರಲಿಲ್ಲ. ಆದರೆ ನಾವು ಕೇವಲ ಒಂದು ಸಾವಿರ ರೂಪಾಯಿಗಳಲ್ಲಿ ರಿಜಿಸ್ಟ್ರೇಷನ್ ಮಾಡಿ ದಾನ ಕೊಡಬಹುದೆಂದು ಜಾರಿಗೆ ತಂದೆವು. ಇದು ಇಡೀ ದೇಶದಲ್ಲಿಯೇ ಕ್ರಾಂತಿಕಾರಕವಾದ ಸುಧಾರಣೆ ಅಲ್ಲವೇ? ಇದನ್ನು ತಾವು ಏಕೆ ತೆಗೆದಿರಿ? ಅದನ್ನು ತೆಗೆದು ಗಲಾಟೆಯಾಯಿತು ಅದಕ್ಕಾಗಿ ರೀಇಂಟ್ರೊಡ್ಯೂಸ್ ಮಾಡಿ ಮತ್ತೆ ಕೊಟ್ಟಿರಿ. ಇದಕ್ಕೆ ಅಭಿನಂದನೆಯನ್ನು ಸಲ್ಲಿಸುವುದರಲ್ಲೇನಿದೆ? ಕೆ.ಎ.ಡಿ.ಬಿ. ಯಲ್ಲಿ, ಕಾರ್ಪೊರೇಷನ್‌ಗಳಲ್ಲಿ, ಹೌಸಿಂಗ್ ಬೋರ್ಡ್‌ಗಳಲ್ಲಿ ಸೈಟುಗಳನ್ನು ಕೊಡುತ್ತಿದ್ದರು. ಲೀಸ್ ಕಂ ಸೇಲ್‌ನಲ್ಲಿ ಕೊಡುತ್ತಿದ್ದರು. ಹತ್ತು ಹದಿನೈದು ವರ್ಷಗಳ ಹಿಂದೆ ಲೀಸ್ ಕಂ ಸೇಲ್‌ನ ಅಡಿಯಲ್ಲಿ ಸೈಟುಗಳನ್ನು ಕೊಟ್ಟಿದ್ದಾಗ ಅವತ್ತು ಅದರ ಬೆಲೆ ಒಂದು ಸಾವಿರವೋ, ಒಂದು ಲಕ್ಷವೋ, ಇತ್ತು ಎಂದು ಇಟ್ಟುಕೊಳ್ಳಿ. ಇವತ್ತು ಅದು ಇಪ್ಪತ್ತು ಲಕ್ಷ ರೂ. ಆಗಿದೆ. ಇದುವರೆಗೆ ಇವತ್ತಿನ ಮಾರುಕಟ್ಟೆ ಬೆಲೆಯಲ್ಲಿ ಅಂದರೆ ಆ ಇಪ್ಪತ್ತು ಲಕ್ಷ ರೂ.ಗೆ ಸ್ಟ್ಯಾಂಪ್ ಡ್ಯೂಟಿಯನ್ನು ಕಟ್ಟಬೇಕಿತ್ತು, ಇದರಿಂದ ಬಹಳ ತೊಂದರೆ ಇತ್ತು. ಬಡವರಿಗೇನಾದರೂ ಒಂದು ಸೈಟು ಕೊಟ್ಟರೆ ಹದಿನೈದು ವರ್ಷಗಳಾದ ಮೇಲೆ ಅವನು ಅದರ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಲು ಆಗುತ್ತಿರಲಿಲ್ಲ. ಏಕೆಂದರೆ ಇವತ್ತಿನ ಮಾರುಕಟ್ಟೆ ಬೆಲೆಗೆ ಅವನು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾಗಿತ್ತು. ಬಡವ ಅಂದು ಐದು ಸಾವಿರಕ್ಕೆ ಸೈಟನ್ನು ತೆಗೆದುಕೊಂಡಿದ್ದರೆ ಇವತ್ತು ಮಾರುಕಟ್ಟೆ ಬೆಲೆಯಲ್ಲಿ ಒಂದೂವರೆ ಲಕ್ಷ ರೂ. ಇದ್ದರೆ, ಅದಕ್ಕೆ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕಿತ್ತು. ಮಾರುಕಟ್ಟೆ ಬೆಲೆ ನಿಗಧಿಯಾಗಿರಲಿಲ್ಲ. ಅದಕ್ಕೆ

ನಾವು ಮಾರುಕಟ್ಟೆ ಬೆಲೆಯನ್ನು ತೆಗೆದು ಸ್ಟ್ಯಾಂಪ್ ಪೇಪರ್‌ನಲ್ಲಿ ಏನು ಬೆಲೆ ನಿಗದಿ ಮಾಡಿದ್ದಿರಿ ಅಷ್ಟಕ್ಕೇ ರಿಜಿಸ್ಟ್ರೇಷನ್ ಮಾಡಿಸಬೇಕೆಂದು ಮಾಡಿದೆವು. ಮಾರುಕಟ್ಟೆ ದರವನ್ನು ನಿಗದಿ ಮಾಡತಕ್ಕಂಥ ವ್ಯವಸ್ಥೆಯನ್ನು ತಂದೆವು.

ಶ್ರೀ ಆರ್.ವಿ. ದೇಶಪಾಂಡೆ: ತಾವು ಹೇಳಿದ್ದು ಸರಿ. ಆದರೆ ತಮ್ಮ ವಿಚಾರ ಇಂಪ್ಲಿಮೆಂಟ್ ಆಗಿಲ್ಲ. ಅದು ಇಂಪ್ಲಿಮೆಂಟ್ ಆಗಬೇಕಾದರೆ ಈ ಸರ್ಕಾರ ಬರಬೇಕಾಯಿತು. ಈ ಸರ್ಕಾರ ಬಂದನಂತರ ತಮ್ಮ ವಿಚಾರ ಇಂಪ್ಲಿಮೆಂಟ್ ಆಗಿ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಲೀಸ್ ಕಂ ಸೇಲ್ ಡೀಡ್ ಒರಿಜಿನಲ್ ಪ್ರೈಸ್ ಏನು ಕೊಡುತ್ತೇವೆ ಅದೇ ಪ್ರೈಸ್ ಮೇಲೆ ರಿಜಿಸ್ಟ್ರೇಷನ್ ಆಗಬೇಕು ಮತ್ತೊಂದು ಒಂದು ಸ್ಟೆಪ್ ಏನು ಮಾಡಿದ್ದೇವೆಂದರೆ ರಿಜಿಸ್ಟ್ರೇಷನ್ ಆಗಲು ಹತ್ತು ವರ್ಷ ಬೇಕಿಲ್ಲ; ಲ್ಯಾಂಡ್ ಕೊಟ್ಟ ನಂತರ ಕೈಗಾರಿಕೆಯವರು ಆ ಲ್ಯಾಂಡನ್ನು ಒಂದು ವರ್ಷ ಉಪಯೋಗ ಮಾಡಿದರೂ ಸಹ ಒಂದು ವರ್ಷದಲ್ಲೇ ರಿಜಿಸ್ಟ್ರೇಷನ್ ಮಾಡುತ್ತೇವೆ. He need not wast for ten years ಎಂದು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್‌ರವರೇನು ಸ್ಟ್ಯಾಂಪ್ ಪೇಪರ್ ಬಗ್ಗೆ ಎತ್ತಿದ್ದಾರೆ, ಇಂಪ್ಲಿಮೆಂಟೇಷನ್ ಬಗ್ಗೆ ಮೊನ್ನೆ ನನ್ನ ಭಾಷಣದಲ್ಲಿ ಹೇಳಿದೆ. ಇಂಪ್ಲಿಮೆಂಟೇಷನ್‌ನಲ್ಲಿ ಬಹಳ ಸಮಸ್ಯೆ ಇದೆ, ಕಾನೂನಿನ ಚೌಕಟ್ಟಿನೊಳಗೆ ಇದನ್ನು ಇಮೀಡಿಯೇಟ್ಲಿ ಎಫೆಕ್ಟೀವ್‌ಗೆ ತರಲು ಸಮಸ್ಯೆ ಇದೆ. ಇವತ್ತಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಹೇಳಿಕೆ ಬಂದಿದೆ. ಐ.ಜಿ.ಆರ್. ರವರು ಒಂದು ಸ್ಟೇಟ್ ಮೆಂಟ್‌ನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಹೇಳುವ ಮೊದಲು ಅಧಿಕಾರಿಗಳ ಜೊತೆ ಕನ್‌ಸಲ್ಟೇಷನ್ ಮಾಡಿದ್ದಾರೋ ಇಲ್ಲವೋ ಎಂಬ ಸಂಶಯ ಬರುತ್ತಿದೆ. ಈಗಾಗಲೇ ಸುಮಾರು 600 ಕೋಟಿ ರೂ. ಮೊತ್ತದಷ್ಟು ಸರ್ಕ್ಯುಲೇಷನ್ ಮಾರುಕಟ್ಟೆಯಲ್ಲಿದೆ. ಏಪ್ರಿಲ್ ಒಂದರಿಂದಲೇ ಇದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಈ ಸರ್ಕ್ಯುಲೇಷನ್ ಎಲ್ಲವನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ತಿದ್ದುಪಡಿಯ ಪ್ರಕಾರ ಇದನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಆಪೆಷನಲ್ ಇದೆ. ಅಕ್ಕಪಕ್ಕ ರಾಜ್ಯದ ಗಡಿ ಭಾಗಗಳಲ್ಲಿ ಇರತಕ್ಕವರು ಅಲ್ಲಿಂದ ಸ್ಟಾಂಪ್ ಪೇಪರ್ಸ್‌ನ್ನು ತೆಗೆದುಕೊಂಡು ಬಂದರೆ ಅದನ್ನು ತಾವು ಅಕ್ಸೆಪ್ಟ್ ಮಾಡಲೇಬೇಕಾಗುತ್ತದೆ. ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಅದನ್ನು ಅಕ್ಸೆಫ್ಟ್ ಮಾಡಲೇಬೇಕಾಗುತ್ತದೆ. ಇದು ಇರತಕ್ಕ ಸಮಸ್ಯೆ. ಇಲ್ಲಿ ಏನು ಹೇಳಿದ್ದಾರೆಂದರೆ,

"But the buy-back is not so simple, as the department has to guard against falling in for any fake stamp paper during the refund. Thus the abolition will not come into effect from April 1, as has been presumed.

Adding to this, is the administrative problem of the livelihood of over an estimated 6,500 main stamp vendors across the state and an unestimated number sub-vendors. "All of this is expected to take more than a couple of moths. The CM did not say the abolition will come into effect from April ...."

ಇನ್ನೊಂದು ಸಮಸ್ಯೆ ಇದೆ. ನಾನು ಆವತ್ತೇ ಹೇಳಿದೆ, ನೂರು ರೂಪಾಯಿ, ಇಪ್ಪತ್ತು ರೂಪಾಯಿಗಳ ಇಮ್ಮೀಡಿಯೇಟ್ ರಿಜಿಸ್ಟ್ರೇಷನ್ ಆಗತಕ್ಕಂಥ ಸಣ್ಣ ಸಣ್ಣ ಅಗ್ರಿಮೆಂಟ್ಸ್‌ಗಳು ಇರುತ್ತವೆ. ಅಂಥದ್ದನ್ನು ನಾವು ಅವಾಯ್ಡ್ ಮಾಡಲು ಆಗುವುದೇ ಇಲ್ಲ. ಅದರ ಬಗ್ಗೆಯೇ ಇವತ್ತು ಐ.ಜಿ.ಆರ್. ರವರು ಹೇಳಿದ್ದಾರೆ.

"Muniyappa also conjectured that stamp papers of smaller denominations, like Rs. 100 and below, will remain in circulation, since other alternatives wer not viable. "Ordinary agreements need minimum vaue stamp paper. In the absence of any official document, citizens will be at a loss. Besides, buying a DD for a Rs.100 transaction will not be practical..."

ಆದ್ದರಿಂದ ಇದನ್ನು ಪೂರ್ಣವಾಗಿ ಅಬಾಲಿಷ್ ಮಾಡುತ್ತೇವೆ ಎನ್ನತಕ್ಕದ್ದನ್ನು ಮಾಡಲು ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಇದನ್ನು ಸಂಪೂರ್ಣವಾಗಿ ಅಬಾಲಿಷ್ ಮಾಡುವುದಾಗಿ ಹೇಳಿದ್ದಾರೆ. ಆದರೆ ಐ.ಜಿ.ಆರ್. ರವರು ಇದನ್ನು ಸಂಪೂರ್ಣವಾಗಿ ಅಬಾಲಿಷ್ ಮಾಡಲು ಆಗುವುದಿಲವೆಂಬ ನಿಟ್ಟಿನಲ್ಲಿ ಮಾತನಾಡುತ್ತಾರೆಂದರೆ ಬಹುಶಃ ನಾಳೆ ಇದು ಹಕ್ಕುಚ್ಯುತಿಯೂ ಆಗಬಹುದು. ಏಕೆಂದರೆ ಇದರ ಬಗ್ಗೆ ಸಮರ್ಪಕವಾಗಿ ಕನ್‌ಸಲ್ಟೇಷನ್ ಮಾಡಬೇಕಾಗಿದೆ.

ಶ್ರೀ ಬಿ. ಸೋಮಶೇಖರ್: ಸ್ಟ್ಯಾಂಪ್ ಪೇಪರ್‌ನ್ನು ಸಂಪೂರ್ಣವಾಗಿ ರದ್ದು ಮಾಡಲು ಆಗುವುದಿಲ್ಲ. Abolition of stamp papers is not possible for the State Government. ನಾನು ಮೊದಲೇ ಹೇಳಿದೆ.

Sri. S.P. Mudda Hanumegowda: Sir, in addition to the argument made by the Opposition Party Leader, what is the evidentiary value of the documents already registered on the fake stamp paper? Because under Section 34 of the Stamp Act, the document which is not duly stamped, that cannot be admitted in the evidence. What is the evidentiary value of those documents? Suppose, tomorrow, the Court comes to the conclusion that no property is transferred under the documents registered on the fake stamp paper or no title is passed under the documents registered on the fake stamp paper. Then what is the fate of these innocent people, who have invested their life-time savings either to purchase the property or to sell the property, the documents of which are registered on the fake stamp papers. ನಾಳೆ ಏನಾಗುತ್ತೆ, ಕಾನೂನು ದೃಷ್ಟಿಯಲ್ಲಿ ಎಂದು ಏನಾದರೂ ಕೋರ್ಟ್ ತೀರ್ಮಾನ ಮಾಡಿದರೆ, 20 ವರ್ಷಗಳ ಹಿಂದೆ ಡಾಕ್ಯುಮೆಂಟ್

ರಿಜಿಸ್ಟ್ರೇಷನ್ ಆಗಿರತಕ್ಕ ದರ ವ್ಯಾಲೂ ಈಗ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕು. it is not a document, it is null and void; As per Section 34 of the Karnataka Stamp Act, such documents cannot be admitted in evidence. That is why, I request the Hon'ble Law Minister and the Hon'ble Revenue Minister to pur their men in action and find out some solution about the documents which are already registered on the fake stamp paper.

SRI D.B. CHANDRE GOWDA: Unless somebody questions the validity of the document, till such time that is valid.

SRI S.P. MUDDAHANUME GOWDA: It is undisputed that even possession of the fake currency note is an offence. Even an innocent person, a poor person, who is in possession of Rs.500 note- that itself is an offence and even that Rs.500 note doesn't have the value of even one rupee. I cannot find any difference between the fake currency not and the fake stamp paper

ಆದ್ದರಿಂದ ಕಾನೂನು ಇಲಾಖೆಯವವು ಇದಕ್ಕೆ ಏನಾದರೂ ಪರಿಹಾರ ಸೂಚಿಸಬೇಕು.

Suppose, in one particular case if the Court comes to the conclusion that the documents registered on fake stamp paper are not genuine and they are not valid and no property is transferred and there is no transfer of title, tomorrow every body will try to question the documents.

Suppose the Court asks such people to pay fine and to pay the stamp duty.

It creates confusion and chaos. Or if it says that no property and no title is transferred, there will be problem. Therefore, I think this is the proper time for the Law Department to find out some solution for these innocent people who have entered into transactions on fake stamp papers.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುದ್ದಹನುಮೇಗೌಡರು ಏನು ಪ್ರಶ್ನೆ ಎತ್ತಿದ್ದರೆ, It is a relevant question. ಅದರ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಇದರ ಬಗ್ಗೆ ಯಾರ್ಯಾಯಾರು ಅಬ್ಜೆಕ್ಷನ್ ರೈಸ್ ಮಾಡಿದಾಗ, ಜಾಲೆಂಜ್ ಮಾಡಿದಾಗ ಈ ಪ್ರಶ್ನೆ ಬರುತ್ತದೆ. ಉದಾಹರಣೆಗೆ, ಒಂದು ಸೇಲ್ ಡೀಡನ್ನು ರಿಜೆಸ್ಟ್ರೇಷನ್ ಮಾಡಿಬಿಡುತ್ತೇವೆ. ಸೇಲ್ ಡೀಡ್ ಮಾಡಿ ಕೊಂಡವನು ಅದನ್ನು ತನ್ನ ಮನೆಯಲ್ಲಿಟ್ಟುಕೊಳ್ಳುತ್ತಾನೆ. ಅದನ್ನು ಎಲ್ಲೂ ಹಾಜರು ಮಾಡುವುದಿಲ್ಲ. ಆದರೆ ಯಾವುದೋ ಬ್ಯಾಂಕ್‌ನಲ್ಲಿ ಲೋನ್ ತೆಗೆದುಕೊಂಡಾಗ,

ಅದನ್ನು ಮಾರ್ಟ್ ಗೇಜ್ ಮಾಡಿದಾಗ ಅಲ್ಲಿ ಅದನ್ನು ಚೆಕ್ ಮಾಡಿದಾಗ, ಪ್ರಾಪರ್ಟೀಸ್‌ನಲ್ಲಿ ಡಿಸ್‌ಪ್ಯೂಟ್ ಬಂದಾಗ, ಓನರ್ಸ್ ಅಂಡ್ ಅದರ್ಸ್ ಪರ್ಸನ್ಸ್‌ನಲ್ಲಿ ಡಿಸ್ ಪ್ಯೂಟ್ ಬಂದಾಗ ಅಲ್ಲಿ ವ್ಯಾಲಿಡಿಟಿಯ ಬಗ್ಗೆ ಪ್ರಶ್ನೆ ಬರುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಇವತ್ತು ಸ್ಟ್ಯಾಂಪ್ ಪೇಪರ್ಸ್ ತುಂಬಿಲ್ಲವೆಂದರೆ ಸೇಲ್ ಡೀಡ್‌ನ ವ್ಯಾಲಿಡಿಟಿ ಸಂಪೂರ್ಣವಾಗಿ ನಲ್ಲಿಡಿಟಿಯಾಗುವುದಿಲ್ಲ. ಸ್ಟ್ಯಾಂಡ್ ಪೇಪರ್ಸ್ ಫೇಕ್ ಇತ್ತು ಎಂದರೆ ಅವನು ಪೇಮೆಂಟ್ ಮಾಡಬೇಕಾಗುತ್ತದೆ. ಸರ್ಕಾರ ಅವನಿಂದ ರೆಕವರಿ ಮಾಡಬೇಕಾಗುತ್ತದೆ. ಆದರೆ ಟೈಟಲ್ ಡೀಡ್ ಸಂಪೂರ್ಣವಾಗಿ ಇಲ್ಲೀಗಲ್ ಆಗುವುದಿಲ್ಲ. ನಲ್ಲಿಡಿಟಿಯಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಆದ್ದರಿಂದ ಇದರ ಬಗ್ಗೆ ಲೀಗಲ್ ಎಕ್ಸ್‌ಪರ್ಟ್ಸ್ ಒಪೀನಿಯನ್ ಕೊಡುವುದು ಒಳ್ಳೆಯದು. ಐ.ಜಿ.ಆರ್, ಮುನಿಯಪ್ಪನವರು ಒಂದು ಕಡೆ ಏನು ಹೇಳಿದ್ದಾರೆಂದರೆ 'I don't think we can refuse to accept it...'

" If a person buys stamp paper from Hosur, to register something in the state, I don't think we can refuse to accept it because of Indian Stamp Act. Issues like these are being examined and I will place an approach paper examining all the issues involved before the Cabinet for consideration." ಇವೆಲ್ಲಾ ಬಜೆಟ್‌ನಲ್ಲಿ ಮೆನ್‌ಷನ್ ಮಾಡುವುದಕ್ಕಿಂತ ಮುಂಚೆಯೇ ಆಗಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯವಾಗಿದೆ.

MR. SPEAKER: Then the purchaser himself has to verify first and purchase it.

SRI JAGADISH SHETTAR:- But, an ordinary prudent man cannot do all these things. He immediately purchases and in hurry executes sale deed. ಯಾವ ಒಬ್ಬ ಆರ್ಡಿನರಿ ಮ್ಯಾನ್‌ಗೆ ಆ ರೀತಿ ನೋಡಿ ಖರೀದಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ, ತಾವು ಮಾತನಾಡಲು ಆರಂಭಿಸಿ ಈಗಾಗಲೇ ಒಂದು ಗಂಟೆಯಾಯಿತು. ತಮಗೆ ಮಾತನಾಡಲು ಇನ್ನೂ ಎಷ್ಟು ಸಮಯ ಬೇಕು ?

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಇನ್ನು 20 ನಿಮಿಷಗಳಲ್ಲಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಆಯಿತು, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಕಾನೂನಿನಲ್ಲಿ not only stamp paper, everything for that matter, using fake things under the law is forbidden.

SRI. S.P. MUDDA HANUME GOWDA:- Ignorance of law is no excuse.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್ ತಹಸೀಲ್ದಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

SRI B. SOMASHEKAR:- Not only stamp paper, anything that are used which are not legally permitted, is unlawful.

ಆ ಬಗ್ಗೆ ಆ್ಯಕ್ಟ್‌ನಲ್ಲಿದೆ. ಫೇಕ್ ಸ್ಟಾಂಪ್ ಪೇಪರ್‌ಗಳಲ್ಲಿ ಆಗಿರತಕ್ಕಂಥ ರಿಜಿಸ್ಟ್ರೇಷನ್‌ಗಳನ್ನು ಯಾವುದೇ ರೀತಿಯಲ್ಲಿ ಗಣನೆಗೆ ತೆಗೆದುಕೊಳ್ಳಬಾರದು, ಅದು ಲೀಗಲೈಸ್ ಆಗುವುದಿಲ್ಲ ಎಂಬುದು ಇದೆ. ಆದರೆ ನಮ್ಮ ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಹಾಗೆ, who will question that? Ones it is registered, the next process is transfer of rights through other process. ಖಾತೆ ಬದಲಾವಣೆಯಾಗುತ್ತದೆ. ಅವರ ಹೆಸರಿಗೆ ಅದು ಬಂದು ಬಿಡುತ್ತದೆ. ಇದೆಲ್ಲಾ ಮುಂದೆ ಹೊರಟು ಹೋಗುತ್ತದೆ. ಇದರಿಂದಾಗಿ ಏನಾಗುತ್ತದೆ ಎಂದರೆ, whether it is registered on fake stamp paper or the real stamp paper will not be of relevance after the registration is made. ಇದುವರೆಗೂ ಇದನ್ನು ಯಾರೂ ಕ್ವೊಶ್ಚನ್ ಮಾಡುತ್ತಿಲ್ಲ? But, under the law, it is forbidden ನಾನು ಹೇಳುವುದೇನೆಂದರೆ, using white paper in the registration, ಸೆಂಟ್ರಲ್ ಆ್ಯಕ್ಟ್‌ನಲ್ಲಿ ಸ್ಟಾಂಪ್ ಪೇಪರ್ಸ್ ಉಪಯೋಗಿಸಬೇಕೆಂದು ಇದೆ. What we have done is that we have brought an amendment to the Karnataka Stamp Act. ಸೆಕ್ಷನ್ 10(ಎ) (ಬಿ) ಪ್ರಕಾರ ನಾವು ತಿದ್ದುಪಡಿ ಮಾಡಿದ್ದೇವೆ. Instead of using stamp papers, we can use challans, DD, Pay Order to pay the stamp duty and we can also use franking machines, thereby we need not buy stamp papers from Govt. of India, which are being distributed through the stamp vendors. We can discourage using the stamp papers. We cannot bring any amendment to the Central Stamp Act to dispense with the stamp paper. That is our domain. Of course, you have got the stamp paper from the Govt. of India. We don't use it. ಉದಾಹರಣೆಗೆ ಹೇಳುವುದಾದರೆ, ಐ.ಎ.ಎಸ್. ಅಧಿಕಾರಿಗಳನ್ನು ಸೆಂಟ್ರಲ್ ಗೌರ್ನಮೆಂಟ್‌ನವರು ನಮಗೆ ಡೆಪ್ಯೂಟಿ ಮಾಡುತ್ತಾರೆ. The State Government can always say, " We don't want this much officers. We will manage with our state services." ಎಂದು ಹೇಳುವುದಿಲ್ಲವೇ? ಅದೇ ರೀತಿಯಾಗಿ, "We don't require your stamp papers. We will do the registration only through this methods. ಎಂದು ನಾವು ಹೇಳಬಹುದು. ಅದನ್ನೇ ನಾವು ಮಾಡಿದ್ದು. ಏಕೆ ನಾವು ಪೂರ್ತಿ ತೆಗೆಯುವುದಕ್ಕಾಗುವುದಿಲ್ಲ ಎಂದರೆ, that is not oue domain. So, thereby we said, it is optional. We can use it. We need not use it. ಏಕೆಂದರೆ ಹೊಸೂರು ಅಥವಾ ಮತ್ತಿತರ ಕಡೆಗಳಿಂದ ತರಬಹುದು. ಅದನ್ನು ನಾವು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ.

ಅಂತಹ ಕಡೆಗಳಿಂದ ಬರುವುದನ್ನು ನಾವು ಪ್ರಿವೆಂಟ್ ಮಾಡುವುದಕ್ಕಾಗುವುದಿಲ್ಲ. ಕೆಲವರಿಗೆ ಸ್ಟ್ಯಾಂಪ್ ಪೇಪರ್‌ನಲ್ಲಿ ಡಾಕ್ಯುಮೆಂಟ್ ಇದ್ದರೆ ಮಾತ್ರ ಸೈಕಲಾಜಿಕಲ್ಲಾಗಿ ಸ್ಯಾಟಿಸ್‌ಫ್ಯಾಕ್ಷನ್ ಸಿಗುತ್ತದೆ. ಅಂತಹವರು ಸಾಂಕೇತಿಕವಾಗಿ 100 ರೂಪಾಯಿ ಸ್ಟ್ಯಾಂಪ್ ಪೇಪರ್ ಉಪಯೋಗಿಸಿದ್ದರೆ ಸಾಕು. ಉದಾಹರಣೆಗೆ, 10 ಸಾವಿರ ರೂಪಾಯಿಗಳಿಗೆ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕೆಂದರೆ, 10 ಸಾವಿರ ರೂಪಾಯಿಗಳನ್ನು ವೈಟ್ ಪೇಪರ್‌ನಲ್ಲಿ ರಿಜಿಸ್ಟರ್ ಮಾಡಿಸಬಹುದು ಅಥವಾ ಫ್ರಾಂಕಿಂಗ್ ಮೆಷಿನ್‌ನಲ್ಲಿ ಕೂಡ ರಿಜಿಸ್ಟರ್ ಮಾಡಬಹುದು. ಇಲ್ಲದಿದ್ದರೆ, 100 ರೂಪಾಯಿ ಬೆಲೆಯ ಸ್ಟ್ಯಾಂಪ್ ಪೇಪರ್ ತೆಗೆದುಕೊಂಡು, ಉಳಿದ 9,900 ರೂಪಾಯಿಗಳಿಗೆ ಡಿ.ಡಿ. ಅಥವಾ ಚಲನ್ ತೆಗೆದುಕೊಳ್ಳಬಹುದು. ಇದರಿಂದಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ 9,900 ರೂಪಾಯಿಗಳಿಗೆ ಫ್ರಾಂಕಿಂಗ್ ಅಥವಾ ಸೀಲ್ ಅನ್ನು 100 ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಹಾಕಲಾಗುತ್ತದೆ. ಒಟ್ಟಾರೆಯಾಗಿ ಸರ್ಕಾರಕ್ಕೆ ಬರಬೇಕಾದ ಸ್ಟ್ಯಾಂಪ್ ಡ್ಯೂಟಿ ಇದರಿಂದ ಬಂದಂತಾಗುತ್ತದೆ. ಇದರ ಜೊತೆಗೆ ಸ್ಟ್ಯಾಂಪ್ ಪೇಪರ್ ಕೂಡ ಉಪಯೋಗಿಸಿದಂತಾಗುತ್ತದೆ. ಇದರ ಜೊತೆಗೆ, using bulk stamp papers by financial institutions can be discouraged. ಆ ದೃಷ್ಟಿಯಿಂದ We made it optional. ಅದನ್ನು ಮುಂದುವರೆಸಿಕೊಂಡು ಹೋಗಿದಿದ್ದರೆ ಬಹುಶಃ ಈ ಫ್ರಾಂಕಿಂಗ್ ಮೆಶಿನ್ ಅನ್ನು ನೀವು ಅವತ್ತೇ ಜಾರಿಗೆ ತಂದಿರುತ್ತಿದ್ದಿರಿ. 16.8. 1999 ರಿಂದ ಕಲಂ (ಎ) ಗೆ ತಿದ್ದುಪಡಿ ತಂದಿದ್ದೆವು. ಅಂದರೆ ನಮ್ಮ ಸರ್ಕಾರ ಹೋಗುವ ಎರಡು ತಿಂಗಳು ಮೊದಲು ತಿದ್ದುಪಡಿ ತಂದು ಆರ್ಡರ್ ಇಶ್ಯೂ ಮಾಡಲಾಯಿತು. ಆದರೆ ಅದನ್ನು ಮುಂದುವರೆಸಿಕೊಂಡು ಹೋಗಬೇಕಾದುದು ನಿಮ್ಮ ಕರ್ತವ್ಯವಾಗಿತ್ತು. ಬೆಂಗಳೂರಿನಲ್ಲಿ 3 ಲಕ್ಷ 8 ಸಾವಿರ ದಸ್ತಾವೇಜು ರಿಜಿಸ್ಟರ್ ಆಗಿದ್ದರೆ, ಅದರಲ್ಲಿ ಸುಮಾರು 10 ಸಾವಿರ ದಸ್ತಾವೇಜುಗಳು ಬಿಳಿ ಕಾಗದದಲ್ಲಿ ರಿಜಿಸ್ಟರ್ ಆಗಿವೆ. ಅಂದರೆ ಶೇ. 10 ರಷ್ಟು ಬಿಟ್ಟು ಉಳಿದಂತಹ ತಿಳುವಳಿಕೆ ಇರತಕ್ಕಂಥ ಜನ ಬಿಳಿ ಕಾಗದವನ್ನು ಉಪಯೋಗಿಸಿಯೇ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಶೇ. 4 ರಷ್ಟು ಬಿಳಿ ಕಾಗದವನ್ನೇ ಉಪಯೋಗಿಸಿದ್ದಾರೆ. ಅದಕ್ಕಾಗಿಯೇ ನಾವು ಮಾಡೆಲ್ ಡೀಡ್ಸ್‌ಗಳನ್ನು ತಯಾರು ಮಾಡಿ, ಅದನ್ನು ಲಾ ಡಿಪಾರ್ಟ್‌ಮೆಂಟ್ ಸ್ಯುಟಿನೈಸ್ ಮಾಡಿ ಪ್ರಿಂಟ್ ಮಾಡಿಸಿ ವೆಬ್‌ಸೈಟಿಗೆ ಹಾಕಿಸಿದ್ದೆವು. ಲೀಸ್ ಡೀಡ್, ಪಾರ್ಟಿಷನ್ ಡೀಡ್, ಮಾರ್ಗೇಜ್ ಡೀಡ್ ಮುಂತಾದ 30-40 ಡೀಡ್ಸ್‌ಗಳನ್ನು ವೆಬ್ ಸೈಟಿಗೆ ಹಾಕಿಸಿದ್ದೆವು. 'They should be available in the shops.' ಎಂದು ಮಾಡಿದೆವು. ಅದನ್ನು ತೆಗೆದು ಫಿಲಪ್ ಮಾಡಿ ಸ್ಟಾಂಪ್ ಡ್ಯೂಟಿಯನ್ನು ಚಲನ್ ಅಥವಾ ಡಿ.ಡಿ. ಉಪಯೋಗಿಸಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಮಾಡಿದೆವು. ಅದನ್ನು ನೀವು ಜಾರಿಗೆ ತಂದಿಲ್ಲ. ಆ ತಿದ್ದುಪಡಿ ತಂದ ಎರಡು ತಿಂಗಳಿಗೇ ನಮ್ಮ ಸರ್ಕಾರ ಹೋಯಿತು. ಅದನ್ನು ಮಾಡಬೇಕಾದಂತಹ ಕರ್ತವ್ಯ ನಿಮ್ಮದಾಗಿತ್ತು. ಆದ್ದರಿಂದ ಇವತ್ತು ಸ್ಟಾಂಪ್ ಪೇಪರ್ ಅನ್ನು ಪೂರ್ತಿಯಾಗಿ ತೆಗೆಯತಕ್ಕದ್ದು ಸಾಧ್ಯವಾಗುವುದಿಲ್ಲ. ಆಗ ನಾವೇನು ಜಾರಿಗೆ ತಂದಿದ್ದೆವೋ ಅದನ್ನು ನೀವು ಕಟ್ಟುನಿಟ್ಟಾಗಿ ಜಾರಿಗೆ ತಂದರೆ, ನೀವು ನೂರಕ್ಕೆ ನೂರರಷ್ಟು ನಕಲಿ ಛಾಪಾ ಕಾಗದವನ್ನು ಬದಲಾವಣೆ ಆಗದಂತೆ ತಡೆಯಬಹುದು. ಮೊನ್ನೆ ತಾನೇ ತಾವು ಫ್ರಾಂಕಿಂಗ್ ಮೆಷನ್‌ಗೆ ಆರ್ಡರ್ ಕೊಟ್ಟಿದ್ದೀರಿ. ನಾವು ಒಂದೂವರೆ ವರ್ಷದ ಹಿಂದೆ ತಿದ್ದುಪಡಿ ಮಾಡಿ ಜೆ.ಓ. ಇಶ್ಯೂ ಮಾಡಿದ್ದರೆ, ನೀವು ಎರಡೂವರೆ ವರ್ಷಗಳ ನಂತರ ಅದಕ್ಕೆ ಆರ್ಡರ್ ಕೊಟ್ಟಿದ್ದೀರಿ.

ಇದರಿಂದಾಗಿಯೇ, ಇವತ್ತು 10 ಸಾವಿರ ಕೋಟಿ ರೂಪಾಯಿಗಳಷ್ಟು ಮೌಲ್ಯದ ನಕಲಿ ಛಾಪಾ ಕಾಗದಗಳು ಮಾರುಕಟ್ಟೆಗೆ ಬರಲು ಸಾಧ್ಯವಾಯಿತು. ಫ್ರಾಂಕಿಂಗ್ ಮೆಷಿನ್ ಅನ್ನು ಎರಡೂವರೆ ವರ್ಷಗಳ ಹಿಂದೆಯೇ ನೀವು ಕೊಡಿಸಿಬಿಟ್ಟಿದ್ದರೆ, ಒಂದು ರೂಪಾಯಿ ಮೌಲ್ಯದ ನಕಲಿ ಛಾಪಾ ಕಾಗದಗಳೂ ಕೂಡ ಹೊರಗೆ ಬರಲಿಕ್ಕೆ ಅವಕಾಶವಿರುತ್ತಿರಲಿಲ್ಲ. ಈ ರೀತಿಯ ಕ್ರಾಂತಿಕಾರಕ ಸುಧಾರಣೆಯನ್ನು ನಮ್ಮ ಜನತಾದಳ ಸರ್ಕಾರದವರು ತಂದಿದ್ದರೂ ಸಹ ನೀವು ಅದನ್ನು ಎರಡೂವರೆ ವರ್ಷಗಳ ಕಾಲ ಬದಿಗೊತ್ತಿ ಈ ನಕಲಿ ಛಾಪಾ ಕಾಗದಗಳು, ನಿಮ್ಮ ಕಾಂಗ್ರೆಸ್ ಕಾರ್ಯಕರ್ತರು ಇದ್ದರೂ ಇರಬಹುದು, ಅವರನ್ನೆಲ್ಲಾ ಸೇರಿಸಿ ಬಯಲಿಗೆ ತಂದು ಇವತ್ತು ಹಗರಣವಾದ ಮೇಲೆ, ಮತ್ತೆ ನಾವು ಹಿಂದಿನ ಸರ್ಕಾರ ತಂದಿರುವುದನ್ನು ತರುತ್ತಿದ್ದೇವೆ ಎಂದು ಹೇಳುವ ಸೌಜನ್ಯತೆ ಕೂಡ ನಿಮಗಿಲ್ಲ. ಹೊಸದಾಗಿ ಕ್ರಾಂತಿಕಾರಕ ಬದಲಾವಣೆ ಮಾಡುತ್ತೇವೆ ಎಂದು ನೀವು ಮಾಜಿ ಮುಖ್ಯಮಂತ್ರಿಗಳಲ್ಲಿ ಹೇಳಿಸಿಕೊಳ್ಳುತ್ತಿದ್ದೀರಿ ಇದೆಲ್ಲಾ ಏನು? ಹೇಳಬೇಕಾದರೂ ಸಹ ಸ್ವಲ್ಪವಾದರೂ ಸೌಜನ್ಯತೆ ಇರಬೇಕಾಗತ್ತದೆ. ಕೆಎಐಡಿಬಿ ವಿಚಾರ ಕೊಡತಕ್ಕ ಜಮೀನು ಇರಬಹುದು, ಬಿಡಿಎ ಅಥವಾ ಹೌಸಿಂಗ್ ಬೋರ್ಡ್‌ಗಳಿಂದ ಲೀಸ್ ಕಮ್ ಸೇಲ್ ಮೇಲೆ ಕೊಡತಕ್ಕ ಮನೆಗಳಿರಬಹುದು. ಮಾರುಕಟ್ಟೆ ದರವನ್ನೇ ನಿಗದಿ ಮಾಡಿರಲಿಲ್ಲ. First time in the history of India, market value was defined in Karnataka State. I am proud to say that our Janata Dal Government, first time in the history of India, defined the market rate, market value, by amending the Act.

ಮಾನ್ಯ ಅಧ್ಯಕ್ಷರೇ, ತಾನ್ಸಿ ಲ್ಯಾಂಡ್ ಕೇಸ್‌ನಲ್ಲಿ ಮುಖ್ಯಮಂತ್ರಿಗಳಾಗಿದ್ದ ಜಯಲಲಿತಾರವರು ರಾಜೀನಾಮೆ ಕೊಡಬೇಕಾಗಿ ಬಂದಿತು. ಮಾರ್ಕೆಟ್ ವ್ಯಾಲ್ಯೂಗಿಂತ ಕಡಿಮೆ ರೇಟಿಗೆ ಸ್ಟಾಂಪ್ ಡ್ಯೂಟಿ ಕೊಟ್ಟು ರಿಜಿಸ್ಟರ್ ಮಾಡಿಸಿಕೊಂಡಿದ್ದರು. ಆ ಕೇಸಿನಲ್ಲಿ ಮುಖ್ಯಮಂತ್ರಿಗಳಾಗಿದ್ದ ಅವರು ರಾಜೀನಾಮೆ ಕೊಟ್ಟರು. ಆ ರಾಜ್ಯದಲ್ಲಿ ಮಾರ್ಕೆಟ್ ವ್ಯಾಲ್ಯೂ ಡಿಫೈನ್ ಆಗಿರಲಿಲ್ಲ. ಆದ್ದರಿಂದ she won the case and continued as the Chief Minister of Tamil Nad could not do it. But, our State Government, for the first time, amended the Stamp Act and defined the market value.

ಲೇಸ್ ಆಗಿ 15 ವರ್ಷಗಳಾಗಿರುವುದನ್ನು ಇವತ್ತು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾದರೆ, ಸ್ಟ್ಯಾಂಪ್ ಪೇಪರ್‌ನಲ್ಲಿ ನೀವು ಯಾವ ಬೆಲೆಯನ್ನು ನಮೂದಿಸುತ್ತಿರೋ, ಆ ಬೆಲೆಗೇ ರಿಜಿಸ್ಟರ್ ಆಗುತ್ತದೆ. ಅಂಡರ್ ವ್ಯಾಲ್ಯೂಯೇಷನ್ ಮುಂದೆ ಬರಬಾರದು ಎನ್ನುವ ಅಮೆಂಡ್‌ಮೆಂಟ್‌ನ್ನೂ ಕೂಡ ನಾವು ತಂದೆವು. "Before registration you must first submit the application to the Sub-Registrar's Office, get the value finalised and then register it." ಎಂದು ಮಾಡಿದೆವು. That is also unique in the country. ಇದರಿಂದಾಗಿ ಒಂದೂ ಕೂಡ ಅಂಡರ್ ವ್ಯಾಲ್ಯೂಯೇಷನ್ ಕೇಸ್‌ಗಳೇ ಬರುವುದಿಲ್ಲ. ಈ ರೀತಿಯಾಗಿ ನಮ್ಮ ಜನತಾದಳ ಸರ್ಕಾರ ತಂದ ಕ್ರಾಂತಿಕಾರಕ ಬದಲಾವಣೆಗಳನ್ನು ಒಂದೊಂದಾಗಿ ಹೇಳುತ್ತಾ ಹೋಗಬಹುದು. ಅದನ್ನು ನೀವು ಮುಂದುವರೆಸಿಕೊಂಡು ಹೋಗಿದ್ದಿದ್ದರೆ ಏನೂ ಆಗುತ್ತಿರಲಿಲ್ಲ. ಇವತ್ತೇನು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿದ್ದೀರೋ ಇವುಗಳು ಕೇವಲ

ಘೋಷಣೆಗಳಾಗಿ ಉಳಿಯುತ್ತವೆ. ನಮ್ಮ ಸರ್ಕಾರದಲ್ಲಿ ಆಗಿರತಕ್ಕಂತಹ ಕೆಲವು ಕಾರ್ಯಕ್ರಮಗಳನ್ನೇ ಮತ್ತೆ ನೀವು ಹೇಳಿದ್ದೀರಿ. ಇದರ ಹೊರತಾಗಿ ಹೊಸದಾಗಿ ಬದಲಾವಣೆಗಳನ್ನೇನೂ ನೀವು ತರುವುದಕ್ಕೆ ಹೋಗಿಲ್ಲ. ಎರಡೂವರೆ ವರ್ಷಗಳ ಕಾಲ ನೀವು ಸುಮ್ಮನೆ ಇದ್ದು, ಇವತ್ತು ಎಲ್ಲಾ ಅನಾಹುತಗಳಾದ ಮೇಲೆ ಮತ್ತೆ ನಾವು ಹಳೆಯ ಗಂಡನ ಪಾದವೇ ಗತಿ ಎಂದು ಹೇಳಿ ಹೊಸದಾಗಿ ನಾವು ತಂದಿರತಕ್ಕದ್ದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಅದನ್ನು ಮುಂದುವರೆಸಬೇಕು ಎನ್ನುವುದು ನಮ್ಮ ಅಗ್ರಹವೂ ಕೂಡ ಆಗಿದೆ. ತಾವು ಮಂಡಿಸಿರತಕ್ಕದ್ದು ಇದು ಕೇವಲ ಡಿಫಿನಿಟ್ ಬಜೆಟ್.

ಇದರಿಂದ ಯಾವುದೇ ಬಡವರಿಗೆ, ಮತ್ತು ದಲಿತರಿಗೆ, ಹಿಂದುಳಿದ ವರ್ಗದವರಿಗೆ ಶಿಕ್ಷಣದಲ್ಲಾಗಲೀ, ಕೃಷಿ ಕ್ಷೇತ್ರದಲ್ಲಾಗಲೀ, ಮತ್ತು ಆರೋಗ್ಯ ಕ್ಷೇತ್ರದಲ್ಲಾಗಲೀ ಯಾವುದೇ ರೀತಿಯ ಬದಲಾವಣೆಗಳು ಮತ್ತು ಪ್ರಗತಿ ಇದರಿಂದ ಸಾಧ್ಯವಿಲ್ಲ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಆಯವ್ಯಯವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಸುಮಾರು ವರ್ಷಗಳಿಂದ ಮಾನ್ಯ ಮುಖ್ಯಮಂತ್ರಿಗಳು ಇದೇ ತರಹದ ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಆರ್ಥಿಕ ಸಚಿವರಾಗಿ, ಅವರೇ ಇಡೀ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದಾಗ್ಯೂ, ಆರ್ಥಿಕ ಬೆಳವಣಿಗೆ ಆಗಿಲ್ಲ. ಬೇರೆ ಯಾರೋ ಮಂತ್ರಿಗಳಿಗೆ ಕೊಟ್ಟಿದ್ದರೆ, ಯಾರೋ ಐಎಎಸ್ ಆಫೀಸರ್‌ರವರ ಕಂಟ್ರೋಲ್ ಇರುತ್ತದೆ, ಮಂತ್ರಿಗಳದು ಏನೂ ನಡೆಯುವುದಿಲ್ಲವೆಂದು ಹೇಳಬಹುದು. ಕಮರ್ಷಿಯಲ್ ಟ್ಯಾಕ್ಸ್ ಕಮೀಷನರ್, ಎಕ್ಸೈಸ್ ಕಮೀಷನರ್, ಫೈನಾನ್ಸ್ ಕಮೀಷನರ್ ಎಲ್ಲರೂ ಸೇರಿಯೂ ಕೂಡ ಇಡೀ ಆಡಳಿತದ ಚುಕ್ಕಾಣಿ ಯನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ. ಅದರ ಜೊತೆಗೆ ಆರ್ಥಿಕ ಇಲಾಖೆ ತಾವೇ ಇಟ್ಟುಕೊಂಡಿದ್ದೀರಿ. ಆದರೂ ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಸಹ ಮಾರ್ಕೆಟ್ ಬಾರೋಯಿಂಗ್ ಜಾಸ್ತಿ ಮಾಡುತ್ತಿದ್ದೀರಿ. ಕೇವಲ ಸಾಲ ಮಾಡಿ ಮಾಡಿ ಇವತ್ತು ರಾಜ್ಯವನ್ನು ಸಾಲದ ಸಂಕೋಲೆಯಲ್ಲಿ ಸಿಕ್ಕಿಸಿ ಮುಂದೆ ಬರತಕ್ಕಂತಹ ಸರ್ಕಾರಗಳಿಗೆ ಇಕ್ಕಟ್ಟಿನಲ್ಲಿ ತರತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಹಣ ಕ್ರೋಢೀಕರಣ ಮಾಡತಕ್ಕಂತಹ ಕೆಲಸದಲ್ಲಿ ವಿಫಲವಾಗಿದ್ದೀರಿ. ಸರ್ಕಾರ ದುರ್ಬಲವಾಗಿದೆ. ಯಾವುದೇ ರೀತಿಯ ಪ್ರಗತಿಪರವಾದಂಥ ಚಿಂತನೆಗಳು ಇಲ್ಲವೆಂದು ಹೇಳಿ, ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ): ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಾರಂಭದಲ್ಲಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ತಾವು ಏನು ಈ 2002-2003ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ಮತ್ತೊಮ್ಮೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಕೃಷ್ಣರವರು ಈ 2002-2003ನೇ ವರ್ಷದ ಬಜೆಟನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಈಗಾಗಲೇ ಇದರ ಬಗ್ಗೆ ಚರ್ಚೆ ಕೂಡ ಪ್ರಾರಂಭವಾಗಿದೆ. ನಾನು ಪ್ರಾರಂಭದಲ್ಲಿ ಹೇಳತಕ್ಕಂಥದ್ದು ಏನೆಂದರೆ ಈ ಚರ್ಚೆ ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಇದು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂತಹ

ಮೂರನೇ ಬಜೆಟ್. ಕಳೆದ ಸಾಲಿನಲ್ಲಿ ಸಹ ಸದನದಲ್ಲಿ ಬಜೆಟನ್ನು ಮಂಡಿಸಿದರು. ಅದು ಒಳ್ಳೆಯದಿದೆ ಅಥವಾ ಕೆಟ್ಟದ್ದಿದೆ ಎಂದು ಅದರ ಬಗ್ಗೆ ಸಮರ್ಪಕವಾಗಿ ಚರ್ಚೆಯಾಗಲಿಲ್ಲ. ಅದು ಯಾವುದೋ ಕೆಲವು ವಿಷಯ ಸಮಿತಿಗಳನ್ನು ಮಾಡಿದರು, ಹೋದ ಸಾರಿ ಅದರಲ್ಲಿ ಕೆಲವೇ ಸದಸ್ಯರು ಕೆಲವೇ ವಿಚಾರಗಳನ್ನು ಚರ್ಚೆ ಮಾಡಿದ್ದು ಕಾಣುತ್ತದೆ. ಆದರೆ ಈ ಸಾರಿ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಈಗಾಗಲೇ 28ನೇ ತಾರೀಖಿನವರಗೆ ಈ ಅಧಿವೇಶನವು ಕರೆದಿರುವುದನ್ನು ಮುಂದೂಡುತ್ತಾರೆ ಅಥವಾ ಗಂಭೀರವಾಗಿ ಈ ಬಜೆಟ್‌ನಲ್ಲಿರುವ ಒಳ್ಳೆಯದು ಮತ್ತು ಕೆಟ್ಟದ್ದು ಈ ಎಲ್ಲಾ ಅಂಶಗಳನ್ನು ಸದನದಲ್ಲಿ ಎಲ್ಲಾ ಸದಸ್ಯರೂ ಬಿಚ್ಚು ಮನಸ್ಸಿನಿಂದ ಚರ್ಚಿಸಿ ಸರ್ಕಾರವನ್ನು ಎಚ್ಚರಿಸತಕ್ಕಂತಹ, ಹಾಗೂ ತಿದ್ದತಕ್ಕಂತಹ ಕೆಲಸವನ್ನು ಮಾಡುತ್ತಾ (ರೋ) ಅಥವಾ ಇಲ್ಲವೋ ಎಂಬುದು ನನಗೆ ಇನ್ನೂ ಸಂದೇಹವಾಗಿದೆ. ಅದು ಏನೇ ಆಗಿರಲಿ ಇವತ್ತು ಬಜೆಟ್ ಮಂಡನೆ ಒಂದು ಬಹಳ ಪ್ರಮುಖವಾದ ವಿಚಾರ. ಈ ರಾಜ್ಯದಲ್ಲಿ ಇನ್‌ಕಮ್ ಅಂಡ್ ಎಕ್ಸ್‌ಪೆಂಡಿಚರ್ ಯಾವ ಯಾವ ಮೂಲಗಳಿಂದ ಸರ್ಕಾರಕ್ಕೆ ಆದಾಯ ಬರುತ್ತದೆ, ಮತ್ತು ಯಾವ ಯಾವ ಬಾಬುಗಳಿಗೆ ನಾವು ಖರ್ಚು ಮಾಡಬಹುದು ಎನ್ನತಕ್ಕ ಒಂದು ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಅನ್ನು ಕೊಡತಕ್ಕದ್ದು ನಡೆದಿದೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಂಡಿಸಿರತಕ್ಕಂತಹ 2002-03ನೇ ಸಾಲಿನ ಬಜೆಟ್ಟನ್ನು ಅವಲೋಕನ ಮಾಡಿದಾಗ ಸುಮಾರು 146 ಪೇಜ್‌ಗಳ ಒಂದು ಬಜೆಟನ್ನು ಇಲ್ಲಿ ಮಂಡಿಸಿದ್ದಾರೆ. ತಮಗೂ ಗೊತ್ತು, ಸುಮಾರು ಎರಡೂವರೆ ಗಂಟೆಗಳ ಕಾಲ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇದನ್ನು ಮಂಡಿಸಿದ್ದಾರೆ. ನಾನಂತೂ ಇದನ್ನು ಗಮನಿಸಿದಾಗ ಒಂದು ಬಜೆಟ್ ಎಂದರೆ, ಒಂದು ಕಂಪ್ಯಾರಿಟೀವ್ ಸ್ಟೇಟ್ ಮೆಂಟ್ ಬಹಳ ಅವಶ್ಯಕತೆ ಇತ್ತು. ನಮ್ಮ ಚರ್ಚೆಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ಈ ಬಜೆಟ್ ಏನಾಗಿದೆ ಎಂದರೆ, ಕಾರ್ಯಕ್ರಮಗಳ ಪಟ್ಟಿ ಇದ್ದ ರೀತಿಯಲ್ಲಿ ನಾವು ಕಾಣುತ್ತೇವೆ. ಕಳೆದ ಸಾಲಿನಲ್ಲಿ ಏನೇನು ಪ್ರಪೋಸಲ್ಸ್ ಇತ್ತು, ಈ ವರ್ಷದಲ್ಲಿ ಏನೇನು ಇತ್ತು, ಮುಂದಿನ ವರ್ಷದ ಪ್ರಪೋಸಲ್ ಏನೇನಿದೆ? ಅದು ಇನ್‌ಕಮ್ ಸಾಲದ ರೂಪದಲ್ಲಿ ಇರುವುದು ಆಗಿರಬಹುದು. ರೆವಿನ್ಯೂ ಆಗಬಹುದು, ಸೆಂಟ್ರಲ್ ಗರ್ವರ್ನಮೆಂಟ್‌ನಿಂದ ಬರತಕ್ಕಂತಹ ರೆವಿನ್ಯೂ ಆಗಬಹುದು, ಇದರ ಪಟ್ಟಿ ಇರಬೇಕು, ಅಂದಾಜು ಕಳೆದ ವರ್ಷ ಎಷ್ಟು ಇತ್ತು, ಈ ವರ್ಷ ಎಷ್ಟು ಇದೆ, ಮತ್ತು ಮುಂದಿನ ವರ್ಷದ ಅಂದಾಜು ಎಷ್ಟು ಇದೆ ಎಂದು ಬಜೆಟ್ ಭಾಷಣದಲ್ಲಿ ಬಹಳ ಅವಶ್ಯಕವಾಗಿ ಹೇಳಬೇಕಾಗಿತ್ತು. ಏನು ಪ್ರಪೋಸಲ್ಸ್ ಕಳೆದ ವರ್ಷ, ಈ ವರ್ಷ, ಮುಂದಿನ ವರ್ಷ ಇಟ್ಟಿದ್ದರು, ಆ ಪ್ರಪೋಸಲ್ಸ್‌ನಲ್ಲಿ ಅದು ಕಾರ್ಯಕ್ರಮಗಳು ಇರಬಹುದು, ಸಂಪನ್ಮೂಲಗಳ ಕ್ರೋಢೀಕರಣ ಇರಬಹುದು, ಅಥವಾ ಇನ್ನು ಯಾವುದೇ ಇರಬಹುದು, ನಾವು ಬಜೆಟ್ ಮಾಡುವ ಗುರಿ ಏನು ಇಟ್ಟುಕೊಂಡಿದ್ದೆವು, ಈ ಗುರಿಯಲ್ಲಿ ನಾವು ಅಚೀವ್‌ಮೆಂಟ್ ಮಾಡಿದ್ದು ಎಷ್ಟು? ಕಳೆದ ವರ್ಷ ನಮ್ಮ ಗುರಿ ಎಷ್ಟು ಇತ್ತು? ಆ ಗುರಿಯಲ್ಲಿ ನಾವು ಅಚೀವ್‌ಮೆಂಟ್ ಮಾಡಿದ್ದು ಎಷ್ಟು? ಯಾವುದೇ ಕಾರ್ಯಕ್ರಮ ಇರಬಹುದು, ಸಾಲ ಇರಬಹುದು, ಮತ್ತೊಂದು ಇರಬಹುದು, ನಾವು ಎಷ್ಟು ಅಚೀವ್ ಮಾಡಿದೆವು? 2001-02ರಲ್ಲಿ ಏನು ಗುರಿ ಇತ್ತು, ನಾವು ಏನು ಅಚೀವ್ ಮಾಡಿದ್ದೇವೆ? ಮುಂದಿನ ವರ್ಷ ನಾವು ಏನು ಗುರಿ ಇಟ್ಟುಕೊಂಡಿದ್ದೇವೆ, ಏನು ಅಚೀವ್ ಮಾಡಬೇಕು? ಅಚೀವ್ ಮಾಡುವುದು ಮುಂದಿನ ಪ್ರಶ್ನೆ. ಮುಂದಿನ ಗುರಿ ಏನಿದೆ, ಅದರ ಕಂಪ್ಯಾರಿಟಿವ್

ಸ್ಟೇಟ್‌ಮೆಂಟ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಕೊಟ್ಟಿದ್ದರೆ ಸದನಕ್ಕೆ ಅನುಕೂಲವಾಗುತ್ತಿತ್ತು. ಕರ್ನಾಟಕ ರಾಜ್ಯದ ಜನರಿಗೆ ಕೂಡ ಹಣಕಾಸಿನ ಪರಿಸ್ಥಿತಿ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಬಿಚ್ಚು ಮನಸ್ಸಿನಿಂದ ಹೇಳತಕ್ಕಂತಹ ಪ್ರೆಯತ್ನ ಆಗಬಹುದಾಗಿತ್ತು; ಎಲ್ಲಿಯೂ ಕೂಡ ಈ ಬಜೆಟ್ ಭಾಷಣದಲ್ಲಿ, ಈ ಪುಸ್ತಕದಲ್ಲಿ ಕೊಟ್ಟಿರತಕ್ಕಂಥದ್ದರಲ್ಲಿ ಈ ಮಾಹಿತಿಗಳು ಇಲ್ಲದೇ ಇದ್ದುದರಿಂದ ನಮಗೆ ಕಷ್ಟವಾಗಿದೆ. ಏಕೆ ಹೀಗೆ ಮಾಡಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸೋಮಶೇಖರ್‌ರವರು ಮಾತನಾಡುತ್ತಾ ಹಲವಾರು ಅಂಕಿಅಂಶಗಳನ್ನು ಕಳೆದ ವರ್ಷದ ಬಜೆಟ್ ಪುಸ್ತಕದಲ್ಲಿ ಪತ್ತೆ ಮಾಡಿ ಅಥವಾ ಮಾಹಿತಿಗಳನ್ನು ತೆಗೆದುಕೊಂಡು ಅವುಗಳನ್ನು ಕ್ರೋಢೀಕರಿಸಿ ಮಾತನಾಡಿರುವುದು ಕಾಣುತ್ತದೆ. ಹೀಗೆ ಮಾತನಾಡುವುದಕ್ಕೆ ಪ್ರತಿಯೊಬ್ಬರಿಗೂ ಸಾಧ್ಯವಾಗುವುದಿಲ್ಲ. ಬಜೆಟ್‌ನಲ್ಲಿ ಅದರ ಅವಶ್ಯಕತೆ ಇತ್ತು; ಅದರ ಲೋಪ ಎದ್ದು ಕಾಣುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನುಬಂಧ-1ರಲ್ಲಿ 2002-03ನೇ ಆಯವ್ಯಯದ ವಿಹಂಗಮ ನೋಟ ಇದೆ. ಪ್ರಾರಂಭದ ಶುಲ್ಕ ಪುಟ 76ರಲ್ಲಿ ಹೇಳಿರುವ ಪ್ರಕಾರ ಬಜೆಟ್ ಅಂದಾಜು 2001-02ರಲ್ಲಿ ರಾಜ್ಯದಿಂದ ಬಂದಿರತಕ್ಕಂತಹ ರೆವಿನ್ಯೂ 10,851 ಕೋಟಿ ರೂಪಾಯಿಗಳು ಪರಿಷ್ಕೃತ ಅಂದಾಜು 10,115 ಕೋಟಿ ರೂಪಾಯಿ ಬಜೆಟ್ ಅಂದಾಜು 2002-03ಕ್ಕೆ 11887 ಕೋಟಿ ರೂಪಾಯಿಗಳು ಇದೆ. ಇದನ್ನು ಕೊಟ್ಟ ಮೇಲೆ ಕಳೆದ ಸಾಲಿನಲ್ಲಿ 2001-02ರಲ್ಲಿ ಪರಿಷ್ಕೃತ ಸ್ಟೇಟ್ ರೆವಿನ್ಯೂ ಇಷ್ಟು ಎಂದು ನೀವು ಮಾಡಿದ ಮೇಲೆ what is the actual amount you have received from this Head? ಎಂದು ನೀವು ನಮಗೆ ತೋರಿಸಲಿಲ್ಲ. 2001-02ರಲ್ಲಿ ರಾಜ್ಯ ತೆರಿಗೆ ಅಷ್ಟೇ ಇದೆ, ಕೇಂದ್ರ ತೆರಿಗೆ ಅಷ್ಟೇ ಇದೆ, ಕೇಂದ್ರ ಸರ್ಕಾರದ ಅನುದಾನ ಅಷ್ಟೇ ಇದೆ. ತೆರಿಗೆಯೇತರ ಬಾಬಿನಿಂದ ಬಂದಿರತಕ್ಕಂಥದ್ದನ್ನು ಎಸ್ಟಿಮೇಟ್ ಕೊಟ್ಟಿದ್ದೀರಿ ಹೊರತು, ಕಳೆದ ಸಾಲಿನಲ್ಲಿ 2001-02ರಲ್ಲಿ what was the actual amount, actual revenue received by the government? ಆ ಮಾಹಿತಿ ನಮ್ಮ ಈ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ಇಲ್ಲವೆಂದು ನನ್ನ ಅನಿಸಿಕೆ. ಇದೇ ರೀತಿ ಎಕ್ಸ್ ಪೆಂಡಿಚರ್ ಇರಬೇಕು, ನೀವು ಎಕ್ಸ್‌ಪೆಂಡಿಚರ್‌ನಲ್ಲಿ ಕೂಡ ಏನೋ ಎಕ್ಸ್‌ಪೆಂಡಿಚರ್ ಹಾಕಿದ್ದೀರಿ. What is the actual expenditure you have made? ಎಕ್ಸ್‌ಪೆಂಡಿಚರ್ ಮಾಡುವುದನ್ನು ಹೇಳುತ್ತೀರಿ. ಅದೇ ರೀತಿ ಬಂಡವಾಳ ಲೆಕ್ಕ ಅಷ್ಟೇ. ಸಾಲ ಎಷ್ಟು ತೆಗೆದುಕೊಂಡು ಬಂದಿರಿ, ಎಷ್ಟು ತರಬೇಕೆಂದು ನಿಮ್ಮ ಎಸ್ಟಿಮೇಟ್ ಇತ್ತು? What was the amount borrowed last year? ಈ ವರ್ಷ ಮತ್ತು ಕಳೆದ ವರ್ಷದ ಕಂಪ್ಯಾರಿಟಿವ್ ಸ್ಟೇಟ್ ಮೆಂಟ್ ಪುಸ್ತಕದಲ್ಲಿ ಎಲ್ಲಿಯೂ ಕೂಡ ಇಲ್ಲದೇ ಇರುವುದು ಮನಸ್ಸಿಗೆ ಬಹಳ, ನೋವಾಗುವ ವಿಚಾರ. ಬಟವಾಡೆ ಕೂಡ ತಾವು ಮಾಡಿರತಕ್ಕಂಥಾದ್ದು ಹಾಗೆಯೇ ಇದೆ. 2002-03ನೇ ಸಾಲಿನಲ್ಲಿ ವಿಭಾಗಾವಾರು ರಾಜ್ಯ ಯೋಜನೆ ಹಂಚಿಕೆ ಇದರಲ್ಲಿ ಕೂಡ ಹಾಗೆಯೇ ಮಾಡಿದ್ದೀರಿ.

11.50 ಪಿ.ಎಂ.

ಆರ್ಥಿಕ ಸೇವೆಗಳು ಮತ್ತು ಸಾಮಾನ್ಯ ಸೇವೆಗಳಿಗೆ ಕೋಟಿಯಲ್ಲಿ ಹಣ ಒದಗಿಸಲಾಗಿದೆ ಎಂದು ಹೇಳುತ್ತಾರೆಯೇ ಹೊರತು ಶೇಕಡಾವಾರು ಪ್ರಮಾಣ ಎಷ್ಟು ಎಂದು ಹೇಳುತ್ತಿಲ್ಲ. ಇದು

ನೋವಿನ ಸಂಗತಿಯಾಗಿದೆ. ಬಹುಶಃ ಒಟ್ಟಾರೆ ಆಕೌಂಟ್ ಅನ್ನು ಪ್ರಾಪರ್ಲಿ ಕೊಟ್ಟಿದ್ದರೆ ಸದಸ್ಯರಿಗೆ ಹಾಗೂ ಈ ರಾಜ್ಯದ ಜನರಿಗೆ ಅನುಕೂಲವಾಗುತ್ತಿತ್ತು. ಇದ್ಯಾವುದನ್ನೂ ಕೊಡದೆ ಮುಚ್ಚಿಡುವ ಕೆಲಸವನ್ನು ಮಾಡಿದ್ದಾರೆ ಎಂದು ನಾನಾದರೂ ನೇರವಾಗಿ ಹೇಳುತ್ತೇನೆ. ಇನ್ನು ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳು ಹೊಸ ಜಿಲ್ಲೆಗಳ ಅಭಿವೃದ್ಧಿಗೋಸ್ಕರ ಹೆಚ್ಚು ಒತ್ತು ಕೊಡಲಾಗುವುದು ಎಂದು ಹೇಳಿದ್ದರು. ಹೊಸ ಏಳು ಜಿಲ್ಲೆಗಳು ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲೇ ಪ್ರಾರಂಭವಾದರೂ ಇನ್‌ಫ್ರಾಸ್ಟ್ರಕ್ಚರ್ ಮತ್ತು ಇನ್ನಿತರ ಸೌಲಭ್ಯಗಳಿಗೆ ಅನುದಾನವನ್ನು ಒದಗಿಸುವುದಕ್ಕೆ ತಾವು ಪ್ರಯತ್ನ ಮಾಡಲೇ ಇಲ್ಲ. ಈ ವರ್ಷದ ಬಜೆಟ್‌ನಲ್ಲೂ ಕೂಡ ಹೊಸ ಏಳು ಜಿಲ್ಲೆಗಳ ಬಗ್ಗೆ ಪ್ರಸ್ತಾಪವೇ ಇಲ್ಲವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಇಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಇವತ್ತು ಹೊಸ ಜಿಲ್ಲೆಗಳನ್ನು ಮಾಡಿ ಆ ಜಿಲ್ಲೆಗಳ ಅಭಿವೃದ್ಧಿಗೆ ನಿಮ್ಮ ಬಜೆಟ್‌ನಲ್ಲಿ ಈ ವರ್ಷದಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೋಸ್ಕರ ಸಾಕಷ್ಟು ಹಣವನ್ನು ಕೊಡದಿದ್ದರೆ ಆ ಜಿಲ್ಲೆಗಳು ಅಭಿವೃದ್ಧಿಯಾಗುವುದಾದರೂ ಹೇಗೆ? ಉದಾಹರಣೆಗೆ ಹೇಳಬೇಕೆಂದರೆ, ಚಾಮರಾಜನಗರ ಜಿಲ್ಲೆಯಾಗಿ ನಾಲ್ಕು ವರ್ಷಗಳಾದರೂ ಕೂಡ ಇನ್ನೂ ಅದು ತಾಲ್ಲೂಕು ಮಟ್ಟದಲ್ಲಿ ಹೇಗಿತ್ತೋ ಹಾಗೆಯೇ ಇದೆ ಎಂದು ನಾನಾದರೂ ಅತ್ಯಂತ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇವತ್ತು ಹಲವಾರು ಜಿಲ್ಲಾ ಕಛೇರಿಗಳು ಪ್ರಾರಂಭವಾಗಿವೆ; ಆದರೆ ಅವುಗಳು ಯಾವುದಕ್ಕೂ ಹೊಸ ಕಟ್ಟಡಗಳೇ ಇಲ್ಲ. ಎಲ್ಲವೂ ಬಾಡಿಗೆ ಕಟ್ಟಡಗಳಲ್ಲೇ ನಡೆಯುತ್ತಿವೆ. ನಾನು ಹೇಳುವುದೇನೆಂದರೆ, ಯಾವುದೇ ಸರ್ಕಾರ ರಾಜ್ಯದಲ್ಲಿ ಇರಲಿ ಹೊಸದಾಗಿ ರಚನೆಯಾದ ಎಲ್ಲಾ ಜಿಲ್ಲೆಗಳ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಡೆಗೆ ಗಮನ ಕೊಡದೆ ಕೇವಲ ಹೊಸ ಜಿಲ್ಲೆಯನ್ನು ರಚನೆ ಮಾಡಿದರೆ ಏನೂ ಪ್ರಯೋಜನವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪ ಮಾಡಬೇಕಾಗಿತ್ತು. ಇಂದಿಗೂ ಚಾಮರಾಜನಗರದಲ್ಲಿ ಜಿಲ್ಲಾ ನ್ಯಾಯಾಲಯ ಇಲ್ಲದಿರುವುದರಿಂದ ಮೈಸೂರಿಗೆ ಹೋಗಬೇಕಾದ ಪರಿಸ್ಥಿತಿ ಇರುವುದನ್ನು ನಾವು ನೋಡುತ್ತಿದ್ದೇವೆ. ಸೀನಿಯರ್ ಡಿವಿಜನ್ ಕೋರ್ಟ್ ಸ್ಯಾಂಕ್ಷನ್ ಆಗಿ ಬಹಳ ದಿನಗಳಾದರೂ ಕೂಡ ಇದನ್ನು ಓಪನ್ ಮಾಡುವುದಕ್ಕೆ ಸುಸಜ್ಜಿತವಾದ ಮತ್ತು ವ್ಯವಸ್ಥಿತವಾದ ಕಟ್ಟಡವೇ ಇಲ್ಲವಾಗಿದೆ. ಇದಕ್ಕಾಗಿ ಶಾಸಕರ ಕಛೇರಿಯನ್ನು ನಾನು ತೆರವು ಮಾಡಿಬಿಟ್ಟಿದ್ದೇನೆ. ಸರ್ಕಾರದಿಂದ ಕೊಟ್ಟ ಶಾಸಕರ ಕಛೇರಿಯನ್ನು ನ್ಯಾಯಾಲಯಕ್ಕೆ ಕೊಟ್ಟು ನನ್ನ ಕಛೇರಿಯನ್ನು ಐ.ಬಿ.ಯ ಒಂದು ರೂಮಿನಲ್ಲಿ ನಡೆಸಬೇಕಾದ ದುಸ್ಥಿತಿ ಚಾಮರಾಜನಗರದಲ್ಲಿ ಬಂದೊದಗಿದೆ. ಇಂತಹುದೇ ಸಮಸ್ಯೆ ಬಹುಶಃ ಬೇರೆ ಬೇರೆ ಹೊಸ ಜಿಲ್ಲೆಗಳಲ್ಲಿ ಇರಬಹುದು. ಆದುದರಿಂದ ಈ ಸಮಸ್ಯೆಯ, ಪರಿಹಾರದ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ.

ಇನ್ನು ಆಸ್ಪತ್ರೆ ಬಗ್ಗೆ ಹೇಳಬೇಕೆಂದರೆ, ಬಹುಶಃ ಜಿಲ್ಲಾ ಸಚಿವರಿಗೂ ಕೂಡ ಆಸ್ಪತ್ರೆ ಸಮಸ್ಯೆ ಬಗ್ಗೆ ಗೊತ್ತಿದೆ ಮತ್ತು ನಾವೂ ಕೂಡ ಹಲವಾರು ಬಾರಿ ಅವರ ಗಮನಕ್ಕೆ ಸಮಸ್ಯೆಯ ಬಗ್ಗೆ ತಿಳಿಸಿದ್ದೇವೆ. ಇನ್ನೂ ಅಲ್ಲಿರುವ ಆಸ್ಪತ್ರೆ ತಾಲ್ಲೂಕು ಲೆವೆಲ್ ಆಸ್ಪತ್ರೆ ಇದ್ದ ಹಾಗೆ ಇದೆ. ಬಹುಶಃ ನಿನ್ನೆ ದಿವಸ ರಾತ್ರಿ ನಡೆದ ಘಟನೆಯ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವುದನ್ನು ಎಲ್ಲರೂ ಓದಿರಬಹುದು. ಈ ಘಟನೆಯ ಬಗ್ಗೆ ಸಂಬಂಧಪಟ್ಟಂತೆ ಪೋಲೀಸ್ ವ್ಯವಸ್ಥೆ ಮತ್ತು ಆಸ್ಪತ್ರೆ ಸ್ಥಿತಿ

ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ ಎಂದರೆ, ಬಜೆಟ್‌ನಲ್ಲಿ ಆಸ್ಪತ್ರೆ ಬಗ್ಗೆ ಹೊಸ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿಯೇ ಇಲ್ಲವಲ್ಲಾ ಎನ್ನುವುದಕ್ಕಾಗಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ರಾತ್ರಿ 2 ಗಂಟೆಯಲ್ಲಿ ಬಹಳ ಪ್ರಮುಖವಾದ ಪಚ್ಚಪ್ಪ ಸರ್ಕಲ್ ಬಳಿ ಮೂರು ಜನ ದುಷ್ಕರ್ಮಿಗಳು ವಾಸು ಎನ್ನುವ ಆಟೋ ಡ್ರೈವರ್ ಕಣ್ಣಿಗೆ ಖಾರದ ಪುಡಿಯನ್ನು ಎರಚಿದಾಗ ಆತನು ತಪ್ಪಿಸಿಕೊಂಡು ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾನೆ. ಆದರೆ ಅದೇ ದುಷ್ಕರ್ಮಿಗಳು ವಾಸುವಿನ ಆಟೋವನ್ನೇ ತೆಗೆದುಕೊಂಡು ಗುಂಡ್ಲುಪೇಟೆ ಸರ್ಕಲ್‌ಗೆ ಹೋಗಿ ಸೆಲೂನ್‌ನಲ್ಲಿ ಇರತಕ್ಕಂತಹ ಇಬ್ಬರು ಹುಡುಗರನ್ನು ಎಳೆದು ಅವರಿಗೆ ಆಘಾತವಾದ ಗಾಯವನ್ನು ಮಾಡಿ ನೋವನ್ನು ಉಂಟು ಮಾಡಿದ್ದಾರೆ. ಆ ಹುಡುಗರಿಗೆ ರಕ್ತ ಗಾಯಗಳಾಗಿ ಇವತ್ತು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಈ ರೀತಿಯ ಚಿಂತಾಜನಕ ಸ್ಥಿತಿಯಲ್ಲಿ ಇರುವವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೆ ಅಲ್ಲಿ ಒಬ್ಬ ಡಾಕ್ಟರ್ ಕೂಡ ಇರಲಿಲ್ಲ. ಇರತಕ್ಕಂತಹ ಡಿಸ್ಟ್ರಿಕ್ಟ್ ಸರ್ಜನ್, ಡಿ.ಹೆಚ್.ಓ. ಮೈಸೂರಿನಲ್ಲಿ ವಾಸವಾಗಿದ್ದಾರೆ. ಅವರು ಬೆಳಿಗ್ಗೆ ಬರುತ್ತಾರೆ, ಸಂಜೆ ಹೊರಟು ಹೋಗುತ್ತಾರೆ. ಆಸ್ಪತ್ರೆಯಲ್ಲಿ ಡಾಕ್ಟರುಗಳು ಇರುವುದಿಲ್ಲ ಮತ್ತು ಔಷಧಿಗಳೂ ಕೂಡ ಇರದೇ ವ್ಯವಸ್ಥೆ ತೀರಾ ಹದಗೆಟ್ಟು ಹೋಗಿದೆ. ಹೇಗಾದರೂ ಮಾಡಿ ಗಾಯಾಳುಗಳನ್ನು ಬದುಕಿಸಿಕೊಳ್ಳಬೇಕು ಎಂದು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದು ನಮ್ಮ ಜನರು ಯೋಚನೆ ಮಾಡಿ ಆಂಬುಲೆನ್ಸ್ ಕೇಳಿದರೆ ಅಲ್ಲಿ ಆಂಬುಲೆನ್ಸ್ ಕೂಡ ಇರಲಿಲ್ಲ. ಎಂತಹ ದುರಂತ ಪರಿಸ್ಥಿತಿ ಅಲ್ಲಿದೆ ಎಂಬುದನ್ನು ತಾವಾದರೂ ತಿಳಿದುಕೊಳ್ಳಬಹುದು. ಕಡೆಗೆ ಬಾಡಿಗೆ ಕಾರು ಮಾಡಿಕೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಗಾಯಾಳುಗಳನ್ನು ಅಡ್ಮಿಟ್ ಮಾಡಿ ಟ್ರೀಟ್‌ಮೆಂಟ್ ಕೊಡಿಸುತ್ತಿದ್ದಾರೆ. ಇಂತಹ ಸ್ಥಿತಿ ನಮ್ಮ ಚಾಮರಾಜನಗದರಲ್ಲಿ ಇದೆ. ಈ ಘಟನೆ ನಡೆದ ನಂತರ ರಾತ್ರಿಯಿಂದ ಚಾಮರಾಜನಗರದ ಆಸ್ಪತ್ರೆ ಮುಂದೆ ಸಾವಿರಾರು ಸಾರ್ವಜನಿಕರು ಧರಣಿ ಕುಳಿತಿದ್ದಾರೆ. ಗ್ಲಾಸ್‌ಗಳಿಗೆಲ್ಲಾ ಕಲ್ಲನ್ನು ಹೊಡೆದು ಗಲಾಟೆ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಗುರುಸ್ವಾಮಿಯವರು ಆಸ್ಪತ್ರೆ ಸ್ಥಿತಿ ಬಗ್ಗೆ ಮತ್ತು ಕಾನೂನು ಸುವ್ಯವಸ್ಥೆ ಬಗ್ಗೆ ಗಂಭೀರವಾಗಿ ಮಾತನಾಡುತ್ತಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೆ ಅಲ್ಲಿ ಒಬ್ಬ ಡಾಕ್ಟರ್ ಸಹ ಇಲ್ಲ, ಅವರುಗಳನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಟ್ರೀಟ್ ಮೆಂಟ್ ಕೊಡಿಸಬೇಕಾದ ದುಸ್ಥಿತಿ ಬಂತು ಎಂದು ಹೇಳುತ್ತಿದ್ದಾರೆ. ಇಂತಹ ಗುರುತರ ವಿಷಯವನ್ನು ನೋಟ್ ಮಾಡಿಕೊಂಡು ಜವಾಬ್ದಾರಿಯಿಂದ ಉತ್ತರ ಕೊಡಲು ಇಲ್ಲಿ ಯಾರೂ ಇಲ್ಲವಾಗಿದ್ದಾರೆ. ಇರುವ ಮಂತ್ರಿಗಳೂ ಸಹ ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಎ.ಎಸ್. ನಾಡಗೌಡ (ಮುಖ್ಯ ಸಚೇತಕರು): ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮಗೆ ಸಮರ್ಪಕವಾದ ಉತ್ತರವನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಅಲ್ಲಿ ನೋಟ್ ಮಾಡುತ್ತಿದ್ದಾರೆ, ಅಧಿಕಾರಿಗಳೂ ಕೂಡ ಇದ್ದಾರೆ, ಪ್ರತಿಯೊಂದು ವೇಳೆಗೂ ತಾವು ನಿಂತು ಇದನ್ನೇ ಪ್ರಸ್ತಾಪ ಮಾಡುತ್ತೀರಿ; ವಿಷಯಕ್ಕೆ ಬನ್ನಿ.

ಶ್ರೀ ಸಿ. ಗುರುಸ್ವಾಮಿ: ಇಂದೂ ಕೂಡ ಆಸ್ಪತ್ರೆಯ ಪರಿಸ್ಥಿತಿ ಹಾಗೆಯೇ ಇದೆ. ಸಾರ್ವಜನಿಕರೂ ಕೂಡ ಇನ್ನೂ ಧರಣಿ ಕುಳಿತಿದ್ದಾರೆ. ಪತ್ರಿಕೆಯಲ್ಲೂ ಕೂಡ ವರದಿ ಪ್ರಕಟವಾಗಿದೆ. ಇದೇ ದುರ್ವ್ಯವಸ್ಥೆ ಹೀಗೇ ಮುಂದುವರೆದರೆ ಜನ ಪ್ರತಿನಿಧಿಗಳಾಗಿ ಸಮಾಜದಲ್ಲಿ ನಾವು ಮಾಡತಕ್ಕಂಥಾದ್ದು ಏನಿದೆ? ಸಮಾಜದಲ್ಲಿ ಜನರ ಗತಿಯೇನು? ನಮ್ಮ ಕರ್ತವ್ಯಗಳನ್ನು ಮಾಡುವುದಾದರೂ ಏನು? ಆದುದರಿಂದ ಹೊಸ ಜಿಲ್ಲೆಗಳಿಗೆ ಬಜೆಟ್‌ನಲ್ಲಿ ಸ್ಪೆಷಲ್ ಅಲೋಕೇಷನ್ ಕೊಡದಿದ್ದರೆ ನಾವು ಯಾವ ರೀತಿಯಲ್ಲಿ ಇವುಗಳನ್ನೆಲ್ಲಾ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ? ಈಗ ಜನಸಂಖ್ಯೆ ದಟ್ಟಣೆ ಪ್ರಮಾಣ ಕೂಡ ಚಾಮರಾಜನಗರ ಜಿಲ್ಲೆಯಾದ ಮೇಲೆ ವಿಪರೀತ ಜಾಸ್ತಿಯಾಗಿದೆ. ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಇತರ ಎಲ್ಲಾ ಕಡೆಗಳಿಂದ ಜನರು ಪ್ರತಿನಿತ್ಯ ಬರುತ್ತಿದ್ದು, ಜನಸಂಖ್ಯಾ ದಟ್ಟಣೆ ಜಾಸ್ತಿಯಾಗುತ್ತಿದೆ. ಇದರಿಂದ ಆಗಾಗ ಅಪಘಾತಗಳೂ ಕೂಡ ಜಾಸ್ತಿಯಾಗುತ್ತಿವೆ. ಆದರೆ ಚಾಮರಾಜನಗರದಲ್ಲಿ ಒಂದು ಬ್ಲಡ್ ಬ್ಯಾಂಕ್ ಕೂಡ ಇಲ್ಲವಾಗಿದೆ. ಆಸ್ಪತ್ರೆಯಲ್ಲಿ 25 ಡಾಕ್ಟರ್‌ಗಳ ಸ್ಯಾಂಕ್ಷನ್ ಪೋಸ್ಟ್‌ಗಳಿದ್ದರೂ ಕೂಡ ಅಲ್ಲಿ ಕೇವಲ 9 ಜನರಿದ್ದಾರೆ. ನಾನು ಡಾಕ್ಟರ್ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಹಲವಾರು ಬಾರಿ ಪತ್ರ ವ್ಯವಹಾರ ಮಾಡಿದ್ದೇನೆ. ಖುದ್ದಾಗಿ ಭೇಟಿಯಾಗಿ ವಿಷಯದ ಬಗ್ಗೆ ಮಾತನಾಡಿದ್ದೇನೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೂ ತಿಳಿಸಿದ್ದೇನೆ. ವಿಶೇಷವಾಗಿ ಆರೋಗ್ಯ ಮಂತ್ರಿಗಳಿಗೆ ಡಾಕ್ಟರ್‌ಗಳ ಅಪಾಯಿಂಟ್‌ಮೆಂಟ್ ಬಗ್ಗೆ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ನಾನು ಒಮ್ಮೆ 50 ಲಕ್ಷ ರೂಪಾಯಿಗಳ ಕಟ್ಟಡವನ್ನು ಉದ್ಘಾಟನೆ ಮಾಡಲು ಆರೋಗ್ಯ ಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡಿಕೊಂಡೆ. ಏನು ಕಾರಣವೋ ಏನೋ, ಬರುತ್ತೇನೆ, ಬರುತ್ತೇನೆ ಎಂದ ಮಾನ್ಯ ಮಂತ್ರಿಗಳು ಕಡೆಗೆ ಬರಲೇ ಇಲ್ಲ. ನಾನು ಅವರನ್ನು ಬರಬೇಕು ಎಂದು ಏಕೆ ಒತ್ತಾಯ ಮಾಡುತ್ತೇನೆ ಎಂದರೆ ಅವರು ಬಂದರೆ ಅಲ್ಲಿಯ ವ್ಯವಸ್ಥೆ, ಸಿಸ್ಟಮ್ ಬಹುಶಃ ಚೆನ್ನಾಗಿ ಆಗುತ್ತದೆ ಎಂದು ತಿಳಿದು, ಆರೋಗ್ಯ ಮಂತ್ರಿಗಳು ಅಲ್ಲಿಗೆ ಬರಬೇಕು ಎಂದು ಹೇಳುತ್ತೇನೇಯೇ ಹೊರತು ಅವರ ಅಧಿಕಾರವನ್ನು ಕಿತ್ತು ಹಾಕಿಸಿಬಿಡಬೇಕು ಅಥವಾ ಅವರನ್ನು ಮನೆಗೆ ಕಳುಹಿಸಿಬಿಡಬೇಕು ಎನ್ನುವ ದೃಷ್ಟಿ ನನ್ನದಂತೂ ಇಲ್ಲವೇ ಇಲ್ಲ. ಅವರು ಬಂದರೆ ಆಸ್ಪತ್ರೆಯಲ್ಲಿ ಇರತಕ್ಕಂಥ ಲೋಪದೋಷಗಳು ಸರಿ ಹೋಗುತ್ತವೆ ಎನ್ನುವ ಮನೋಭಾವನೆ ನನ್ನದಾಗಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲೂ ನಾನು ನಿವೇದನೆ ಮಾಡುತ್ತೇನೆ, ತಾವಂತೂ ಬರಲಿಲ್ಲ, ಬರುತ್ತೇನೆ ಎಂದು ಹೇಳುತ್ತೀರಿ, ಬನ್ನಿ ಬಹಳ ಸಂತೋಷ. ನೀವು ಬಂದರೆ ಸ್ವಾಗತ ಮಾಡುತ್ತೇನೆ. ಆದರೆ ನೀವು ಮಂತ್ರಿಗಳನ್ನಾದರೂ ಕೂಡ ಆರು ತಿಂಗಳಿಗೆ ಒಮ್ಮೆಯಾದರೂ ಕಡ್ಡಾಯವಾಗಿ ಪ್ರತಿ ಜಿಲ್ಲೆಗೂ ಹೋಗಿ ತಮ್ಮ ತಮ್ಮ ಇಲಾಖೆಯ ಜವಾಬ್ದಾರಿಯನ್ನು ಅರಿತು ರಿವ್ಯೂ ಮಾಡಬೇಕು. ಅನುದಾನವು ಯಾವ ರೀತಿಯಲ್ಲಿ ವ್ಯಯವಾಗುತ್ತಿದೆ ಎಂಬ ಬಗ್ಗೆ ರಿವ್ಯೂ ಮಾಡಬೇಕೆಂದು ತಾವು ಅವರಿಗೆ ಕಡ್ಡಾಯವಾಗಿ ನಿರ್ದೇಶನ ಕೊಟ್ಟರೆ ಬಹುಶಃ ನಾನು ನಿಮಗೆ ಆಭಾರಿಯಾಗಿರುತ್ತೇನೆ ಎಂದು ಹೇಳಬಯಸುತ್ತೇನೆ. ತಾವು ಬೇಕಾದರೆ ಚಾಮರಾಜನಗರಕ್ಕೆ ನಿಧಾನವಾಗಿ [illegible] [illegible] ಕಡೇ ಪಕ್ಷ ತಮ್ಮ ಮಂತ್ರಿಗಳಿಗೆ ಈ ಬಗ್ಗೆ ಕಡ್ಡಾಯವಾಗಿ ಆದೇಶ ಕೊಡದಿದ್ದರೆ ನಿಜವಾಗಲೂ ಬಹಳ ಅನ್ಯಾಯವಾಗುತ್ತದೆಯಲ್ಲದೆ ನಿಮಗೆ ಕೆಟ್ಟ ಹೆಸರು ಬರುತ್ತದೆ. ಜನ ಓಟು ಕೊಟ್ಟು ಗೆಲ್ಲಿಸಿದ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎನ್ನುವ ಕಾರಣಕ್ಕೆ ನಿಮಗೆ ಈ ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂದು ಹೊಸ ಜಿಲ್ಲೆಗಳಿಗೆ ತಾವು ಒತ್ತು ಕೊಡದೇ ಇರುವುದು ಬಹಳ ನೋವಿನ ಸಂಗತಿಯಾಗಿದೆ.

ನಾನು ಈಗಾಗಲೇ ಮೂವರು ದುಷ್ಕರ್ಮಿಗಳು ನಡೆಸಿದ ದುಷ್ಕಾರ್ಯದ ಬಗ್ಗೆ ಹೇಳಿದೆ. ಮಾನ್ಯ ಮಲ್ಲಿಕಾರ್ಜುನನ ಖರ್ಗೆಯವರೂ ಕೂಡ ಇಲ್ಲೇ ಇದ್ದಾರೆ. ಇಂದು ಪೊಲೀಸ್ ಅಂದರೆ ಅಂಥವರಿಗೆ ಭಯವೇ ಇಲ್ಲವಾಗಿದೆ. ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟವನು ಇನ್ನೂ ಪೊಲೀಸ್ ಸ್ಟೇಷನ್‌ನಲ್ಲೇ ಇದ್ದಾನೆ. ದುಷ್ಕರ್ಮಿಗಳಿಗೆ ಇಂದು ಪೊಲೀಸ್ ಎಂದರೆ ಭಯವೇ ಇಲ್ಲವಾಗಿದೆ. ಇಷ್ಟು ನಿರಳವಾಗಿ, ಇಷ್ಟು ನಿರ್ಭೀತಿಯಾಗಿ ಹೋದರೆ ರಾಜ್ಯದಲ್ಲಿ ಜನ ಬದುಕುವುದು ಹೇಗೆ? ಕಂಪ್ಲೇಂಟಿನಲ್ಲಿ ಇಂತಿಂತಹವನು ಹೊಡೆದ, ಇಂತಿಂತಹವನು ಇದ್ದಾನೆ ಎಂದು ಅಕ್ಯೂಸ್ಡ್ ಹೆಸರು ನಮೂದಾಗಿದ್ದರೂ ಸಹ ಇವತ್ತಿನವರೆಗೂ not even a single person has been arrested. ಹೀಗೆ ಆದರೆ ಪರಿಸ್ಥಿತಿ ಹೇಗೆ ಸ್ವಾಮಿ? ಜನ ನೆಮ್ಮದಿಯಿಂದ ಬದುಕುವುದು ಹೇಗೆ? ಇದು ಒಂದೇ ಇನ್ಸಿಡೆಂಟ್ ಅಲ್ಲ. ರಾಜ್ಯಾದ್ಯಂತ ತಾವು ನೋಡುತ್ತಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳಿಗೂ ಇದು ಗೊತ್ತಿದೆ. ತಾವೆಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದೀರಿ. ಆದರೆ ತಾವು ಬಜೆಟ್ ಭಾಷಣದಲ್ಲಿ ಪುಟ ಸಂಖ್ಯೆ 35 ರಲ್ಲಿ “ಕರ್ನಾಟಕವು ಶಾಂತಿಪ್ರಿಯ ರಾಜ್ಯ; ಹೀಗೆಂದು ನಾವು ಮೈಮರೆಯುವಂತಿಲ್ಲ. ಪೋಲೀಸ್ ಪಡೆಯನ್ನು ಆಧುನೀಕರಿಸುವ ಮತ್ತು ಅವರು ನಾಗರೀಕರಿಗೆ ನೀಡುವ ಸೇವೆಯನ್ನು ಪರಿಣಾಮಕಾರಿಗೊಳಿಸಲು ನಮ್ಮ ಪ್ರಯತ್ನಗಳು ಮುಂದುವರಿಯುತ್ತವೆ. ಕಳೆದ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರವು ಪೋಲೀಸ್ ಪಡೆಯ ಆಧುನೀಕರಣಕ್ಕಾಗಿ 215 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ ಎಂದು ಹೇಳಿದ್ದೀರಿ ಇದು ನಿಜ. ತಾವು ಖರ್ಚು ಮಾಡಿದ್ದು ಸಂತೋಷ. ಆದರೆ ಪರ್ಪಸ್ ಏನು? ಇಷ್ಟೆಲ್ಲಾ ಮಾಡಿದರೂ ಓಪನ್ ಆಗಿ ಜನಸಂದಣಿ ಇರುವ ಜಾಗದಲ್ಲಿ ಅಟ್ಯಾಕ್ ಮಾಡಿ, ತಾವು ಆಧುನೀಕರಣಕ್ಕೆ 215 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಒಬ್ಬ ಅಪರಾಧಿಯನ್ನು ಹಿಡಿಯಲಿಲ್ಲವೆಂದರೆ ಜನರಿಗೆ ನಮ್ಮ ಬಗ್ಗೆ ವಿಶ್ವಾಸ ಹೇಗೆ ಬರುತ್ತದೆ? ಈ ಸರ್ಕಾರದ ಬಗ್ಗೆ ವಿಶ್ವಾಸ ಹೇಗೆ ಬರುತ್ತದೆ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ನಾನು ಇಲ್ಲಿ ಈಗ ಮಾತನಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದು ಬಹಳ ಸಂತೋಷ. ಜನ ನಿಮಗೆ ಐದು ವರ್ಷಗಳ ಕಾಲ ಅಧಿಕಾರ ಕೊಟ್ಟಿದ್ದಾರೆ. ನೀವು ಇರಬೇಕು, ಇರಿ. ಸಂತೋಷ. ಆದರೆ ಕೆಲಸ ಮಾತ್ರ ಸಮರ್ಪಕವಾಗಿ ಆಗಬೇಕೆಂದು ನಮ್ಮ ಚಿಂತನೆ, ಮತ್ತು ನಮ್ಮ ಕಾಳಜಿ ಇದೆ. ನಿಮಗೆ ನಮ್ಮ ಸಂಪೂರ್ಣವಾದಂತಹ ಬೆಂಬಲ, ಸರ್ಕಾರ ಇದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗಾಗಿ ಇವತ್ತು ದಯಮಾಡಿ ತುರ್ತಾಗಿ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ಆದೇಶ ಕೊಡಿ. ಅಲ್ಲದೆ ಚಾಮರಾಜನಗರದಲ್ಲಿ 144ನೇ ಸೆಕ್ಷನ್ ಬೇರೆ ಜಾರಿಯಲ್ಲಿದೆ. ಇಷ್ಟೆಲ್ಲಾ ಪೊಲೀಸ್ ಆಧುನೀಕರಣಕ್ಕೆ ಖರ್ಚು ಮಾಡಿ ಒಬ್ಬ ಅಕ್ಯೂಸ್ಡ್ ಪರ್ಸನ್ ಅರೆಸ್ಟ್ ಮಾಡದೇ ಇದ್ದೀರಿ. ಒಂದು ಗಾದೆ ಇದೆಯಲ್ಲಾ, ‘ಎತ್ತು ಈಯ್ತು ಎಂದರೆ ಕೊಟ್ಟಿಗೆಗೆ ಕಟ್ಟು’ ಎಂದರಂತೆ, ಇದನ್ನು ನಮ್ಮ ಹಳ್ಳಿಗಳಲ್ಲಿ ಹೇಳುತ್ತಾರೆ. ಏನೋ ಒಂದು ಗಲಾಟೆ ಆಯಿತೆಂದರೆ ಚಾಮರಾಜನಗರದಲ್ಲಿ 144 ಸೆಕ್ಷನ್ ಹಾಕಿಬಿಡುವುದು; ಇದು ಇತಿಹಾಸ ಸ್ವಾಮಿ. ಏನೋ ಒಂದು ಗಲಾಟೆಯಾಯಿತು ಎಂದಾಗ ಅಲ್ಲಿ ಪೊಲೀಸ್ ಕಂಟ್ರೋಲ್ ಮಾಡುವುದಕ್ಕೆ ಆಗುವುದೇ ಇಲ್ಲ ಎನ್ನುವ ಕಾಲಕ್ಕೆ 144ನೇ ಸೆಕ್ಷನ್ ತರತಕ್ಕಂಥ ವ್ಯವಸ್ಥೆ ಇದು. ಏನೋ ಒಂದು ಗಲಾಟೆ ಆಯಿತು ಎಂದರೆ ಬಾಗಿಲು ಹಾಕಿ ಕ್ಲೋಸ್ ಮಾಡಿ ಎಲ್ಲಾ ಮನೆಗೆ ಹೋಗಿ ಎಂದು ಪೊಲೀಸರು ಅಟ್ಟಿಸಿಕೊಂಡು ಬರತಕ್ಕಂಥಾದ್ದು ಹಾಗೂ 144ನೇ ಸೆಕ್ಷನ್ ಮೂರು ತಿಂಗಳ ಕಾಲ ಜಾರಿಗೆ ಕೊಟ್ಟಿರತಕ್ಕಂಥಾದ್ದು ಇದೆ. ಇಲ್ಲೆ” ಯುವಕರಿಬ್ಬರ

ಮೇಲೆ ಹಲ್ಲೆ, ಚಾಮರಾಜನಗರದಲ್ಲಿ ಬಿಗು ವಾತಾವರಣ 144ನೇ ಸೆಕ್ಷನ್ ಜಾರಿ ಎಂದು ಪತ್ರಿಕೆಯಲ್ಲಿ ಕೊಟ್ಟಿರತಕ್ಕಂಥಾದ್ದು. ಸುಮ್ಮನೆ ಮನಸೋಯಿಚ್ಚೆ 144 ಸೆಕ್ಷನ್ ಜಾರಿಗೆ ಕೊಟ್ಟಿದ್ದಾರೆ. ಅಂತಹ ಪರಿಸ್ಥಿತಿ ಏನಿತ್ತು? ಏಕೆ ಇಂತಹ ಒಂದು ಕೆಟ್ಟ ಪರಿಸ್ಥಿತಿ ತರತಕ್ಕಂಥಾದ್ದು? ನಾನು ಹೇಳುತ್ತೇನೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿರುವುದನ್ನು ನಾನು ನೋಡಿದೆ. 'ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್' 'ಏನಿದೆ ಅದೇ ರೀತಿಯಲ್ಲಿ ರಾಜ್ಯದಲ್ಲಿ ಕೂಡ' 'ಸ್ಟೇಟ್ ಹ್ಯೂಮನ್ ರೈಟ್ಸ್ ಕಮಿಷನ್ ಮಾಡಬೇಕೆಂಬ ಚಿಂತನೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆಯೆನ್ನುವ ವಿಚಾರವನ್ನು ಯಾವುದೋ ಒಂದು ಪತ್ರಿಕೆಯಲ್ಲಿ ನಾನು ಓದಿದೆ; ಬಹಳ ಸಂತೋಷ. ನಾನು ಅವರನ್ನು ಅಪೀಷಿಯೇಟ್ ಮಾಡುತ್ತೇನೆ. ಪೊಲೀಸ್ ಇಲಾಖೆಯಲ್ಲಿ ಸ್ರೀ ರವಿವರ್ಮಕುಮಾರ್ ಅವರ ಮುಖಂಡತ್ವದಲ್ಲಿ ಎಸ್‌ಟಿಎಫ್ ಬಗ್ಗೆ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್ ವತಿಯಿಂದ ಎನ್‌ಕ್ವೈರಿ ನಡೆಯುತ್ತಿದೆ. ಅದು ಪತ್ರಿಕೆಯಲ್ಲಿ ಬರುತ್ತಿದೆ. ಪೊಲೀಸರ ದೌರ್ಜನ್ಯದ ಬಗ್ಗೆ ಓಪನ್ ಆಗಿ ಸ್ಟೇಟ್ ಮೆಂಟ್ ಕೊಡುವುದಕ್ಕೆ ಜನ ಬಂದಂತಹ ಸಂದರ್ಭದಲ್ಲಿ, ವಿಚಾರಣೆ ಸಂದರ್ಭದಲ್ಲಿ ಅವರನ್ನು ಹೆದರಿಸುತ್ತಿರುವುದನ್ನು ನಾವು ಪತ್ರಿಕೆಯಲ್ಲಿ ನೋಡುತ್ತೇವೆ. ಒಬ್ಬ ಪೊಲೀಸ್ ಕಮೀಷನರ್ ಅಲ್ಲಿಗೆ ಹೋಗಿ ಎನ್‌ಕ್ವೈರಿ ಮಾಡುವ ಸಂದರ್ಭದಲ್ಲಿ 'ನೀನು ಅಲ್ಲಿ ಹೇಳು, ನಿನ್ನನ್ನು ನೋಡಿಕೊಳ್ಳುತ್ತೇನೆ, ನಿನ್ನನ್ನು ವಿಚಾರಿಸಿಕೊಳ್ಳುತ್ತೇನೆ' ಎಂದು ಹೆದರಿಸತಕ್ಕಂಥಾದ್ದು ಆಗಿದೆ. ಇನ್ನು ಕಮಿಷನ್ ಇಲ್ಲದ ಮೇಲೆ ಎಷ್ಟರವಟ್ಟಿಗೆ ಪೊಲೀಸರು ಅಮಾಯಕರ ಮೇಲೆ ಅಲ್ಲಿ ದೌರ್ಜನ್ಯ ನಡೆಸಬಹುದು ಎನ್ನುವುದರ ಬಗ್ಗೆ ನಾವು ಗಮನ ಹರಿಸಬೇಕಾಗಿರತಕ್ಕಂಥ ಅಗತ್ಯ ಇದೆ. ಇದರ ಬಗ್ಗೆ ಜಾಸ್ತಿ ಒತ್ತು ಕೊಡತಕ್ಕಂಥ ಪ್ರಯತ್ನಗಳಾಗಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ, ನಾವು ಸುಮಾರು ದಿನಗಳಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಬೇಡಿಕೆ ಇಡುತ್ತಿರತಕ್ಕಂಥಾದ್ದು ಏನೆಂದರೆ, ಚಾಮರಾಜನಗರ ಜಿಲ್ಲೆಗೆ ಕಬಿನಿ 2ನೇ ಹಂತ ಬಹಳ ಅವಶ್ಯಕತೆ ಇರತಕ್ಕಂಥಾದ್ದು ಇದೆ. ಆದರೆ ಕಬಿನಿ 2ನೇ ಹಂತದ ಬಗ್ಗೆ ತಾವು ತಮ್ಮ ಬಜೆಟ್‌ನಲ್ಲಿ ಏನೂ ಪ್ರಸ್ತಾಪವನ್ನು ಮಾಡಿಲ್ಲ. ನಾವು ಪ್ರತಿಭಟನೆ ಮಾಡುತ್ತಿದ್ದೇವೆ; ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇವೆ. ಮತ್ತು ಜಿಲ್ಲಾ ಮಂತ್ರಿಗಳಿಗೂ ಕೂಡ ಈ ವಿಚಾರ ಹೇಳಿ ಅವರೂ ಕೂಡ 50 ಕೋಟಿ ರೂಪಾಯಿಗಳನ್ನು ರಿಸರ್ವ್ ಮಾಡಿಸುತ್ತೇನೆ ಎಂದು ಹೇಳಿದ್ದರು. ಅವರಿಗೂ ಕಾಳಜಿ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಜನ ನಿಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ. ಇವತ್ತು ಆ ಜಿಲ್ಲೆ ಬರಡಾಗಿದೆ. ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೇಗಾಲ, ಈ ಭಾಗದಲ್ಲಿ ಬಹಳ ಬರಡಾಗಿದೆ. ಬಹುಶಃ ಈ ವರ್ಷ ತಾವು ತುರ್ತಾಗಿ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಕ್ರಮ ತೆಗೆದುಕೊಳ್ಳದೇ ಹೋದರೆ ಕುಡಿಯುವ ನೀರಿಗೆ ಬಹಳ ಕಷ್ಟವಾಗುತ್ತದೆ; ಅಷ್ಟು ಸಮಸ್ಯೆ ಇದ್ದು, ಅಂತರ್ಜಲ ಮಟ್ಟ ಬಹಳ ಕೆಳಗಡೆ ಹೋಗಿದೆ. ಹೀಗಿದ್ದಾಗ ತಾವು ಬಜೆಟ್‌ನಲ್ಲಿ ಕಬಿನಿ 2ನೇ ಹಂತದ ಯೋಜನೆಯನ್ನು ಅನುಷ್ಠಾನ ಮಾಡತಕ್ಕಂಥ ದಿಕ್ಕಿನಲ್ಲಿ ಪ್ರಯತ್ನ ಮಾಡತಕ್ಕಂಥಾದ್ದು, ಬಹಳ ಅವಶ್ಯಕತೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಈಗಲಾದರೂ ಕೂಡ ಏನು ಬಜೆಟ್ ಮೇಲೆ ಚರ್ಚೆಯಾಗುತ್ತಿದೆ,

ಈ ಒಂದು ಸರ್ವೆ ಕಾರ್ಯ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಬೇಕು. ಹೋದಸಲ ಮಾನ್ಯ ಪಾಟೀಲ್ ರವರು ಏನು 40 ಲಕ್ಷ ರೂ. ಕೊಟ್ಟಿದ್ದರು. ಬಹುಶಃ ಅದು ಖರ್ಚಾದ ಹಾಗೆ ಆಗಲಿಲ್ಲ. ಇವತ್ತು ಹಚ್ಚಿನ ಹಣವನ್ನು ಕೊಟ್ಟು ಕಬಿನಿ 2ನೇ ಹಂತದ ಯೋಜನೆಯ ಸರ್ವೆ ಕಾರ್ಯ ಈ ವರ್ಷ ಅಥವಾ ಬರುವ ವರ್ಷದಲ್ಲಿ ತೆಗೆದುಕೊಳ್ಳತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಸ್ಟಾಂಪ್ ಪೇಪರ್‌ಗಳ ವಿಚಾರದಲ್ಲಿ ಹೇಳುವುದಾದರೆ 12,000 ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್ ಬಗ್ಗೆ ಹಗರಣವಾಗಿ ಆ ವಿಚಾರ ಚರ್ಚೆಯಾಗಿದೆ. ಮಾನ್ಯ ಸೋಮಶೇಖರ್‌ರವರೂ ಕೂಡ ಬಹಳ ಮಾತನಾಡಿದ್ದಾರೆ. ಈಗ ಸ್ಟಾಂಪ್ ಪೇಪರ್ ತೆಗೆಯುವುದು ಸರಿ. ಅದನ್ನು ಒಪ್ಪಿಕೊಳ್ಳೋಣ. ಆದರೆ ಸ್ಟಾಂಪ್ ಪೇಪರ್ ವೆಂಡರ್ ಏನಿದ್ದಾರೆ ಅವರ ಪರಿಸ್ಥಿತಿ ಕೆಟ್ಟದಾಗುತ್ತದೆ. ಅದರ ಬಗ್ಗೆ ಸಾಧಕ ಭಾದಕಗಳನ್ನು ಗಮನಿಸಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಇವತ್ತು ಸ್ಟಾಂಪ್ ಮಾರಿ ಏನು ಜೀವನ ಮಾಡುತ್ತಿದ್ದಾರೆ ಅವರ ಜೀವನದ ಮೇಲೆ ಹೊಡೆತ ಬೀಳುತ್ತದೆ ಎಂದು ಹೇಳುತ್ತಾ, ಇದಕ್ಕೆ ಹೆಚ್ಚು ಒತ್ತು ಕೊಡಬೇಕು, ಹಾಗೂ ಅವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡುವಂತಹ ದಿಕ್ಕಿನಲ್ಲಿ ಇದರ ಬಗ್ಗೆ ಪ್ರಯತ್ನ ಮಾಡುವಂತಹ ಕೆಲಸವಾಗಬೇಕು. ಈಗಾಗಲೇ ಮಾನ್ಯ ಸದಸ್ಯರುಗಳು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮೊದಲೇ ಹೇಳಿದ ರೀತಿಯಲ್ಲೆ, statement of accounts for three years, actual expenditure and actual estimated cost -- ಇದೆಲ್ಲಾ ಕೊಟ್ಟಿದ್ದರೆ ಇನ್ನೂ ಕೂಡ ಇದು ಸಂಪೂರ್ಣವಾಗಿ ಇರುತ್ತಿತ್ತು. ಚಾಮರಾಜನಗರ ಜಿಲ್ಲೆಗೆ ಹಾಗೂ ಹೊಸ ಜಿಲ್ಲೆಗಳಿಗೆ ಹೆಚ್ಚಿನ ಒತ್ತನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಹೇಳುತ್ತಾ, ಈ ಒಂದು ಆಯವ್ಯಯ ಭಾಷಣದಲ್ಲಿ ಭಾಗವಹಿಸಿ ಹಲವಾರು ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಗುರುಸ್ವಾಮಿಯವರು ಹೇಳಿದ ಹಾಗೆ ಚಾಮರಾಜನಗರದಲ್ಲಿ ಕೆಲವೊಂದು ಗುಂಪುಗಳಲ್ಲಿ ಘರ್ಷಣೆಯಾಗಿದೆ. ಈ ಸಂದರ್ಭದಲ್ಲಿ ಮೂರ್‍ನಾಲ್ಕು ಜನರಿಗೆ ಸೀರಿಯಸ್ ಗಾಯಗಳಾಗಿವೆ. ಚಾಮರಾಜನಗರದಲ್ಲಿ ಅದಕ್ಕೆ ಸರಿಯಾದ ಟ್ರೀಟ್‌ಮೆಂಟ್ ಸಿಗಲಿಲ್ಲವೆಂದು ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಟ್ರೀಟ್‌ಮೆಂಟ್ ಕೊಟ್ಟಿದ್ದಾರೆ. ಈ ಪರಿಸ್ಥಿತಿ ಆಗಿದೆ. ಮತ್ತು ಅಲ್ಲಿ ಯಾರು ಗಾಯಗಳನ್ನು ಮಾಡಿದ್ದಾರೆ ಅವರು ಓಪನ್ ಆಗಿ ಅಡ್ಡಾಡುತ್ತಿದ್ದಾರೆ. ಅವರ ಮೇಲೆ ಇನ್ನು ಏನೂ ಆ್ಯಕ್ಷನ್ ತೆಗೆದುಕೊಂಡಿಲ್ಲ, ದಯವಿಟ್ಟು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕು. ಅವರುಗಳ ಅರೆಸ್ಟ್ ಆಗಿಲ್ಲ, ಎಫ್.ಐ.ಆರ್. ನಲ್ಲಿ ಹೆಸರೆಲ್ಲಾ ಇದೆ. ತಕ್ಷಣ ಅವರನ್ನು ಅರೆಸ್ಟ್ ಮಾಡಬೇಕು ಮತ್ತು ಆ ಒಂದು ಘರ್ಷಣೆಯಲ್ಲಿ ಯಾರಿಗೆ ಗಾಯಗಳಾಗಿವೆ ಅವರಿಗೆ ಸರಿಯಾದ ಟ್ರೀಟ್‌ಮೆಂಟ್ ಆಗಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ರಿಪೋರ್ಟ್ ತರಿಸಿಕೊಂಡು, ಮತ್ತು ಅಲ್ಲಿನ ಎಸ್.ಪಿ ಜೊತೆ ತಕ್ಷಣ ಕಂಟ್ಯಾಕ್ಟ್ ಮಾಡಿ, ವಿಷಯ ಏನೆಂದು ನೋಡಿಕೊಂಡು ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್ ಬಂಗೇರ (ಬೆಳ್ತಂಗಡಿ): ಸನ್ಮಾನ್ಯ ಉಪಾಧ್ಯಕ್ಷರೇ, ಮೊದಲನೆಯದಾಗಿ ನನಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈ ವರ್ಷದ ಬಜೆಟನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ್ದಾರೆ, ಈ ವರ್ಷದ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಐದು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ, ಮತ್ತೆ ವಿದ್ಯುತ್ ಕ್ಷೇತ್ರಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳನ್ನು, ಹಾಗೂ ನೀರಾವರಿ ಕ್ಷೇತ್ರಕ್ಕೆ 2,900 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ಇವರು ವಿದ್ಯುತ್‌ಗೆ ಕೊಟ್ಟಿರುವಂತಹ ಎರಡು ಸಾವಿರ ಕೋಟಿ ರೂಪಾಯಿಗಳಲ್ಲಿ ಕೃಷಿ ಕ್ಷೇತ್ರದ ಉಪಯೋಗಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ವಿಂಗಡಣೆ ಮಾಡಿದ್ದಾರೆ? ಮತ್ತೆ ಕೈಗಾರಿಕೆಗಳಿಗೆ ಎಷ್ಟು ಎಂಬ ವಿಚಾರಕ್ಕೆ ಇವರು ಒತ್ತು ಕೊಟ್ಟಿಲ್ಲ. ಹಾಗಾಗಿ ಇವರು ಕೃಷಿ ಕ್ಷೇತ್ರಕ್ಕೆ ಹೆಚ್ಚು ಅನುದಾನವನ್ನು ಕೊಟ್ಟಿರುವ ವಿಚಾರವನ್ನು ಮಾತ್ರ ಹೇಳಿದ್ದಾರೆಯೇ ವಿನಃ ಕೃಷಿ ಕ್ಷೇತ್ರಕ್ಕೆ ಎಷ್ಟು ಎಂದು ಹೇಳಿಲ್ಲ. ನಮ್ಮ ದೇಶದ ಬೆನ್ನೆಲುಬು ಈ ಕೃಷಿಕರೇ ಆಗಿದ್ದಾರೆಂಬ ವಿಚಾರವನ್ನು ಹೇಳುತ್ತಾ, ಈ ಕ್ಷೇತ್ರಕ್ಕೆ ಹೆಚ್ಚು ಒತ್ತನ್ನು ಕೊಡಬೇಕಾಗಿದ್ದರೆ ಅವರ ಕೃಷಿ ಉಪಕರಣಗಳಿಗೆ, ರಸಗೊಬ್ಬರಕ್ಕೆ, ಹಾಗೆಯೇ ವಿದ್ಯುತ್ ಉಪಯೋಗ ಮಾಡುವಂತಹ ಪಂಪ್‌ಸೆಟ್‌ಗಳಿಗೆ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಬೇಕಾಗಿದ್ದು, ಅದು ಎಷ್ಟು ಎಂಬುದನ್ನು ಕೂಡ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನೀರಾವರಿಗೆ 2,900 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಲ್ಲಿ ಕೂಡ ಕೃಷಿ ಕ್ಷೇತ್ರಕ್ಕೆ ಉಪಯೋಗ ಮಾಡುವಂತಹ ನೀರಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ? ಅದೇ ರೀತಿಯಲ್ಲಿ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕುಡಿಯುವ ನೀರಿಗೆ ತೊಂದರೆ ಇರುವುದರಿಂದ, ಮತ್ತೆ ಅಂತರ್‌ಜಲ ಮಟ್ಟ ಕುಸಿಯುತ್ತಿರುವುದರಿಂದ ಈ ಅಂತರ್ ಜಲ ಮಟ್ಟ ಏರಬೇಕೆಂದರೆ ನಾವು ಈ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗಳ ವಿಚಾರವಾಗಿ ಹೇಳುವುದಾದರೆ, ಮಳೆಗಾಲದಲ್ಲಿ ನದಿ ನೀರು ಸಮುದ್ರಕ್ಕೆ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈಗಾಗಲೇ "ಪಶ್ಚಿಮವಾಹಿನಿ ಯೋಜನೆ ಅಡಿಯಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಜಿಲ್ಲೆಗಳಿಗೆ ಈ ಯೋಜನೆಯಡಿಯಲ್ಲಿ ಹೆಚ್ಚು ಹಣವನ್ನು ಕೊಡುತ್ತೇವೆನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದು ಇಲ್ಲಿಯವರೆಗೆ ಕಾರ್ಯಗತವಾಗದೇ ಇರುವುದನ್ನು ನಾವು ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಮುಂದಿನ ವರ್ಷದಲ್ಲಿ ಕೊಡುತ್ತೇವೆನ್ನುವಂತಹ ಭರವಸೆಯನ್ನು ಬಜೆಟ್‌ನಲ್ಲಿ ಹೇಳಿದ್ದಾರೆ, ನಾವು ಕೂಡ ಆ ನಿರೀಕ್ಷೆಯಲ್ಲಿದ್ದೇವೆ. ಒಟ್ಟಿನಲ್ಲಿ ಅಂತರ್‌ಜಲ ಮಟ್ಟ ಹೆಚ್ಚಾಗಬೇಕೆಂದರೆ" ಕಿರು ನೀರಾವರಿ ಯೋಜನೆ ಅಡಿಯಲ್ಲಿ ಅಲ್ಲಲ್ಲಿ ಅಣೆಕಟ್ಟುಗಳು ಆಗಬೇಕಾಗಿದೆ. ಇದರ ಬಗ್ಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ನದಿ ಕೊರತೆ ಹೆಚ್ಚಾಗಿ ಭೂಮಿ ನಷ್ಟವಾಗಿ ಕೃಷಿ ಭೂಮಿ ಹಾಳಾಗುವುದನ್ನು ನಾವು ನೋಡುತ್ತಿದ್ದೇವೆ, ಹಾಗಾಗಿ ಇದಕ್ಕೆ ತಾವು ತಡೆಗೋಡೆಗಳ ನಿರ್ಮಾಣ, ಅಣೆಕಟ್ಟುಗಳ ನಿರ್ಮಾಣವಾಗಬೇಕಾಗಿದೆ. ಕೆರೆಗಳ ಹೂಳು ಎತ್ತುವ ಕೆಲಸವನ್ನು ಮಾಡಿದಾಗ ಮಳೆಗಾಲದಲ್ಲಿ ನೀರನ್ನು ತಡೆಗಟ್ಟುವಂತೆ ಮಾಡಿ ಅಂತರ್‌ಜಲ ಮಟ್ಟ ಏರಿಸುವುದಕ್ಕೆ ಸಹಾಯವಾಗುವುದು. ಇದರ ಬಗ್ಗೆ ತಾವು ಈಗಾಗಲೇ ಹೇಳಿರುವಂತೆ ಕೆರೆಗಳ ಹೂಳು ಎತ್ತುವ ಕೆಲಸಕ್ಕೆ ಈ ಸಲದ ಬಜೆಟ್‌ನಲ್ಲಿ ಹಣವನ್ನು ಇಡುತ್ತೇವೆಂದು ಹೇಳಿದ್ದೀರಿ. ಕಳೆದ ಸಾಲಿನಲ್ಲಿ ತಮ್ಮ ಯೋಜನೆಯ ಪ್ರಕಾರ ಒಂದು ಹೋಬಳಿಯಲ್ಲಿ ಒಂದು

ಕೆರೆಯಲ್ಲಿ ಹೂಳು ತೆಗೆದು, ಆ ಮೂಲಕ ಅಂತರ್‌ಜಲ ಮಟ್ಟವನ್ನು ಏರಿಸುವಂತಹ ಒಂದು ಯೋಜನೆಯನ್ನು ಹಾಕುತ್ತೇವೆಂದು ಹೇಳಿದ್ದೀರಿ. ಇದು ಕಾರ್ಯಗತವಾಗಿಲ್ಲ; ಮುಂದಿನ ದಿವಸಗಳಲ್ಲಿ ಇದು ಆಗಬೇಕಾಗಿದೆ, ಇದು ಆದಷ್ಟು ಶೀಘ್ರವಾಗಿ ಆದಾಗ ಅಂತರ್‌ಜಲ ಮಟ್ಟ ಮೇಲಕ್ಕೆ ಬಂದು, ಇದು ನೀರಾವರಿ ದೃಷ್ಟಿಯಿಂದಲೂ ಕೃಷಿಕರಿಗೆ ಕೂಡ ಅನುಕೂಲವಾಗಬಹುದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಜೊತೆಗೆ "ರಾಷ್ಟ್ರೀಯ ವಿಮೆ ಯೋಜನೆ ಅಡಿಯಲ್ಲಿ ಈಗಾಗಲೇ ಬೆಳೆಗೆ ವಿಮೆ ಮಾಡಿದರೂ ಕೂಡ ವೈಯಕ್ತಿಕವಾಗಿ ಅವರ ಬೆಳೆ ನಷ್ಟವಾದಾಗ ಅವರಿಗೆ ಪರಿಹಾರ ಸಿಗುವಂತಹ ಯೋಜನೆಗಳು ಇದುವರೆಗೂ ಜಾರಿಯಾಗಿಲ್ಲ. ಆದುದರಿಂದ ರಾಜ್ಯಸರ್ಕಾರವು ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟು" ರಾಷ್ಟ್ರೀಯ ಬೆಳೆ ವಿಮೆ ಯೋಜನೆಯನ್ನು ತ್ವರಿತವಾಗಿ ಜಾರಿ ಮಾಡಬೇಕೆಂಬ ಪ್ರಸ್ತಾಪವನ್ನು ಕೊಟ್ಟಿದ್ದಾರೆ, ಇದರ ಜೊತೆಗೆ ವೈಯಕ್ತಿಕವಾಗಿ ಅವರ ಕೃಷಿ ನಷ್ಟವಾದರೆ ಅವರಿಗೆ ವಿಮೆ ಹಣ ಸಿಗುವಂತೆ ತಿದ್ದುಪಡಿಯನ್ನು ತಂದು ಈ ಮೂಲಕ ಅವರಿಗೆ ಕೊಟ್ಟರೆ ಖಂಡಿತವಾಗಿಯೂ ಇದರಿಂದ ರೈತರಿಗೆ ಉಪಯೋಗವಾಗುತ್ತದೆ, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇಲ್ಲಿ ಜಿಲ್ಲಾಧಿಕಾರಿಗಳು ಅಣೆವಾರು ಡಿಕ್ಲೇರ್ ಮಾಡಿಕೊಂಡು ಒಂದು ತಾಲ್ಲೂಕು ಪೂರ್ತಿ ಬೆಳೆ ನಷ್ಟವಾದಾಗ ಮಾತ್ರ ಹಣ ಕೊಡುವುದಕ್ಕೆ ಆಗುತ್ತದೆಂದರೆ ವೈಯಕ್ತಿಕವಾಗಿ ಇದು ಕಷ್ಟ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ತಾವು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಅಲ್ಪಾವಧಿ ಕೃಷಿ ಸಾಲದ ಬಡ್ಡಿದರ ಶೇಕಡಾ 9ರಷ್ಟು ಮೀರದಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ತಾವು ಆ ರೀತಿಯಾಗಿ ಹಣವನ್ನು ಕೊಟ್ಟಾಗ ಕೃಷಿಕರಿಗೆ ಒಳ್ಳೆಯದಾಗುತ್ತದೆ. ಈ ಬಗ್ಗೆ ನಾವು ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರು ಹೆಚ್ಚಾಗಿರುವಂತಹ ಕ್ಷೇತ್ರವಾಗಿದ್ದು, ಈ ಸಲ ಅಡಿಕೆ ಬೆಲೆ ಕುಸಿದಿರುವುದರಿಂದ ರೈತರಿಗೆ ಸಾಲವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಈಗಾಗಲೇ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಮಾನ್ಯ ಡಿ.ವಿ. ಸದಾನಂದಗೌಡರ ನೇತೃತ್ವದಲ್ಲಿ ಹೋಗಿ ಸರ್ಕಾರಕ್ಕೆ ಮನದಟ್ಟು ಮಾಡಿದ್ದೇವೆ. ಇಲ್ಲಿ ನಮ್ಮ ಬೇಡಿಕೆ ಏನೆಂದರೆ, ಈ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾರ್ಪಾಡು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಮತ್ತೆ ಅವನಿಗೆ ತೊಂದರೆಯೂ ಸ್ವಲ್ಪ ಕಡಿಮೆಯಾಗುತ್ತದೆ. ಈಗಿನ ಕೃಷಿ ಉತ್ಪನ್ನಗಳ ಬೆಲೆಯೂ ಕಡಿಮೆ ಇರುವುದರಿಂದ ಅವನಿಗೆ ಸರಿಯಾಗಿ ಸಾಲ ಮರುಪಾವತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಈ ಸಲದ ಬಜೆಟ್‌ನಲ್ಲಿ ಅಡಿಕೆ ಮಾರಾಟ ತೆರಿಗೆ ದರದಲ್ಲಿ ಶೇಕಡಾ 4ರಷ್ಟು ಇದ್ದುದ್ದನ್ನು ಕಡಿಮೆ ಮಾಡುತ್ತಾರೆಂಬ ವಿಶ್ವಾಸವಿತ್ತು. ಆದರೆ ಅದನ್ನು ಕಡಿಮೆ ಮಾಡಿಲ್ಲ; ಮಾನ್ಯ ಮುಖ್ಯಮಂತ್ರಿಯವರ ಬಳಿ ನಮ್ಮ ಬೇಡಿಕೆ ಏನೆಂದರೆ ಈ ಮಾರಾಟ ತೆರಿಗೆ ಕಡಿಮೆ ಮಾಡಬೇಕೆಂದು ಹೇಳುತ್ತೇವೆ. ಇನ್ನು ಟರ್ನ್ ಓವರ್ ಟ್ಯಾಕ್ಸ್ ಕೈ ಬಿಡಬೇಕು, ಹಾಗಾದರೆ ಮಾತ್ರ ರೈತರಿಗೆ ಲಾಭವಾಗಬಹುದೆನ್ನುವ ವಿಚಾರವನ್ನು ಹೇಳಬಯಸುತ್ತೇನೆ. ತಾವು ಈ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಟರ್ನ್ ಓವರ್ ಟ್ಯಾಕ್ಸ್ ಕಡಿಮೆ ಮಾಡುತ್ತೀರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರ ಜೊತೆಗೆ ರೈತರು ಕಂಗಾಲಾಗುವಂತಹ ಪರಿಸ್ಥಿತಿಯಲ್ಲಿ ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ ಸರ್ಕಾರವೇ ಬೆಂಬಲ ಬೆಲೆಯನ್ನು ಘೋಷಿಸಿ ಆ ಮೂಲಕವಾಗಿ ರೈತನಿಗೆ ಸಹಕಾರ ನೀಡಿದೆ. ನಾನು ಈ ಸದನದ ಮೂಲಕ ಸರ್ಕಾರವನ್ನು

ಕೇಳಿಕೊಳ್ಳುವಂಥಾದ್ದು ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಕೂಡ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಯೋಜನೆ ಮಾಡಬೇಕಾಗಿದೆ. ಈ ರೀತಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಆ ಮೂಲಕವಾಗಿ ರೈತನಿಗೆ ನೇರವಾಗಿ ಇದರ ಲಾಭವಾಗುವಂತೆ ಮಾಡಬೇಕು, ಇಲ್ಲದಿದ್ದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ, ಶಿವಮೊಗ್ಗ, ಉಡುಪಿ, ಜಿಲ್ಲೆಗಳಲ್ಲಿ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ರೀತಿ ಆಗದೇ ಇರಬೇಕೆಂದರೆ ನಮ್ಮ ರಾಜ್ಯದಲ್ಲೂ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು, ಮತ್ತೆ ಕೇಂದ್ರ ಸರ್ಕಾರದಿಂದಲೂ ಕೂಡ ಒಪ್ಪಿಗೆ ಸೂಚಿಸಿದೆ ಎಂದು ತಿಳಿಯುತ್ತೇನೆ. ಈ ರೀತಿಯಲ್ಲಿ ರೈತನಿಗೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ. ಇನ್ನು ತಾವು ರೈತನಿಗೆ ಆವರ್ತ ನಿಧಿಗೆ 125 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಕಳೆದ ಬಾರಿ ರೈತರಿಗೆ ಜೋಳ, ರಾಗಿ, ಭತ್ತ, ಕೊಬ್ಬರಿಗೆ ಬೆಂಬಲ ಬೆಲೆ ಕೊಟ್ಟಿರುವುದರಿಂದ ಅಡಿಕೆಗೂ ಕೂಡ ಅದನ್ನು ವಿಸ್ತರಣೆ ಮಾಡಬೇಕಾಗಿದೆ. ತಾವು ಅಡಿಕೆಗೂ ಕೂಡ ಕೊಡುತ್ತೀರೆನ್ನುವ ಆಸೆ ನಮಗೆ ಇದೆ.

ಇನ್ನು ರೈತರು ಉಪಯೋಗ ಮಾಡುವ ವಿದ್ಯುತ್ ಅದು ಕೃಷಿಗೆ, ಅಡಿಕೆ ಬೆಳೆಗೆ ಒಂದು ಅಶ್ವಶಕ್ತಿಗೆ ಆರು ನೂರು ರೂಪಾಯಿಗಳನ್ನು ಕೊಡಬೇಕೆನ್ನುವ ವಿಚಾರವನ್ನು ಹೇಳಿದ್ದೀರಿ. ನಾವು ಈ ವಿದ್ಯುಚ್ಛಕ್ತಿಯ ವಿಚಾರವಾಗಿ ಮಾನ್ಯಮಂತ್ರಿಯವರು ಜಿಲ್ಲೆಗೆ ಬಂದಾಗ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಮಾತನಾಡಿದಂತಹ ಸಂದರ್ಭದಲ್ಲಿ ಅವರು ಮೂರು ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಕಟ್ಟುವಂತಹ ಅಗತ್ಯವಿಲ್ಲ, ರೈತರು ಮೂರು ನೂರು ರೂಪಾಯಿಗಳನ್ನು ಕಟ್ಟಿದರೆ ಸಾಕು ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಹೇಳುವಂಥಾದ್ದು ಇದಕ್ಕಿಂತ ಹೆಚ್ಚು ಹಣ ಒಂದು ಅಶ್ವಶಕ್ತಿಗೆ ಆಗಬಾರದು ಎಂದು ಹೇಳುತ್ತೇನೆ.

12.20 ಪಿ.ಎಂ.

ಆ ರೀತಿಯಾದಾಗ ಅಲ್ಲಿ ಕೂಡ ಅವನಿಗೆ ನಷ್ಟ ಸಂಭವಿಸುವುದರಿಂದ ಅವನಿಗೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಜೊತೆಗೆ, ತಾವು ಕಳೆದ ಸಲದ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುತ್ತೀರಿ, ಮೇ ತಿಂಗಳ ನಂತರ ದಿನಕ್ಕೆ 12 ಗಂಟೆಗಳ ಕಾಲ ಮೂರು ಫೇಸ್ ವಿದ್ಯುತ್‌ನ್ನು ಸರಿಯಾಗಿ ಕೊಡುತ್ತೇನೆ ಎನ್ನುವ ವಿಚಾರವನ್ನು ತಾವು ಹೇಳಿದ್ದರು ಕೂಡ ಇಲ್ಲಿಯವರೆಗೆ ರೈತನಿಗೆ ಕನಿಷ್ಟ ಒಂದು ದಿನಕ್ಕೆ 6 ಗಂಟೆಗಳ ಕಾಲ ಸರಿಯಾಗಿ ವಿದ್ಯುತ್ ದೊರೆಯುತ್ತಿಲ್ಲ. ಹಾಗಾಗಿ ಅವನು ಕಷ್ಟದಲ್ಲಿದ್ದಾನೆ, ಅದನ್ನು ಕೂಡ ತಾವು ಗಮನದಲ್ಲಿಟ್ಟುಕೊಂಡು ಇನ್ನು ಮುಂದಿನ ದಿನಗಳಲ್ಲಿ, ಬೇರೆ ರಾಜ್ಯದಿಂದಲಾದರೂ ಕೂಡ ಹೆಚ್ಚು ವಿದ್ಯುತ್‌ನ್ನು ತರಿಸಿಕೊಂಡು ಆ ಮೂಲಕವಾಗಿ ರೈತನಿಗೆ ಕಡಿಮೆ ದರದಲ್ಲಿ ಕೊಡುವಂಥ ಒಂದು ಪ್ರಯತ್ನವನ್ನು ಮಾಡಬೇಕು ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ.

ಅದೇ ರೀತಿಯಲ್ಲಿ ಗ್ರಾಮಾಂತರ ಪ್ರದೇಶದ ರಸ್ತೆಗಳ ನಿರ್ವಹಣೆಯ ದೃಷ್ಟಿಯನ್ನು ನೋಡಿದಾಗ ಕಳೆದ ಎರಡು ವರ್ಷಗಳಿಂದ ಜಿಲ್ಲಾ ಪಂಚಾಯಿತಿಯ ರಸ್ತೆಗಳಾಗಲಿ ಅಥವಾ ಗ್ರಾಮಾಂತರದ ತಾಲ್ಲೂಕು ಪಂಚಾಯಿತಿಯ ರಸ್ತೆಗಳಾಗಲಿ ದುರಸ್ಥಿಯಾಗಿಲ್ಲ. ಅದನ್ನು ನಿರ್ವಹಣೆ ಮಾಡಲಿಕ್ಕೆ ಹಣಕಾಸಿನ ತೊಂದರೆ ಇದೆ ಅನ್ನುವ ವಿಚಾರಕ್ಕೋಸ್ಕರವಾಗಿ ಎಲ್ಲವೂ ಕೂಡ

ನಾದುರಸ್ಥಿಯಲ್ಲಿರುವುದನ್ನು ನಾವು ಕಂಡಿದ್ದೇವೆ. ಹಾಗಾಗಿ ಹೆಚ್ಚು ಹಣವನ್ನು ಜಿಲ್ಲಾ ಪಂಚಾಯಿತಿಯ ರಸ್ತೆಗಳ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಗೆ ಕೊಡಬೇಕಾಗಿದೆ; ಅದನ್ನು ಕೂಡ ತಾವು ಗಮನಿಸಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ 1,40,000 ಕಿ.ಮೀ. ರಸ್ತೆಗಳು ಇವೆ ಎನ್ನುವ ವಿಚಾರವನ್ನು ತಾವು ಹೇಳಿರುತ್ತೀರಿ. ಅದರ ಜೊತೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಪ್ರತಿ ತಾಲ್ಲೂಕಿಗೆ ರಸ್ತೆಗಳ ನಿರ್ವಹಣೆಗಾಗಿ ಕೊಡುತ್ತೇವೆ ಎನ್ನುವ ವಿಚಾರವನ್ನು ತಾವು ಬಜೆಟ್ ಭಾಷಣದಲ್ಲಿ ಹೇಳಿರುತ್ತೀರಿ. ಒಂದು ಕೋಟಿ ರೂಪಾಯಿಗಳನ್ನು ಕೊಡುವುದು ಇದ್ದರೆ, ಯಾವ ತಾಲ್ಲೂಕು ಪಂಚಾಯಿತಿ ರಸ್ತೆಗಳಿಗೆ ಎಷ್ಟು? ಯಾವ ತಾಲ್ಲೂಕು ಪಂಚಾಯಿತಿಯ ಎಷ್ಟು ರಸ್ತೆಗಳು ಇವೆ? ಗ್ರಾಮ ಪಂಚಾಯಿತಿ ರಸ್ತೆಗಳೂ ಕೂಡ ಎಷ್ಟು ಇವೆ? ಅವುಗಳ ನಿರ್ವಹಣೆಗೆ ಮಾತ್ರ ಈ ಹಣವನ್ನು ಕೊಡುತ್ತೀರಾ? ಅದರ ರೂಪರೇಷೆಗಳನ್ನು ಮಾಡಿದಾಗ ಎಲ್ಲಾ ರಸ್ತೆಗಳು ದುರಸ್ಥಿಯಲ್ಲಿರುವುದಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಲೋಕೋಪಯೋಗಿ ರಸ್ತೆಗಳೂ ಕೂಡ ನಮ್ಮ ಪ್ರದೇಶದಲ್ಲಿ ಹೆಚ್ಚಾಗಿ ನಾದುರಸ್ಥಿತಿಯಲ್ಲಿರುತ್ತವೆ. ತಾವು ಹೇಳಿದ ಹಾಗೆ, ಈ ವರ್ಷದಿಂದ ಲೋಕೋಪಯೋಗಿ ಇಲಾಖೆಯಿಂದ ಇರಬಹುದು, ಸಿಆರ್‌ಎಫ್ ಫಂಡಿನಿಂದ ಇರಬಹುದು; ಹೆಚ್ಚಿನ ರಸ್ತೆಗಳು ದುರಸ್ಥಿಯಾಗಿವೆ. ಇನ್ನೂ ಕೂಡ ನಮ್ಮ ಕ್ಷೇತ್ರದಲ್ಲಿರುವ ರಸ್ತೆಗಳು ಬಾಕಿ ಇರುವುದನ್ನು ನಾವು ಕಂಡಿರುತ್ತೇವೆ, ಮುಂದಿನ ದಿನಗಳಲ್ಲಿ ಖಂಡಿತವಾಗಿ ಅದು ಆಗುತ್ತದೆ ಎನ್ನುವ ನಿರೀಕ್ಷೆ ಇದೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಸದನದಲ್ಲಿ ಇರುವುದರಿಂದ ನಾನು ಅವರಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ, ಎಲ್ಲರೂ ಕೂಡ ವಾಹನ ತೆರಿಗೆಯನ್ನು ಕಟ್ಟುತ್ತಾರೆ. ಹಾಗಾಗಿ ಅವರೂ ಕೂಡ ಅಪೇಕ್ಷೆ ಮಾಡುತ್ತಾರೆ, ಒಳ್ಳೆಯ ರಸ್ತೆಗಳು ನಮಗೆ ಬೇಕು ಎನ್ನುವ ವಿಚಾರದಲ್ಲಿರುತ್ತಾರೆ. ಕಳೆದ ಎರಡು-ಮೂರು ವರ್ಷಗಳಿಂದ ರಸ್ತೆಗಳು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿಯಾಗಿರುವುದನ್ನು ನಾವು ಕಂಡಿರುತ್ತೇವೆ. ಆದರೂ ಕೂಡ ಇನ್ನು ಮುಂದಿನ ದಿನಗಳಲ್ಲಿ ಕೂಡ ಎಲ್ಲಾ ರಸ್ತೆಗಳ ಸುವ್ಯವಸ್ಥಿತವಾಗಿ ಆಗುವ ದೃಷ್ಟಿಯಿಂದ ಅದಕ್ಕೆ ಹೆಚ್ಚು ಗಮನವನ್ನು ಕೊಡಬೇಕು ಎನ್ನುವ ವಿಚಾರವನ್ನು ಈ ಸದನದ ಮೂಲಕ ಸರಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅದರೊಂದಿಗೆ ನಮ್ಮಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುವ ವಿದ್ಯಾರ್ಥಿ ನಿಲಯಗಳು ಇವೆ, ಅವು ತುಂಬಾ ತೊಂದರೆಯನ್ನು ಕಾಣುತ್ತಿವೆ. ನಮಗೆ ಗೊತ್ತಿರುವ ಹಾಗೆ ಕಟ್ಟಡಗಳ ಕೊರತೆ ಇವೆ. ವಾರ್ಡನ್‌ಗಳೂ ಕೂಡ ಪ್ರತಿಯೊಂದು ಹಾಸ್ಟೆಲ್‌ನಲ್ಲಿ ಇರುವುದಿಲ್ಲ ಮತ್ತು ಅಡಿಗೆಯನ್ನು ಮಾಡುವವರೂ ಸಹ ಇರುವುದಿಲ್ಲ ಎನ್ನುವುದನ್ನು ನಾವು ಕಂಡಿರುತ್ತೇವೆ. ಇದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ, ಆದರೂ ಕೂಡ ಅಲ್ಲಿ ವಸತಿಯ ದುರಸ್ಥಿ, ಹಾಗೂ ವಾರ್ಡನ್, ಅಡಿಗೆಯವರು ನೇಮಕವಾಗಿಲ್ಲ. ಆದಷ್ಟು ಶೀಘ್ರದಲ್ಲಿ ಬೇರೆ ಕಡೆಗಳಲ್ಲೂ ಇಂತಹ ಸಮಸ್ಯೆಗಳು ಇದೆ ಎಂದು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಎಲ್ಲಾ ಕಡೆಗಳಲ್ಲೂ ಕೂಡ ಅದನ್ನು ಆದಷ್ಟು ಶೀಘ್ರದಲ್ಲಿ ಮಾಡಬೇಕೆಂಬ ವಿಚಾರವನ್ನು ನಾನು ತಿಳಿಸುತ್ತಿದ್ದೇನೆ. ಉದಾಹರಣೆಗಾಗಿ ಹೇಳುವುದಾದರೆ, ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ಮೊರಾರ್ಜಿ ವಸತಿ ಶಾಲೆ ಇದೆ, ಸರ್ವೋದಯ ವಸತಿ ಶಾಲೆ ಇದೆ, ಈಗ ಆ ಕಟ್ಟಡಗಳಾದರೂ ಕೂಡ ಅಲ್ಲಿಗೆ ವರ್ಗಾವಣೆಗಳಾಗಿಲ್ಲ, ಕೆಲವೊಂದು ತಾಂತ್ರಿಕ ತೊಂದರೆಯಿಂದಾಗಿ

ಅದು ಆಗಿಲ್ಲ, ಕಟ್ಟಡಕ್ಕೆ ಕೊಡುವಂತಹ ಅನುದಾನವನ್ನು ಕೊಟ್ಟು ಆ ಮೂಲಕವಾಗಿ ಆದಷ್ಟು ಶೀಘ್ರದಲ್ಲಿ ಕಟ್ಟಡಗಳ ನಿರ್ಮಾಣವಾಗಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಇದರ ಒಟ್ಟಿಗೆ ಕರ್ನಾಟಕದ ರೈಲು ಯೋಜನೆಯಡಿಯ್ಲಲಿ ಈ ಸಾರಿ ಸ್ವಲ್ಪ ಹಣವನ್ನು ಮೀಸಲಾಗಿಟ್ಟಿದ್ದಾರೆ. ನಮ್ಮ ಕರಾವಳಿ ಜಿಲ್ಲೆಯ ಮಂಗಳೂರಿಗೆ ರೈಲಿನ ಯೋಜನೆಯಡಿಯಲ್ಲಿ ಗೇಜ್ ಪರಿವರ್ತನೆ ಆಗಬೇಕಾಗಿದೆ. ಕೆಲವು ವರ್ಷಗಳಿಂದ ನೆನಗುದಿಗೆ ಬಿದ್ದಿರುವಂತಹ ಈ ಯೋಜನೆ ಕರ್ನಾಟಕ ರೈಲು ಯೋಜನೆಯಡಿಯಲ್ಲಿ ತಾವು ಈ ಸಲದ 15 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. 2005ನೇ ಇಸವಿಯಲ್ಲಿ ಆ ಯೋಜನೆಯನ್ನು ಮುಗಿಸುವಂತಹ ವಿಚಾರ ಇಟ್ಟುಕೊಂಡಿದ್ದೀರಿ. ಅಷ್ಟು ಮುಂದಕ್ಕೆ ಹೋಗುವಂತಹದ್ದು ಸರಿಯಲ್ಲ, ಇದರ ಬಗ್ಗೆ ನಾನು ಏನು ಹೇಳುವುದೆಂದರೆ, ಬರುವ ವರ್ಷದಲ್ಲಿ ಆ ಕಾರ್ಯ ಆಗಬೇಕು; ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂಗಳೂರು ಒಂದು ಪ್ರದೇಶ, ಆ ಪ್ರದೇಶಕ್ಕೆ ಹೋಗಬೇಕಾದರೆ ಅದು ಗೇಜ್ ಪರಿವರ್ತನೆಯಾಗಿ ಆ ಮೂಲಕವಾಗಿ ನಮ್ಮ ಸಾಮಗ್ರಿಗಳು ಬೇರೆ ಬೇರೆ ಕಡೆಗಳಲ್ಲಿ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆ ಒಂದು ದೃಷ್ಟಿಯಿಂದಾಗಿ ಮಂಗಳೂರು ಗೇಜ್ ಪರಿವರ್ತನೆಯ ಕೆಲಸ ತ್ವರಿತ ಗತಿಯಲ್ಲಿ ಆಗಬೇಕೆಂದೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಇದರ ಜೊತೆಯಲ್ಲಿ ನನ್ನ ಕ್ಷೇತ್ರವಾದ ಬೆಳ್ತಂಗಡಿಯಲ್ಲಿ ರಾಷ್ಟ್ರೀಯ ಉದ್ಯಾನವನ ಮತ್ತು ಅರಣ್ಯ ಪ್ರದೇಶ 1000ಕ್ಕೂ ಮಿಕ್ಕಿ ಅಲ್ಲಿ ವಾಸವಾಗಿರುವಂತಹ ಮಲೆಕುಡಿಯರು ಇದ್ದಾರೆ. ಈಗಾಗಲೇ ನನಗೆ ತಿಳಿದಿರುವಂತೆ ಅರಣ್ಯ ಇಲಾಖೆಯವರು ಅವರಿಗೆ ಕಿರುಕುಳ ಕೊಡುವುದನ್ನು ನಾನು ಕೇಳಿದ್ದೇನೆ. ನೀವು ಅಲ್ಲಿಂದ ಹೋಗಬೇಕು, ಅದು ರಾಷ್ಟ್ರೀಯ ಉದ್ಯಾನ ಅಥವಾ ಅದು ಅರಣ್ಯ ಪ್ರದೇಶವಾಗಿರುತ್ತದೆ, ನೀವು ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲವೆಂಬ ವಿಚಾರವನ್ನು ಹೇಳಿದ್ದಾರೆ. ಕೆಲವೊಂದು ಸಂದರ್ಭದಲ್ಲಿಯೂ ಕೂಡ ಈ ಸದನದ ಮೂಲಕ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ; ನನ್ನ ಕ್ಷೇತ್ರ ಮಾತ್ರವಲ್ಲ ನೆರೆಯ ಪುತ್ತೂರು, ಬಂಟ್ವಾಳ ಸುಳ್ಯವಿರಬಹುದು, ಆ ಕ್ಷೇತ್ರದಲ್ಲಿಯೂ ಕೂಡ, ಚಿಕ್ಕಮಗಳೂರು ಭಾಗದಲ್ಲಿಯೂ ಕೂಡ ಇರಬಹುದು, ಅವರುಗಳು ಕಾಡಿನಲ್ಲಿಯೇ ವಾಸ ಮಾಡಿಕೊಂಡು, ಕಾಡನ್ನು ರಕ್ಷಿಸುತ್ತಿರುವಂತಹ ಮಲೆಕುಡಿಯ ಸಮಾಜದವರು, ಪರಿಶಿಷ್ಠ ಜನಾಂಗದವರು ಆಗಿದ್ದಾರೆ. ಅವರನ್ನು ಈಗ ಒಕ್ಕಲೆಬ್ಬಿಸುವಂತಹ ವಿಚಾರವನ್ನು, ತಾವೀಗ ಸಭೆಯನ್ನು ಮಾಡಿಕೊಂಡು ಅವರಿಗೆ ಇಂತಿಷ್ಟು ಪರಿಹಾರವನ್ನು ಕೊಡುವ ಯೋಜನೆಯನ್ನು ಮಾಡುತ್ತಿದ್ದೀರೆಂದು ನನ್ನ ಗಮನಕ್ಕೆ ಬಂದಿದೆ. ಹಾಗಾದರೆ, ಅವರುಗಳು ಅಲ್ಲಿಯೇ ಇರಬೇಕಾದರು, ಅವರು ಅಲ್ಲಿಯೇ ಇರಬೇಕು, ಅದು ರಾಷ್ಟ್ರೀಯ ಉದ್ಯಾನವಿರಬಹುದು, ಅದು ಇದ್ದರೂ ಕೂಡ ಅವರುಗಳು ವಾಸವಿದ್ದ ಜಾಗವನ್ನು ಹೊರತುಪಡಿಸಿ ಅದನ್ನು ಬೇರೆಯಾಗಿ ಬಿಟ್ಟು ಅವರುಗಳು ಹೋಗುವಂತಹ ರಸ್ತೆಗಳ ವ್ಯವಸ್ಥೆಯನ್ನು ಮಾಡಿಸಿ ಅಲ್ಲಿಯೇ ಅವರುಗಳು ಉಳಿದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು ಎಂಬ ವಿಚಾರದಲ್ಲಿಯೂ ಕೂಡ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಈಗಿಂದೀಗಲೇ ಅವರುಗಳಿಗೆ ಕಿರುಕುಳ ಕೊಡುವುದನ್ನು ತಕ್ಷಣದಿಂದ ನಿಲ್ಲಿಸಬೇಕು; ನನ್ನ ಗಮನಕ್ಕೆ ಬಂದ ಹಾಗೆ ಒಬ್ಬ ಸುತ್ಲೂರು ಗ್ರಾಮದ ನಿವಾಸಿಗೆ ಅಲ್ಲಿಯ ಪರಿಶಿಷ್ಠ ವರ್ಗದವರಿಗೆ ಅರಣ್ಯ ಇಲಾಖೆಯವರು ರಾಷ್ಟ್ರೀಯ ಉದ್ಯಾನವನದವರು ಕಿರುಕುಳವನ್ನು ಕೊಟ್ಟಿದ್ದಾರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಮುಂದೆ ಆ ರೀತಿಯಾಗಿ ಆಗಬಾರದು ಎಂಬ

ವಿಚಾರ, ಆದರ ಜೊತೆಯಲ್ಲಿ ನಾನು ಕಳೆದ ಎರಡು ಮೂರು ವರ್ಷಗಳಿಂದಲೂ ಈ ಒಂದು ಪ್ರಸ್ತಾಪವನ್ನು ಮಾಡುತ್ತಲೇ ಬಂದಿದ್ದೇನೆ. ಈ ಸದನದಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರಿದ್ದಾರೆ, ಅದು ಹಾಗೆಯೇ ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವುದೇ ಆಗಿದೆ. ಸಂಸ್ಥೆಯಿಂದ ಚಿಕ್ಕಮಂಗಳೂರು ತಾಲ್ಲೂಕು ಎಳನೀರು ದಿಡುಪೆ, ಮತ್ತು ಧರ್ಮಸ್ಥಳ, ಅಲ್ಲಿಗೆ ಹೋಗುವುದಕ್ಕೆ ಹತ್ತಿರದ ಮಾರ್ಗವಾಗಿರುವಂತಹದ್ದು. ಎಳೆನೀರು ಎಂಬುದು ನಮ್ಮ ಬೆಳ್ತಂಗಡಿ ತಾಲ್ಲೂಕಿನ ಒಂದು ಕ್ಷೇತ್ರ, ಅಲ್ಲಿಂದ ಬರಬೇಕಾದರೆ ಸಾಧಾರಣವಾಗಿ 7-8 ಕಿಲೋಮೀಟರ್ ರಸ್ತೆ ರಾಷ್ಟ್ರೀಯ ಉದ್ಯಾನವನದ ಒಳಗಡೆ ಬರುತ್ತದೆ. ರಾಷ್ಟ್ರೀಯ ಉದ್ಯಾನವನದ ಒಳಗಡೆ ಕಚ್ಚಾರಸ್ತೆಗಳು ಇದೆ. ನಾನು ಮಾನ್ಯ ಅರಣ್ಯ ಸಚಿವರು ಮತ್ತು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಹೇಳುವುದೇನೆಂದರೆ, ಈ ಬಗ್ಗೆ ನಾನು ಅರಣ್ಯ ಸಚಿವರಲ್ಲಿಯೂ ಕೂಡ ಪ್ರಸ್ತಾಪವನ್ನು ಮಾಡಿದ್ದೇನೆ. ಎರಡು ಕಡೆಗಳಲ್ಲಿ ತಾವು ಆ ಗೇಟನ್ನು ಮಾಡಿ ಹಗಲು ಹೊತ್ತಿನಲ್ಲಿ ಮಾತ್ರ ಅಲ್ಲಿ ಸಂಚಾರಕ್ಕೆ ಯೋಗ್ಯವಾಗುವಂತೆ ಮಾಡಬೇಕು. ಆಗ ಒಂದು ಭಾಗದ, ಪ್ರದೇಶದ ಜನರಿಗೆ ಅಲ್ಲಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದರ ಜೊತೆಯಲ್ಲಿ ಪ್ರವಾಸಿಗರಿಗೂ ಕೂಡ ಶೃಂಗೇರಿ, ಹೊರನಾಡು, ಧರ್ಮಸ್ಥಳ, ಸುಬ್ರಮಣ್ಯಕ್ಕೆ ಹೋಗಲಿಕ್ಕೆ ಅದರಿಂದಾಗಿ ಅನುಕೂಲವಾಗುತ್ತದೆಂಬ ವಿಚಾರವನ್ನು ಕೂಡ ನಾನು ಹೇಳಿದ್ದೇನೆ. ಹಾಗಾಗಿ ನಾನು ತಮ್ಮ ಗಮನಕ್ಕೆ ತರುವುದಿಷ್ಟೆ: ಈ ಒಂದು ರಸ್ತೆಯ ಅಭಿವೃದ್ಧಿಯೂ ಕೂಡ ನನ್ನ ಕ್ಷೇತ್ರದಲ್ಲಿ ಇನ್ನು ಬೇರೇನೂ ಹೇಳುವುದಕ್ಕೆ ಇಚ್ಛೆಪಡದೆ, ನಾನು ಹೇಳುವಂತಹದ್ದು ನಮ್ಮ ಭಾಗದಲ್ಲಿ ಅಡಿಕೆ ಬೆಳೆಗಾರರು ಜಾಸ್ತಿ ಇದ್ದಾರೆ, ಅವರ ಒಂದು ನೋವನ್ನು ತಾವು ಕಡಿಮೆ ಮಾಡುವ ದೃಷ್ಟಿಯಿಂದ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಹಾಗೆಯೇ ಮಾರಾಟ ತೆರಿಗೆಯನ್ನು ಕಡಿಮೆ ಮಾಡಬೇಕು, ಟಿಒಟಿಯನ್ನು ಕಡಿಮೆ ಮಾಡಬೇಕು, ಅಂತೆಯೇ ಎಪಿಎಂಸಿಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಕೂಡ ರೈತರಿಗೆ ದಾಸ್ತಾನು ಇಡಲಿಕ್ಕೆ ಬೇಕಾಗುವಂತಹ ಗೋದಾಮುಗಳನ್ನು ನಿರ್ಮಾಣ ಮಾಡಬೇಕು, ಎಪಿಎಂಸಿಗಳಲ್ಲಿಯೇ ಮಾರಾಟರಾಗುವಂತೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ವಿಚಾರವನ್ನು ತಮ್ಮ ಮುಂದಿಟ್ಟು ಈ ಎರಡು ಮಾತುಗಳನ್ನು ಅಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ಉಪಾಧ್ಯಕ್ಷರಿಗೆ ಮಗದೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ 2002-03ನೇ ಸಾಲಿನ ಆಯವ್ಯಯದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರತಕ್ಕಂಥ ತಮಗೆ ನಾನು ವಂದನೆಗಳನ್ನು ಸಲ್ಲಿಸಿ, ಈ ಪ್ರಸ್ತಾವನೆಯ ವಿರೋಧವಾಗಿ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಆಯವ್ಯಯದಲ್ಲಿ ಬಹಳ ಮುಖ್ಯವಾಗಿ, ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಬಹಳ ತೀವ್ರವಾಗಿರತಕ್ಕಂಥ ಕ್ರಮಗಳನ್ನು ನಾವು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷಿಸಿದ್ದೆವು. ಅವರು ಈ ಹಿಂದೆ ಮಂಡಿಸಿರತಕ್ಕಂಥ 2000-01 ಮತ್ತು 2001-02ನೇ ಸಾಲಿನ ಆಯವ್ಯಯಗಳನ್ನು ಓದಿದ ಮೇಲೆ ನಮಗೆ ಸ್ವಲ್ಪ ಭರವಸೆ ಬಂದಿತ್ತು. ಆದರೆ, ದುರಾದೃಷ್ಟವಶಾತ್, ಅವರ ನಡೆ ಮತ್ತು ನುಡಿಗೆ ಬಹಳ ವ್ಯತ್ಯಾಸ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಆದರ ಜೊತೆಗೆ, 2000-01 ಮತ್ತು 2001-02ನೇ ಸಾಲಿನ ಆಯವಯ್ಯಗಳಲ್ಲಿ ಮಾಡಿರುವ ಘೋಷಣೆಗಳನ್ನು

ಕಾರ್ಯಗತ ಮಾಡಲು, ಹಾಕಿಕೊಂಡಿರುವ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿಮಂಡಲ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಅದರ ಜೊತೆಗೆ, ರಾಜ್ಯದ ಜನತೆ ಇಂದು ಎದುರಿಸುತ್ತಿರುವ ವಿದ್ಯುತ್ತಿನ ಅಭಾವ ಮತ್ತು ಕೊರತೆಗೆ ಈ ಆಯವ್ಯಯದಲ್ಲಿ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ. ಕುಡಿಯುವ ನೀರಿಗೋಸ್ಕರ ಜನರು ಪರಿತಪಿಸುತ್ತಿದ್ದು, ಅದಕ್ಕೂ ಯಾವುದೇ ರೀತಿಯ ಪರಿಹಾರ ಈ ಸರ್ಕಾರದಿಂದ ಸಿಕ್ಕಿಲ್ಲ. ಇವುಗಳ ಜೊತೆಗೆ, ಬಹಳ ಮುಖ್ಯವಾಗಿ, ಬೆಳೆ ಹಾನಿಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೂ ಯಾವುದೇ ರೀತಿಯ ಪರಿಹಾರ ಈ ಆಯವ್ಯಯದಲ್ಲಿ ಇಲ್ಲದೇ ಇರತಕ್ಕಂಥಾದ್ದು ಅತ್ಯಂತ ದುಃಖಕರವಾಗಿರತಕ್ಕಂಥ ವಿಚಾರ. ದೇಶದ ಅನೇಕ ಮಾಧ್ಯಮದವರು ಬಿಂಬಿಸಿರುವ ಹಾಗೆ ನಮ್ಮ ಮುಖ್ಯಮಂತ್ರಿಗಳು ದೇಶದ ನಂಬರ್ ಒನ್ ಮುಖ್ಯಮಂತ್ರಿಗಳು. ಆ ರೀತಿ ಇವರು ದೇಶದ ನಂಬರ್ ಒನ್ ಮುಖ್ಯಮಂತ್ರಿಗಳು ಆಗಿದ್ದರೆ, ತಮ್ಮ ಆಯವ್ಯಯದಲ್ಲಿ ಇವರು 1,750 ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸುತ್ತಿರಲಿಲ್ಲ. 1,375 ಕೋಟಿ ರೂಪಾಯಿಗಳ ಕೊರತೆ ಇದೆ. ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಬರತಕ್ಕಂಥಾದ್ದರಲ್ಲಿ 500 ಕೋಟಿ ರೂಪಾಯಿ ಕೊರತೆಯಾಗಿದೆ ಎನ್ನುವುದನ್ನು 'ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ರಾಜ್ಯದಲ್ಲಿ ತೆರಿಗೆ ಸಂಗ್ರಹಣೆ ಮಾಡತಕ್ಕಂಥಾದ್ದರಲ್ಲಿ 735 ಕೋಟಿ ರೂಪಾಯಿಗಳ ಕೊರತೆಯಾಗಿದೆ. ತೆರಿಗೆಯೇತರ ಸಂಗ್ರಹಣೆಯಲ್ಲಿ 90 ಕೋಟಿ ರೂಪಾಯಿಗಳ ಕೊರತೆಯಾಗಿದೆ. ಇದು ಮುಖ್ಯಮಂತ್ರಿಗಳ ಎಫಿಷಿಯೆನ್ಸಿಯೇ? ಇವರ ಆಡಳಿತದ ದಕ್ಷತೆಯೇ? ಹೀಗಾಗಲು ಕಾರಣವೇನು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಜನಗಳನ್ನು ಇವರು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದರೆ ಅದನ್ನು ತಿಳಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯವನ್ನು ನಾನು ಸಾರಾಸಗಟಾಗಿ ತಿರಸ್ಕಾರ ಮಾಡಲು ಹೋಗುತ್ತಿಲ್ಲ.' ಇವರ ವೈಫಲ್ಯತೆಯ ಜೊತೆಗೆ, ಕಾರ್ಗತ್ತಲಲ್ಲಿ ಕೆಲವು ಬೆಳ್ಳಿಯ ಮೋಡಗಳನ್ನು ಸಹ ನಾವು ನೋಡಬೇಕಾಗುತ್ತದೆ. ಕೇವಲ ವಿರೋಧ ಮಾಡುವುದಕ್ಕೋಸ್ಕರವಾಗಿ ವಿರೋಧ ಪಕ್ಷದವರು ವಿರೋಧ ಮಾಡುತ್ತಾರೆ ಎಂದು ಹೇಳುವಂತಾಗಬಾರದು. ನಾನು ಮತ್ತು ನಮ್ಮ ಪಕ್ಷದವರು ಆ ರೀತಿ ಮಾಡಲು ತಯಾರಿಲ್ಲ. ಏಕೆಂದರೆ, ಸರ್ಕಾರವನ್ನು ನಡೆಸಿರುವವರರು ನಾವು, ಮುಂದೆಯೂ ಸರ್ಕಾರವನ್ನು ನಡೆಸತಕ್ಕಂಥವರು ನಾವು. ಇತ್ತೀಚೆಗೆ ನಡೆದ ಕನಕಪುರ ಲೋಕಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಮುಂದಿನ ದಿನಗಳಲ್ಲಿ ಬರತಕ್ಕಂಥ ಗೋಡೆಯ ಮೇಲಿನ ಬರಹ ಎನ್ನುವುದನ್ನು ತಾವ್ಯಾರೂ ಮರೆಯಬೇಡಿ.

2000-01ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದರು. ಪವರ್ ರಿಫಾರ್ಮ್ಸ್ ಬಗ್ಗೆ ಮಾತನಾಡಿದ್ದರು. ವರ್ಲ್ಡ್ ಬ್ಯಾಂಕ್ ಲೋನ್ ಬಗ್ಗೆ ಇಡೀ ರಾಜ್ಯದ ಗಮನವನ್ನು ಸೆಳೆದಿದ್ದರು. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಪವರ್ ರಿಫಾರ್ಮ್ಸ್ ಬಗ್ಗೆ ಕರ್ನಾಟಕದಲ್ಲಿ ಮೊದಲನೇ ಬಾರಿಗೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದು 1997ನೇ ಇಸವಿಯಲ್ಲಿ, ದಿವಂಗತ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕರ್ನಾಟಕವನ್ನು ಗಮನ ಸೆಳೆಯುವ ರಾಜ್ಯ ಎಂದು ವರ್ಲ್ಡ್ ಬ್ಯಾಂಕ್‌ನವರು ಗುರುತು ಮಾಡಿದ್ದಾರೆ ಎನ್ನುವ ಬಗ್ಗೆ

ಮತ್ತೊಂದು ಶಹಭಾಸ್‌ಗಿರಿಯನ್ನು ತಾವು ತೆಗೆದುಕೊಂಡಿದ್ದೀರಿ. ಗಮನ ಸೆಳೆಯುವ ರಾಜ್ಯ ಎಂದು ಗುರುತು ಮಾಡಿದ್ದು 1996-97ರಲ್ಲಿ, ಈಗ ಅಲ್ಲ. ವರ್ಲ್ಡ್ ಬ್ಯಾಂಕಿನ ಯಾವುದೇ ಒಂದು ಲೋನ್ ಬರಬೇಕಾದರೆ 3-4-5 ವರ್ಷಗಳ ಕಾಲ ಕಷ್ಟ ಬೀಳಬೇಕಾಗುತ್ತದೆ ಎನ್ನುವ ಅರಿವೂ ಸಹ ನಮಗೆ ಇದೆ. ಆದರೆ ಸರ್ಕಾರ ಎಲ್ಲಿ ವಿಫಲವಾಗಿದೆ ಎನ್ನುವುದನ್ನು ಹೇಳುವುದಕ್ಕೆ ಮೊದಲು ಅವರ ಕೆಲವು ಘೋಷಣೆಗಳನ್ನು ಹೇಳುತ್ತೇನೆ. ನಿಮ್ಮ ಭೂಮಿಯ ಕಾರ್ಯಕ್ರಮ. ಇದು ಈ-ಗವರ್ನೆನ್ಸ್ ವಿಚಾರದಲ್ಲಿ ಸ್ವಲ್ಪಮಟ್ಟಿನ ಯಶಸ್ಸನ್ನು ಗಳಿಸಿದೆ. ಇನ್ನು ಸ್ತ್ರೀಶಕ್ತಿ ಕಾರ್ಯಕ್ರಮ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲು ಬಯಸುತ್ತೇನೆ, ಈ ಕಾರ್ಯಕ್ರಮಕ್ಕೆ ಸರಕಾರದಿಂದ ಬಿಡುಗಡೆ ಮಾಡಬೇಕಾಗಿರತಕ್ಕಂಥ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನಿಜವಾಗಿ ಇದು ಒಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಹಳ್ಳಿಗಳಲ್ಲಿರತಕ್ಕಂಥ ಬಡ ಹೆಣ್ಣುಮಕ್ಕಳು, ಕೂಲಿ ಮಾಡತಕ್ಕಂಥ ಹೆಣ್ಣುಮಕ್ಕಳು ಒಳ್ಳೆಯ ಸಂಘಟನೆಯನ್ನು ಮಾಡಿಕೊಂಡಿದ್ದಾರೆ. ಅವರು ಬಹಳ ನಿರೀಕ್ಷೆಯಲ್ಲಿದ್ದಾರೆ. ಆದರೆ ಅದಕ್ಕೆ ಆರ್ಥಿಕ ವ್ಯವಸ್ಥೆಯನ್ನು ಮಾಡುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಸ್ತ್ರೀಶಕ್ತಿ ಕಾರ್ಯಕ್ರಮದ ಹಣವನ್ನು ಬಿಡುಗಡೆ ಮಾಡಿಸಿ ಕೊಡಿ ಎಂದು ನಮ್ಮ ಶಾಸಕರು ಹೋದ ಪ್ರತಿಯೊಂದು ಕಡೆಗಳಲ್ಲೂ ಕೇಳುತ್ತಾರೆ. ಬೀದರ್ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ತಯಾರು ಮಾಡತಕ್ಕಂಥ ವಸ್ತುಗಳಿಗೆ ಬೇಕಾಗಿರತಕ್ಕಂಥ ಮಾರುಕಟ್ಟೆಯನ್ನು ತಯಾರು ಮಾಡದೇ, ಸ್ತ್ರೀ ಶಕ್ತಿ ಎಂದು ನೀವು ಮಾಡಿರತಕ್ಕಂಥ ಕಾರ್ಯಕ್ರಮ 'ಹುಲಿ ಸವಾರಿ' ಆಗಬಾರದು ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈ ಕಾರ್ಯಕ್ರಮವನ್ನು ನಾವು ಸ್ವಾಗತ ಮಾಡಿದ್ದೇವೆ. 400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಅವತ್ತು ನೀವು ಹೇಳಿದ್ದಿರಿ. ಇದರ ಅವಶ್ಯಕತೆ 125 ಕೋಟಿ ರೂಪಾಯಿಗಳು ಎಂದು ಹೇಳಿದ್ದಿರಿ. ಮಾನ್ಯ ಕೃಷ್ಣರವರು ಹಳೆಯ ಕರ್ನಾಟಕದವರು. ಅಂದರೆ ರಾಗಿ ಬೆಳೆಯತಕ್ಕಂಥ ಪ್ರದೇಶದಿಂದ ಬಂದಿರತಕ್ಕಂಥವರು. ಹಳೆಯ ಕರ್ನಾಟಕ ಅನೇಕ ಕಡೆಗಳಲ್ಲಿ ಇವತ್ತು ಸರ್ಕಾರ ರಾಗಿಯನ್ನು ಕೊಳ್ಳುತ್ತಿಲ್ಲ. 400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಒಂದು ಕಡೆ ಘೋಷಣೆ ಮಾಡಿದ್ದೀರಿ. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರಾಗಿಯನ್ನು ಕೊಳ್ಳಲು ನಿಮಗಿರತಕ್ಕಂಥ ತೊಂದರೆಯೇನು? ಕೊಳ್ಳುವ ಶಾಸ್ತ್ರ ಮಾಡಲು 10, 20, 30 ಲಾರಿಗಳಷ್ಟು ರಾಗಿಯನ್ನು ತೆಗೆದುಕೊಂಡಿದ್ದೀರಿ. ಉಳಿದ ರಾಗಿಯನ್ನು ತೆಗೆದುಕೊಳ್ಳುತ್ತಿಲ್ಲ. ಆವರ್ತ ನಿಧಿಗೆ ಬಂಡವಾಳ ಇಲ್ಲದೇ ಇರತಕ್ಕಂಥ ಬಡಾಯಿ ಸರ್ಕಾರ ನಿಮ್ಮದು. ನೀವು ಇದಕ್ಕೆ 400 ಕೋಟಿ ರೂಪಾಯಿಗಳನ್ನು ಕೊಡಲಿಲ್ಲ. ತಾವೇ ಹೇಳಿರುವ ಹಾಗೆ ಕೇವಲ 125 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ.

ಇನ್ನು ಆಶ್ರಯ ಯೋಜನೆ. ಈ ಯೋಜನೆಯಲ್ಲಿ ಸ್ವಲ್ಪಮಟ್ಟಿನ ಪ್ರಗತಿಯನ್ನು ನೀವು ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಆಶ್ರಯ ಸಮಿತಿಗಳು ಎಷ್ಟರವಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ತಾವು ದಯವಿಟ್ಟು ನೋಡಬೇಕಾಗುತ್ತದೆ. ತಾವು ಆಡಳಿತಕ್ಕೆ ಬಂದು ಎರಡು ವರ್ಷಗಳಾಗಿದೆ, ಈ ಅವಧಿಯಲ್ಲಿ ಎರಡೂವರೆ ಲಕ್ಷ ಮನೆಗಳನ್ನು ಕಟ್ಟಿದ್ದೀರಿ; ಕಟ್ಟಿರತಕ್ಕಂಥ ಮನೆಗಳಲ್ಲಿ ಎಷ್ಟು ಮನೆಗಳಿಗೆ ಬಿಲ್ ಅನ್ನು ಕೊಟ್ಟಿದ್ದಾರೆ ಎನ್ನುವ ಲೆಕ್ಕಾಚಾರವನ್ನು ನೀವು ಹಾಕಿಸಿ. ಈ ಯೋಜನೆಯಿಂದ ಪ್ರಯೋಜನವನ್ನು ಪಡೆಯತಕ್ಕಂಥ ಫಲಾನುಭವಿಗಳು ಎರಡು

ಸಾವಿರ ರೂಪಾಯಿಗಳನ್ನು ಕೊಡದಿದ್ದರೆ, ಅವರಿಗೆ ಮನೆಗಳು ಸಿಗುತ್ತಿಲ್ಲ. ಈ ಯೋಜನೆಯ ಬಗೆಗಿನ ಕೆಲವು ದಾಖಲಾತಿಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಆಶ್ರಯ ಯೋಜನೆಯ ಸಮಿತಿಯ ಸದಸ್ಯರುಗಳಲ್ಲಿ ಹೊಂದಾಣಿಕೆ ಇಲ್ಲ. ನಾನು ಕೊಡುವ ಲಿಸ್ಟ್ ಆಗಬೇಕು ಎಂದು ಪ್ರತಿ ಸದಸ್ಯರೂ ಹೇಳುತ್ತಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮುಂದಿನ ಮೂರು ವರ್ಷಗಳಲ್ಲಿ 11 ಲಕ್ಷ ಮನೆಗಳನ್ನು ಕಟ್ಟಬೇಕು ಎಂದು ನೀವು ಯೋಜನೆ ರೂಪಿಸಿದ್ದೀರಿ. ನೀವು ಇದೇ ಪ್ರಮಾಣದಲ್ಲಿ ಹೋದರೆ 11 ಲಕ್ಷ ಮನೆಗಳನ್ನು ಕಟ್ಟಲು ಆಗುವುದಿಲ್ಲ. ಇದರ ಕಡೆಗೆ ತಮ್ಮ ಗಮನವನ್ನು ಕೊಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಮೂರು ಆಯವ್ಯಯಗಳ ಒಂದು ವಿಹಂಗಮ ನೋಟವನ್ನು ನೋಡಿದಾಗ ನಮಗೆ ಏನು ಅನ್ನಿಸುತ್ತದೆ ಎನ್ನುವುದನ್ನು ಹೇಳುತ್ತೇನೆ. 2000ದ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಆಯವ್ಯಯವನ್ನು ಮಂಡಿಸಿದರು. ಈ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಮುಖ್ಯವಾಗಿ ಹೇಳಿದಂಥ ವಿಚಾರವನ್ನು ಹೇಳುತ್ತೇನೆ. ನೀರಾವರಿ ಯೋಜನೆಗೆ 2000ನೇ ಇಸವಿಯಲ್ಲಿ ಶೇಕಡ 39.58 ಇದ್ದದ್ದು ಪ್ರಸಕ್ತ ಆಯವ್ಯಯದಲ್ಲಿ ಎರಡೇ ವರ್ಷದ ಒಳಗಡೆ ಶೇಕಡ 32.4ಕ್ಕೆ ಇಳಿದಿದೆ, ಅಂದರೆ ನಿಮ್ಮ ಇನ್‌ವೆಸ್ಟ್‌ಮೆಂಟ್ ಪ್ರೈಯಾರಿಟೀಸ್ ಏನು ಎನ್ನತಕ್ಕಂಥದ್ದು ಇವತ್ತು ರಾಜ್ಯದ ಜನತೆಗೆ ತಾವು ತಿಳಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ದೂರದೃಷ್ಟಿ ಇಲ್ಲದಿರತಕ್ಕಂಥ ಬಜೆಟ್ ಎಂದು ಹೇಳಲಿಕ್ಕೆ, ಇದೊಂದು ಬಹಳ ದೊಡ್ಡ ಉದಾಹರಣೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಗ್ರಾಮೀಣಾಭಿವೃದ್ಧಿಗೆ 2000ನೇ ಇಸವಿಯಲ್ಲಿ ಶೇಕಡ 4ರಷ್ಟು ಇದ್ದದ್ದು ಇವತ್ತು ಶೇಕಡ 2.75ಕ್ಕೆ ಇಳಿದಿದೆ. ಇದಕ್ಕೆ ಕಾರಣವೇನು? ಹೆಲ್ತ್ ಸೆಕ್ಟಾರ್‌ನಲ್ಲಿ ಶೇಕಡ 3.10 ಇದ್ದದ್ದು ಇವತ್ತು ಶೇಕಡ 2.2ಕ್ಕೆ ಇಳಿದಿದೆ. ಘೋಷಣೆಗಳನ್ನು ಮಾಡುವುದರಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಯಾರಿಗೂ ಸಹಿತ ಕಡಿಮೆ ಇಲ್ಲ. 2000ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣ ಮಾಡುತ್ತಾ-ವಿಶ್ವ ಬ್ಯಾಂಕ್‌ನವರು 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಕೊಡಲಿಕ್ಕೆ ದೃಢವಾದ ನಿಲುವನ್ನು ವ್ಯಕ್ತಮಾಡಿದ್ದಾರೆ. ಹುಡ್ಕೋ ಸಂಸ್ಥೆಯವರು 1600 ಕೋಟಿ ರೂಪಾಯಿಗಳು, ಎನ್.ಡಿ.ಡಿ.ಬಿ.ಯವರು 505 ಕೋಟಿ ರೂಪಾಯಿಗಳು, ಜಪಾನ್ ಸರ್ಕಾರದವರು 3600 ಕೋಟಿ ರೂಪಾಯಿಗಳು, ಅದಾದಮೇಲೆ ಕೇಂದ್ರ ಸರ್ಕಾರ ವಿದ್ಯುತ್ತಿನ ಸಿಸ್ಟಮ್ ಡೆವಲಪ್‌ಮೆಂಟ್‌ಗೆ 3500 ಕೋಟಿ ರೂಪಾಯಿಗಳ ಸಾಲ ಕೊಡುತ್ತಾರೆ ಎಂದು ಹೇಳಿದ್ದಾರೆ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ. ಅದೇನೆಂದರೆ, ಈ 21205 ಕೋಟಿ ರೂಪಾಯಿಗಳಷ್ಟು ಸಾಲವನ್ನು ತರಬೇಕೆಂದು ನಿಮ್ಮ ಮೊದಲನೇ ಬಜೆಟ್ ಏನಿತ್ತು, ಆ ಬಜೆಟ್‌ನ ಪರ್‌ಫಾರ್ಮೆನ್ಸ್‌ನ್ನು ಇಲ್ಲಿ ತಾವು ರಾಜ್ಯದ ಜನತೆಗೆ ತಿಳಿಸಬೇಕಾಗಿದೆ. 22 ಸಾವಿರ ಕೋಟಿ ರೂಪಾಯಿಗಳು ಬಂದಿದೆ ಎಂದು ಹೇಳಿದ್ದೀರಲ್ಲಾ, ಅದರಲ್ಲಿ ಎಷ್ಟು ಹಣ ಬಂದಿದೆ? ಎಂ.ಎಸ್.ಸಿ.ಗಳನ್ನು ಕರೆಸಿ, ಕೈಗಾರಿಕಾ ಸಚಿವರಾದ ಮಾನ್ಯ ದೇಶಪಾಂಡೆಯವರು ಕರ್ನಾಟಕ ತುಂಬಾ 50 ಸಾವಿರ ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಎಂದು ಹೇಳಿ ಡಂಗೂರ ಹೊಡೆದುಕೊಂಡರು. ಅದರ ಬಗ್ಗೆ ನಾನು ಕೇಳುತ್ತಿಲ್ಲ. ಈ ಪವಿತ್ರವಾಗಿರತಕ್ಕಂಥ ಬಜೆಟ್‌ನಲ್ಲಿ ತಾವು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ 20 ಸಾವಿರ ಕೋಟಿ ರೂಪಾಯಿಗಳು ಎಲ್ಲಿ ಹೋಯಿತು? ಎಷ್ಟು ಹಣ ಬಂದಿದೆ ಎಂಬುದನ್ನು ನಮ್ಮ ಗಮನಕ್ಕೆ,

ಸದನದ ಗಮನಕ್ಕೆ, ರಾಜ್ಯದ ಗಮನಕ್ಕೆ ತರಬೇಕು. ಇನ್ನು 2000ನೇ ಇಸವಿಯ ಬಜೆಟ್‌ನಲ್ಲಿ ಹನ್ನೊಂದು ಸಾವಿರ ಕೊಠಡಿಗಳನ್ನು ರಿಪೇರಿ ಮಾಡಿದ್ದೇನೆ ಎಂದು ತಾವು ಹೇಳಿದ್ದೀರಿ. ಪುನಃ ಈ ವರ್ಷ 11 ಸಾವಿರ ಕೊಠಡಿಗಳನ್ನು ರಿಪೇರಿ ಮಾಡುತ್ತಿದ್ದೀರಲ್ಲಾ, ಈ 30 ಸಾವಿರ ಕೊಠಡಿಗಳನ್ನು ಎಲ್ಲಿ ಕಟ್ಟಿದ್ದೀರಾ? ಈ ರೀತಿ ಘೋಷಣೆಗಳನ್ನು ಮಾಡಲಿಕ್ಕೆ ಏಕೆ ಹೊರಟಿದ್ದೀರಾ? ನಂತರ, ಒಂದು ಸಾವಿರ ಪ್ರೈಮರಿ ಹೆಲ್ತ್ ಸೆಂಟರ್‌ಗಳ ಸುಧಾರಣೆ ಎಂದು ಹೇಳಿದ್ದಾರೆ. ಯಾವ ಯಾವ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಸುಧಾರಣೆಯಾಗಿದೆ ಎಂದು ದಯವಿಟ್ಟು ಇಲ್ಲಿ ಯಾರಾದರೂ ಮಾನ್ಯ ಸದಸ್ಯರುಗಳು ಹೇಳಲಿ. 600 ವೈದ್ಯರನ್ನು ನೇಮಕ ಮಾಡುವುದು ಬಿಟ್ಟರೆ ಯಾವ ಪ್ರೈಮರಿ ಹೆಲ್ತ್ ಸೆಂಟರ್ ಇಂಪ್ರೂವ್ ಆಗಿದೆ ಎಂಬುದನ್ನು ಕೇಳಲಿಕ್ಕೆ ಬಯಸುತ್ತೇನೆ. ಜೊತೆಗೆ, ಕರ್ನಾಟಕ ಹೆಲ್ತ್ ಡೆವಲಪ್ ಮೆಂಟ್ ಸಿಸ್ಟಮ್‌ನಲ್ಲಿ 100 ಆಸ್ಪತ್ರೆಗಳನ್ನು ಇಂಪ್ರೂವ್ ಮಾಡುತ್ತೇವೆಂದು ಹೇಳಿದರು. ಎಲ್ಲಿ ಆಗಿದೆ? ಸ್ವಾಮಿ ಶ್ರೀಮಾನ್ ಜೆ.ಹೆಚ್. ಪಟೇಲರು ದಿವಂಗತರಾಗಿದ್ದಾರೆ. ಅವರ ಕಾಲದಲ್ಲಿ ಕಟ್ಟಿದಂಥ ಕಟ್ಟಡಗಳನ್ನು ನಿಮ್ಮ ಕೈಯಲ್ಲಿ ಉದ್ಘಾಟನೆ ಮಾಡಲಿಕ್ಕೆ ಆಗಿಲಿಲ್ಲ. ಅದಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ನಿಮ್ಮಿಂದ ಕೊಡಲಿಕ್ಕೆ ಆಗಲಿಲ್ಲ. ಆ ಆಸ್ಪತ್ರೆಗಳು ದೆವ್ವದ ಹಾಗೆ ಕಾಂಕ್ರಿಟ್ ಸ್ಟ್ರಕ್ಚರ್ಸ್ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಿಂತಿವೆ. ವೈದ್ಯರುಗಳಿಲ್ಲ, ಲ್ಯಾಬೊರೇಟರೀಸ್ ಇಲ್ಲ, ಹಾಸಿಗೆಗಳು ಇಲ್ಲ, ಡೈರೆಕ್ಟರ್ ಸ್ಯಾಂಕ್ಷನ್ ಮಾಡಿಲ್ಲ.

ಇನ್ನು ಜಲಸಂವರ್ಧನ ಕಾರ್ಯಕ್ರಮ. ಇವರು 2000ನೇ ಇಸವಿ ಬಜೆಟ್‌ನಲ್ಲಿ 25 ಸಾವಿರ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಶ್ರೀ ವಿಶ್ವೇಶ್ವರಯ್ಯ, ಮಹಾರಾಜರ ಕಾಲದ 50 ಸಾವಿರ ಕೆರೆಗಳಿವೆಯೆಂದೂ ಇದರಲ್ಲಿ 25 ಸಾವಿರ ಕೆರೆಗಳ ಹೂಳು ಎತ್ತುತ್ತೇವೆಂದು ಹೇಳಿರುವುದು, ಇದು ಯಾರನ್ನು ದಾರಿ ತಪ್ಪಿಸಲಿಕ್ಕೆ ಹೋಗಿದ್ದೀರಾ ಎಂದು ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಇನ್ನು ಸ್ವಚ್ಛ ಗ್ರಾಮಗಳ ಬಗ್ಗೆ ಹೇಳುತ್ತಾ ಒಂದು ಸಾವಿರ ಸ್ವಚ್ಛ ಗ್ರಾಮಗಳನ್ನು ನಾವು ಮಾಡುತ್ತೇವೆಂದು ಹೇಳಿದರು. ಇದು ನಿಮ್ಮ ಸರ್ಕಾರದ ಮೂರನೇ ವರ್ಷದ ಬಜೆಟ್. ಬಹಳ ಜಾಸ್ತಿ ಎಂದರೆ ಇನ್ನು ಒಂದು ಬಜೆಟ್‌ನ್ನು ನೀವು ಮಂಡನೆ ಮಾಡುತ್ತೀರಿ. ಕೊನೆಯ ವರ್ಷದ ಬಜೆಟ್ ಅದು ಎಲೆಕ್ಷನ್ ಬಜೆಟ್ ಆಗುತ್ತದೆ. ಆದ್ದರಿಂದ ನೀವು ಇನ್ನು ಒಂದೇ ಬಜೆಟ್‌ನ್ನು ಮಂಡನೆ ಮಾಡುವುದಕ್ಕೆ ಆಗುವಂಥಾದ್ದು. ಯಾವ ಗ್ರಾಮದಲ್ಲಿ ಸ್ವಚ್ಛ ಗ್ರಾಮದ ಕಾರ್ಯಕ್ರಮ ಪ್ರಾರಂಭವಾಗಿದೆ, ದಯಮಾಡಿ ಹೇಳಿ. ಟೆಂಡರನ್ನು ಕರೆದಿದ್ದಾರೆ. ಆ ಹಳ್ಳಿ ಜನ ಎರಡು ಲಕ್ಷ ರೂಪಾಯಿಗಳನ್ನು ಕಟ್ಟಬೇಕು, ಪಾಪ, ಅವರಿಂದ ಕಟ್ಟುವುದಕ್ಕೆ ಆಗದೆ ಅವರ ಪರವಾಗಿ ಟೆಂಡರುದಾರರೇ ಕಟ್ಟಿಬಿಟ್ಟಿದ್ದಾರೆ. ಎಷ್ಟು ಸ್ವಚ್ಛ ಗ್ರಾಮಗಳ ಕೆಲಸ ಆಗಿದೆ? ನಾವೆಲ್ಲಾ ಬಹಳ ಆಸೆಯಿಂದ ಇದ್ದೆವು. ನಿಮ್ಮ ನಿರೀಕ್ಷೆಗಳು ಯಾವ ರೀತಿ ಸುಳ್ಳಾಗಿವೆ, ನಿಮ್ಮ ಘೋಷಣೆಗಳು ಯಾವ ರೀತಿ ಸುಳ್ಳಾಗಿವೆ ಎನ್ನುವುದಕ್ಕೆ ಇದೊಂದು ತಾಜಾ ಉದಾಹರಣೆಯಾಗಿದೆ.

ಇನ್ನು ನಮ್ಮ ಮೈಸೂರು-ಬೆಂಗಳೂರು ರೋಡ್ ಇನ್ನೇನು ರೆಡಿ ಆಗಿಹೋಯಿತೆಂದು ನಮ್ಮ ಮಾನ್ಯ ಧರ್ಮಸಿಂಗ್ ಅವರು ಹೇಳಿದರು. ಎಷ್ಟು ಸಾರಿ ತಾವು ಘೋಷಣೆ ಮಾಡಿರುವುದು,

ಇನ್ನೇನು ನವೆಂಬರ್ ತಿಂಗಳಲ್ಲಿ ಈ ಕೆಲಸ ಪ್ರಾರಂಭವಾಯಿತು ಎಂದು ಹೇಳಿದಿರಿ. ಆದರೆ ಇನ್ನೂ ಪ್ರಾರಂಭವಾಗಿಲ್ಲ. ಈಗ ಆ ಕೆಲಸ1ವನ್ನು ಮಾಡಬೇಕೋ ಅಥವಾ ಬಿಡಬೇಕೋ ಎನ್ನುವ ವಿಚಾರ ಮಾಡುತ್ತಿದ್ದೀರಿ. ಇದಿಷ್ಟು 2000ನೇ ಇಸವಿಯ ಬಜೆಟ್‌ನ ವಿಚಾರವಾಯಿತು.

ಇನ್ನು 2001ನೇ ಇಸವಿಯ ತಮ್ಮ ಬಜೆಟ್ ಭಾಷಣವನ್ನು ಪ್ರಸ್ತಾಪ ಮಾಡುತ್ತೇವೆ. ಪೇಜ್ ನಂ.8ರಲ್ಲಿ "ನಾನೀಗ ಮಾನ್ಯ ಸದಸ್ಯರುಗಳಿಗೆ ಒಂದು ಸಂತೋಷದಾಯಕವಾದ ಸಂಗತಿಯನ್ನು ತಿಳಿಸಲು ಇಚ್ಛಿಸುತ್ತೇನೆ. ಮೇ 1 ರಿಂದ ... ನಾನು ಪುನರುಚ್ಚರಿಸುತ್ತೇನೆ. ಮೇ 1 ರಿಂದ, ಅಡೆತಡೆಯಿಲ್ಲದ, ಮೂರು ಫೇಸ್‌ನ ವಿದ್ಯುತ್‌ನ್ನು ರೈತರಿಗೆ ಒದಗಿಸಲಾಗುವುದು. ಇದು ರಾಜ್ಯದ ರೈತರಿಗೆ ನಾವು ನೀಡುತ್ತಿರುವ ಪವಿತ್ರ ಭರವಸೆಯಾಗಿದೆ."

ಇದಕ್ಕೆ 'ಬೊಗಳೆ' ಎನ್ನತಕ್ಕಂಥ ಶಬ್ದವನ್ನು ನಾನು ವಾಪಸ್ಸು ತೆಗೆದುಕೊಂಡುಬಿಟ್ಟೆ ಸ್ವಾಮಿ ಬೊಗಳೆ ಸುಳ್ಳು ಎಂದು ಹೇಳಿದರೆ ತಪ್ಪಾಗುತ್ತದೆ, ಅದನ್ನು ತಾವು ಕಡತದಿಂದ ತೆಗೆದುಹಾಕುತ್ತೀರಿ. ಇದು ಅಸತ್ಯ ಎಂದು ಹೇಳಿದರೂ ಸಹ ನೀವು ಕಡತದಿಂದ ತೆಗೆದುಹಾಕುತ್ತೀರಿ. ಸತ್ಯದಿಂದ ದೂರವಾಗಿರತಕ್ಕಂಥ ಮಾತು ಅಲ್ಲವೇ? ಇದು ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಕೇಳಲಿಕ್ಕೆ ಬಯಸುತ್ತೇನೆ. ಮೂರು ಫೇಸ್ ವಿದ್ಯುತ್‌ನ್ನು ಎಲ್ಲಿ ಕೊಡುತ್ತಿದ್ದೀರಿ ಸ್ವಾಮಿ ನಿಮ್ಮ ಸರ್ಕಾರದಿಂದ ರೈತರಿಗೆ ಎರಡು ಗಂಟೆ ಸಹ ಕರೆಂಟ್ ಕೊಡುವುದಕ್ಕೆ ಆಗುತ್ತಿಲ್ಲ. ಎರಡು ಗಂಟೆ ಅನ್‌ಇಂಟರ್‌ಪ್ಟೆಡ್ ಪವರ್ ಕೊಟ್ಟರೆ ಅದೇ ಹೆಚ್ಚು ಎಂದು ಭಾವಿಸಿದ್ದೀರಿ. ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆಯಿಂದಾಗಿ ಜನ ಪ್ರಾಣ ಬಿಡತಕ್ಕಂಥ ಸ್ಥಿತಿಗೆ ಬಂದಿದ್ದಾರೆ. ಪ್ರತೀ ದಿವಸ ಪೊಲೀಸ್‌ನವರು ಹೋಗಿ ನೀರು ಬಿಡಿಸತಕ್ಕಂಥ ಪರಿಸ್ಥಿತಿ ಬಂದಿದೆ. ಇನ್ನು ಪೇಜರ್ ನಂ. 14ರಲ್ಲಿ ಅತ್ಯಾಧುನಿಕ ಕಸಾಯಿಖಾನೆಯೊಂದನ್ನು ಬೆಂಗಳೂರು ನಗರದಲ್ಲಿ ಪ್ರಾರಂಭ ಮಾಡುತ್ತೇನೆ"

ಅಂದರೆ ಈ ವರ್ಷ ಮುಗಿದೇ ಹೋಗುತ್ತದೆ ಎಂದು ಹೇಳಿದರು. ಇದು ಇನ್ನೂ ಪ್ರಾರಂಭವಾಗಿಲ್ಲ. 16 ಜಿಲ್ಲೆಗಳಲ್ಲಿ ಕಸಾಯಿಖಾನೆ ಮಾಡುತ್ತೇನೆಂದು ಹೇಳಿದಿರಿ. ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ನಿಮಗೆ ತೊಂದರೆಯಾಗಿರುವಂಥಾದ್ದು ಏನು? ಮೊದಲನೇ ವರ್ಷ 2000ನೇ ಇಸವಿಯಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಿದ್ದಾಗ 100 ಆಸ್ಪತ್ರೆಗಳನ್ನು ಸರಿ ಮಾಡುತ್ತೇವೆಂದು ಹೇಳಿದವರು, 2001ನೇ ಇಸವಿಯ ಬಜೆಟ್ ಭಾಷಣದಲ್ಲಿ ಪೇಜ್ 21ರಲ್ಲಿ ತಾವು ಏನು ಹೇಳಿದ್ದೀರೆಂದರೆ-'ವಿಶ್ವಬ್ಯಾಂಕಿನ ನೆರವಿನಲ್ಲಿ 200 ಆಸ್ಪತ್ರೆಗಳ ಕಾರ್ಯಕ್ರಮ ಜಾರಿ ಮಾಡಿ 2002ರ ವೇಳೆಗೆ ಪೂರ್ಣಗೊಳಿಸುತ್ತೇನೆ' ಎಂದು ಹೇಳಿದಿರಿ. 2002ನೇ ಇಸವಿ ನಾಳೆಗೆ ಮುಗಿಯುತ್ತದೆ. ನಿಮ್ಮ ಭರವಸೆ ಎಲ್ಲಿಗೆ ಹೋಯಿತು ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಇದಾದಮೇಲೆ, 100 ಆಸ್ಪತ್ರೆಗಳನ್ನು ರಿಪೇರಿ ಮಾಡುತ್ತೇವೆಂದು ಮೊದಲನೇ ವರ್ಷದ ಬಜೆಟ್‌ನಲ್ಲಿ ಸರ್ಕಾರದವರು ಹೇಳಿದರು. ಎರಡನೇ ವರ್ಷದ ಬಜೆಟ್‌ನಲ್ಲಿ ಒಂದು ಸಾವಿರ ಪ್ರೈಮರಿ ಹೆಲ್ತ್ ಸೆಂಟರ್‌ಗಳ ಸುಧಾರಣೆ ಮಾಡುತ್ತೇವೆ ಎಂದು ಹೇಳಿದರು. ಅಂದರೆ ಕರ್ನಾಟಕದಲ್ಲಿ ಯಾವುದೇ ರಿಪೇರಿ ಆಗದಿರತಕ್ಕಂಥ ಆಸ್ಪತ್ರೆಗಳು ಉಳಿಯುವುದೇ ಇಲ್ಲ. ಎಷ್ಟು ಆಸ್ಪತ್ರೆಗಳ ಸುಧಾರಣೆಯಾಗಿದೆ ಎಂದು ತಾವು ದಯವಿಟ್ಟು ಡಾ॥ ಸುದರ್ಶನ್ ಅವರಿಗೆ ಹೇಳಿ ಸಮೀಕ್ಷೆಯನ್ನು ಮಾಡಿಸಿ. 2001ರ ಬಜೆಟ್ ಭಾಷಣದಲ್ಲಿ ಕೊಟ್ಟಂಥ ಭರವಸೆಗಳು ನಿಮಗೆ ಮರೆತುಹೋಗಿದೆ. 2001ರ

ಭರವಸೆ ಸಹ ನಿಮಗೆ ಮರೆತುಹೋಯಿತು. ಇನ್ನು ಕೆರೆಗಳ ವಿಚಾರದಲ್ಲಿ ಸ್ವಲ್ಪ ವಾಸ್ತವಕ್ಕೆ ಇಳಿದಿದ್ದೀರಿ. 2000 ಇಸವಿಯಲ್ಲಿ 25 ಸಾವಿರ ಕೆರೆಗಳ ಹೂಳು ಎತ್ತಿಹಾಕುತ್ತೇವೆಂದು ಹೇಳಿದವರು, 2001ನೇ ಇಸವಿಯ ಬಜೆಟ್ ಭಾಷಣದಲ್ಲಿ 5000ಕ್ಕೆ ಇಳಿದಿದ್ದೀರಿ. ಈ ವರ್ಷ ಎಷ್ಟಕ್ಕೆ ಇಳಿಸುತ್ತೀರೋ ನನಗಂತೂ ಗೊತ್ತಿಲ್ಲ. ಈಗ ಪುನಃ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 5000 ಕೆರೆಗಳ ಹೂಳು ಎತ್ತುತ್ತೇವೆಂದು ಹೇಳಿದ್ದೀರಿ. ನಮಗೆ ಲೆಕ್ಕಾಚಾರ ಬರುವುದಿಲ್ಲವೇ? ನಿಮ್ಮ ಲೆಕ್ಕಾಚಾರ ನಮಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರನ್ನು ದಾರಿ ತಪ್ಪಿಸತಕ್ಕಂಥ ಮಂತ್ರಿಗಳು ಇದ್ದಾರೆ. ತಾವು ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿ ಊಟ ಕೊಡತಕ್ಕಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಿರಿ. ಈಗ ಉತ್ತರ ಕರ್ನಾಟಕದಲ್ಲಿ ಬಿಸಿ ಮಾತ್ರ ಬಹಳ ಚೆನ್ನಾಗಿದೆ ಸ್ವಾಮಿ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರು. ನಿಜ, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ಆರ್ಥಿಕವಾಗಿ ಮುಂದೆ ಬರಬೇಕಾಗಿದೆ. ಅದರ ಅಸಮತೋಲನವನ್ನು ತೆಗೆದುಹಾಕುವ ದೃಷ್ಟಿಯಿಂದ ತಾವು ದೂರದೃಷ್ಟಿಯಿಂದ ಮಾಡಿರತಕ್ಕಂಥ ಚಿಂತನೆ, ಕಾರ್ಯಕ್ರಮ ಒಳ್ಳೆಯದಾಗಿರುತ್ತದೆ. ಆದರೆ ಅಲ್ಲಿ ಆಗಿರತಕ್ಕಂಥಾದ್ದು ಏನು? ನೀವು ಆ ಕಾರ್ಯಕ್ರಮ ಮುಗಿಸಿ ವಾಪಸ್ಸು ಬಂದಿದ್ದೀರಿ. ಅಲ್ಲಿ ಉಳಿದಿರತಕ್ಕಂಥಾದ್ದು ತಪ್ಪಲೆ, ಚೊಂಬುಗಳು ಮಾತ್ರ. ನಿಮ್ಮ ಬಿಸಿ ಊಟದ ಕಾರ್ಯಕ್ರಮವೇನಾಯಿತು? ಇದನ್ನು ನಿಮ್ಮ ಅಧಿಕಾರಿಗಳು ನಿಮ್ಮ ಗಮನಕ್ಕೆ ತರುತ್ತಾರೋ ಇಲ್ಲವೋ ನನಗಂತೂ ಅರ್ಥವಾಗುತ್ತಿಲ್ಲ. ಈ ಬಿಸಿ ಊಟದ ಕಾರ್ಯಕ್ರಮ ನಿಲ್ಲಲಿಕ್ಕೆ ಕಾರಣವೇನು? ನೀವು ಕೊಟ್ಟಿರತಕ್ಕಂಥ ಈ ಭರವಸೆ ಏಕೆ ಈಡೇರಲಿಲ್ಲ? ಇದು ನಮಗೆ ಅರ್ಥ ಆಗದೇ ಇರತಕ್ಕಂಥ ವಿಚಾರ.

12.50 ಪಿ.ಎಂ.

ಜಲಸಂವರ್ಧನ ಕಾರ್ಯಕ್ರಮ, ಸ್ವಚ್ಛ ಗ್ರಾಮದ ಕಾರ್ಯಕ್ರಮ, ಇವುಗಳಲ್ಲದೆ 2001ನೇ ಇಸವಿಯಲ್ಲಿ ಈ ಆಡಳಿತ ಸುಧಾರಣೆ ಮಾಡುತ್ತೇನೆಂದು ಹೇಳಿದರು; ಏನು ಹೇಳಿದರು ಎಂದರೆ, ಹೊಸ ವಾಹನಗಳ ಖರೀದಿಯನ್ನು ಒಂದು ವರುಷದವರೆಗೆ ಸ್ಥಗಿತಗೊಳಿಸಲಾಗುವುದು; ಹೊಸ ವಾಹನಗಳನ್ನು ತೆಗೆದುಕೊಂಡಿದ್ದೀರಿ, ತಾವೇ ಯೋಚಿಸಿ, ಇದನ್ನು ಇಲ್ಲಿ ಹೇಳತಕ್ಕಂಥ ಅವಶ್ಯಕತೆ ಏನಿತ್ತು? ಇಲ್ಲಿ ಇದನ್ನು ಹೇಳಿ ಜನಗಳಿಗೆ ದಾರಿ ತಪ್ಪಿಸುವುದಲ್ಲದೆ ಮತ್ತೇನು? ನಂತರ ಜಿಲ್ಲಾಧಿಕಾರಿಗಳ ಕಚೇರಿಗಳನ್ನು ಮತ್ತಷ್ಟು ಶಕ್ತಿಯುತ ಗೊಳಿಸಿ, ಜಿಲ್ಲಾ ಮಟ್ಟದಲ್ಲಿರುವ ಎಲ್ಲಾ ನಿಯಂತ್ರಿತ ಇಲಾಖೆಗಳನ್ನು ಜಿಲ್ಲಾಧಿಕಾರಿಗಳ ನೇರ ಆಡಳಿತಕ್ಕೆ ಒಳಪಡಿಸಲಾಗುವುದು ಎಂದು ಹೇಳಿದರು. ಜಿಲ್ಲಾಧಿಕಾರಿಗಳ ಕಛೇರಿ ಇವತ್ತು ಸಂತೆಗಳಾಗಿವೆ, ನಮ್ಮ ಚಾಮರಾಜನಗರ ಜಿಲ್ಲೆಗೆ ನಾವು ಒಂದು ಸಲ ಹೋಗಿದ್ದೆವು. ನಾವು ಎಲ್ಲಾ ಶಾಸಕರು ಹಾಗೂ ಸಾವಿರಾರು ಜನ ರೈತರು ಸೇರಿ ಜಿಲ್ಲಾಧಿಕಾರಿಗಳಿಗೆ ಒಂದು ಮನವಿಯನ್ನು ಕೊಡಬೇಕೆಂದು ಕಛೇರಿಗೆ ಹೋದರೆ ಅವರು ಬೀಗ ಹಾಕಿಕೊಂಡು ಹೊರಟುಹೋಗಿದ್ದರು, ರೈತರು ಬರುತ್ತಾರೆನ್ನುವ ಭಯವೋ ಏನೋ ನನಗೇನೂ ಗೊತ್ತಿಲ್ಲ. ನಾವು ಬರೆದಂಥ ಪತ್ರಗಳಿಗೆ ಕನಿಷ್ಠ ಉತ್ತರ ಬರೆಯುವ ಸೌಜನ್ಯ ಜಿಲ್ಲಾಧಿಕಾರಿಗಳಿಗೆ ಇಲ್ಲ. 2001ರ ಭಾಷಣದಲ್ಲಿ ತಾವು "ಕಡತಗಳ ವಿಲೇವಾರಿಗೆ ಎಲ್ಲಾ ಹಂತಗಳಲ್ಲಿ ಕಾಲಮಿತಿಯನ್ನು ನಿಗದಿಪಡಿಸಲಾಗುವುದು" ಎಂದು ಹೇಳಿದ್ದೀರಿ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಏಪ್ರಿಲ್ 2001ರಲ್ಲಿ ನಾನೊಂದು ಪತ್ರ ಬರೆದಿದೆ, ವಿಷಯ ಏನೆಂದರೆ,

ಬೆಂಗಳೂರಿನಲ್ಲಿ ಕೆಂಪೇಗೌಡ ಸಂಸ್ಥೆಯವರು ಏಪ್ರಿಲ್‌ನಲ್ಲಿ ಕೆಂಪೇಗೌಡರ ದಿನಾಚರಣೆಯನ್ನು ಮಾಡುತ್ತಾರೆ, ಅವರು ನನಗೊಂದು ಮೆಮೋರಾಂಡಂ ಕೊಟ್ಟರು, ಕೆಂಪೇಗೌಡರ ಸೊಸೆ ಸಾಧ್ವಿ ಕೆಂಪಮ್ಮನವರ ಸಮಾಧಿಯ ಬಳಿ ಹೆಣಗಳನ್ನು ಸುಡುತ್ತಾರೆ. ಇದನ್ನು ತಪ್ಪಿಸಿ ಎಂದು ಮನವಿ ಕೊಟ್ಟರು; ಹೋದ ವಾರ ಮುಖ್ಯಮಂತ್ರಿಗಳ ಕಛೇರಿಯಿಂದ ನನಗೆ ಉತ್ತರ ಏನು ಬಂತು ಎಂದರೆ, ನೀವು ಹೇಳಿರುವ ವಿಚಾರವನ್ನು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಗಮನಕ್ಕೆ ತಂದಿದ್ದೇವೆ. ನಾನೇ ಆ ಇಲಾಖೆಗೆ ಹೋಗಿ ಹೇಳಿದ್ದರೆ ಬಹುಶಃ ಆ ಹೆಣ ಸುಡುವುದನ್ನು ನಿಲ್ಲಿಸಬಹುದಾಗಿತ್ತು. ನೀವು ಕಡತ ವಿಲೇವಾರಿಗೊಳಿಸಲು ಕಾಲಮಿತಿ ನಿಗದಿಪಡಿಸಿರುವುದಕ್ಕೆ ಇದೊಂದು ಉದಾಹರಣೆ. ನಾನು ಇಲ್ಲಿ ಹೇಳಬಯಸುತ್ತೇನೆ. This is the performance of this Government.

2000-2001 ಮತ್ತು 2001-2002ರ, ಬಜೆಟ್ ಆದ ಮೇಲೆ 2002-2003ರ ಬಜೆಟ್ ಅನ್ನು ಮಂಡನೆ ಮಾಡಿದ್ದೀರಿ. ಈಗಾಗಲೇ ನಾನು ನಿಮ್ಮ ವೈಫಲ್ಯವನ್ನು ಹೇಳಿದ್ದೇನೆ. ನಾನು ಮೊನ್ನೆ ಶಿವಮೊಗ್ಗಕ್ಕೆ ಹೋಗಿದ್ದೆ, ಅಲ್ಲಿ ಯಾವುದೇ ರಾಜಕೀಯ ಪಕ್ಷಗಳಿಗೂ ಸೇರದ ಜನ ನನ್ನ ಹತ್ತಿರ ಬಂದು ಹೇಳಿದರು; ಬಟ್ಟೆ ತೆಗೆದುಕೊಳ್ಳುವವರು ಇಲ್ಲ, ರೇಷನ್ ತೆಗೆದುಕೊಳ್ಳುವವರು ಇಲ್ಲ ಎಂದು, ಇದು ರಾಷ್ಟ್ರ ವ್ಯಾಪ್ತಿ, ರಾಜ್ಯ ವ್ಯಾಪ್ತಿಯಾಗಿ ಇರತಕ್ಕಂಥ ಸಮಸ್ಯೆ ಎನ್ನುವ ಅರಿವು ನಮಗೆ ಇಲ್ಲವೆಂದು ತಾವು ತಿಳಿದುಕೊಳ್ಳಬೇಡಿ There is recession. Money circulation has come down. ಇದನ್ನು ಜಾಸ್ತಿ ಮಾಡಲಿಕ್ಕೆ ಹೌಸಿಂಗ್ ಆ್ಯಕ್ಟಿವಿಟೀಸ್‌ಗೆ ಎನ್‌ಕರೇಜ್ ಮಾಡಿರುವುದನ್ನು ಬಿಟ್ಟರೆ ಬೇರೆ ಏನು ಮಾಡಿದ್ದೀರಿ? ನಾನು ಒಪ್ಪುತ್ತೇನೆ, compared to union Government budget ಸ್ಟೇಟ್ ಗೌರ್ನಮೆಂಟ್ ಒಂದು ಮುನಿಸಿಪಾಲಿಟಿ ಬಜೆಟ್ ಇದ್ದ ಹಾಗೆ ಇದು ಯೂನಿಯನ್ ಗೌರ್ನಮೆಂಟ್‌ಗೆ You are not the Union Finance Minister. I agree with that. ಮಾನ್ಯ ದೇಶಪಾಂಡೆಯವರು ಸರ್ವಕಾಲದ ಸಚಿವರು, ಆ ಹಿಂದೂಸ್ಥಾನ ಕೋಕಾ ಕೋಲಾ ಕಂಪನಿಯವರಿಗೆ 250 ಕೋಟಿ ರೂ.ಗೆ 18 ವರ್ಷಗಳ ಟ್ಯಾಕ್ಸ್ ಹಾಲೀಡೇ. ನಮ್ಮ ಕಾಲದಲ್ಲೇ ವ್ಹೋಲ್ವೋ ಕಂಪನಿಗಾಯಿತು. ನಿಮ್ಮ ಕಾಲದಲ್ಲಿ ಪೆಪ್ಸಿ ಕೋಕಾಕೋಲಾಗೆ 250 ಕೋಟಿ ರೂಪಾಯಿ ಆಯಿತು. ನಮ್ಮ ಕಾಲದಲ್ಲಿ ಆ ಟಯೋಯಾ ಕಿರ್ಲೋಸ್ಕರ್‌ಗೆ ಆಯಿತು, ಈ ಟ್ಯಾಕ್ಸ್ ಹಾಲೀಡ್ ಅಂದರೆ 18, 20, 25, ವರ್ಷಗಳ ಕಾಲ ಟ್ಯಾಕ್ಸ್ ಹಾಲೀಡೆ. ಏನು ಸ್ವಾಮಿ ಇದು? ಯಾವುದೇ ಸರ್ಕಾರವಿರಲಿ ಈ ಟ್ಯಾಕ್ಸ್ ಹಾಲೀಡೆ ಕೊಟ್ಟಿರುವುದರ ಬಗ್ಗೆ ತಾವು ಬೋಲ್ಡಾಗಿ ಒಂದು ಡಿಸಿಷನ್ ತೆಗೆದುಕೊಂಡಿದ್ದರೆ, ಆಗ ನಾನು ನಿಮ್ಮನ್ನು ಆಪ್ರೀಷಿಯೇಟ್ ಮಾಡುತ್ತಿದ್ದೆ. ಅವರು ಆ ಫೈಲ್‌ಗಳನ್ನು ಕ್ಯಾಬಿನೆಟ್ ತರುತ್ತಲೇ ಇರುತ್ತಾರೆ, ಅದು ಹೇಗೆ ಕ್ಯಾಬಿನೆಟ್‌ಗೆ ಆ ಫೈಲ್ಸ್ ಬರುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ತಾವು ಹೇಳುವ ಫೈಲ್‌ಗಳು ಬರಬೇಕಾದರೆ ಆರು ತಿಂಗಳಾಗುತ್ತವೆ, ನಿಮ್ಮ ಸೆಕ್ರೆಟರಿ ಆ ಸೆಕ್ರೆಟರಿಗೆ ನೂರು ಸಲ ಹೇಳಬೇಕು, ಸಿಎಂ ಹೇಳಿದ್ದು ಕ್ಯಾಬಿನೆಟ್ ನೋಟ್ ಎಲ್ಲಿ ಬರಲಿಲ್ಲವಲ್ಲಾ ಎಂದು ಹೇಳಬೇಕು. ಈ ಕಡತಗಳು ಮಾತ್ರ ಸರ್ವಕಾಲದಲ್ಲೂ ಅದು ಹೇಗೆ ಕ್ಯಾಬಿನೆಟ್‌ಗೆ ಬರುತ್ತವೆಯೆ ನಮಗೆ ಗೊತ್ತಾಗುವುದಿಲ್ಲ. ಆ ಟ್ಯಾಕ್ಸ್ ಹಾಲೀಡೆಯನ್ನು ಕೊಡತಕ್ಕಂಥದ್ದನ್ನು ನೀವು ನಿಲ್ಲಿಸಿದ್ದಿದ್ದರೆ I would have appreciated this budget. ಹೌದು, ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ

ಯಶಸ್ವಿಯನ್ನು ಕಂಡಿದ್ದಾರೆಂದು ಹೇಳುತ್ತಿದ್ದೆ. ಈ ವರ್ಷದ ಬಜೆಟ್‌ನಲ್ಲಿ ಇವರು ಇದು ಕೃಷಿ ಪರವಾಗಿರುವ ಬಜೆಟ್ ಎಂದು ಹೇಳಿದ್ದಾರೆ, ಇದು ಕೃಷಿ ಪರವಾದ ಬಜೆಟ್, ರೈತರ ಪರವಾದ ಬಜೆಟ್ ಎಂದು ಪ್ರಚಾರ ಆಗಬೇಕು ಅಲ್ಲವಾ? ಏಕೆಂದರೆ, ಇದುವರೆವಿಗೂ ಮಾನ್ಯ ಕೃಷ್ಣರವರನ್ನು ಹೈಟೆಕ್ ಮುಖ್ಯಮಂತ್ರಿಗಳು, ಬೆಂಗಳೂರು ನಗರ ಪ್ರದೇಶಗಳ ಪರವಾಗಿರುವ ಮುಖ್ಯಮಂತ್ರಿಗಳೆಂದು ಪ್ರಚಾರವಾಗಿತ್ತು. ಈಗ ಈ ಪ್ರಚಾರ ಹಳ್ಳಿಗಳಿಗೆಲ್ಲಾ ಆಗಬೇಕಲ್ಲಾ" ಅದಕ್ಕೆ ಅವರು ಏನು ಬುದ್ಧಿವಂತಿಕೆ ಮಾಡಿದ್ದಾರೆಂದರೆ, ಈ ವರ್ಷ ಎರಡು ಸಾವಿರ ಕೋಟಿ ರೂಪಾಯಿಗಳ ವಿದ್ಯುತ್ ಸಹಾಯಧನ ಎಂದು ಘೋಷಣೆ ಮಾಡಿದ್ದಾರೆ. ಇದು ಯಾವಾಗಲೂ ಇರುತ್ತಿತ್ತು. ಕಳೆದ ವರ್ಷದ ಬಜೆಟ್‌ನಲ್ಲೂ ಎರಡು ಸಾವಿರ ಕೋಟಿ ರೂಪಾಯಿಗಳು ಇತ್ತು; ಈ ವರ್ಷ ನಾನು ಬಜೆಟ್ ಫಿಗರ್ಸ್‌ನ್ನು ತೆಗೆದು ನೋಡಿದೆ ಇವರು ಎಷ್ಟು ಹೆಚ್ಚಿಗೆ ಮಾಡಿದ್ದಾರೆಂದರೆ, ಕಳೆದ ವರ್ಷ 2330 ಕೋಟಿ ರೂಪಾಯಿಗಳು ಇದ್ದರೆ, ಈ ವರ್ಷ ಅದನ್ನು 2339 ಕೋಟಿ ಅಂದರೆ ಒಟ್ಟಾರೆಯಾಗಿ 39 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಪವರ್ ಸೆಕ್ಟಾರ್‌ಗೆ ನೀವು ಒಟ್ಟಾರೆಯಾಗಿ 39 ಕೋಟಿ ರೂಪಾಯಿಗಳನ್ನು ಮಾತ್ರ ಹೆಚ್ಚು ಮಾಡಿದ್ದೀರಿ. ಆದರೆ ತಾವು ಹೇಳಿರುವುದು, ಎರಡು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ 2300 ಕೋಟಿ ರೂಪಾಯಿಗಳನ್ನು ಇಯರ್‌ಮಾರ್ಕ್ ಮಾಡಿದ್ದಾರೆ, ಆದರೆ ರಿಲೀಸ್ ಎಷ್ಟು ಮಾಡಿದ್ದಾರೆನ್ನುವ ಬಗ್ಗೆ ನಂತರ ಹೇಳುತ್ತೇನೆ. ನಂತರ ನೀರಾವರಿ ಯೋಜನೆಗೆ ಕಳೆದ ವರ್ಷ 2859 ಕೋಟಿ ರೂಪಾಯಿಗಳು ಇದ್ದರೆ ಈ ವರ್ಷ 2900 ಕೋಟಿ ರೂಪಾಯಿಗಳು ಅಂದರೆ ಒಟ್ಟಾರೆಯಾಗಿ, 10 ಪರ್ಸೆಂಟ್ ನ್ಯಾಚ್ಯೂರೆಲ್ ಗ್ರೋಥ್ ಎಂದು ತೆಗೆದುಕೊಂಡರೂ, ಇನ್‌ಫ್ಲೇಷನ್‌ಅನ್ನು ಗಮನಕ್ಕೆ ತೆಗೆದುಕೊಂಡರೂ 5100 ಕೋಟಿ ರೂಪಾಯಿಗಳಲ್ಲಿ ನೀವು ಹೆಚ್ಚು ಮಾಡಿರುವುದು ಕೇವಲ 85 ಕೋಟಿ ರೂಪಾಯಿಗಳು. ಅದಕ್ಕೆ ಕೃಷಿ ಪ್ರದೇಶದ ಜನಗಳ ಪರವಾಗಿ, ರೈತರ ಪರವಾಗಿ, ಹಳ್ಳಿಗಾಡಿನ ಜನಗಳ ಪರವಾಗಿ, ಇರತಕ್ಕಂಥ ಬಜೆಟ್ ಇದು? ನಾನು ಮುಖ್ಯಮಂತ್ರಿಗಳಲ್ಲಿ ಏನು ಕೇಳುತ್ತೇನೆಂದರೆ, ಈ ರೂರಲ್ ಎಲೆಕ್ಟ್ರಿಸಿಟಿ ಸಬ್ಸಿಡಿ 2000ದ ಇಸವಿಯಲ್ಲಿ 600 ಕೋಟಿ ರೂಪಾಯಿಗಳು ಇತ್ತು, 2001ನೇ ಇಸವಿಯಲ್ಲಿ 879 ಕೋಟಿ ರೂಪಾಯಿಗಳು, ಬೇಕಾಗಿದ್ದು 1700 ಕೋಟಿ ರೂಪಾಯಿಗಳು. ನಮ್ಮಲ್ಲಿ ಸಚಿವ ಸಂಪುಟದ ಉಪಸಮಿತಿಯೊಂದು ಇತ್ತು, ಅದಕ್ಕೆ ಸನ್ಮಾನ್ಯ ಸಿದ್ದರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ನಾನು ಮಾನ್ಯ ಭೈರೇಗೌಡರು ಅದಕ್ಕೆ ಸದಸ್ಯರಾಗಿದ್ದೆವು. ಪ್ರತಿ ತಿಂಗಳು ನಾವು ಈ ತರಹ ಕ್ರೈಸಿಸ್ ಬಂದಾಗ ಸುಮಾರು 80 ರಿಂದ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೆವು. 2001-2002ರಲ್ಲಿ ತಮ್ಮ ಬಜೆಟ್ ನಲ್ಲಿ ತಾವು ಇಯರ್ ಮಾರ್ಕ್ ಮಾಡಿದ್ದು 2300 ಕೋಟಿ ರೂಪಾಯಿಗಳು. ಆದರೆ ತಾವು ರಿಲೀಸ್ ಮಾಡಿರುವುದು ಇವತ್ತಿನವರೆವಿಗೂ ಕೇವಲ 1300 ಕೋಟಿ ರೂಪಾಯಿಗಳು ವಿಶ್ವ ಬ್ಯಾಂಕ್‌ನವರು ಏನಾದರೂ ಕೊಟ್ಟರೆ, ನಮ್ಮ ಆಫೀಸರ್ಸ್ ಪಾಠ ವಿಶ್ವಬ್ಯಾಂಕ್ ಲೋನ್‌ಗಾಗಿ ಬಹಳ ಕಾಯುತ್ತಿದ್ದಾರೆ, ಅವರೇನಾದರೂ ದುಡ್ಡು ಕೊಟ್ಟರೆ ಈ ತಿಂಗಳಲ್ಲಿ ನೀವು ಇನ್ನು 600 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬಹುದು; ಆದರೂ ಅದರ ಬಗ್ಗೆ ನನಗೆ ಸಂಶಯವಿದೆ, ಇಲ್ಲದಿದ್ದರೆ ಅದಕ್ಕೂ ತಿರುಪತಿಯ ನಾಮಗೇ ಗತಿ. ಭಾರತ ಸರ್ಕಾರದವರು ಎಪಿಡಿಪಿ, ಎಪಿಡಿಆರ್‌ಪಿ, ಪ್ರೋಗ್ರಾಂ ನಲ್ಲಿ ಕಳೆದ ವರ್ಷ 87 ಕೋಟಿ ರೂಪಾಯಿಗಳನ್ನು ಕೊಟ್ಟರು; ಈ ವರ್ಷ 370 ಕೋಟಿ

ರೂಪಾಯಿಗಳನ್ನು ಕೊಡಬೇಕು, ಅದು ಎಷ್ಟು ಕೊಡುತ್ತಾರೋ ನನಗಂತೂ ಗೊತ್ತಿಲ್ಲ. The State is facing a power crisis. ಇದೇ ರಾಜ್ಯದಲ್ಲಿ ನಮಗೆ 600 ಮೆಗಾವ್ಯಾಟ್ಸ್ ಪವರ್ ಇವೆ. ಅಂದರೆ ಮಳೆ ಬರುವರೆಗೆ, ಏಪ್ರಿಲ್, ಮೇ, ಜೂನ್, ನಿಮಗೆ 200 ಮೆಗಾವ್ಯಾಟ್ಸ್ ತರುವುದಕ್ಕ ಎಷ್ಟು ದುಡ್ಡು ಬೇಕು ಎಂದರೆ, ನಿಮ್ಮ ಪವಿತ್ರವಾದ ಭರವಸೆ "ಎಂಟು ತಾಸು ರೈತರಿಗೆ ನಿರಂತರ ವಿದ್ಯುತ್" ಆ ಪಾವಿತ್ರತೆಯನ್ನು ಉಳಿಸಿಕೊಳ್ಳಬೇಕಾದರೆ, ನೀವು ಖರ್ಚು ಮಾಡಬೇಕಾಗಿರುವ ಕೇವಲ 20 ಕೋಟಿ ರೂಪಾಯಿಗಳು For MWS.

ನೀವು ಆ ಮೂರು ತಿಂಗಳಲ್ಲಿ 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ರೈತರು ನಿಮಗೆ ಆಶೀರ್ವಾದ ಮಾಡುತ್ತಾರೆ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, 120 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡದೇ ಇರುವಷ್ಟು ದಿವಾಳಿಯಾಗಿದೆಯೇ ಎಂದು ನಾನು ಈ ಸರ್ಕಾರವನ್ನು ಕೇಳಬಯಸುತ್ತೇನೆ. ಇವತ್ತಿನದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು ಸದನಕ್ಕೆ ಏಕೋ ಬಂದಿಲ್ಲ. ಅವರೇನೋ ಮುನಿಸಿಕೊಂಡಿದ್ದಾರೆಂದು ಕಾಣುತ್ತದೆ. ಸದರಿ ಬಜೆಟ್ ಬಗ್ಗೆ ಅವತ್ತು ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳಿಗೆ ವಸ್ತುಸ್ಥಿತಿ ಏನು ಎನ್ನತಕ್ಕಂಥಾದ್ದು ಗೊತ್ತು. ಆದ್ದರಿಂದ ಅವರು ಸುಮ್ಮನೆ ಕುಳಿತುಕೊಂಡಿದ್ದರು. ಆದರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಎಗರಾಡುತ್ತಿದ್ದರು. ಸರ್ಕಾರಿ ನೌಕರರಿಗೆ ಸಂಬಳ ಕೊಟ್ಟಿಲ್ಲ ಎಂದು ಹೇಳಿದ್ದಕ್ಕೆ ಅವರು ಬಹಳ ಕೋಪ ಮಾಡಿಕೊಂಡರು. ಓಬಿಬಿ ಮತ್ತು ಯೋಜನಾ ವೆಚ್ಚದಲ್ಲಿ ಶಿಕ್ಷಕರಿಗೆ ಕಳೆದ ಮೂರು ತಿಂಗಳಿಂದ ಸಂಬಳ ಬಂದಿಲ್ಲವೆಂದು ಅವರು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ದಾಖಲಾತಿಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಡುತ್ತೇನೆ. ತಾವು ದಯವಿಟ್ಟು ಪರಾಂಭರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸದರಿ ವಿಷಯವನ್ನು ಇವತ್ತಿನದಿವಸ ನಾನು ಅಧಿಕಾರಿಗಳಿಂದ ತಿಳಿದುಕೊಂಡಿದ್ದೇನೆ. ಓಬಿಬಿ ಪ್ಲಾನ್ ಸ್ಕೀಮ್‌ನಲ್ಲಿ ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ಅಂದರೆ, ಮೂರು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಇದರ ಬಾಕಿ ಸುಮಾರು 36 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ವಿಶ್ವ ಬ್ಯಾಂಕ್‌ನವರು ಏನಾದರೂ ಹಣ ಕೊಟ್ಟರೆ, ಇದಕ್ಕೆ ಡೈವರ್ಟ್ ಮಾಡಲಿಕ್ಕೆ ಬಿಲ್ ಈಗ ರೆಡಿಯಾಗುತ್ತಿದೆ. ಸಂಬಳ ಕೊಡುವುದಕ್ಕೆ ನಿಮ್ಮ ಹತ್ತಿರ ಹಣ ಇಲ್ಲ. ಈ ಸ್ಥಿತಿ ಏಕೆ ಬಂತು? ನೀವು ಆಡಳಿತದಲ್ಲಿ ಎಲ್ಲಿ ಯಶಸ್ವಿ ಆಗಿದ್ದೀರಿ ಎನ್ನತಕ್ಕಂಥಾದ್ದನ್ನು ಜನವರಿ ತಿಳಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಇರಲಿ. ಆದರೆ, ತಾವು ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆಯೇ ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿರತಕ್ಕಂಥ ಎ.ಎನ್.ಎಂ.ಗಳಿಗೆ ಮತ್ತು ಮೆಡಿಕಲ್ ಆಫೀಸರ್‌ಗಳಿಗೆ ಯೋಜನಾ ವೆಚ್ಚದಲ್ಲಿ ಸಂಬಳ ಕೊಟ್ಟಿಲ್ಲ. ಹಾಗೆಯೇ ಅಂಗನವಾಡಿ ಅಸಿಸ್ಟೆಂಟ್ ಡೈರೆಕ್ಟರ್‌ಗಳಿಗೆ ಮೂರು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಒಂದು ವೇಳೆ ಕೊಟ್ಟಿದ್ದರೆ ಇಲ್ಲಿ ಹೇಳಬಹುದು. ಸಂಬಳ ಕೊಡದ ಮಟ್ಟಕ್ಕೆ ನಿಮ್ಮ ಖಜಾನೆ ಹೋಗಿದೆಯೇ? ಇದನ್ನು ತಾವು ದಯವಿಟ್ಟು ತಿಳಿಸಬೇಕು.

ಇವತ್ತಿನ ದಿವಸ ಸಣ್ಣ ನೀರಾವರಿ ಸಚಿವರು ಕೆಲಸ ಮಾಡುವುದಕ್ಕೆ ಬಹಳ ಉತ್ಸಾಹದಲ್ಲಿದ್ದಾರೆ. ಆದರೆ, ಇದರ ಇಲಾಖೆಯ ಪೆಂಡಿಂಗ್ ಬಿಲ್ ಕೇವಲ 120 ಕೋಟಿ ರೂಪಾಯಿಗಳು ಮಾತ್ರ ಇದೆ. ಇವತ್ತಿನ ದಿವಸ 2 ಅಥವಾ 3 ಲಕ್ಷ ರೂಪಾಯಿಗಳಷ್ಟು ಬಾಕಿ

ಉಳಿಸಿಕೊಂಡಿರತಕ್ಕಂಥ ಗುತ್ತಿಗೆದಾರರು ಬಡ್ಡಿಗೆ ಸಾಲ ತೆಗೆದುಕೊಂಡು ಬಂದು ನಿಮಗೆ ಶಾಪ ಹಾಕಿಕೊಂಡು ಕುಳಿತುಕೊಂಡಿದ್ದಾರೆ. ಇವತ್ತಿನ ದಿವಸ ಸಣ್ಣ ನೀರಾವರಿ ಇಲಾಖೆ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಈಗಾಗಲೇ ಇರತಕ್ಕಂಥ ಅಚ್ಚುಕಟ್ಟು ಪ್ರದೇಶದಲ್ಲಿರುವ ತೂಬುಗಳ ರಿಪೇರಿಗಾಗಿ ಮತ್ತು ಸಾಡಿಗಳಿಗೆ, ಸಂಬಳಗಳಿಗೂ ಸಹ ಹಣ ಬಿಡುಗಡೆ ಆಗುತ್ತಿಲ್ಲ. ಈ ರೀತಿ ಆದರೆ, ಸದರಿ ಇಲಾಖೆಯನ್ನು ಯಾವ ರೀತಿಯಾಗಿ ನಡೆಸುವುದು? ನನಗೆ ತಿಳಿದ ಮಟ್ಟಿಗೆ ಮಾನ್ಯ ಲೋಕೋಪಯೋಗಿ ಸಚಿವರು ಕೇಂದ್ರ ಸರ್ಕಾರ ನೀಡತಕ್ಕಂಥ ಪರಿಹಾರವನ್ನು ತರಲಿಕ್ಕೆ ಬಹಳ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಬಾರ್ಡ್‌ನಿಂದ 5-6-7ರ ಅಡಿಯಲ್ಲಿ ಹಣ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ನಬಾರ್ಡ್ ಸಂಸ್ಥೆ ಏನು ಹಣ ಕೊಡುತ್ತದೆ, ಅದನ್ನು ಇವರು ಗುತ್ತಿಗೆದಾರಿಗೆ ಬಿಡುಗಡೆ ಮಾಡುತ್ತಿಲ್ಲ. ಆದರೆ ಈ ಹಣವನ್ನು ಬೇರೆ ಕಡೆಗೆ ಡೈವರ್ಟ್ ಮಾಡುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ನಿಮಗೆ ಯಾವುದೇ ರೀತಿಯ ಅಧಿಕಾರ ಇಲ್ಲ. ಇವತ್ತಿನದಿವಸ ನಬಾರ್ಡ್ ಸಂಸ್ಥೆಯ 6 ಮತ್ತು 7ರ ಅಡಿಯಲ್ಲಿ ತೆಗೆದುಕೊಂಡಿರತಕ್ಕಂಥ ಸುಮಾರು 600 ಕೋಟಿ ರೂಪಾಯಿಗಳ ಕೆಲಸಗಳು ಕಳೆದ ಮೂರು ತಿಂಗಳಿಂದ ಸ್ಥಗಿತಗೊಂಡಿವೆ. ನಬಾರ್ಡ್ ಯೋಜನೆಗೆ ಸಂಬಂಧಪಟ್ಟಂಥ ಬಿಲ್‌ಗಳನ್ನು ಕ್ಲಿಯರ್ ಮಾಡಲಾಗಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥಾದ್ದನ್ನು ನೀವೇ ಈ ಸಂದರ್ಭದಲ್ಲಿ ಹೇಳಿ. ನಬಾರ್ಡ್ ಸಂಸ್ಥೆಯಿಂದ ಹಣ ಬಿಡುಗಡೆ ಆದಮೇಲೆ ಅದನ್ನು ಇಟ್ಟುಕೊಳ್ಳುವುದಕ್ಕೆ ನಿಮಗೆ ಹಕ್ಕು ಇದೆಯೇ ಎನ್ನತಕ್ಕಂಥಾದ್ದು ನನಗೆ ತಿಳಿಯಬೇಕಾಗಿದೆ. ಈ ಹಣವನ್ನು ಇಟ್ಟುಕೊಳ್ಳುವುದಕ್ಕೆ ನಿಮಗೆ ಹಕ್ಕಿಲ್ಲ.ಆದರೆ ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಸಂಬಳ ಕೊಡುವುದಕ್ಕೆ ಹಣ ಇಲ್ಲ ಎನ್ನತಕ್ಕಂಥಾದ್ದನ್ನು ತಾವು ಒಪ್ಪಿಕೊಳ್ಳಬೇಕು. ಈ ವಿದ್ಯುತ್ ಮತ್ತು ನೀರಾವರಿ ಇಲಾಖೆಗೆ ಹಣ ಕೊಡದೇ ಇದ್ದರೆ. ಸದರಿ ಬಜೆಟ್‌ನ್ನು ದೂರದೃಷ್ಟಿ ಹೊಂದಿರತಕ್ಕಂಥ ಬಜೆಟ್ ಎಂದು ನಾವು ಹೇಗೆ ಹೇಳುವುದಕ್ಕೆ ಆಗುತ್ತದೆ ಎನ್ನತಕ್ಕಂಥಾದ್ದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಪೆಂಡಿಂಗ್ ಬಿಲ್ ಸುಮಾರು 120 ಕೋಟಿ ರೂಪಾಯಿಗಳಷ್ಟಿದೆ. ಹಾಗೆಯೇ ಸಣ್ಣ ನೀರಾವರಿ ಇಲಾಖೆಯ ಪೆಂಡಿಂಗ್ ಬಿಲ್ 100 ಕೋಟಿ ರೂಪಾಯಿಗಳು ಮತ್ತು ನಬಾರ್ಡ್ ಕೆಲಸದ ಪೆಂಡಿಂಗ್ ಬಿಲ್ ಸುಮಾರು 60 ರಿಂದ 70 ಕೋಟಿ ರೂಪಾಯಿಗಳಷ್ಟಿದೆ. ಹಾಗೆಯೇ ಸಂಬಳಕ್ಕಾಗಿ ಇನ್ನೂ ಸುಮಾರು 100 ಕೋಟಿ ರೂಪಾಯಿಗಳಷ್ಟು ಕೊಡಬೇಕಾಗಿದೆ. ಇವತ್ತಿನ ದಿವಸ ಕಮಿಟೆಡ್ ಆಗಿರತಕ್ಕಂಥ ಕೆಲಸಗಳಿಗೆ ಸಂಬಳ ಕೊಡಲೇಬೇಕಾಗುತ್ತದೆ. ಹಾಗೆಯೇ ಕೆಲಸ ಆಗಿರತಕ್ಕಂಥ ಬಿಲ್‌ಗಳನ್ನು ಪಾಸ್ ಮಾಡಲೇ ಬೇಕಾಗುತ್ತದೆ. Unofficial Treasury Ban ಎಲ್ಲಾ ಸರ್ಕಾರಗಳ ಆಡಳಿತ ಅವಧಿಯಲ್ಲಿ ಟ್ರೆಜರಿ ಬ್ಯಾನ್ ಇದ್ದೇ ಇರುತ್ತದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ರೆಗ್ಯುಲೇಟ್ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಖಜಾನೆಯಲ್ಲಿ ಹಣ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಯಾವ ರೀತಿಯಲ್ಲಿ ರೆಗ್ಯುಲೇಟ್ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದು ಗೊತ್ತಾಗಬೇಕು. ಶುಕ್ರವಾರ ಮಾತ್ರ ಕೆಲಸ ಮಾಡಿ ಎಂದು ಮತ್ತು ಒಂದು ಲಕ್ಷ ರೂಪಾಯಿ ಒಳಗಡೆ ಇರತಕ್ಕಂಥ ಬಿಲ್‌ಗಳನ್ನು ಮಾತ್ರ ಕ್ಲಿಯರ್ ಮಾಡಬೇಕೆಂದು ಹಾಗೂ ಉಳಿದ ಬಿಲ್‌ಗಳನ್ನು ಕ್ಲಿಯರ್ ಮಾಡಬೇಡಿ ಎಂದು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರೆ. ಆದ್ದರಿಂದ, ಇವತ್ತಿನದಿವಸ ಯಾವರೀತಿಯಾಗಿ ಹಣಕಾಸಿನ ಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುತ್ತಿದ್ದೀರಿ ಎನ್ನತಕ್ಕಂಥಾದ್ದು

ರಾಜ್ಯದ ಜನತೆಗೆ ತಿಳಿಯಪಡಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಬಯಸುತ್ತೇನೆ.

ಇನ್ನು ಒಣ ಭೂಮಿ ವಲಯಕ್ಕೆ ಸಂಬಂಧಪಟ್ಟಂತೆ ದೊಡ್ಡ ದೊಡ್ಡ ಯಜಮಾನರ ಹೆಸರುಗಳನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದಾರೆ. ಇದು ನಿಜವಾಗಿಯೂ ಕೂಡ ಸಂತೋಷದ ವಿಚಾರ. ಸನ್ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಸಹ ತೆಗೆದುಕೊಂಡಿದ್ದಾರೆ. 61 ಸಾವಿರ ಹೆಕ್ಟೇರ್‌ಗೆ 100 ಕೋಟಿ ರೂಪಾಯಿ ಹಾಗೂ 50 ಸಾವಿರ ಹೆಕ್ಟೇರ್‌ಗೆ 700 ಕೋಟಿ ರೂಪಾಯಿ ಎಂದು ನಿಗದಿ ಮಾಡಿದ್ದಾರೆ. ಆದರೆ, ಈ ಸರ್ಕಾರ ಬಂದಮೇಲೆ ಒಣ ಭೂಮಿ ಪ್ರದೇಶಗಳ ಕೆಲಸಗಳು ಪ್ರಾರಂಭ ಆಗಿಲ್ಲ. ಒಂದು ವೇಳೆ ಎಲ್ಲಿಯಾದರೂ ಆಗಿದ್ದರೆ ಹೇಳಿ? ಇದು ಕೇವಲ ಪ್ರಚಾರ ಪ್ರಿಯವಾಗಿರತಕ್ಕಂಥ ಬಜೆಟ್ ಆಗಿದೆಯಷ್ಟೆ. ಇನ್ನು ಮುಖ್ಯಮಂತ್ರಿಯವರ ಹೆಸರಿನಲ್ಲಿ ಮಾದರಿ ಪಟ್ಟಣ ವಸತಿ ಕಾರ್ಯಕ್ರಮ ಎನ್ನತಕ್ಕಂಥ ಒಂದು ಯೋಜನೆ ಮಾಡಿದ್ದಾರೆ. ಇದು ಏನು ಎಂಬುದನ್ನು ತಾವೇ ಹೇಳಬೇಕು? ಈಗಾಗಲೇ ಆಶ್ರಯ ಯೋಜನೆ ಅಡಿಯಲ್ಲಿ ಕೊಟ್ಟಿರತಕ್ಕಂಥ ಮನೆಗಳಿಗೆ ನೀವು ನಿಮ್ಮ ಮುಖ್ಯಮಂತ್ರಿಯವರ ವಸತಿ ಯೋಜನೆ ಎಂದು ಹೇಳುತ್ತೀರಾ? Where is the budget allocation for this programme, I would like to know.

ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಗೆ 10 ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದ್ದೀರಿ. ನಾವು ಇದನ್ನು ಎಲ್ಲೂ ಕೂಡ ಕಂಡಮ್ ಮಾಡುವುದಕ್ಕೆ ಹೋಗಿಲ್ಲ. ಇದನ್ನು ನಾವು ಸ್ವಾಗತ ಮಾಡಿದ್ದೇವೆ. ಹಾಗೆಯೇ ಇದಕ್ಕೆ ಇನ್ನು ಹೆಚ್ಚಿಗೆ ಬೇಕಾದರೆ ಕೊಡುತ್ತೇವೆ ಎನ್ನತಕ್ಕಂಥದ್ದನ್ನು ಕೂಡ ತಾವು ಹೇಳಿದ್ದೀರಿ. ಇದಕ್ಕೆ ಹೆಚ್ಚಿಗೆ ಕೊಟ್ಟರೆ ನಮಗೆ ಸಂತೋಷವಾಗುತ್ತದೆ. ಆದರೆ, ಮಂಡ್ಯ ಜಿಲ್ಲೆಯ ರಸ್ತೆಗಳ ರಿಪೇರಿಗಾಗಿ 300 ಕೋಟಿ ರೂಪಾಯಿಗಳೆಂದು ಘೋಷಣೆ ಮಾಡಿ ಈಗ 30 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಾವು ಮಂಡ್ಯ ಜಿಲ್ಲೆಯ ಜನತೆಯಲ್ಲಿ ಅಭಿಮಾನ ಮತ್ತು ಗೌರವವನ್ನು ಇಟ್ಟುಕೊಂಡಿರತಕ್ಕಂಥವರು. ಮಂಡ್ಯ ಜಿಲ್ಲೆಯವರಾದ ಅಪರೂಪವಾಗಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ಇದರಿಂದ ನಮಗೇನೂ ಹೊಟ್ಟೆ ಕಿಚ್ಚಿಲ್ಲ. ಆದರೆ, ನಾವೇನು ಪಾಪ ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ಹೇಳಬೇಕು. ನಿಮ್ಮ ಪಕ್ಕದಲ್ಲಿ ಕುಳಿತು ಕೊಂಡಿರತಕ್ಕಂಥ ಗುಲ್ಬರ್ಗದವರು ಏನು ಪಾಪ ಮಾಡಿದ್ದಾರೆ? ಹಾಗೆಯೇ ರಾಯಚೂರುನವರು ಏನು ಪಾಪ ಮಾಡಿದ್ದಾರೆ? ಇನ್ನು ಕೋಲಾರ ಜಿಲ್ಲೆಯಲ್ಲಿ ರಸ್ತೆಗಳು ಹೆಚ್ಚು ಕಡಿಮೆ ಇರುವ ಬಗ್ಗೆ ನಮ್ಮ ಮಾನ್ಯ ಬೈರೇಗೌಡರು ಹೇಳಿರಬಹುದು. ಆದರೆ, ಬೆಳಗಾಂ ಮತ್ತು ಗದಗ್‌ನವರು ಏನು ಪಾಪ ಮಾಡಿದ್ದಾರೆ? ಅಂದರೆ ಇನ್ನು 5 ವರ್ಷಗಳ ನಂತರ ಹೊಸ ಕಾಮಗಾರಿ ಏನಾದರೂ ಪ್ರಾರಂಭ ಮಾಡುತ್ತೀರಾ? What are your priorities? ಇವತ್ತಿನದಿವಸ ನಿಮ್ಮ ಪ್ರಯಾರಿಟೀಸ್ ಬಗ್ಗೆ ನಾವು ಬಹಳ ಮುಖ್ಯವಾಗಿ ಯೋಜನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳ ಮಾದರಿ ಪಟ್ಟಣ ವಸತಿ ಕಾರ್ಯಕ್ರಮಕ್ಕೆ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ.ಇದನ್ನು ನಾವು ಅಪ್ರೀಷಯೇಟ್ ಮಾಡುತ್ತೇವೆ. ಈಗಾಗಲೇ ಶ್ರೀಮತಿ ಇಂದಿರಾಗಾಂಧಿಯವರ ಹೆಸರಿನಲ್ಲಿ ಜನತಾ ಕಾಲೋನಿಗಳಾಯಿತು. ಮಾಡಲಾಗುತ್ತಿದೆ. ಆದೇ ರೀತಿ ಈ ಕಾಲೋನಿಗೆ ನಿಮ್ಮ ಹೆಸರನ್ನು ಇಟ್ಟುಕೊಳ್ಳಿ, ನಮಗೆ ಸಂತೋಷವಾಗುತ್ತದೆ.

ಆದರೆ, ಇದಕ್ಕೆ ಹೆಚ್ಚಿಗೆ ದುಡ್ಡು ಇಡಬೇಕಾಗಿತ್ತು ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಕಲ್ಯಾಣ ಸಮಿತಿ ಎಂದು ಹೊಸದಾಗಿ ಮಾಡಿದ್ದೀರಿ.

ಶ್ರೀ ಆರ್. ನಾರಾಯಣ (ಬೆಳ್ಳಾವಿ):- ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಯವರ ಪಟ್ಟಣಗಳ ವಸತಿ ಯೋಜನೆ ಗೃಹ ಮಂಡಳಿಯ ವಿನೂತನವಾದ ಒಂದು ಕಾರ್ಯಕ್ರಮವಾಗಿದೆ. ಆದರೆ, ಇದಕ್ಕೆ ಬಜೆಟ್ ಪ್ರಾವಿಜನ್ ಗೃಹ ಮಂಡಳಿಯದ್ದು ಇರುವುದಿಲ್ಲ. ಇದಕ್ಕೆ ಈಗಾಗಲೇ ನೀತಿ ನಿಯಮಗಳನ್ನು ರೂಪಿಸಿದ್ದು, ಬೃಹತ್ ಪ್ರಮಾಣದಲ್ಲಿ ಅಂದರೆ, ಹೋಬಳಿ ಮಟ್ಟದಲ್ಲಿ ಗೃಹ ಮಂಡಳಿಯ ವಸತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಹಳಷ್ಟು ಶಾಸಕರು ಹೇಳಿದ್ದರು. ಆ ಹಿನ್ನಲೆಯಲ್ಲಿ ಸಲಹಾ ಸಮಿತಿಯ ಸಹಯೋಗದಲ್ಲಿ ಮಾಡತಕ್ಕಂಥ ಒಂದು ವಿನೂತನ ವಸತಿ ಕಾರ್ಯಕ್ರಮ ಇದಾಗಿದೆ. ಇದಕ್ಕೆ ಮುಖ್ಯಮಂತ್ರಿಯವರ ಹೆಸರನ್ನು ಇಟ್ಟುಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ಹೊಸದಾಗಿ ಸ್ವಯಂ ನಿಯುಕ್ತಿಮಾಡಿಕೊಂಡಿರತಕ್ಕಂಥ ಹಣಕಾಸು ಮಂತ್ರಿಯವರಿಗೆ ನಾನು ಅಭಿನಂದಿಸುತ್ತೇನೆ. ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿರತಕ್ಕಂಥ ನೀವು ಮಾನ್ಯ ಮುಖ್ಯಮಂತ್ರಿಯವರು ಹೆಸರನ್ನು ಇಡಿ. ಆದರೆ, ಈಗಗಾಲೇ ಬಜೆಟ್‌ನಲ್ಲಿ ಹೇಳಿರುವಂತೆ, ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುತ್ತೇವೆ ಎನ್ನತಕ್ಕಂಥ ಪವಿತ್ರ ಭರವಸೆ ಹಾಗೆ, ಇದೂ ಕೂಡ ಉಳಿದುಕೊಳ್ಳಬಾರದು ಎನ್ನತಕ್ಕಂಥಾದ್ದು ನನ್ನ ಆಗ್ರಹ. ಅದಕ್ಕೋಸ್ಕರ ತಾವು ಬೇಜಾರು ಮಾಡಿಕೊಳ್ಳಬೇಡಿ. ನಾನು ಈಗಾಗಲೇ ಹೇಳಿದಂತೆ, ರೋಗಿಗಳ ಕಲ್ಯಾಣ ಸಮಿತಿ ಒಂದನ್ನು ಮಾಡಿದ್ದೀರಿ. ಈಗಾಗಲೇ ಇದೇ ರೀತಿಯಾದ ಎರಡು ಕಾರ್ಯಕ್ರಮಗಳು ನಮ್ಮಲ್ಲಿವೆ. ಅವು ಯಾವುವು ಎಂದರೆ, ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಹಣ ಕೊಡುತ್ತಾರೆ. ಹಾಗೆಯೇ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿ ಆಗಿದ್ದಂಥ ಸಂದರ್ಭದಲ್ಲಿ ಕಿಡ್ನಿ ಮತ್ತು ಹಾರ್ಟ್ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಪರಿಹಾರ ನೀಡಲು ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಇನ್‌ಕಂಟ್ಯಾಕ್ಸ್ ಎಗ್ಸೆಮಪನ್ ತೆಗೆದುಕೊಳ್ಳುವುದಕ್ಕೋಸ್ಕರ ಹಣ ತೆಗೆದುಕೊಳ್ಳಬಹುದು. ಆದರೆ. ಇದನ್ನು ಕೇವಲ ಪ್ರಚಾರಕ್ಕೋಸ್ಕರ ಏಕೆ ಹೇಳುವುಕ್ಕೆ ಹೊರಟಿದ್ದೀರಿ? ಇದು ನನಗಂತೂ ಅರ್ಥವಾಗುತ್ತಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹಳೆಯ ವಾಹನಗಳ ಸಂಚಾರವನ್ನು ನಿರ್ಬಂಧ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಹೊರಟಿದ್ದಾರೆ. ಡೆಲ್ಲಿಯಲ್ಲಿ ಸುಪ್ರಿಂಕೋರ್ಟ್‌ನವರು ಒಂದು ತೀರ್ಮಾನವನ್ನು ಮಾಡಿ, 15 ವರ್ಷಗಳಾಗಿರತಕ್ಕಂಥ ವೆಹಿಕಲ್‌ಗಳನ್ನು ಸ್ಕ್ರ್ಯಾಪ್ ಮಾಡಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುವಂಥಾದ್ದು, ಇವತ್ತು 15 ವರ್ಷಗಳ ಹಳೆಯ ವಾಹನಗಳು ಏನಿವೆ, ಪ್ರತಿ ಎರಡು ವರ್ಷಗಳಿಗೊಮ್ಮೆ ನಾವು ಫಿಟ್‌ನೆಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು 50 ಸಾವಿರ ಲಾರಿ ಮಾಲೀಕರುಗಳು, ಸಿಂಗಲ್ ಲಾರಿ ಓನರ್‌ಗಳು, 15 ವರ್ಷಗಳಾಗಿರತಕ್ಕಂತಹ ವಾಹನಗಳನ್ನು ತೆಗೆಸಿಬಿಡುತ್ತೇವೆಂದು ಹೇಳಿಬಿಟ್ಟರೆ, ಬೆಂಗಳೂರಿನ ಒಳಗಡೆ ಅಂತಹ ವಾಹನಗಳನ್ನು ನಿರ್ಬಂಧ ಮಾಡುತ್ತೇವೆಂದರೆ, ಅದನ್ನು ಮೊದಲು

ಮಾಡಬೇಕಾದವರು ಕಾಪ್ರೊರೇಷನ್‌ನವರು. ಕಾರ್ಪೊರೇಷನ್‌ಗಳ ಲಾರಿಗಳು ಹೇಗಿವೆ ಎಂಬುದನ್ನು ತಾವು ಗಮನಿಸಿರಬಹುದು. ಅದಾದನಂತರ ಲೋಕೋಪಯೋಗಿ ಇಲಾಖೆಯ ವಾಹನಗಳು, ನೀರಾವರಿ ಇಲಾಖೆಯ ವಾಹನಗಳು, ಸರ್ಕಾರದ ಮಟ್ಟದಲ್ಲಿ ಮಾಡುತ್ತೇನೆಂದು ಹೇಳಿದ್ದರೆ, ನಾನು ಅದನ್ನು ಒಪ್ಪಿಕೊಳ್ಳುತ್ತಿದ್ದೆ. ರಾತ್ರಿಯ ಹೊತ್ತು ಮರಳು, ಜೆಲ್ಲಿಗಳನ್ನು ಸಾಗಿಸುವಂತಹ ಲಾರಿಗಳ ಮಾಲೀಕರ ಮೇಲೆ ನಿಮ್ಮ ಕಣ್ಣು ಏತಕ್ಕಾಗಿ ಬಿತ್ತು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಇದಾದಮೇಲೆ ಇನ್ನೊಂದನ್ನು ಹೇಳಿದ್ದಾರೆ, ಪದೇಪದೇ ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಸಿದ್ದ ಉಡುಪು ಕಾರ್ಯ ಪ್ರಗತಿಯಲ್ಲಿದೆ. ಈ ಪಾರ್ಕಿಗೆ ಅಗತ್ಯವಾದ 100 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಅದು ಇನ್ನೂ ಆಗಿಲ್ಲ, ಇದರ ಬಗ್ಗೆ ತಾವು ಕಳೆದ ಎರಡು ವರ್ಷಗಳ ಬಜೆಟ್‌ನಲ್ಲೂ ಸಹ ಪ್ರಸ್ತಾಪ ಮಾಡಿದ್ದೀರಿ; 2000ನೇ: 2001 ರಲ್ಲೂ ಇಸವಿಯಲ್ಲೂ ಸಹ ಸಿದ್ದ ಉಡುಪುಗಳದ್ದೇ ಆಗಿದೆ. ಈ ವರ್ಷವೂ ಸಹ ಅದನ್ನೇ ಹೇಳಿದ್ದೀರಿ. ಈ ಬಗ್ಗೆ ಪದೇಪದೇ ಏತಕ್ಕಾಗಿ ಹೇಳಬೇಕು? ಇದರ ಅವಶ್ಯಕತೆ ಏನಾದರೂ ಇದೆಯೇ? ಇದು ಎಂತಹ ರೆಡಿಮೇಡ್ ಬಜೆಟ್ ಇರಬೇಕು? ಮಾನ್ಯ ಉಪಾಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳು He is an efficient administrator; ther is no doubt. ಆದರೆ ನನಗೆ ಒಂದು ಡೌಟ್ ಏನೆಂದರೆ, ಬಹುಶಃ ಈ ವರ್ಷದ ಬಜೆಟನ್ನು ತಯಾರು ಮಾಡತಕ್ಕಂತಹ ಸನ್ನಿವೇಶದಲ್ಲಿ ಇವರು ಸಮಯವನ್ನು ಕೊಡಲಿಲ್ಲವಾ ಎನ್ನುವ ಡೌಟ್ ನನಗೆ ಬರಲಿಕ್ಕೆ ಶುರುವಾಗಿದೆ. ದೆಹಲಿಯ ರಾಜ್ಯಸಭಾ ಎಲೆಕ್ಷನ್ ಟಿಕೇಟ್ ವಿಚಾರದಲ್ಲಿ ಏನಾದರೂ ಬಿಜಿಯಾಗಿದ್ದರೋ ಅಥವಾ ಕನಕಪುರ ಎಲೆಕ್ಷನ್‌ನಲ್ಲಿ ಸೋತು ಹೋಗಿದ್ದೇವೆ ಎನ್ನುವ ಬೇಸರದಲ್ಲಿ ಇದ್ದರೋ ಅದು ನನಗಂತೂ ಗೊತ್ತಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು):- ನಾವು ಬೆಂಗಳೂರು ಕಾರ್ಪೊರೇಷನ್ ಚುನಾವಣೆಯಲ್ಲಿ ಗೆದ್ದವಲ್ಲಾ ಎನ್ನುವ ಸಂತೋಷಕ್ಕಾಗಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದಾದ ನಂತರವಲ್ಲವೇ ಕನಕಪುರ ಎಲೆಕ್ಷನ್ ನಡೆದಿರುವುದು. ತಾವು ಸಿಟ್ಟನ್ನು ಮಾಡಿಕೊಳ್ಳಬಾರದು, ತಾವು ಏತಕ್ಕಾಗಿ ಸಿಟ್ಟು ಮಾಡಿಕೊಳ್ಳುತ್ತೀರಾ? ಈ ಎರಡೂ ಚುನವಣೆಗಳಿಗೂ ಒಂದೇ ಒಂದು ತಿಂಗಳು ವ್ಯತ್ಯಾಸವಿದೆ. ಇನ್ನೊಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಈ ಪೊಲೀಸ್ ಪಡೆಯ ಆಧುನೀಕರಣಕ್ಕೆ 215 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳಿದರು, ಈಗ ತಾನೇ ಪೊಲೀಸ್‌ನವರು ಒಂದು ಚೀಟಿಯನ್ನು ಕೊಟ್ಟು ಕಳುಹಿಸಿದ್ದಾರೆ. ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆಂದು ಪಾಪ ಅವರಿಗೆ ಗೊತ್ತಿಲ್ಲ, ಇದರ ಬಗ್ಗೆ ಮಾತನಾಡಬೇಕೆಂದು ಅವರು ಚೀಟಿಯನ್ನು ಕೊಟ್ಟು ಕಳುಹಿಸಿದ್ದಾರೆ. ಪೋಲೀಸರಿಗೆ ನೀಡುತ್ತಿದ್ದ ಪಡಿತರ ಆಹಾರ ಪದಾರ್ಥಗಳನ್ನು ಅಕ್ಕಿ, ಸಕ್ಕರೆ, ಗೋಧಿ ಕಳೆದ 6 ತಿಂಗಳುಗಳಿಂದ ಕೊಡುವುದನ್ನು ನಿಲ್ಲಿಸಿದ್ದಾರೆ. ಚುನಾವಣಾ ಸಮಯದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರಿಗೂ ಭತ್ಯೆಯನ್ನು ನೀಡುತ್ತಿಲ್ಲ. ರಿಸ್ಕ್ ಅಲೋಯೆನ್ಸ್ ಇದುವರೆವಿಗೂ ಕೊಟ್ಟಿರುವುದಿಲ್ಲ. ಏತಕ್ಕಾಗಿ ಕೊಟ್ಟಿಲ್ಲ? ಇದಕ್ಕೆ ಕಾರಣವೇನು? ನೀವು ರೇಷನ್ನೇ ಕೊಡದೇ ಇರತಕ್ಕಂತಹ ಜನ, ನಿಮ್ಮ ಕುದುರೆಯನ್ನೇ ಸರಿಯಾಗಿ ಇಟ್ಟುಕೊಳ್ಳದೆ ಹೋದರೆ, ಅದಕ್ಕೆ ಹುರುಳಿ ಹಾಕದೆ ಹೋದರೆ, ಇನ್ನು ಅದರ ಮೇಲೆ ಸವಾರಿ ಹೇಗೆ ಮಾಡುವುದಕ್ಕೆ ಆಗುತ್ತದೆ ಎಂಬುದು ನನಗಂತೂ ಮಾನ್ಯ ಉಪಾಧ್ಯಕ್ಷರೆ

ಅರ್ಥವಾಗದೆ ಇರತಕ್ಕಂತಹ ವಿಚಾರವಾಗಿದೆ. ಈ ಪೊಲೀಸ್ ಆಧುನೀಕರಣವೇನಿದೆ, ಇದು ಒಂದು ರೀತಿಯಲ್ಲಿ I still remember; I appreciate two chief Ministers, one Mr. Bangarappa.

ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು, ಆ ಸಮಯದಲ್ಲಿ ಮಾನ್ಯ ಧರ್ಮಸಿಂಗ್‌ರವರು ಗೃಹಖಾತೆಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಬಹಳ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಪೊಲೀಸ್‌ನವರು ಆಧುನೀಕರಣಕ್ಕಾಗಿ ಕೊಟ್ಟರು. ಅದೇ ರೀತಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರು ಸಹ ಸ್ವಲ್ಪ ಒತ್ತನ್ನು ಪೊಲೀಸ್‌ನವರಿಗೆ ಕೊಟ್ಟಿದ್ದರು. ಬಾಕಿ ಇದ್ದಂತಹ ಸಂದರ್ಭದಲ್ಲಿ ಸಿಕ್ಕಿರುವುದಿಲ್ಲ, ಇದಕ್ಕೆ ಕಾರವೇನೆಂದು ಅರ್ಥವಾಗುತ್ತಿಲ್ಲ. This is a very very sensitive issue.

ಇವತ್ತು ಎಲ್ಲಾ ಕಡೆಗಳಲ್ಲೂ ಕಮ್ಯೂನಲ್ ರೈಟ್ಸ್, ಲಾ ಅಂಡ್ ಆರ್ಡರ್ ಪ್ರಾಬ್ಲಮ್, ಎಷ್ಟೊಂದು ಇದೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಂದು ಸಾರಿ ಒಂದು ಕಡೆ ಕರ್ಫ್ಯೂವನ್ನು 15-20 ದಿನಗಳಿಗೊಮ್ಮೆ... ಮಾನ್ಯ ಶಾಸಕರಾದ ಸೋಮಣ್ಣನವರ ಕ್ಷೇತ್ರದಲ್ಲಿ ಜೆ.ಜೆ. ನಗರದಲ್ಲಿ ಕರ್ಫ್ಯೂವನ್ನು ಹಾಕಿದ್ದರು. ಅಲ್ಲಿ ಆಗಿರತಕ್ಕಂತಹ ಪರಿಣಾಮವೇನೆಂದರೆ, ನಮ್ಮ ರಾಜ್ಯದಿಂದ ತಮ್ಮ ಕ್ಷೇತ್ರದಲ್ಲಿ ಬಹುಶಃ ತಮಗೆ ಜ್ಞಾಪಕದಲ್ಲಿರಬಹುದು, ವಿಶೇಷವಾಗಿ ಮುಸಲ್ಮಾನರು ತಯಾರು ಮಾಡತಕ್ಕಂತಹ ಗಂಧದಕಡ್ಡಿಗಳೇನು ಇವೆ, ನಿಯಮ 50 ರಿಂದ 100 ಕೋಟಿ ರೂಪಾಯಿಗಳು ವರ್ಥ್ ಆಫ್ ಈ ಸುಗಂಧದ ಕಡ್ಡಿಗಳು ಏನಿವೆ, ಅವುಗಳನ್ನು ಎಕ್ಸ್‌ಪೋರ್ಟ್ ಮಾಡತಕ್ಕಂಥಾದ್ದು ನಿಂತುಹೋಯಿತು. ಇದು ಯಾವ ರೀತಿಯಾಗಿ ಎಕಾನಮಿಯ ಮೇಲೆ ಇದರ ಎಫೆಕ್ಟಾಗುತ್ತದೆ ಎಂಬ ಬಗ್ಗೆ ನಾನು ಒಂದು ಉದಾಹರಣೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತಿದ್ದೇನೆ. ಆದರಿಂದಾಗಿ ಈ ಪೊಲೀಸ್ ಆಧುನೀಕರಣಕ್ಕಾಗಿ ತಾವೇನು ಹಣವನ್ನು ಇಡುತ್ತೇನೆ ಎಂದು ಹೇಳಿದ್ದೀರಿ ಈ ಹಣ ಸಾಕಾಗುವುದಿಲ್ಲವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಘೋಷಣೆಗಳನ್ನು ಮಾಡಿದ್ದಾರೆ. ಈ ಎಲ್ಲಾ ವಿಚಾರಗಳು ಮಾನ್ಯ ಸಿಂಧ್ಯರವರ ಗಮನಕ್ಕೆ ಇವೆಲ್ಲವುಗಳೂ ಬರಲಿಲ್ಲವೆಂದು ಅವರು ಹೇಳಬಾರದು. ಈಗ ಅಂಗನವಾಡಿಗಳಿಗೆ ಹಾಲು ಕೊಡುತ್ತೇವೆಂದು ಹೇಳಿದ್ದಾರೆ, ಮೊಟ್ಟೆ ಕೊಟ್ಟಾಯಿತು, ಒಂದೊಂದು ರೂಪಾಯಿಗಳನ್ನು ಕೊಟ್ಟಾಯಿತು, ಈಗ ಹಾಲು ಕೊಡುತ್ತೇವೆಂದು ಹೇಳತಕ್ಕಂತಹ ಕಾರ್ಯಕ್ರಮವನ್ನು ಮಾಡಬೇಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಹಂಪಿ ವಿಶ್ವವಿದ್ಯಾನಿಲಯದಲ್ಲಿ ವಾಲ್ಮೀಕಿ ಪೀಠ, ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಧಾರವಾಡದಲ್ಲಿ ಒಂದು ಪೀಠ, ಶ್ರೀ ಕೆ.ಹೆಚ್.ಪಾಟೀಲ್ ರವರು ನಮ್ಮ ರಾಜ್ಯ ಕಂಡಂತಹ ಅತ್ಯಂತ ದಕ್ಷ ಮಹಾನ್ ಪ್ರತಿಭಾವಂತ ಮುಖಂಡರು, ಅವರ ಹೆಸರಿನಲ್ಲಿ ಒಂದು ಪೀಠ, ಇದನ್ನು ನಾವು ಸ್ವಾಗತ ಮಾಡುತ್ತೇವೆ. ಬೆಂಗಳೂರು ಬಿಡಿಎನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. 15 ರಿಂದ 20 ಸಾವಿರ ನಿವೇಶನಗಳನ್ನು ಮಾಡಿದ್ದಾರೆ, I appreciate that, ಅದನ್ನು ನಾನು ಕ್ರಿಟಿಸೈಸ್ ಮಾಡುವುದಕ್ಕೆ ಹೋಗುವುದಿಲ್ಲ. ಉತ್ತರ ಕರ್ನಾಟಕದ ಹೈಕೋರ್ಟ್ ಪೀಠಕ್ಕೆ ಸುಮಾರು 10 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು, ಈ ಲಂಬಾಣಿ ತಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ

ಮಾಡುವುದಕ್ಕೆ ತಾವು ಯೋಜನೆಯನ್ನು ಮಾಡಿರುವುದು, ಈ ವೇತನ ಆಯೋಗವನ್ನು 10 ವರ್ಷಕ್ಕೆ ಒಂದು ಸಾರಿ ಮಾಡುತ್ತೇವೆಂದು ಹೇಳಿರುವುದು, ಈ ಆಲಮಟ್ಟಿ ಜಲಾಶಯ ಏನಿದೆ, 525 ಮೀಟರ್‌ಗೆ ನೀರನ್ನು ನಿಲ್ಲಿಸಿದರೆ ಅಲ್ಲಿ ಇನ್ನೊಂದಿಷ್ಟು ಅಕ್ವಿಜಿಷನ್ ಮತ್ತು ನಿರಾಶ್ರಿತರು ಹೆಚ್ಚಾಗುತ್ತಾರೆ; ಅವರಿಗೆ ಕೊಡತಕ್ಕಂತಹ ಹಣವನ್ನು ಇದೇ ಪ್ರಮಾಣದಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ, 519ರವರೆಗೆ ಏನು ಅಕ್ವಿಜಿಷನ್ ಮಾಡಲಿಕ್ಕೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದೀರಿ, ಅದನ್ನು 525ಕ್ಕೂ ಸಹಿತ ಕೊಡುತ್ತೇವೆಂದು ಹೇಳುವುದಕ್ಕೆ ಹೊರಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) :- ಮಾನ್ಯ ಉಪಾಧ್ಯಕ್ಷರೆ, ನಾನು ಮಧ್ಯೆ ಪ್ರವೇಶಿಸುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಾಗಲಕೋಟೆ ಪ್ರದೇಶದ ಜನರ ಬಗ್ಗೆ ತಳೆದಂತಹ ನಿಲುವು ಏನಿದೆ ಅದನ್ನು ನಾನು ಮೊನ್ನೆ ಸ್ವಾಗತ ಮಾಡಿದ್ದೇನೆ. ಆದರೆ ದೌರ್ಭಾಗ್ಯವಶಾತ್ ನಮ್ಮಲ್ಲಿ, ಎಲ್ಲಾ ಜನರಲ್ಲಿ ಆತಂಕ ಮೂಡಿದೆ, 524 ರವರೆಗೆ ಪೀಡಿತ ಪ್ರದೇಶ ಅನ್ನುವಂತಹದ್ದನ್ನು ಘೋಷಣೆ ಮಾಡಿರುವಂಥಾದ್ದು, ಆದರೆ ಅಕ್ವಿಜಿಷನ್ ಎಷ್ಟರವರೆವಿಗೆ ಮಾಡುತ್ತೇವೆ, ಟೈಮ್‌ಬಾಂಡ್ ಹಾಕಿಕೊಳ್ಳುವಂತಹ ಕಾರ್ಯಕ್ರಮ ಆಗಲಿಲ್ಲ. ಏಕೆಂದರೆ, ಈಗಾಗಲೇ 519.6 ರವರೆಗೆ ಅಕ್ವಿಜಿಷನ್ ಮಾಡುವಂತಹ ವ್ಯವಸ್ಥೆ ಇವತ್ತಿಗೆ 18 ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಒಂದು 5 ವರ್ಷದ ಟೈಮ್‌ಬಾಂಡ್‌ನ್ನು ಹಾಕಿಕೊಳ್ಳಿ. 5 ವರ್ಷವೋ ಏನೋ ಒಂದು ಪೀರಿಯಡನ್ನು ಹಾಕಿ ಅಕ್ವಿಜೆಷನ್ ಮಾಡುವಂತಹ ಕಾರ್ಯಕ್ರಮ ಹಾಕಿದರೆ ಸಂಪೂರ್ಣವಾಗಿ ನಮ್ಮ ಬಾಗಲಕೋಟೆ ಜನ ತಮ್ಮ ಪರವಾಗಿರುತ್ತಾರೆ. ಆದ್ದರಿಂದ ತಮ್ಮನ್ನು ನಾವು ಕೇಳುತ್ತಿದ್ದೇವೆ. ಇದರಲ್ಲಿ ಯಾವುದೇ ಸಂಶಯಗಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಪೂಜಾರ್‌ರವರು ಹೇಳಿರುವಂತಹ ವಿಚಾರವನ್ನು ನಾನೂ ಸಹಿತ ಸ್ವಾಗತ ಮಾಡಿದ್ದೇನೆ. ಅದರ ಬಗ್ಗೆ ತಾವು ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಈ ಬ್ಯಾಕ್‌ಲಾಗ್ 3900 ಹುದ್ದೆಗಳನ್ನು ತುಂಬುವಂತಹದ್ದು, ಈ ರುಡ್‌ಸಿಟಿಯ ಕಾರ್ಯಕ್ರಮ I appreciate that, ಮಾನ್ಯ ಉಪಾಧ್ಯಕ್ಷರೆ, ಕೆನರಾ ಬ್ಯಾಂಕಿನಿಂದ ನನ್ನ ಸ್ವಂತ ಕನಕಪುರ ಕ್ಷೇತ್ರದಲ್ಲಿ ಈ ರುಡ್‌ಸಿಟಿ ಒಂದು ಪ್ರೈಮ್ ಇನ್‌ಸ್ಟಿಟ್ಯೂಟ್‌ನ್ನು ನಾನು ಮಾನ್ಯ ಶ್ರೀ ಜನಾರ್ಧನ ಪೂಜಾರಿಯವರು ಹಣಕಾಸಿನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡಿಸಿದ್ದೇನೆ. Sir, I will tell you, ಈ ಐಆರ್‌ಡಿಪಿನಿಂದ ಈ ಸಾಲಗಳನ್ನು ತೆಗೆದುಕೊಳ್ಳುವಂತಹ ವಿಚಾರಗಳು ಏನಿದೆ, ಅದು ನಿಜವಾಗಿಯೂ ಸಹಿತ ನಮ್ಮ ಹೆಣ್ಣುಮಕ್ಕಳಿಗೆ ಸೆಲ್ಫ್ ಎಂಪ್ಲಾಯ್‌ಮೆಂಟ್ ಮಾಡುವಂತಹವರಿಗೆ ಇದು ಒಂದು ಟ್ರೈನಿಂಗ್ ಸೆಂಟರ್ If that is so, it is really good. ನಮ್ಮ ಶಾಸಕರ ನಿಧಿಯಿಂದ ಕೊಡತಕ್ಕಂತಹ ಹಣವೇನಿದೆ, ಅದಕ್ಕಲ್ಲದೆ ಇನ್ಯಾವುದಕ್ಕೆ ಕೊಡಬೇಕು? ಖಂಡಿತವಾಗಿಯೂ ಸಹ ಅದಕ್ಕೆ ಕೊಡಬೇಕು, ಅದನ್ನು ಸಹ ನಾವು ಒಪ್ಪುತ್ತೇವೆ. ಈ ಸ್ಪ್ರಿಂಕ್‌ಲರ್ ಮತ್ತು ಹನಿ ನೀರಾವರಿ ಸಾಧನಗಳಿಗೆ ಅದರ ಮೇಲೆ ಇರತಕ್ಕಂತಹ ಮಾರಾಟ ತೆರಿಗೆಯನ್ನು ರದ್ದು ಮಾಡಿರತಕ್ಕಂಥಾದ್ದು, ಅದನ್ನೂ ಸಹ ನಾನು ಒಪ್ಪುತ್ತೇನೆ, Bright prospects of this budget. ಅದನ್ನು ನಾನು ಹೇಳದೇ ಹೋದರೆ ಮಾನ್ಯ ಮುಖ್ಯಮಂತ್ರಿಗಳು ಸಿಟ್ಟು ಮಾಡಿಕೊಂಡು ಬಿಡುತ್ತಾರೆ. Abolition of turnover tax. ಇದರ ಬಗ್ಗೆ ಎಲ್ಲಾ ಚೇಂಬರ್ಸ್

ಆಫ್ ಕಾಮರ್ಸ್‌ನವರೂ ಸಹ ಇದನ್ನು ಕೇಳುತ್ತಿದ್ದರು. ತೆರಿಗೆ ಸುಧಾರಣೆ ದೃಷ್ಟಿಯಿಂದಾಗಿ ನನಗನ್ನಿಸುತ್ತದೇನೆಂದರೆ, ಇದನ್ನು ಮಾಡಿರತಕ್ಕಂಥಾದ್ದು ಒಂದು ಒಳ್ಳೆಯ ಕಾರ್ಯಕ್ರಮ, ಬಹುಶಃ ನಿಮ್ಮ ಮೇಲೆ ಬಹಳ ಒತ್ತಡ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆ ಒತ್ತಡಗಳಿಗೆ ತಾವು ಮಣಿಯದೆ ಈ ಟರ್ನ್ ಓವರ್ ಟ್ಯಾಕ್ಸ್‌ನ್ನು ಅಬಾಲಿಷ್ ಮಾಡತಕ್ಕಂಥಾದ್ದು, ಇಡೀ ಸದನವು ಒಪ್ಪುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಈ ರಾಜ್ಯದ ಒಳಗಡೆ ಇರತಕ್ಕಂತಹ ಕಮರ್ಷಿಯಲ್ ಟ್ಯಾಕ್ಸ್ ಮತ್ತು ಸೇಲ್ಸ್‌ಟ್ಯಾಕ್ಸ್, ಚೆಕ್‌ಪೋಸ್ಟ್‌ಗಳು. that is intervening checkposts ಏನಿವೆ, ಅದನ್ನು ಅಬಾಲಿಷ್ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಬಾರ್ಡರ್ ಚೆಕ್‌ಪೋಸ್ಟ್‌ಗಳನ್ನು ಈಗ ಸದ್ಯಕ್ಕೆ ರೀಟೈನ್ ಮಾಡಿಕೊಂಡು ಉಳಿದವುಗಳನ್ನು ತಾವು ಏನು ಮಾಡುತ್ತೇವೆಂದು ಹೇಳಿದ್ದೀರಿ, this is a good programme, for example ಈ ಎಕ್ಸೈಸ್‌ನಲ್ಲಿ, ಎಕ್ಸೈಸ್ ಡ್ಯೂಟಿಯನ್ನು ಮತ್ತು ಸೇಲ್ಸ್ ಟ್ಯಾಕ್ಸ್‌ನ್ನು ಮರ್ಜ್ ಮಾಡತಕ್ಕಂತಹದ್ದು ಬಹಳ ದಿವಸಗಳಿಂದಲೂ ಇದೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರು ಕೊನೆಯ ದಿನಗಳಲ್ಲಿ ಅದನ್ನು ಕಾರ್ಯಗತ ಮಾಡಬೇಕೆಂದು ಇದ್ದರು. ಬಹಳ ಜನಗಳಿಗೆ ಸಂಶಯವಿತ್ತು, ಇದನ್ನು ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ಲುಕ್ಸಾನ್ ಆಗುತ್ತದೆ ಎಂದು. ಅದು ಲುಕ್ಸಾನ್ ಆಗಿಲ್ಲ, It has proved to be correct. ನಮ್ಮ ಅಸೆಸ್‌ಮೆಂಟ್ ಏನಿತ್ತು? ಸುಮಾರು 20 ರಿಂತ 30 ಕೋಟಿ ರೂಪಾಯಿಗಳು ಹೆಚ್ಚಾಗುತ್ತದೆ. It has happened. That should be retained. That also we appreciate. ಅದನ್ನು ನಾನು ಮುಂದುವರಿಸಿಕೊಂಡು ಹೋಗುತ್ತೇನೆಂದು ಹೇಳಿದ್ದೀರಿ. That above we appreciate,

1.20 ಪಿ.ಎಂ.

ಈ ಬಾರ್ಡರ್ ಚೆಕ್ಪೋಸ್ಟ್‌ಗಳನ್ನು ರೀಟೈನ್ ಮಾಡಿಕೊಂಡು, ಮೊಬೈಲ್ ಸ್ಕ್ವಾಡ್‌ಗಳು ಬೇಕಾದಷ್ಟು ಇವೆ, ಅವರುಗಳು ಕಡೆಯಿಂದ ಈ ಕೆಲಸವನ್ನು ಮಾಡಿದರೆ ಸಾಕಾಗುತ್ತದೆ. That should not become an harrassment. This is also birghter aspect of your budget. ಹೌಸಿಂಗ್ ರಿಲೇಟಿಂಗ್ ಅಕ್ಟಿವಿಟೀಸ್‌ಗೆ ಸ್ವಲ್ಪ ಕನ್‌ಸಿಷನ್‌ಗಳನ್ನು ಬಜೆಟ್‌ನಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ತೋರಿಸಿದ್ದೀರಿ. That also I appreciate. That is an income development activity? ಹಳ್ಳಿಗಳಲ್ಲಿ ಏನಾಗಿದೆ ಎಂದರೆ, ಸಿಮೆಂಟನ್ನು ತೆಗೆದುಕೊಂಡರೆ, ಗಾರೆ ಕೆಲಸದವರಿಗೆ, ಇಟ್ಟಿಗೆ ಮಾಡುವವರಿಗೆ, ಹೆಂಚುಗಳನ್ನು ಮಾಡುವವರಿಗೆ ಮತ್ತು ಮಾರುವವರಿಗೆ ಮತ್ತು ಮಾರಾಟ ಮಾಡುವವರಿಗೆ ದುಡ್ಡು ಸರ್ಕುಲೇಟಾಗುತ್ತದೆ. ಸುಮಾರು 200, 250 ಕೋಟಿ ರೂಪಾಯಿಗಳ ಹಣ ಸರ್ಕುಲೇಟ್ ಆದರೆ ಅದರಿಂದಾಗಿ 1000 ಕೋಟಿ ರೂಪಾಯಿಗಳ ಬಜೆಟಾಗುತ್ತದೆ. ಈ ವಿಷಯ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರಬಹುದು. ಕೇಂದ್ರ ಸರ್ಕಾರದವರು ಕ್ರಾಪ್ ಇನ್ಸೂರೆನ್ಸ್ ಸ್ಕೀಮ್‌ನ್ನು, ಅವರ ನಾರ್ಮ್ಸ್‌ನ್ನು ರಿವೈಸ್ ಮಾಡಬೇಕೆಂಬ ಮಾತನ್ನು ತಾವು ಮೊನ್ನೆ ಒಂದು ಭಾಷಣದಲ್ಲಿ ಹೇಳಿದ್ದೀರಿ. ನಾನು ತಮ್ಮ ಭಾಷಣವನ್ನು ಬಹಳ ಹತ್ತಿರದಿಂದ ಗಮನಿಸಿದ್ದೇನೆ. ಅದು ಬಹಳ ಒಳ್ಳೆಯದು. ಇವತ್ತು ಕೇಂದ್ರ ಸರ್ಕಾರದ ಮೇಲೆ ನಾವೆಲ್ಲರೂ ಸೇರಿ ಒತ್ತಡ ತರಬೇಕು. ಒಂದು ಕಡೆ ನಾವು ಎಂಎಸ್‌ಪಿ ನಿಲ್ಲಿಸಬೇಕೆಂಬ ವಿಚಾರವಿದೆ; ಇನ್ನೊಂದು ಕಡೆ ಮಾರ್ಕೆಟ್ ಇಂಟರ್‌ವೆನ್‌ಷನ್ ಗೌರ್ನಮೆಂಟ್ ಆಫ್ ಇಂಡಿಯಾ

ಮಾಡುವುದಿಲ್ಲ, ಸ್ಟೇಟ್ ಗೌರ್ನಮೆಂಟ್ ಮಾಡಿಕೊಳ್ಳಲಿ ಎಂದು ಹೇಳಿ ಸ್ಟೇಟ್ ಗೌರ್ನಮೆಂಟ್‌ನ ಎಕ್ಸ್ ಚೆಕ ರ್ ಮೇಲೆ ಬರ್ಡನ್ ಆಗತಕ್ಕಂತಹ ಸನ್ನಿವೇಶಗಳು ಬಂದಿದೆ. ಅಂತಹ ಸನ್ನಿವೇಶದಲ್ಲಿ, ಅಟಲೀಸ್ಟ್ ಕ್ರಾಪ್ ಇನ್ಸೂರೆನ್ಸ್ ನಮ್ಮ ರೈತರಿಗೇನಾದರು ಬಂದರೆ ಇದು ನಿಜವಾಗಿಯೂ ಯಶಸ್ವಿಯಾಗಿದಲ್ಲಿ ಇದಕ್ಕಿಂತ ಉಪಕಾರದ ಕೆಲಸ ಇನ್ನೇನೂ ಸಹಿತ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ತಾವು ಮಾಡಿರತಕ್ಕಂತಹ ಹೇಳಿಕೆ ಏನಿದೆ ಇದನ್ನು ನಾನು ವೆಲ್‌ಕಂ ಮಾಡುವುದರ ಜೊತೆಗೆ ಈ ಹೌಸಿಂಗ್ ರಿಲೇಟೆಡ್ ಅಕ್ಟಿವೀಟೀಸ್‌ಗೆ ಕೊಟ್ಟಿರತಕ್ಕಂತಹ ಕನ್‌ಸಿಷನ್, ಟ್ಯಾಕ್ಸ್ ಪೇಯರ್ಸ್‌ಗೆ ಗೋಲ್ಡ್ ಕಾರ್ಡು ಕೊಡತಕ್ಕಂತಹ Novel scheme ಏನಿದೆ. This is also good. ಇನ್ನು Form 39 Self Declaration. ಏನಿದೆ ಇದರಿಂದ, ಎಸ್.ಎ.ಎಸ್.ಗಳನ್ನು ನಾವು ಮುನಿಸಿಪಾಲಿಟಿಗಳಲ್ಲಿ ಮತ್ತು ಕಾರ್ಪೊರೇಷನ್‌ಗಳಲ್ಲಿ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, It is one way gpd. It is good. ಈ ದೃಷ್ಟಿಯಿಂದಾಗಿ, ಇಂಥ ಕೆಲವು ವಿಚಾರಗಳನ್ನು ತಾವು ಏನು ಮಾಡುವುದಕ್ಕೆ ಹೊರಟಿದ್ದೀರಿ, ಇದನ್ನು ನಾನು ಕ್ರಿಟಿಸೈಸ್ ಮಾಡುವುದಕ್ಕೆ ಹೋಗುವುದಿಲ್ಲ. ಈ ವರ್ಷದ ಬಜೆಟ್‌ನ ಬಗ್ಗೆ ಒಟ್ಟಾರೆ ಹೇಳುವುದಾದರೆ, ದೂರದೃಷ್ಟಿಯಿಲ್ಲದಿರತಕ್ಕಂತಹ ಒಂದು ಬಜೆಟ್ ಆಗಿದೆ. ರೋಗಿಯಾಗಿರತಕ್ಕಂತಹ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೊಸ ಬಟ್ಟೆಗಳನ್ನು ಹಾಕಿ ರೋಗ ವಾಸಿಯಾಯಿತೆಂದು ಹೇಳತಕ್ಕಂಥಾದ್ದು ಆ ಬಗ್ಗೆ ತಾವು ಪ್ರಯತ್ನ ಮಾಡುತ್ತಿದ್ದೀರಿ; ಸತ್ಯವನ್ನು ಮರೆಮಾಡುತ್ತಿದ್ದೀರಿ ಎನ್ನುವುದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ತಾವು ಹೊಸ ತೆರಿಗೆಗಳನ್ನು ಹಾಕಿಲ್ಲವೆಂದು ಹೇಳಿದ್ದೀರಿ, ತಾವು ಹೊಸ ತೆರಿಗೆಗಳನ್ನು ಹಾಕಿದ್ದೀರಿ, 1700 ಕೋಟಿ ರೂಪಾಯಿಗಳನ್ನು ನಿಮ್ಮ ಟರ್ನ್ ಓವರ್ ಟ್ಯಾಕ್ಸ್ ರದ್ದು ಮಾಡಿರುವುದರಿಂದಾಗಿ ಇದು ನನ್ನ ಗಮನಕ್ಕೆ ಬಂದಿರುವ ಹಾಗೆ, ಇವರಿಗೆ ಟಿಒಟಿಯಿಂದಾಗಿ ಸುಮಾರು 840 ಕೋಟಿ ರೂಪಾಯಿಗಳು ರದ್ದಾಗುತ್ತದೆ. ಸೆಸ್‌ನ್ನು ತಾವು ನಿಲ್ಲಿಸಿದ್ದೀರಿ, ಅದರಿಂದಾಗಿ ಸುಮಾರು 143 ಕೋಟಿ ರೂಪಾಯಿಗಳು ರದ್ದಾಗುತ್ತದೆ; ಸುಮಾರು 200 ಕೋಟಿ ರೂಪಾಯಿಗಳಷ್ಟು ಎಂಟ್ರಿಟ್ಯಾಕ್ಸ್ ಮತ್ತು ರಾ-ಮೆಟೀರಿಯಲ್ಸ್ ಅದರಿಂದಾಗಿ ಸುಮಾರು 1183 ಕೋಟಿ ರೂಪಾಯಿಗಳು ರದ್ದಾಗುತ್ತದೆ. ಇದರ ಜೊತೆಗೆ ಇದನ್ನು ರದ್ದು ಮಾಡಿರುವುದರಿಂದಾಗಿ, ನೀವು ಏನು ಮಾಡಿದ್ದೀರೆಂದರೆ, ಸುಮಾರು 54 ಕಮಾಡಿಟೀಸ್‌ಗೆ ಕೆಲವು ಸ್ಲ್ಯಾಬ್‌ಗಳನ್ನು ಮಾಡಿದ್ದೀರಿ. 4-8-12 ಇದ್ದದ್ದನ್ನು 4-8-12-15 ಎಂದು ಮಾಡಿದ್ದೀರಿ. ಸ್ಪೆಷಲ್ ಕ್ರೆಡಿಟ್ಸ್ ಏನಿತ್ತು 2 ಮತ್ತು 20 ಅದನ್ನು ಹಾಗೆಯೇ ನೀವು ಕಂಟಿನ್ಯೂ ಮಾಡಿಕೊಂಡು ಬಂದಿದ್ದೀರಿ. ಅದರ ಅರ್ಥವೇನೆಂದರೆ, ನಿಮ್ಮ ಅಡಿಷನಲ್ ರಿಸೋರ್ಸ್ ಮೊಬಿಲೈಜೇಷನ್ ಸುಮಾರು 1600 ರಿಂದ 1700 ಕೋಟಿ ರೂಪಾಯಿಗಳಾಗುತ್ತದೆಂದು ತಾವೇನು ಭಾವಿಸಿದ್ದೀರಿ, ಇದರಲ್ಲಿ ತಮ್ಮ ಲೆಕ್ಕಾಚಾರಗಳಿದೆ. There is hidden tax in this budget, which is not being told. ಇದನ್ನು ಬಹಳ ಬುದ್ಧಿವಂತಿಕೆಯಿಂದ ತಯಾರು ಮಾಡಿದ ಕೆಲವರು ಮಾರಾಟ ತೆರಿಗೆ ದರದಲ್ಲಿನ ಪ್ರಸ್ತಾವಿತ ಮಾರ್ಪಾಡುಗಳು, ಏನು ಹೇಳಿದ್ದಾರೆಂದರೆ, ಇದನ್ನು ಓದತಕ್ಕಂಥವರಿಗೆ ಯಾವುದೇ ತೆರಿಗೆಗಳು ಇಲ್ಲ, ಎಂದು ಕೆಲವರು ಇದರ ಬಗ್ಗೆ ವಿಶ್ಲೇಷಣೆ ಮಾಡುವಾಗ ಈ ರೀತಿ ಬರೆದಿದ್ದಾರೆ. 54 ಕಮಾಡಿಟೀಸ್ ಮೇಲೆ 2 ಇದ್ದದ್ದು 4, 4 ಇದ್ದದ್ದು 8, 8 ಇದ್ದದ್ದು 15, 2 ಇದ್ದದ್ದು 20 ಆಗಿದೆ. ತಾವು ಟ್ಯಾಕ್ಸ್‌ನ್ನು ಹಾಕಿದ್ದೀರಿ; ಆದರೆ ಏನು ಮಾಡಿದ್ದೀರೆಂದರೆ, ಉದ್ದೇಶಿತ ದರದ ತೆರಿಗೆ 15-4 ಸ್ಲ್ಯಾಬ್‌ನ್ನು ಮಾತ್ರ ಮೆನ್‌ಷನ್ ಮಾಡಿದ್ದೀರಿ; ಇದು ಹಿಂದೆ ಎಷ್ಟು ಇತ್ತು?

ಅದನ್ನು ಹೇಳುವುದಕ್ಕೆ ಹೋಗಿಲ್ಲ. ಅದಕ್ಕೋಸ್ಕರವೇ ನಾನು ಹೇಳಿದ್ದೇನೆ, ಇದು ಅಲಂಕಾರದಿಂದ ಕೂಡಿರತಕ್ಕಂತಹ, ಅಲಂಕಾರದ ಶಬ್ದಗಳಿಂದ ಕೂಡಿರತಕ್ಕಂತಹ, ಸತ್ಯವನ್ನು ಮರೆಮಾಚಿರತಕ್ಕಂತಹ ಒಂದು ಬಜೆಟ್ ಇದು. ಎಂದು ನಾನು ಪ್ರಾರಂಭದಿಂದಲೂ ಹೇಳಿದ್ದೇನೆ. ಈ ವರ್ಷ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಭಾಷಣದಲ್ಲಿ 1375 ಕೋಟಿ ರೂಪಾಯಿಗಳ ಭಾರಿ ಕೊರತೆ ಉಂಟಾಗಿದೆ, ಎಂದು ಹೇಳಿದ್ದಾರೆ ನನ್ನ ಅಂದಾಜಿನಲ್ಲಿ, ಮುಂದಿನ ವರ್ಷ ತಾವು 2300 ಕೋಟಿ ರೂಪಾಯಿಗಳ ಭಾರಿ ಕೊರತೆ ಇದೆ ಎಂಬ ಮಾತನ್ನು ಇದೇ ಸದನದಲ್ಲಿ ತಾವು ಹೇಳುವವರಿದ್ದೀರಿ. ಇದಕ್ಕೆ you have to take strong decisions what are those strong decisions? ನಿಮಗೆ ರೆವಿನ್ಯೂ ರಸೀಟ್‌ನಲ್ಲಿ ಯಾವ ರೀತಿಯಾಗಿ ಕಡಿಮೆಯಾಗಿದೆ, ಎಕ್ಸ್‌ಪೆಂಡಿಚರ್ ಏನಿದೆ, ಎಕ್ಸ್‌ಪೆಂಡಿಚರ್‌ನಲ್ಲಿ ನೀವು ಕಂಟ್ರೋಲ್ ಮಾಡುವುದಕ್ಕೆ ಹೋಗುತ್ತಿಲ್ಲ. ಉದಾಹರಣೆಗೆ ನನಗೆ ಬಂದಿರತಕ್ಕಂತಹ ತಿಳುವಳಿಕೆಯ ಪ್ರಕಾರವಾಗಿ ಪ್ಲಾನ್ ಕ್ಯಾಪಿಟಲ್ ಎಕ್ಸ್ ಪೆಂಡಿಛರ್ 12 ಪರ್ಸೆಂಟ್‌ನಷ್ಟು ಕಡಿಮೆಯಾಗಿದೆ. What are the methods you suggest. ಎಂದು ನೀವು ಕೇಳಬಹುದು. I strongly feel ಏನು ಮಾಡಬೇಕೆಂದು ಹೇಳಿ, ನೀವು ರಾಜಕೀಯ ಒತ್ತಡಗಳಿಗೆ ಒಳಗಾಗಿ ಅನೇಕ ಹೊಸಹೊಸ ಸ್ಯಾಂಕ್ಷನ್‌ಗಳನ್ನು ಕೊಡುತ್ತಿದ್ದೀರಿ 120-130 ಸ್ಕೀಮ್‌ಗಳಿಗೆ, ಆ ಕಡೆ ಸಮುದ್ರಕ್ಕೆ ಹರಿಯತಕ್ಕಂತಹ ಎಲ್ಲಾ ಹೊಳೆಗಳನ್ನು ಈ ಕಡೆಗೆ ತಿರುಗಿಸುತ್ತೇನೆಂದು ಹೇಳಿದ್ದೀರಿ. ಅದು ಸಾಧ್ಯನಾ: 3 ವರ್ಷಗಳ ಹಿಂದಿನ ಮಾತು ಅದು ಸಾಧ್ಯನಾ? ಅದು ಸಾಧ್ಯವಿಲ್ಲದಿರತಕ್ಕಂಥಾದ್ದು: ನಿಮ್ಮ ಹತ್ತಿರ ಅಷ್ಟೊಂದು ರಿಸೋರ್ಸ್‌ಸ್ ಇಲ್ಲ. ನೀವು ತೆಗೆದುಕೊಂಡಿರತಕ್ಕಂತಹ ಇರಿಗೇಷನ್ ಪ್ರಾಜೆಕ್ಟ್ ಅದನ್ನು ಕಂಪ್ಲೀಟ್ ಮಾಡುವುದಕ್ಕೇ ನಿಮ್ಮ ಹತ್ತಿರ ಹಣವಿಲ್ಲ. ಆ ಕಡೆಯಿಂದ ಇರತಕ್ಕಂತಹ ನಿಮ್ಮ ದೂರದೃಷ್ಟಿ, ನಿಮ್ಮ ಸ್ಟೇಟ್ ಮೆಂಟ್‌ಶಿಫ್ ಇವೆಲ್ಲವೂ ಒಂದು ಕಡೆಯಾಯಿತು, ಇದರ ಬಗ್ಗೆ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಬೇಕು. ಇದನ್ನು ಎಲ್ಲಿ ಮಾಡುವುದಕ್ಕಾಗುತ್ತದೆ? ಅದಕ್ಕೋಸ್ಕರವಾಗಿ better methods for effective collectionಗೆ ನೀವು ವ್ಯವಸ್ಥೆ ಮಾಡಿಕೊಳ್ಳದೆ ಹೋದರೆ, ನನಗನ್ನಿಸುತ್ತದೆ ನೀವು ಬಹಳ ದೊಡ್ಡ Death Trap ನಲ್ಲಿ ಸಿಕ್ಕಿಹಾಕಿಕೊಳ್ಳುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ನೀವು 13 ಪರ್ಸೆಂಟ್ ನ್ಯಾಚುರಲ್ ಗ್ರೋಥ್ ಎಂದು ಹೇಳಿದ್ದೀರಿ, ಇದು ಸಾಧ್ಯವಾಗದೆ ಇರತಕ್ಕಂತಹ ಮಾತು ಎಂದು ಹೇಳುತ್ತೇನೆ. ಈ ಲಾರಿ ಮಾಲೀಕರ ಒಕ್ಕೂಟದವರು ಒಂದು ಮನವಿಯನ್ನು ಕೊಟ್ಟಿದ್ದಾರೆ. ಬ್ಯಾಡ್ ವರ್ಡ್ ಕ್ಲಾಸ್, ಮೈನಾರಿಟೀಸ್ ಮತ್ತು ಷೆಡ್ಯೂಲ್ ಕ್ಯಾಸ್ಟ್‌ಗೆ ಕಮೀಷನ್ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ಅನೌನ್ಸ್ ಮಾಡುವುದನ್ನು ಬಿಟ್ಟರೆ, ಕಾಂಗೆಸ್ ಎಂದರೆ ಹಿಂದುಳಿದವರ್ಗದವರು, ಕಾಂಗ್ರೆಸ್ ಎಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ಪರವಾಗಿ ಇರತಕ್ಕಂತಹ ಪಕ್ಷ ಎಂದು ಹೇಳಿಕೊಳ್ಳುತ್ತೀರಿ. ಆದರೆ ನಿಮಗೆ ನಾನೊಂದು ರಹಸ್ಯವಾಗಿರತಕ್ಕಂತಹ ಸುತ್ತೋಲೆಯನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಕಳುಹಿಸುತ್ತಿದ್ದೇನೆ ಮಹಾಸ್ವಾಮಿ, ಇದರಿಂದಾಗಿ ಅವರಿಗೆ ತೊಂದರೆಯಾಗಬಹುದೆಂದು ನಾನು ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ, ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ಗೆ ಕೊಡುತ್ತಿರತಕ್ಕಂತಹ ಹಣ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಡುತ್ತಿರುವಂತಹ ಹಣ, ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಕೊಡುತ್ತಿರುವಂತಹ ಹಣ, ಅದರಲ್ಲಿ ಒಂದು ದೊಡ್ಡ ಸತ್ಯವನ್ನು ಮರೆಮಾಚುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಿ. ಇದನ್ನು ಎಷ್ಟೊಂದು

ಬುದ್ಧಿವಂತಿಕೆಯಿಂದ ಮಾಡಿಸುತ್ತಿದ್ದಾರೆಂದರೆ, ಈ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಮಾಡಿದ ಆದಾಯದಲ್ಲಿ ಸ್ವಲ್ಪ ಭಾಗವನ್ನು ಖಬರಸ್ಥಾನ್ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ಬಳಸಿಕೊಳ್ಳಬೇಕು; ಖಬರಸ್ಥಾನಕ್ಕೆ ಎಲ್ಲಿದೆ ಹಣ? ಅದು ಖಬರಸ್ಥಾನಕ್ಕೆ ಹೋಗಬೇಕಾಗುತ್ತದೆ. ಹಣವೆಲ್ಲಿದೆ? ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ ಕಾಸ್ಟ್ ಮತ್ತು ಮೈನರ್ ಕಮ್ಯುನಿಟೀಸ್‌ಗೆ ತಾವು ಸಹಿತ ಇದರಲ್ಲಿ ಹಣವನ್ನು ಒದಗಿಸಲಿಕ್ಕೆ ವಿಫಲರಾಗಿದ್ದೀರಿ. ಏಕೆಂದರೆ ನಿಮ್ಮ ಹತ್ತಿರ ಹಣವಿಲ್ಲ, ಹಿಂದುಳಿದ ವರ್ಗದವರಿಗೂ ನಿಮ್ಮ ಕೈಯಲ್ಲಿ ಮಾಡುವುದಕ್ಕಾಗಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿರುವುದು; ಇದಾಗಿದೆ, ತಾವು ದಯಮಾಡಿ ಏಪ್ರಿಲ್-ಮೇ-ಜೂನ್ ತಿಂಗಳೊಳಗಡೆ ರಾಜ್ಯದ ರೈತರ ಪಾಲಿಗೆ ತಾವು ಸಹಕಾರಕ್ಕೆ ಬರಬೇಕಾಗುತ್ತದೆ. ವಿದ್ಯುತ್ ಸರಬರಾಜು uninterrupted ಕೊನೆಯಪಕ್ಷ ಒಂದು 6 ಗಂಟೆಯಾದರೂ ಕೊಡಬೇಕು. You require only about Rs. 100 crores, not beyond that. 200 ಮೆಗಾವ್ಯಾಟ್ ಅಷ್ಟು ಪವರ್‌ನ್ನು ನೀವು ಪ್ರತಿದಿನ ಪರ್ಚೇಸ್ ಮಾಡುವುದಾದಲ್ಲಿ, ನೀವೇನು ನೆಗೋಷಿಯೇಟ್ ಮಾಡುತ್ತಿದ್ದೀರಂತೆ, ಟೆಂಡರ್ ಕರೆದಿದ್ದೀರಂತೆ, ಅದು ಬಹಳ ಸಂತೋಷದ ವಿಚಾರ. Please do it immediately.

ಇದನ್ನು ನೀವು ನವೆಂಬರ್-ಡಿಸೆಂಬರ್ ತಿಂಗಳಲ್ಲಿ ಮಾಡಬೇಕಾಗಿತ್ತು. ನೀವು ಏತಕ್ಕಾಗಿ ಮಾಡಲಿಲ್ಲ? ಶರಾವತಿಯಲ್ಲಿ ನೀರು ಕಡಿಮೆ ಎಂದು ನಿಮಗೆ ಗೊತ್ತಿತ್ತು, ಎಲ್ಲಾ ಹೈಡ್ರೋ ಪವರ್ ಪ್ರಾಜೆಕ್ಟ್ಸ್ ಸ್ಕೀಮ್‌ಗಳಲ್ಲಿ ನೀರು ನಿಂತಿಲ್ಲವೆಂದು ಗೊತ್ತಿತ್ತು. Why did you not do this job in November December. What wasa the KPCL doing? ಇದೇ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ. ರಾಯಚೂರು ಥರ್ಮಲ್ ಪವರ್ ಪ್ಲಾಂಟ್ ಫ್ರೀಕ್ವೆಂಟಾಗಿ ಇಷ್ಟೊಂದು ಸಾರಿ ಏತಕ್ಕಾಗಿ ಫೈಲ್ಯೂರ್ ಆಗುತ್ತಿದೆ ಎನ್ನುವುದರ ಬಗ್ಗೆ ತಾವೊಂದು ತನಿಖೆಯನ್ನು ಮಾಡಿಸಬೇಕು. 8-10-15 ದಿನಗಳಿಗೆ ಇದು ಕೆಡುತ್ತಿದೆ, ಇದರ ಬಗ್ಗೆ ತಾವು ಒಂದು ತಜ್ಞರ ಸಮಿತಿಯೊಂದನ್ನು ಮಾಡಿಸಿ, ಏತಕ್ಕಾಗಿ ಇದು ಫೈಲ್ಯೂರಾಗುತ್ತಿದೆ ಎನ್ನುವುದರ ಬಗ್ಗೆಯೂ ಸಹಿತ ವಿಚಾರಣೆಯನ್ನು ಮಾಡಿಸಬೇಕು. 2-3 ಗಂಟೆಗೊಮ್ಮೆ ಪವರ್ ಹೋಗಿಬಿಡುತ್ತದೆ, ಕೇಳುವುದಕ್ಕೆ ಹೋದರೆ ಆರ್‌ಟಿಪಿಎಸ್ ಕೆಟ್ಟು ಹೋಯಿತು ಎಂದು ಹೇಳುತ್ತಿರುತ್ತಾರೆ. ಅದಕ್ಕೋಸ್ಕರವಾಗಿ, ತಾವು ಅದರ ಬಗ್ಗೆ ಒಂದು ತನಿಖೆಯನ್ನು ಮಾಡಿಸಿ ತಕ್ಷಣ ಕೊನೆಯಪಕ್ಷ 8 ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ಮಾಡಿಸಬೇಕು. ಅದಕ್ಕೆ ನಿಮಗೆ ಬೇಕಾಗಿರತಕ್ಕಂಥದ್ದು ಕೇವಲ 150 ರಿಂದ 200 ಕೋಟಿ ರೂಪಾಯಿಗಳಷ್ಟು, ಇನ್ನು ಹಚ್ಚಿಗೆ ಹಣ ಬೇಕಾಗುವುದಿಲ್ಲ. ನೀವು ರೈತರಿಗೆ ನಿಜವಾಗಿಯೂ ಸಹಾಯ ಮಾಡಬೇಕೆಂದು ಇದ್ದರೆ, ಇವತ್ತು ಶಾಸಕರುಗಳಿಗೆ, ನನಗೆ ಆಡಳಿತ ಪಕ್ಷದ ಶಾಸಕರ ಸಹವಾಸ ಕಡಿಮೆ ಸ್ವಾಮಿ, ಈ ಕಡೆ ಇರತಕ್ಕಂತಹ ಶಾಸಕರುಗಳು ನಮ್ಮ ನಮ್ಮಗಳ ಕ್ಷೇತ್ರಕ್ಕೆ ಹೋಗುವುದು ಬಹಳ ಕಷ್ಟವಾಗಿದೆ. ಕರೆಂಟ್ ಇಲ್ಲವೆಂದು ರೈತರುಗಳು ಮತ್ತು ಜನರು ನಮಗೆ ಬಾಯಿಗೆ ಬಂದಂತೆ ಬೈಯುತ್ತಿದ್ದಾರೆ. ಅದನ್ನು ಏನಾದರೂ ಮಾಡಿ ಸರಿ ಮಾಡಿಸುವುದಕ್ಕೆ ಸುಮಾರು 150 ಕೋಟಿ ರೂಪಾಯಿಗಳನ್ನಾದರೂ ತಕ್ಷಣ ಬಿಡುಗಡೆ ಮಾಡಿಸಬೇಕು.

ಮಾನ್ಯ ಶ್ರೀಕಂಠಯ್ಯನವರು ಹೇಳಿದರು, 100 ಕೋಟಿ ರೂಪಾಯಿಗಳನ್ನು ಕುಡಿಯುವ

ನೀರಿಗಾಗಿ ಕೊಡಿಯೆಂದು ಕೇಂದ್ರಸರ್ಕಾರವನ್ನು ಕೇಳಿದ್ದೇವೆಂದು. ಅವರು ಎಷ್ಟು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಆದರೆ ನೀವೇನು ಮಾಡಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ತಾವು ಮೊನ್ನೆ ಆರ್‌ಡಿಪಿಆರ್ ಸೆಕ್ರೆಟರಿಯವರು ಇಷ್ಯೂ ಮಾಡಿರತಕ್ಕ ಒಂದು ಸರ್ಕ್ಯುಲರ್ ಅನ್ನು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಓದಿದ್ದೀರಿ. ಹೊಸ ಬೋರ್‌ವೆಲ್‌ಗಳನ್ನು ಹಾಕಲಿಕ್ಕೆ ಸಿಇಒಗಳಿಗೆ ಬರೆದು ಕಳುಹಿಸಿದ್ದೇವೆಂದು ನಾನು ಈ ದಿವಸ ಸದನಕ್ಕೆ ಬರುವಾಗ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕುಡಿಯುವ ನೀರಿಗಾಗಿ ಎಷ್ಟು ಹಣ ಬಂದಿದೆ ಎಂದು ಕೇಳಿದಾಗ, 32 ಲಕ್ಷ ರೂಪಾಯಿಗಳು ಬಂದಿದೆ;ನನ್ನ ಹತ್ತಿರ 40 ಲಕ್ಷ ರೂಪಾಯಿಗಳು ಇದೆ, ಎಲ್ಲಾ ಒಟ್ಟು 70 ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇನೆ ಎಂದರು. ಆದರೆ ನಿಮ್ಮ ಸರ್ಕ್ಯುಲರ್ ಏನಿದೆ? 11ನೇ ಫೈನಾನ್ಸ್ ಕಮೀಷನ್ ಬಗ್ಗೆ ಆಮೇಲೆ ಹೇಳುತ್ತೇನೆ. ಹೊಸ ಬೋರ್‌ವೆಲ್‌ಗಳನ್ನು ತೋಡುವುದಕ್ಕೆ ನಿರ್ಬಂಧ ಹಾಕಿರತಕ್ಕಂಥಾದ್ದನ್ನು ಸಡಿಲ ಮಾಡಿರತಕ್ಕ ಸರ್ಕಾರಿ ಆಜ್ಞೆಯನ್ನು ಇನ್ನೂ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಲ್ಲ. ಕೇಂದ್ರದವರು ರೀಬೋರ್ ಮಾಡಿಸಿ, ಡೀಪನಿಂಗ್ ಮಾಡಿಸಿಯೆಂದು ಹೇಳುತ್ತಾರೆ. ಟೋಟಲ್ ಫೇಲ್ ಆಗಿರುವ ಕಡೆ ಏನು ಮಾಡುವುದು? ತಾವೇನು ಸದನಕ್ಕೆ ಭರವಸೆ ಕೊಟ್ಟಿದ್ದೀರಿ ಅದು ಕಾರ್ಯಗತವಾಗುತ್ತದೆಯೆ?

ಶ್ರೀ ಡಿ.ಜಿ. ಚಂದ್ರೇಗೌಡ: ಗ್ರಾಮ ಪಂಚಾಯಿತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು 11ನೇ ಫೈನಾನ್ಸ್ ಕಮೀಷನ್‌ನಿಂದ ಬರತಕ್ಕ ಹಣ ಏನಿದೆ ಅದನ್ನು ವಿಶೇಷವಾಗಿ ಬೋರ್‌ವೆಲ್ ತೆಗೆಯುವುದಕ್ಕೆ ಬಳಕೆ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ. ನಾನು ನಿನ್ನೆ ಮೊನ್ನೆ ರಿವ್ಯೂ ಮಾಡಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಗಳಿಗೆ ಹೋಗತಕ್ಕ ಹಣದಲ್ಲಿ ವಿಶೇಷವಾಗಿ ಕುಡಿಯುವ ನೀರಿಗಾಗಿ ಬಳಕೆ ಮಾಡಿಲಿಕ್ಕೆ ಬೋರ್‌ವೆಲ್ ತೆಗೆಯಲಿಕ್ಕೆ ಯಾವುದೇ ತೊಂದರೆಯಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಎರಡು ಏಜೆನ್ಸಿಗಳಿವೆ, ಜಿಲ್ಲಾಧಿಕಾರಿಗಳು ಹೇಳುವಂತಹದ್ದು, ಅಡಿಷನಲ್ ಜಿಲ್ಲಾಧಿಕಾರಿಗಳು ಹೊಸ ಬೋರ್ ವೆಲ್ ಮಾಡುವುದಕ್ಕೆ ಸರ್ಕಾರಿ ಆದೇಶದಲ್ಲಿ ಈಗಿರುವಂತಹ ಬೋರ್‌ವೆಲ್‌ಗಳನ್ನು ಡೀಪನಿಂಗ್ ಮಾಡಬೇಕು, ಬೋರ್‌ವೆಲ್ ಡೀಪನಿಂಗ್ ಮಾಡಲಿಕ್ಕೆ ಇರುವಂತಹ ಬೋರ್‌ವೆಲ್‌ಗಳಲ್ಲಿ ಅದೆಲ್ಲ ಮುಗಿದಿರುವಾಗ ಅದು ಸಾಧ್ಯವಾಗುವುದಿಲ್ಲ. ಅವುಗಳನ್ನು ಡೀಪನಿಂಗ್ ಮಾಡಲಿಕ್ಕೆ ಅದು ಸಾಧುವೂ ಅಲ್ಲ, ಅದರ ಬಗ್ಗೆ ಮೊದಲು ತಾವು ತೀರ್ಮಾನ ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ಜಿಲ್ಲಾಧಿಕಾರಿಗಳು ಮಾಡಬೇಕಾದ ಕೆಲಸ ಬೇರೆ, ಜಿಲ್ಲಾ ಪಂಚಾಯಿತಿಯವರು ಮಾಡುವುದು ಬೇರೆ. 11ನೇ ಹಣಕಾಸು ಆಯೋಗದವರು ಸ್ವಾತಂತ್ರ್ಯ ಕೊಟ್ಟು ಪ್ರತಿ ಗ್ರಾಮ ಪಂಚಾಯಿತಿಗೆ ಅದರ ಜವಾಬ್ದಾರಿಯನ್ನು ವಹಿಸಿಕೊಟ್ಟು ಡೀಸೆಂಟ್ರಲೈಸ್ ಮಾಡಿ ಎಂದು ನೀವೇ ತೀರ್ಮಾನ ಮಾಡಿ ಎಂದು ಹೇಳಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ: ಈ ಬಗ್ಗೆ ತಮಗೂ ಕಾಳಜಿಯಿದೆ, ನಮಗೂ ಕಾಳಜಿ ಇದೆ. ಇಷ್ಯೂಸ್ ಮಿಸ್ ಆಗಿ ನೀವು ಅವರಿಗೆ ಕಳುಹಿಸಿರತಕ್ಕ ಸರ್ಕ್ಯುಲರ್ಸ್ ಕ್ಲಿಯರ್ ಆಗಿ ಕರೆಕ್ಟಾಗಿ ಇಲ್ಲ. ಜಿಲ್ಲಾ ಪಂಚಾಯಿತಿಯಲ್ಲಿ ಆಗುವಂತಹ ತೀರ್ಮಾನಗಳೇ ಬೇರೆ, ಅವರು

ಆಯ್ಕೆ ಮಾಡುವಂತಹ ವಿಧಾನಗಳೇ ಬೇರೆ. ಅವರು ಆಯ್ಕೆ ಮಾಡುವ ಪದ್ಧತಿ ಜಿಲ್ಲಾ ಪಂಚಾಯಿತಿ ಸದಸ್ಯರು 30 ಬೋರ್‌ವೆಲ್, 50 ಬೋರ್‌ವೆಲ್ ಕೊಡಿಯೆಂದು ಕೇಳಿ ಕೊರೆಸುತ್ತಾರೆ. ಅದೇ ಸಮಯದಲ್ಲಿ ಸ್ಕೇರ್‌ಸಿಟಿ ಅಭಾವದ ದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಮಾಡುತ್ತೇವೆ ಕೊಡಿಯೆಂದು ಹೇಳುತ್ತಾರೆ. ಡ್ಯೂಯಲ್ ಕಂಟ್ರೋಲ್ ಏನಾಗಬೇಕು? These issues are to be clarified from the Government.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: (ಕಂದಾಯ ಸಚಿವರು) ಸಿಆರ್‌ಎಫ್ ಫಂಡ್ಸ್‌ನಿಂದ ಕೇಂದ್ರ ಸರ್ಕಾರದ ಆದೇಶದಂತೆ ಹೊಸ ಬೋರ್‌ವೆಲ್‌ಗಳನ್ನು ತೆಗೆಯಬಾರದು, ಯಾವುದೇ ಕಾರಣದಿಂದ ಕೊರೆಯುವ ಹಾಗೆ ಇಲ್ಲ. ಆರ್‌ಡಿಪಿಆರ್‌ನಿಂದ ಬಿಡುಗಡೆಯಾಗತಕ್ಕ ಹಣದಲ್ಲಿ ಹೊಸ ಬೋರ್‌ವೆಲ್‌ಗಳನ್ನು ತೆಗೆಯಬಹುದು. ಕೇಂದ್ರ ಸರ್ಕಾರ ಕೊಡತಕ್ಕ ಹಣದಲ್ಲಿ, ಅದು ಯಾವುದೇ ಹಣವಾದರೂ ಸಹಿತ ರಿಜಿವಿಸೇಷನ್ ಮಾಡಬೇಕೇ ಹೊರತು ಹೊಸ ಬೋರ್‌ವೆಲ್‌ಗಳನ್ನು ಯಾವುದೇ ಕಾರಣದಿಂದ ಮಾಡುವ ಹಾಗೆ ಇಲ್ಲ.

SRI. P.G.R. SINDHYA:- I am grateful to the Hon'ble Revenue Minister. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೂ ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಕ್ಕೂ ಈಗ ಕ್ಲಾರಿಟಿಯಾಯಿತು. Ther is internal contradiction. ಇಂಟರ್‌ನಲ್‌ಕಾಂಟ್ರಿಡಿಕ್ಷನ್ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಹೊಸ ಬೋರ್‌ವೆಲ್‌ಗಳನ್ನು ತೋಡಿಸಬಹುದು, ನಾವು ಆರ್‌ಡಿಪಿಆರ್ ಸೆಕ್ರೆಟರಿಯವರ ಮುಖಾಂತರ ಎಲ್ಲರಿಗೂ ಕಳುಹಿಸಿದ್ದೇವೆಂದರೆ. ಏಕೆಂದರೆ ಸೆಕ್ರೆಟರಿಯವರು ಅಲ್ಲೇ ಕುಳಿತಿದ್ದರು, ಆದೇಶವನ್ನು ಕೊಟ್ಟರು, ಇವರು ಹೇಳಿದರು. ಮಾನ್ಯ ಶ್ರೀಕಂಠಯ್ಯನವರು ನಮಗೆ ಸಹಾಯ ಮಾಡಿದ್ದಾರೆ. ತಮಗೆ ನಾನು ಅಭಾರಿಯಾಗಿದ್ದೇನೆ. ಈಗ ಏನು ಹೇಳುತ್ತಿದ್ದಾರೆಂದರೆ ಆರ್‌ಡಿಪಿಆರ್‌ನಿಂದ ರಿಲೀಸ್ ಆಗತಕ್ಕ ಹಣದಲ್ಲಿ ಬೋರ್‌ವೆಲ್ ತೆಗೆಯುವುದಕ್ಕೆ ನಮ್ಮದೇನೂ ತಕರಾರು ಇಲ್ಲವೆಂದು; ಸಿಆರ್‌ಎಫ್ ಫಂಡ್ಸ್‌ನಿಂದ ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಏನಿದೆ ಅದರಿಂದ ಬೋರ್‌ವೆಲ್ ಮಾಡಬೇಡಿಯೆಂದು. ನಮಗೆ ಪ್ರಾಬ್ಲಮ್ ಏನಾಗಿದೆ ಅಂದರೆ, ಆರ್‌ಡಿಪಿಆರ್‌ನಿಂದ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಕೇಂದ್ರದಿಂದ ಬರುತ್ತಿರುವ ಸಿಆರ್‌ಎಫ್ ಫಂಡ್ಸ್‌ನಿಂದ ಹೊಸ ಬೋರ್‌ವೆಲ್ ತೋಡುವ ಹಾಗೆ ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಮಾನ್ಯ ಮುಖ್ಯಮಂತ್ರಿಗಳೂ ಆರ್‌ಡಿಪಿಆರ್‌ನಿಂದಲೂ ಸಹ ಹಣವನ್ನು ಒದಗಿಸತಕ್ಕ ಏರ್ಪಾಡು ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಮುಖ್ಯಮಂತ್ರಿಗಳು ಈ ಆಯವ್ಯಯಕ್ಕೆ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ರೈತರ ಪರವಾಗಿ 8 ಗಂಟೆಗಳ ಕಾಲ ವಿದ್ಯುತ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಬ್ಲಾಕ್ ಅಂಡ್ ಗ್ರೇ ಏರಿಯಾದಲ್ಲಿ ಅನ್‌ಅಥಾರೈಸ್ಡ್ ಇಲ್ಲೀಗಲ್ ಪಂಪ್‌ಸೆಟ್ಟುಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ತಾವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ, ಹಣ ತುಂಬಲಿಕ್ಕೆ ಏನು ನಿಗದಿ ಮಾಡಿದ್ದೀರಿ ಅದನ್ನು ಒಂದೇ ಸಾರಿ ಕಟ್ಟುವುದಕ್ಕಾಗುವುದಿಲ್ಲ. ಬಾಂಡ್ ರೂಪದಲ್ಲಿ ಮತ್ತೊಂದು

ರೂಪದಲ್ಲಿ ರೈತರು ಕಟ್ಟುವುದಕ್ಕೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳಬೇಕು. ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕೆ ತಮಗೆ ಬೇಕಾಗಿರತಕ್ಕ 120 ಕೋಟಿ ಏನಿದೆ ಅದನ್ನು ಕೊಡದಿರುವಷ್ಟು ಸರ್ಕಾರ ಬಡವಾಗಿಲ್ಲ. ಅದರ ಕಡೆಗೂ ಗಮನ ಕೊಡಬೇಕು. ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಮಾನ್ಯ ಕಂದಾಯ ಸಚಿವರು ಹೇಳಿದರು, ಆರ್‌ಡಿಪಿಆರ್‌ನಿಂದ ಬಿಡುಗಡೆಯಾಗತಕ್ಕ ಹಣದಿಂದ ಮಾತ್ರ ಬೋರ್‌ವೆಲ್‌ಗಳನ್ನು ಮಾಡುವುದಕ್ಕೆ ಆಗುತ್ತದೆಂದು ಸಿಆರ್‌ಎಫ್ ಬೇರೆ, ಆರ್‌ಡಿಪಿಆರ್ ಬೇರೆಯೆಂದು ಹೇಳಿಕೊಂಡು ಹೋದರೆ ಇನ್ನು ಮೂರು ತಿಂಗಳಿಗೆ ಜನರಿಗೆ ಕುಡಿಯುವ ನೀರು ಕೊಡುವುದು ಹೇಗೆ? ಅದು ನಮ್ಮ ಮುಂದಿರತಕ್ಕ ಸಮಸ್ಯೆ. ಈ ದ್ವಂದ್ವವನ್ನು ಜಿಲ್ಲಾಧಿಕಾರಿಗಳ ಹತ್ತಿರ ಕುಳಿತುಕೊಂಡು ಮಾತನಾಡಿ ತಾವು ಪರಿಹಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ನೌಕರರಿಗೆ ಸಂಬಳ ಬಾಕಿಯಿರತಕ್ಕ ವಿಚಾರವನ್ನು ಹೇಳುತ್ತೇನೆ. ಇದು ಕೇವಲ ಕನಕಪುರ ಕ್ಷೇತ್ರ ಅಥವಾ ಬೆಂಗಳೂರು ಜಿಲ್ಲೆಯದು. ಬರೀ ಉಪಾಧ್ಯಾಯರುಗಳಿಗೆ 36 ಕೋಟಿ ರೂಪಾಯಿಗಳ ಸಂಬಳ ಬರತಕ್ಕದ್ದು ಬಾಕಿಯಿದೆ. ನಾನು ಅಧಿಕಾರಿಗಳ ಹತ್ತಿರ ತಿಳಿದುಕೊಂಡಿದ್ದೇನೆ. ಈ ರೀತಿ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಆಗದಿದ್ದರೆ how can we expect any work from them? ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಆಸ್ಪತ್ರೆಗಳ ವಿಚಾರದಲ್ಲಿ ಮೂರು ಬಜೆಟ್ ಭಾಷಣಗಳಲ್ಲೂ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ವಸ್ತುಸ್ಥಿತಿ ಏನಾಗಿದೆ? ರಾಯಚೂರಿನಲ್ಲಿ ಹೈಟೆಕ್ ಆಸ್ಪತ್ರೆಯನ್ನು ಕೊಟ್ಟಿದ್ದಾರೆ. ಅದಕ್ಕೆ ದಿವಂಗತ ರಾಜೀವಗಾಂಧಿಯವರ ಹೆಸರನ್ನು ಸಹ ಇಟ್ಟಿದ್ದೀರಿ. ಹೈದರಾಬಾದಿನಲ್ಲಿರತಕ್ಕ ಅಪಲೋ ಸಂಸ್ಥೆಗೆ ಅದನ್ನು ನಡೆಸಿಕೊಂಡು ಹೋಗುವುದಕ್ಕೆ ಕೊಟ್ಟಿರಿ. ಈ ಬಿಸಿ ಊಟದ ಕಾರ್ಯಕ್ರಮ ಹೇಗೆ ನಿಂತುಹೋಗಿದೆ. ಹಾಗೆಯೇ ಈ ಕಾರ್ಯಕ್ರಮವೂ ಸಹ ನಿಂತು ಹೋಗಿದೆ ಎಂಬ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತೇನೆ. ಅದು ಬಹಳ ಒಳ್ಳೆಯ ಆಸ್ಪತ್ರೆ. It is a very good infraastructure that we have developed.

ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಈ ಬಜೆಟ್‌ನಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಆಗುವಂತಹ ಅಭಿವೃದ್ಧಿ ಕೆಲಸಗಳು ಏನಿವೆ, ಹೈಕೋರ್ಟ್ ಪೀಠಕ್ಕೆ ತಾವು 10 ಕೋಟಿ ಕೊಟ್ಟಿರತಕ್ಕದ್ದು ಸ್ವಾಗತ; ಆದರೆ ಅಭಿವೃದ್ಧಿ ಕೆಲಸಗಳಿಗೆ ತಾವು ಒತ್ತನ್ನು ಕೊಡಲಿಲ್ಲ. ಆದರ ಬಗ್ಗೆ ಗಮನಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕೊನೆಯದಾಗಿ ರೈತರ ಆತ್ಮಹತ್ಯೆ ಏಕೆ ಆಗುತ್ತದೆ? ಅದಕ್ಕೆ ಅನೇಕ ಕಾರಣಗಳಿವೆ. ನಾನು ಬಹಳಷ್ಟು ಕಡೆ ಹೇಳಿಕೊಂಡು ಬಂದಿದ್ದೇನೆ. ಅದೇ ರೀತಿ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ಮಾನ್ಯ ಸಿಂಧ್ಯಾರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದಾರೆ. ನಾನು ಅವೊತ್ತು ಹೇಳಿದ್ದೇನೆಂದರೆ ಯಾರಾದರೂ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡರೆ, ತಹಶೀಲ್ದಾರ್‌ರವರು ಹೋಗಿ ಹೆಣವನ್ನು ನೋಡುವ ಸೌಜನ್ಯವನ್ನು ತೋರುವುದಿಲ್ಲವೆಂದು ಹೇಳಿದ್ದೆ. ಇಲ್ಲಾ, ಇಲ್ಲ ತಹಶೀಲ್ದಾರ್‌ರವರ ಕಡೆಯಿಂದ ಮ್ಯಾಜಿಸ್ಟ್ರೇಟ್ ಎನ್ ಕ್ವೈರಿ ಮಾಡಿಸುತ್ತೇನೆ ಎನ್ನುವ ಉತ್ತರ ಕೊನೆಗೆ ಸಿಕ್ಕಿತು. ಜನ ಏನು ಕೇಳುತ್ತಿದ್ದಾರೆಂದರೆ,

ನಿಮ್ಮ ಚರ್ಚೆಯಿಂದ ನಮಗೆ ನಿಮ್ಮ ಕಾಲದಲ್ಲಿ ಒಂದು ಲಕ್ಷ ರೂಪಾಯಿಗಳ ಪರಿಹಾರಧನ ಸಿಗುತ್ತಿತ್ತು, ಈಗ ಅದು ನಿಂತು ಹೋಗಿದೆಯೆಂದು ಹೇಳುತ್ತಾರೆ. ಇದು ಚರ್ಚೆಯ ಫಲ. ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ? ಆ ಬಗ್ಗೆ ತಜ್ಞರ ಸಮಿತಿಯನ್ನು ಮಾಡಲಾಗಿತ್ತು. ಅವರು ಏನು ವರದಿ ಕೊಟ್ಟಿದ್ದಾರೆಂದು ತಿಳಿಸಬೇಕು. ಉಳಿದ ಎರಡು ವರ್ಷಗಳ ಬಜೆಟ್‌ನಲ್ಲಿ ಕೊಡುತ್ತೇವೆಂದರೆ ಅದು ಉಪಯೋಗವಾಗುವುದಿಲ್ಲ. ರೈತರ ಆತ್ಮಹತ್ಯೆ ವಿಚಾರದಲ್ಲಿ ಒಂದು ಪರಿಹಾರವನ್ನು ನೀವು ಕೊಡಬೇಕಾಗುತ್ತದೆ. ರೈತನ ಸಾಲದ ಮೇಲಿನ ಬಡ್ಡಿಯನ್ನು ರದ್ದು ಮಾಡಬೇಕು. ಮಾನ್ಯ ಸಹಕಾರಿ ಮಂತ್ರಿಗಳು ಇಲ್ಲ ಅವರು ಕಾಣಿಸುತ್ತಿಲ್ಲ. ರಾಜ್ಯಸಭಾ ಚುನಾವಣಾ ವಿಚಾರದಲ್ಲಿ ಅವರು ಹೋಗಿರಬಹುದು. ರೈತರ ಸಾಲವನ್ನು ಪೋಲೀಸರ ಕಡೆಯಿಂದ ಒದ್ದು ವಸೂಲಿ ಮಾಡುತ್ತಿದ್ದೀರಿ. ತಮಟೆ ಹೊಡೆಸಿಕೊಂಡು ಹೋಗಿ ಟಿ.ವಿ. ಎತ್ತಿಕೊಂಡು ಬರುವುದು, ಹಂಡೆ ತಪ್ಪಲೆ ಎತ್ತಿಕೊಂಡು ಬರುವುದು, ಇವೆಲ್ಲಾ ಪ್ರಯತ್ನ ಮಾಡಿದ್ದೀರಿ. ಯಾವ ಕಾರಣಕ್ಕೆ ರೈತರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಹೊರಟಿದ್ದೀರೋ ಅದು ನನಗಂತೂ ಗೊತ್ತಿಲ್ಲ. ನುಸಿರೋಗಕ್ಕೆ ಔಷಧಿ ಹೊಡೆಯಿರಿ ಅಂದರೆ ಆ ತೆಂಗು ಬೆಳೆಯತಕ್ಕ ರೈತರ ಮೇಲೆ ನಿಮಗೆ ಸಿಟ್ಟು; ಏಕೆಂದರೆ ನೀರಾ ಇಳಿಸಲಿಕ್ಕೆ ರೈತರು ಹೋರಾಟ ಮಾಡಿದ್ದಾರೆಂದು. ರೈತರನ್ನು ಕಂಡರೆ ನಿಮಗೆ ಆಗುವುದಿಲ್ಲ. ಜಾನುವಾರುಗಳ ಔಷಧಿ ಕೊಂಡುಕೊಳ್ಳುವುದಕ್ಕೆ ದುಡ್ಡು ಸಾಲುವುದಿಲ್ಲವೆಂದು, ಔಷಧಿ ತೆಗೆದುಕೊಂಡಿಲ್ಲ. ನಿಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಿಲ್ಲ. ಒಟ್ಟಾರೆ ಇವತ್ತು ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಬಹಳ ದೊಡ್ಡ ಕ್ರಾಂತಿಕಾರಕವಾದ ಬದಲಾವಣೆಗಳನ್ನು ನಮ್ಮ ಅರ್ಥಮಂತ್ರಿಗಳೂ ಆದ ಮಾನ್ಯ ಮುಖ್ಯಮಂತ್ರಿಗಳಿಂದ ನಾವು ನಿರೀಕ್ಷೆ ಮಾಡದಿದ್ದರು ಕೂಡ ಕನಿಷ್ಟವಾಗಿರತಕ್ಕ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ, ರೈತರು ಉತ್ತರ ಕರ್ನಾಟಕ ಭಾಗದಲ್ಲಿ ಬರಗಾಲಕ್ಕೆ ಸಿಕ್ಕಿ ತೊಂದರೆಗೀಡಾಗಿದ್ದಾರೆ, ಅವರಿಗೆ ಪರಿಹಾರವನ್ನು ನಿರೀಕ್ಷೆ ಮಾಡಿದ್ದೆವು, ಆ ನಿರೀಕ್ಷೆಗೆ ತಕ್ಕಂತೆ ಈ ಸರ್ಕಾರ ಸ್ಪಂದಿಸಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವೊಂದು ಆಯವ್ಯಯದಲ್ಲಿ ಸರ್ಕಾರ ಕೆಲವು ಘೋಷಣೆಗಳನ್ನು ಏನು ಮಾಡಿದೆ ಅವುಗಳನ್ನು ತತ್ವಶಃ ಒಪ್ಪಿದರೂ ಕಳೆದ ಮೂರು ವರ್ಷ ಘೋಷಣೆಗಳನ್ನು ನೋಡಿದಾಗ ಇದು ಬರೀ ಘೋಷಣೆಯ ಸರ್ಕಾರ. ಸುಂದರವಾದ ಶಬ್ದಗಳನ್ನು ಈ ಬಜೆಟ್ ಭಾಷಣದಲ್ಲಿ ಸೇರಿಸಿರುವುದನ್ನು ಬಿಟ್ಟರೆ ಇದರಲ್ಲಿ ಏನೂ ಇಲ್ಲ. ಅದಕ್ಕೋಸ್ಕರ ನಾನು ಅದನ್ನು ವಿರೋಧ ಮಾಡುತ್ತೇನೆ. ನಾನು ಮಾತನಾಡಲಿಕ್ಕೆ ಸಾಕಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಯುವಗಲ್ (ನರಗುಂದ):- ಮಾನ್ಯ ಉಪಾಧ್ಯಕ್ಷರೇ, 2002-03ನೇ ಸಾಲಿನ ಮುಂಗಡಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ಮಂಡಿಸಿದ್ದನ್ನು ನಾನು ಬೆಂಬಲಿಸುತ್ತಾ ಮುಖ್ಯವಾಗಿ ಎರಡು ವಿಚಾರಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳಬಯಸುತ್ತೇನೆ. ಅಧ್ಯಕ್ಷರೇ, ಹಲವಾರು ಬಜೆಟ್‌ಗಳು ಕರ್ನಾಟಕ ವಿಧಾನಸಭೆ, ವಿಧಾನಪರಿಷತ್ತು, ವಿಧಾನಮಂಡಲಗಳಲ್ಲಿ ಮಂಡನೆಯಾಗಿವೆ ಮತ್ತು ಅದರ ಬಗ್ಗೆ ಚರ್ಚೆಯಾಗಿದೆ. ಅವುಗಳ ಬಗ್ಗೆ ಹೊರಗಡೆ, ಒಳಗಡೆ, ಜನಗಳಲ್ಲಿ ಅವರದ್ದೇ ಆದಂಥ ವ್ಯಾಖ್ಯಾನಗಳು, ಟೀಕೆಟಿಪ್ಪಣಿಗಳು ಸಹಿತ ಆಗಿವೆ. ಒಂದೆಂದು ಸಾರಿ ಆ ಕಾಲದ ಸಮಸ್ಯೆಗಳನ್ನು ಆಧರಿಸಿ ಆ

ಹಿನ್ನೆಲೆಯಿಂದ ಜನರಿಗೆ ಅದೂ ತೊಂದರೆಗೆ ಒಳಗಾದಂಥ ವರ್ಗಗಳಿಗೆ ಪರಿಹಾರ ಒದಗಿಸುವಂಥಾದ್ದು ಮತ್ತು ಒಟ್ಟಾರೆ ಸಮಾಜದ ಎಲ್ಲ ವರ್ಗಗಳನ್ನು ಪ್ರಗತಿಯ ದಾರಿಯಲ್ಲಿ ಒಯ್ಯುವಂಥ ಒಂದು ಚಿಂತನೆ, ಪ್ರಯತ್ನ ಆ ಕಾಲದ ಬಜೆಟ್‌ಗಳಲ್ಲಿ ಮಾಡಿದ್ದಾರೆಂದು ಹೇಳಿ ನಾನು ಭಾವಿಸುತ್ತೇನೆ. ಇವತ್ತು ಏನು ಬಜೆಟ್‌ನಲ್ಲಿ ವಿಷಯಗಳು ಪ್ರಾಶಸ್ತ್ಯವನ್ನು ಪಡೆದಿವೆ, ಅವುಗಳ ಸಹಿತ ಈ ಹಿನ್ನಲೆಯಲ್ಲಿ ಮೂಡಿಬಂದಿರುವಂಥಾದ್ದು ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಬಯಸುತ್ತೇನೆ. ಇನ್ನೂ ಹೆಚ್ಚಿನ ಪರಿಹಾರ ರೈತ ವರ್ಗಕ್ಕೆ ಕೊಡಲಿ; ಹೆಚ್ಚು ಕೊಡಬಹುದು ಎಂದು ಆಸೆ ಇತ್ತು. ನಾವೂ ಕೂಡ ಸಾಕಷ್ಟು ಒತ್ತಾಯವನ್ನು ಮಾಡಿದೆವು. ಬಹುತೇಕ ರಾಜ್ಯದ ಜನತೆಯಲ್ಲಿ ಆ ನಿರೀಕ್ಷೆ ಮೂಡಿತ್ತು. ಬಹಳಷ್ಟು ಕಷ್ಟದಲ್ಲಿ, ಸಂಕಷ್ಟದಲ್ಲಿ ಬಹುತೇಕ ರೈತರು ಇದ್ದು, ಅವರ ಇಷ್ಟು ವರ್ಷದ ಅನುಭವದಲ್ಲಿ ಅತ್ಯಂತ ಸಂಕಷ್ಟ ಪರಿಸ್ಥಿತಿಯನ್ನು ಇತ್ತೀಚಿನ ವರ್ಷಗಳಲ್ಲಿ ಕಂಡಂಥ ರೈತರು ಒಂದು ತರಹ ನಿರಾಶರಾಗಿದ್ದಾರೆ, ಅವರಿಗೆ ದಾರಿಯೇ ಇಲ್ಲದಂತಾಗಿದೆ. ಅವರಿಗೆ ಏನಾದರೂ ಪರಿಹಾರ ಬರಬೇಕು ಎನ್ನುವಂಥ ಭಾವನೆ ಸಾರ್ವತ್ರಿಕವಾಗಿ ಇತ್ತು. ಆದ್ದರಿಂದ ನಿರೀಕ್ಷೆ ಬಹಳಷ್ಟು ಇತ್ತು. ಅಂತೆಯೇ ಇವತ್ತಿನ ಪರಿಸ್ಥಿತಿಯಲ್ಲಿ ರೈತವರ್ಗದಂತೆ ಎಲ್ಲಾ ವರ್ಗಗಳ ಆಸೆಗಳನ್ನು ಪೂರೈಸಬೇಕು ಎನ್ನುವಂಥ ಒಂದು ಅನಿವಾರ್ಯತೆ ಕೂಡ ಇದೆ. ಇದರ ಜೊತೆಗೆ ಹೆಚ್ಚು ಸಂಪನ್ಮೂಲಗಳ ಕ್ರೋಢೀಕರಣ ಆಗಬೇಕಿತ್ತು ಅಥವಾ ಬಜೆಟ್ ಮತ್ತೊಂದು ಕಾರ್ಯಕ್ರಮಗಳ ಅನುಷ್ಠಾನವೋ, ಕೇಂದ್ರ ಸರ್ಕಾರದ ಆಯವ್ಯಯ, ಅಲ್ಲಿಯ ಹಣಕಾಸಿನ ಪರಿಸ್ಥಿತಿಯೋ, ಮತ್ತು ಅಂತರರಾಷ್ಟ್ರೀಯ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ ಇವತ್ತು ಪ್ರತಿಯೊಂದು ಘಟನೆ ಸಹಿತ ಜಗತ್ತಿನ ಯಾವುದೇ ಭಾಗದಲ್ಲಿ ಅದರ ಪರಿಣಾಮ ಬೀರುವಂಥ ಸಾಧ್ಯತೆಯಿದೆ ಎಂದು ಹೇಳಿ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳಿದ್ದಾರೆ. ಇದು ವಾಸ್ತವಿಕ ಪರಿಸ್ಥಿತಿ. ಹಾಗಾಗಿ ಇವತ್ತು ಯಾವುದೇ ಭಾಗದಲ್ಲಿ ಅದು ಗುಜರಾತ್ ಇರಬಹುದು, ಮತ್ತೊಂದು ಇರಬಹುದು, ಬೇರೆ ಕಡೆ ಇರಬಹುದು ನಾವು ಅನೇಕ ಪದಾರ್ಥಗಳನ್ನು ಬೆಳೆಯುತ್ತೇವೆ. ಇವತ್ತು ಬೆಳೆದಂಥ ಪದಾರ್ಥಗಳು ಅದು ಉದಾಹರಣೆಗೆ ದ್ರಾಕ್ಷಿ ಇರಬಹುದು, ಚಿಕ್ಕುಹಣ್ಣು ಇರಬಹುದು, ದಾಳಿಂಬೆ ಇರಬಹುದು, ಬೇರೆ ಹಣ್ಣುಹಂಪಲುಗಳು, ಕಾಯಿಪಲ್ಲೆಗಳು ಇರಬಹುದು, ಇವೆಲ್ಲವುಗಳ ಬೆಲೆ ಕುಸಿಯತಕ್ಕಂಥ ರೀತಿಯಲ್ಲಿ ಅಲ್ಲಿ ಎಲ್ಲೋ ಒಂದು ಗಲಾಟೆ ಇರಬಹುದು, ಅಶಾಂತ ಪರಿಸ್ಥಿತಿ ಇರಬಹುದು, ಇಲ್ಲಿ ಭಾರತದಲ್ಲಿ ಆದರೆ ಹೊರದೇಶಗಳಲ್ಲಿ ಯಾವ ರೀತಿ ಪರಿಣಾಮ ಉಂಟಾಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಇವತ್ತು ರೈತವರ್ಗಕ್ಕೆ ವಿಶೇಷವಾದಂಥ ಒಂದು ಪ್ರಾಮುಖ್ಯತೆಯನ್ನು, ಕೊಡುಗೆಗಳನ್ನು ಈ ಬಜೆಟ್‌ನಲ್ಲಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಆಸೆ ಬಹಳಷ್ಟು ಇತ್ತು, ಅದರಲ್ಲಿ ಎರಡು ಮಾತಿಲ್ಲ. ಆದರೆ ಇವತ್ತು ಕಷ್ಟ ಪರಿಸ್ಥಿತಿ ಇದೆ. ರೈತರು ಇವತ್ತು ಮಳೆ ಇಲ್ಲದೆ ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ ಮತ್ತು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಇಲ್ಲ. ಸಾಲಗಳ ವಿಷ ಚಕ್ರದಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದಾರೆ. ಅನೇಕ ವಿಧವಾದಂಥ ಅವರ ಆರ್ಥಿಕ ಸಂಕಷ್ಟಗಳು ಅವರನ್ನು ಸುತ್ತಿ ಕಾಡುತ್ತಿವೆ. ಈ ಎಲ್ಲಾ ಪರಿಸ್ಥಿತಿಯಿಂದ ಭವಿಷ್ಯದಲ್ಲಿ ಅವರಿಗೆ ಒಂದು ರೀತಿಯ ವಿಶ್ವಾಸವೇ ಹುಟ್ಟದಂಥ ಪರಿಸ್ಥಿತಿಗೆ ಅವರು ಬಂದು ಮುಟ್ಟಿದ್ದಾರೆ ಎನ್ನುವಂಥ ಹಿನ್ನಡೆ ಇವತ್ತು ಇದೆ. ಹಿಂದಿನ ಅಧಿವೇಶನದಲ್ಲಿ ಅನೇಕ ಸಂದರ್ಭಗಳಲ್ಲಿ

ನಾನು ಪ್ರಸ್ತಾಪ ಮಾಡಿದ್ದೆ. ಮೂಲಭೂತವಾಗಿ ರೈತರ ಪರಿಸ್ಥಿತಿಯನ್ನು ನಾವು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ ಬರೀ ಏನೇ ಒಂದು ಕೊಡಬೇಕು ಅಥವಾ ಅವರು ಹೇಗೋ ಬದುಕಿಕೊಂಡು ಹೋಗುತ್ತಾರೆ ಎನ್ನತಕ್ಕಂಥ ಪರಿಸ್ಥಿತಿ ಮುಂದುವರೆದುಕೊಂಡು ಬಂದಿದೆ. ಇವತ್ತು ಬಹಳವಾಗಿ ಆರ್ಥಿಕ ಹಿನ್ನಲೆ ಇದೆ. ಹಲವೊಂದು ಕಲ್ಪನೆ ಇತ್ತು. ಬಹುತೇಕ ಆರ್ಥಿಕ ಚೈತನ್ಯಕ್ಕೆ ಕೈಗಾರಿಕೆಗಳು ಕಾರಣ, ಅಲ್ಲಿ ಆಗುವಂಥ ಚಟುವಟಿಕೆಗಳು, ಅವುಗಳಿಂದ ಬರುವಂಥ ಆದಾಯ, ಅದರ ಪಾತ್ರ ಬಹಳಷ್ಟು ಇರುತ್ತದೆ ಎನ್ನುವಂಥ ಭಾವನೆ ಇತ್ತು. ಆದರೆ ನಾವು ಇವತ್ತುನೋಡುತ್ತಿದ್ದೇವೆ; ಇವತ್ತು ಪೇಟೆಗೆ ಹೋದರೆ ಬೇಡಿಕೆ ಇಲ್ಲ. ಇವತ್ತು ಅನೇಕ ವಿಧವಾದಂಥ ಚಟುವಟಿಕೆಗಳು ಇರಬಹುದು ಅದು ವ್ಯಾಪಾರ ಇರಲಿ, ಉದ್ಯೋಗ ಇರಲಿ, ಕೈಗಾರಿಕೆ ಬೆಳೆಯುವುದಾಗಿರಲಿ, ಯಾವುದೇ ಜನರ ಹತ್ತಿರ ಏನೂ ವ್ಯವಹಾರ ಇಲ್ಲದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಕಾರಣ ಕೃಷಿಯಲ್ಲಿ ಹಿನ್ನಡೆಯಾಗಿರುವುದು ಎಂಬುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಅನೇಕ ಕಾರಣಗಳಿಂದ ಅದು ವಿಶ್ವ ಒಪ್ಪಂದ ಇರಬಹುದು, ಗ್ಲೋಬಲೈಸೇಶನ್ ಇರಬಹುದು ಈ ಎಲ್ಲಾ ಕಾರಣಗಳಿಂದ ಕೈಗಾರಿಕೆಗಳು ನೆಲಕಚ್ಚುತ್ತಿವೆ. ಅಷ್ಟಾಗಿ ಕೈಗಾರಿಕೆಗಳಿಂದ, ಬೇರೆ ದೇಶಗಳಿಂದ ಕೈಗಾರಿಕಾ ರಂಗದಲ್ಲಿ ಸಾಕಷ್ಟು ಹಣ ಹರಿದು ಬರುತ್ತದೆ, ಏನೋ ಒಂದು ಬದಲಾವಣೆಯಾಗುತ್ತದೆ ಕ್ರಾಂತಿಯಾಗುತ್ತದೆ ಮತ್ತು ಇದರಿಂದ ಸಾಕಷ್ಟು ಆರ್ಥಿಕವಾಗಿ ಅನುಕೂಲವಾಗುತ್ತದೆ ಎಂದು ಇದ್ದಂತಹ ಭ್ರಮೆ ಕೂಡ ಬಂದು ಹರಿದುಹೋಗುವಂಥ ಪರಿಸ್ಥಿತಿ ಉಂಟಾಗಿದೆ. ಅದು ಯಾವುದೂ ಆಗಲಿಲ್ಲ ಇವತ್ತು ಕೃಷಿ ನೆಲಕಚ್ಚಿದೆ, ಕೈಗಾರಿಕೆಯೂ ಹೋಯಿತು, ಸಂಕಷ್ಟದಲ್ಲಿ ಜನತೆ ಇದ್ದಾರೆ. ಇವತ್ತು ಏನಾದರೂ ಹಣದ ಚಲಾವಣೆ ಇದ್ದರೆ ಅದು ಬಹುತೇಕ ಸರ್ಕಾರಿ ವ್ಯವಸ್ಥೆಯಲ್ಲಿ ಇರುವಂಥ ನೌಕರ ಶಾಹಿ, ಸಂಬಳಕ್ಕೆ ಒಳಪಡುವಂಥ ನಮ್ಮಂಥವರು, ಈ ವರ್ಷ ಬಿಟ್ಟರೆ ಬೇರೆ ಯಾವ ಕಡೆಯೂ ಇವತ್ತು ದುಡ್ಡಿನ ಚಲಾವಣೆ ಇಲ್ಲ. ಬಹುತೇಕ ಅವರು ಊಟಕ್ಕೂ ಸಹ ಕಷ್ಟಪಡುವಂಥ ಪರಿಸ್ಥಿತಿ ಎಲ್ಲ ಕಡೆ ಇದೆ. ಅವನು ಪಡೆದಂಥ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗಿಲ್ಲ. ಅದು ಖಾಸಗಿಯಾಗಿ ಇರಬಹುದು, ಸಹಕಾರಿ ಸಂಘದ್ದು ಆಗಿರಬಹುದು, ಬ್ಯಾಂಕಿನದ್ದು ಆಗಿರಬಹುದು, ಅವರಿಗೆ ಮನೆಗಳಲ್ಲಿ ಮದುವೆ ಮುಂದೆ ಮಾಡುವುದಕ್ಕೂ ಸಹ ಆಗದೇ ಇರುವಂಥ ಪರಿಸ್ಥಿತಿಯಾಗಿದೆ. ಭವಿಷ್ಯದಲ್ಲಿ ಅವನು ಹೇಗೆ ಕೃಷಿಯನ್ನು ಮಾಡಬೇಕು ಎನ್ನುವುದೂ ಸಹಿತ ಅವನಿಗೆ ಕಷ್ಟವಾಗಿದೆ. ಈ ಎಲ್ಲಾ ಹಿನ್ನಲೆಯಿಂದ ಅವನ ಒಂದು ಭವಿಷ್ಯದ ಬಗ್ಗೆ ಸರ್ಕಾರಗಳು ಚಿಂತನೆ ಮಾಡದಿದ್ದರೆ ಬಹುತೇಕ ನಮ್ಮ ಏನು ವ್ಯವಸ್ಥೆ ಇದೆ, ಸಂಪತ್ತು ಇದೆ, ನಾವು ಬಲೆಯಬೇಕು ಎಂದು ಹೇಳುತ್ತೇವೆ, ಕೈಗಾರಿಕೆಗಳಲ್ಲಿ, ಕೃಷಿಯಲ್ಲಿ ಮುಂದುವರೆಯಬೇಕೆಂದು ಹೇಳುತ್ತೇವೆ, ಶಿಕ್ಷಣದಲ್ಲಿ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇವೆ; ಹೀಗೆ ನಾವು ಅನೇಕ ವಿಧವಾಗಿ ವಿಕಾಸಗೊಳ್ಳಬೇಕೆಂದು ಏನು ಹೇಳುತ್ತೇವೆ, ಇದು ಯಾವುದನ್ನೂ ಮಾಡುವುದಕ್ಕೆ ಕಷ್ಟ ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೀಗಾಗಿ ಇವತ್ತು ತಾವೇನು ಒತ್ತು ಕೊಡುತ್ತೀರಿ, ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿಯಲ್ಲಿ ಒತ್ತನ್ನು ಕೊಟ್ಟಿರಿ. ಇವತ್ತು ಬರೇ ಆರ್ಥಿಕವಾದಂಥ ಒತ್ತು ಅಷ್ಟೇ ಅಲ್ಲ, ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಮಂಡನೆ ಮಾಡಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ವಿಚಾರ. ಇದಕ್ಕೂ ಕಡಿಮೆ ಮಾಡುವುದಕ್ಕೆ ಸಾಧ್ಯವಿರುವಂಥ ವ್ಯವಸ್ಥೆಯನ್ನು ತರಬೇಕು. ಕಾರಣ ಏನೆಂದರೆ ಇವತ್ತು ಕೃಷಿಯಲ್ಲಿ ನಾನು ಆಗಲೇ ಪ್ರಸ್ತಾಪ ಮಾಡಿದಂತೆ ಲಾಭ ಅಂಶ ಬಹಳಷ್ಟು ಕಡಿಮೆಯಾಗುತ್ತಿದೆ.

ಸುಮಾರು ಹತ್ತು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಕೃಷಿ ಬೆಲೆ ಏರದೆ ಸುಮಾರು ಅದೇ ಇದೆ. 1986-87ರಲ್ಲಿ ಸುಮಾರು 375-325-300 ರೂಪಾಯಿ ಸರಾಸರಿ ಇದ್ದಂಥ ಗೋವಿನ ಜೋಳದ ಬೆಲೆ ಮಾರ್ಕೆಟ್‌ನಲ್ಲಿ ಐದುನೂರು ರೂಪಾಯಿ ಮಾತ್ರ ಇದೆ. ಅದೇ ಆ ಕಾಲದಲ್ಲಿ ಸುಮಾರು ಎರಡು ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದಂಥ ಗೊಬ್ಬರದ ಬೆಲೆ ಇವತ್ತು 6-7 ಸಾವಿರ ರೂಪಾಯಿಗಳಾಗಿದೆ.

1.50 ಪಿ.ಎಂ.

ಅದೇ ಕ್ರಿಮಿನಾಶಕ ಇರಬಹುದು, ಬೀಜ ಇರಬಹುದು, ನಾವೇನಾದರೂ ಬೀಜ ಹಾಕಬೇಕೆಂದು ಹೊರಟರೆ 20 ಚೀಲ ಗೋವಿನ ಜೋಳ ಬೆಳೆಯಬೇಕೆಂದರೆ ಒಂದು ಚೀಲದ ಬೆಲೆಯನ್ನು ನಾವು ಕೊಡಬೇಕಾಗುತ್ತದೆ. ಸುಮಾರು 5-6 ಚೀಲ ಗೊಬ್ಬರವನ್ನು ನಾವು ಕೊಳ್ಳಬೇಕಾಗುತ್ತದೆ. ಇನ್ನು ಕೂಲಿ ಆಳುಗಳಿಗೆ ಯಾವ ರೀತಿ ಕೂಲಿ ಕೊಡಬೇಕು? ನೀರು ಹಾಕುವವರಿಗೆ ಯಾವ ರೀತಿ ಕೂಲಿ ಕೊಡಬೇಕು? ಮತ್ತು ಕ್ರಿಮಿನಾಶಕಗಳನ್ನು ಯಾವ ರೀತಿ ಕೊಳ್ಳಬೇಕು? ಇದನ್ನು ತಾವು ಗಮನಿಸಬೇಕಾಗುತ್ತದೆ. ಒಟ್ಟಾರೆ ಎಲ್ಲಾ ಪದಾರ್ಥಗಳು, ಉದಾಹರಣೆಗೆ ತಾವು ಹತ್ತಿಯನ್ನು ತೆಗೆದುಕೊಳ್ಳಬಹುದು, ಉದ್ದದ ಹತ್ತಿ ಬೆಲೆ 3000 ರೂಪಾಯಿಗಳು ನಾಲ್ಕು ವರ್ಷಗಳ ಕೆಳಗೆ ಇದ್ದರೆ, ಅಥವಾ ಶಾರ್ಟ್ಸ್ ಸ್ಟೇಪಲ್ ಹತ್ತಿ ಹೋದ ವರ್ಷ 2500 ರೂಪಾಯಿಗಳು ಇದ್ದರೆ, ಈ ವರ್ಷ 1200 ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ಅದೂ ಕೂಡ ನಾವು ಒತ್ತಾಯ ಮಾಡಬೇಕು. ನಾವು ಹೋಗಿ ಸಿ.ಸಿ.ಐ.ನವರು ಬನ್ನಿ, ಫೆಡರೇಷನ್‌ನವರು ಬನ್ನಿ ನೀವು ನಮ್ಮ ಹತ್ತಿಯನ್ನು ತೆಗೆದುಕೊಳ್ಳಿ ಎಂದು ಹೇಳುವಂತಹ ಪರಿಸ್ಥಿತಿಯಾಗಿದೆ. ಹೀಗಾಗಿ ಲಾಭದ ಅಂಶ ಏನು ಇದೆ ಅದು ಇವತ್ತು ಅವರಿಗೆ ಯಾವ ಮಟ್ಟದ ಲಾಭ ಬೇಕು ಅದು ಸಿಗುತ್ತಿಲ್ಲ. ಇದರಿಂದ ಅವರು ತಮ್ಮ ಜೀವನ ನಿರ್ವಹಣೆ ಮಾಡಬೇಕು, ಅವರ ಕುಟುಂಬದ ಮಕ್ಕಳ ಅಭ್ಯಾಸಕ್ಕೆ ಇದರಿಂದ ಹಣ ಬೇಕು, ಅವರ ಆರೋಗ್ಯಕ್ಕೆ ಇದರಿಂದ ಹಣ ಬರಬೇಕು, ಅವರ ಕುಟುಂಬದ ಮಕ್ಕಳ ಮದುವೆ, ಸಮಾರಂಭಗಳು ಮಾಡಬೇಕಾದರೆ ಇದರಿಂದಲೇ ಹಣ ಬರಬೇಕು, ಅವರು ಪಡೆದಂತಹ ಸಾಲಕ್ಕೆ ಬಡ್ಡಿಯನ್ನು ಕೊಡಬೇಕು, ಇವೆಲ್ಲವನ್ನು ಅವರು ಸರಿದೂಗಿಸಬೇಕಾದರೆ ಇದರಿಂದ ಅವರಿಗೆ ಸರಿಯಾದ ಆಧಾಯ ಬರಬೇಕು. ಇವತ್ತು ರೈತರ ಒಂದು ಎಕರೆಗೆ ಜಮೀನಿನಲ್ಲಿ ಬೇಸಾಯ ಮಾಡಿದರೆ ಅವನು ಹಾಕಿದಂತಹ ಹಣ ಸಹ ವಾಪಸ್ಸು ಬರುತ್ತಿಲ್ಲ. ಇನ್ನು ಲಾಭ ಬರುವುದು ಎಲ್ಲಿ? ಅವರು ಇವತ್ತು ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಇವತ್ತು ತಾವು ಏನೇ ಕಾರ್ಯಕ್ರಮ ಮಾಡಿದರೂ ಸಹ ಪ್ರಯೋಜನವಾಗುತ್ತಿಲ್ಲ. ಅವರಿಗೆ ಇವತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುತ್ತೀರಿ. ಸುಮಾರು ಶೇಕಡ 7-8 ರೂಪಾಯಿಗಳ ಬಡ್ಡಿ ದರದಲ್ಲಿ ಸಾಲ ಕೊಡುತ್ತೇವೆಂದು ಏನು ಹೇಳಿದ್ದೀರಿ ಇದು ಅತ್ಯಂತ ಸ್ವಾಗತಾರ್ಹವಾದ ವಿಚಾರ. ಅದನ್ನು ನೇರವಾಗಿ ಕೊಡಿ. ಸಹಕಾರಿ ಸಂಸ್ಥೆಗಳ ಮೂಲಕ ಸಾಲ ಕೊಡುವಂತಹ ವ್ಯವಸ್ಥೆ ಇವತ್ತು ಹಾಳಾಗಿ ಹೋಗಿದೆ, ಅದರಲ್ಲಿ ಎರಡು ಮಾತಿಲ್ಲ. ತೆಗೆದುಕೊಂಡಂತಹ ಹಣ ಅವರು ವಾಪಸ್ಸು ಕಟ್ಟುವ ಸಾಧ್ಯತೆ ಇಲ್ಲ. ಒಂದು ರೂಪಾಯಿ ಸಾಲ ಇದ್ದದ್ದು ಇವತ್ತು 10 ರೂಪಾಯಿ ಆಗಿದೆ. ಅವನು 10 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿದ್ದರೆ ಅದು ಕಡಿಮೆ ಅಂದರೂ ಸಹ 40-50 ಸಾವಿರ ರೂಪಾಯಿಗಳವರೆಗೂ

ಆಗಿದೆ. ಅವರ ಅಸಲು ಮತ್ತು ಬಡ್ಡಿ ಸೇರಿಸಿ ಸೇರಿಸಿ ಇವತ್ತು ಅವನ ಸಂಪೂರ್ಣ ಆಸ್ತಿ ಮಾರಾಟ ಮಾಡಿದರೂ ಸಹ ಸಾಲ ತೀರದ ಪರಿಸ್ಥಿತಿ ಆಗಿದೆ. ಹೀಗಾಗಿ ಅವರು ಆ ಸಾಲವನ್ನು ಮರುಪಾವತಿ ಮಾಡಲಿಕ್ಕೆ ಬಹಳ ಕಷ್ಟವಿದೆ, ಆದಕ್ಕಾಗಿ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಇವತ್ತು ಅವರು ಸಾಲ ಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಏನಾದರೂ ಒಂದು ದಾರಿಯನ್ನು ಹುಡುಕುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪರ್ಯಾಯ ವ್ಯವಸ್ಥೆಯಾಗಿ ನೇರವಾಗಿ ಅಪೆಕ್ಸ್ ಬ್ಯಾಂಕ್ ಮೂಲಕ ಅಥವಾ ಬೇರೆ ವ್ಯವಸ್ಥೆ ಮೂಲಕ ಯಾರಿಗೆ ಈ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಇಚ್ಛೆ ಇರುತ್ತದೆ ಆ ಒಂದು ಸಮಾನ ಮನಸ್ಕರರು ಇರುತ್ತಾರೆ, ಅಥವಾ ಆ ಒಂದು ಗುಂಪುಗಳು ಇರುತ್ತವೆ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಂತಹ ವ್ಯವಸ್ಥೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು 9 ಪರ್ಸೆಂಟ್ ಎಂದು ಹೇಳಿದ್ದಾರೆ, ಅದಕ್ಕಿಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಬಹುದು. ಅದು 7 ಪರ್ಸೆಂಟ್‌ವರೆಗೂ ಹೋಗಬಹುದು. ಹಿಂದೆ ಈ ಒಂದು ವ್ಯವಸ್ಥೆ ಇತ್ತು. ಯಾವಾಗ ಇತ್ತು ಎಂದು ಶ್ರೀ ಎಸ್.ಎಸ್. ಪಾಟೀಲರು ಕೇಳಬಹುದು, ಅಧ್ಯಕ್ಷರೇ, 12 ಪರ್ಸೆಂಟ್ ಸಾಲದಲ್ಲಿ ಸರಿಯಾಗಿ ತುಂಬಿದರೆ 5 ಪರ್ಸೆಂಟ್ ರಿಯಾಯಿತಿ ಕೊಡುತ್ತಿದ್ದರು. ತಾಲ್ಲೂಕು ಮಾರುಕಟ್ಟೆ ಸಮಿತಿ ಮೂಲಕ ಕೊಟ್ಟರೆ 5 ಪರ್ಸೆಂಟ್ ಹೆಚ್ಚಿಗೆ ಲಾಭಾಂಶ ಕೊಡುತ್ತಿದ್ದರು, ಒಟ್ಟು 2 ಪರ್ಸೆಂಟ್ ಹಣಕ್ಕೆ ಮಾತ್ರ. ಆ ಸಾಲವನ್ನು ಪಡೆದುಕೊಳ್ಳುವಂತಹ ಒಂದು ವ್ಯವಸ್ಥೆ 1983-84 ರಲ್ಲಿ ಇತ್ತು. ಆ ಒಂದು ವ್ಯವಸ್ಥೆಯನ್ನು ಇವತ್ತು ತರುವುದಕ್ಕೆ ಸಾಧ್ಯವಿದೆ. ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ಇವತ್ತು ಸೆಲ್ಫ್ ಹೆಲ್ಫ್ ಗ್ರಾಪ್ ಎನ್ನುವಂತಹ ಹೊಸ ಒಂದು ಕಲ್ಪನೆ ಏನು ಇದೆ ಅದು ಬಹಳ ಸ್ವಾಗತಾರ್ಹವಾದ ಕಲ್ಪನೆ. ಇವತ್ತು ತಾವು ಮಹಿಳೆಯರಿಗಾಗಿ ಸ್ತ್ರೀಶಕ್ತಿ ಯೋಜನೆಯನ್ನು ಮಾಡುತ್ತಿದ್ದೀರಿ. ಅತ್ಯಂತ ಆಸಕ್ತಿಯಿಂದ ಅವರಲ್ಲಿರುವ ಒಂದು ಸುಪ್ತ ಶಕ್ತಿ ಸೂಕ್ತ ರೀತಿಯಲ್ಲಿ ಹೊರ ಬರುತ್ತಿದೆ. ಇವತ್ತು ಸರ್ಕಾರ ಒಂದು ಕೋಟಿ ಟಾರ್ಗೆಟ್ ಇಟ್ಟುಕೊಂಡಿದ್ದರೆ ಅವರು ಸುಮಾರು 4 ಕೋಟಿವರೆಗೂ ನೊಂದಾಯಿಸಿಕೊಳ್ಳುತ್ತಿದ್ದಾರೆ. ಇವತ್ತು ಎಲ್ಲಾ ವರ್ಗದ ಜನ ಸಾಲವನ್ನು ಪಡೆಯುವಂತಹ ರೈತರು ಇದ್ದಾರೆ. ಆದರೆ ತೆಗೆದುಕೊಂಡ ಸಾಲವನ್ನು ಯಾರು ಕಾಲಕ್ಕೆ ಸರಿಯಾಗಿ ತುಂಬಿದರು ಅವರಿಗೆ ಲಾಭವಾಗಲಿಲ್ಲ, ಯಾರು ತಡವಾಗಿ ತುಂಬಿದರು ಅವರಿಗೆ ಲಾಭ ಆಯಿತು. ಅನೇಕ ದ್ವಂದ್ವಗಳಿಂದ ಈ ವ್ಯವಸ್ಥೆ ಹಾಳಾಗಿದೆ. ಅದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ನಾವು ರೂಢಿಸಿಕೊಳ್ಳಬೇಕು. ಇವತ್ತು ಏನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ವಿಶೇಷವಾಗಿ ಸೆಲ್ಫ್ ಹೆಲ್ಫ್ ಗ್ರೂಪ್‌ಗಳಿಂದ ಲೆಂಡಿಂಗ್ ಮಾಡಬೇಕೆಂದು ಹೇಳಿದ್ದಾರೆ ಇದನ್ನು ಬಹಳ ಶಕ್ತಿಯುತವಾಗಿ ಮಾಡುವಂತಹ ಪ್ರಯತ್ನ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಜೀವಂತ ಉದಾಹರಣೆಗಳು ನಮ್ಮ ದೇಶದಲ್ಲಿ ಇರಬಹುದು, ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ಇವೆ ಎಂದು ನಾವು ಓದಿದ್ದೇವೆ ಮತ್ತು ಕೇಳಿದ್ದೇವೆ. ವಿಶೇಷವಾಗಿ ನಾವು ಈಸ್ಟ್ ಬೆಂಗಾಲ್ ಎಂದು ಏನು ಹೇಳುತ್ತೇವೆ, ಬಂಗ್ಲಾದೇಶ ಮತ್ತು ಏನು ಹೇಳುತ್ತೇವೆ ಅಲ್ಲಿಂದ ಈ ಕಲ್ಪನೆ ಉದಯವಾಯಿತು. ಈ ಸಾಲದ ವ್ಯವಸ್ಥೆ ಫೇಲ್ ಆದಾಗ ಆ ಕ್ರೆಡಿಟ್ ಸಿಸ್ಟಂ ಬಂದಾಗ ಈ ರೀತಿಯಾಗಿ ವ್ಯವಸ್ಥಿತವಾದ ಗುಂಪುಗಳು ಯಾರಿಗೆ ಇನ್ನೊಬ್ಬರ ಆರ್ಥಿಕ ಪರಿಸ್ಥಿತಿಯ ಮೇಲೆ ಭರವಸೆ ಇರುತ್ತದೆ ಅವರದ್ದು, ಇವರದ್ದು ಸೇರಿ ಕಾಮನ್ ಇಂಟೆರೆಸ್ಟ್ ಏನು ಇರುತ್ತದೆ ಅಂತಹ

ಗುಂಪುಗಳನ್ನು ಸೇರಿಸಿಕೊಂಡು ಸೆಲ್ಫ್-ಹೆಲ್ಫ್ ಗ್ರೂಪ್‌ಗಳನ್ನು ಮಾಡಿ ಅವರಿಗೆ ಸಾಲ ಕೊಟ್ಟು ಅತ್ಯಂತ ಯಶಸ್ವಿಯಾಗಿ ಈ ಕಾರ್ಯಕ್ರಮ ಜಗತ್ತಿನಲ್ಲಿ ಆಗಿದೆ. ಅದರ ಒಂದು ಮಾದರಿಯನ್ನು ನಾವು ನಮ್ಮ ದೇಶದಲ್ಲಿ ತರುತ್ತಿದ್ದೇವೆ. ಅದೇ ರೀತಿಯಲ್ಲಿ ನಮ್ಮ ಹಾಗೆಯೇ ಥೈಲ್ಯಾಂಡ್ ದೇಶದಲ್ಲಿಯೂ ಸಹ ಈ ವ್ಯವಸ್ಥೆ ಹಾಳಾಗಿ ಹೋಗಿ ಕೊನೆಗೆ ಏನಾದರೂ ಮಾಡಿ ರೈತರಿಗೆ ಸಾಲ ಕೊಡಲೇಬೇಕೆಂದು ಹೇಳಿ, ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಆಗಲೇಬೇಕು, ಅವರ ಚಟುವಟಿಕೆಗಳು ನಡೆಯಲೇಬೇಕು, ರೈತರು ಅವರ ಕಾಯಕಷ್ಟ ಮಾಡದೇ ಇದ್ದರೆ ಯಾವುದೇ ರೀತಿಯಿಂದ ಆದಾಯ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವ ಒಂದು ಸ್ಪಷ್ಟ ಕಲ್ಪನೆಯಿಂದಾಗಿ ಆ ದೇಶದಲ್ಲಿಯೂ ಸಹ ಈ ವ್ಯವಸ್ಥೆಯನ್ನು ತಂದಿದ್ದಾರೆ. ಇದು ಬಹಳ ಯಶಸ್ಥಿಯಾಗಿ ಮಾಡಿದ್ದಾರೆ. ಅವರು ನೇರವಾಗಿ ಲೆಂಡಿಂಗ್ ಮಾಡಿ, ರೈತರಿಗೆ ನೇರವಾಗಿ ಸಾಲ ಕೊಟ್ಟು ಆ ಗುಂಪುಗಳು ಹಣ ವಾಪಸ್ಸು ಕೊಟ್ಟು ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದಾರೆ. ಅಂತಹ ಉದಾಹರಣೆಗಳನ್ನು ತೆಗೆದುಕೊಂಡು ಯಾವುದೇ ವಿಧವಾದ ಅಡೆತಡೆಗಳು ಬಂದರೂ ಈ ವ್ಯವಸ್ಥೆಯನ್ನು ಯಶಸ್ವಿ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಪಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ.

ಇನ್ನೊಂದು ಮಾತು ಏನೆಂದರೆ ನೀರಾವರಿಗೆ ಈ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಇಟ್ಟಿದ್ದಾರೆ. ಆದರೆ ಕಡಿಮೆ ಮಾಡಿಲ್ಲ ಎನ್ನುವುದು ಒಂದು ಸಮಾಧಾನಕರ ವಿಚಾರ. ಒಂದು ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಕೃಷಿ ಅತ್ಯಂತ ಪ್ರಮುಖವಾದಂತಹ ನಮ್ಮ ದೇಶದ ಚಟುವಟಿಕೆ. ಇದಕ್ಕೆ ಅಧ್ಯತೆ ಬಹಳ ಕಡಿಮೆ ಇತ್ತು ಒಂದು ಕಾಲದಲ್ಲಿ. ಹಿಂದಿನ ಅನೇಕ ಬಜೆಟ್‌ಗಳಲ್ಲಿ ನಾನು ಕೇಳಿದ್ದೇನೆ. ಹಿಂದೆ ಮಾನ್ಯ ಸಿದ್ದರಾಮಯ್ಯನವರು ಅರ್ಥ ಮಂತ್ರಿಗಳಾಗಿದ್ದಾಗ ಅವರ ಬಜೆಟ್‌ನ್ನು ನೋಡಿದಾಗ ನೀರಾವರಿಗೆ 25 ಪರ್ಸೆಂಟ್ ಹಣವನ್ನು ನೀರಾವರಿಗೆ ಇಟ್ಟಿದ್ದೇವೆಂದು ಹೇಳಿದಾಗ ನಾವೆಲ್ಲಾ ಬಹಳ ಸಂತೋಷಪಟ್ಟೆವು. ಇಷ್ಟು ಇಡಬೇಕು, ಇಷ್ಟು ಏಕೆ ಇಡುತ್ತಿಲ್ಲ ಎಂದು ನಾವು ಇಷ್ಟು ಜನ ಇದ್ದೇವೆ, ನಮಗಾಗಿ ಇಷ್ಟು ಹಣ ಏಕೆ ಇಡುವುದಿಲ್ಲವೆಂದು ಕೇಳುತ್ತಿದ್ದೆವು. ಇವತ್ತು ನೀರಾವರಿಗೆ ಇನ್ನೂ ಹೆಚ್ಚು ಹಣ ಇಡಬೇಕು. ಈ ಹಣವನ್ನು ಅನೇಕ ವಿಧವಾದ ಸಬ್ಸಿಡಿ ಮತ್ತೊಂದು ಕೊಡುವುದು ಬಿಟ್ಟು, ಕನಿಷ್ಟ ಈ ಕಾರ್ಯಕ್ರಮವನ್ನು ಯಶಸ್ಥಿಗೊಳಿಸಲು ಬರುವ ವರ್ಷ ಹೆಚ್ಚು ಹೆಚ್ಚು ಹಣ ಬಿಡುಗಡೆ ಮಾಡಬೇಕು. ಹಲವಾರು ದಶಕಗಳಿಂದ ಹಿಂದೆ ಬಿದ್ದಂತಹ ನೀರಾವರಿ ಯೋಜನೆಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿರುವ ಕೃಷ್ಣ ಕಣಿವೆ ಯೋಜನೆಗಳು ಇರಬಹುದು, ಕಾವೇರಿ ಕಣಿವೆ ಯೋಜನೆಗಳು ಆಗಿರಬಹುದು, ಅಥವಾ ಬೇರೆ ಬೇರೆ ಯೋಜನೆಗಳು ಆಗಿರಬಹುದು, ಅದಷ್ಟು ಬೇಗ ಅವುಗಳನ್ನು ಮುಗಿಸುವುದಕ್ಕೆ ಹೆಚ್ಚು ಹಣ ಬಿಡುಗಡೆ ಮಾಡಿ ಕೆಲಸವನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಇವತ್ತು ಒಂದು ವಾತಾವರಣ ನಿರ್ಮಾಣವಾಗಿದೆ. ನೀರಾವರಿ ನಮ್ಮ ಹಕ್ಕು ಎಂದು ಕೇಳುವಂತಹ ಮಟ್ಟಕ್ಕೆ ಜನ ಬಂದಿದ್ದಾರೆ. ನಾವು 2300 ಕೋಟಿ ರೂಪಾಯಿಗಳಷ್ಟು ವಿದ್ಯುತ್‌ಗೆ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಆ ಹಣ ಮುಂದಿನ ವರ್ಷಗಳಲ್ಲಿ ಇನ್ನೂ ಜಾಸ್ತಿಯಾಗುತ್ತದೆಂದು ಹೇಳುತ್ತಿದ್ದೀರಿ. 4-5 ಸಾವಿರ ಆಗಬಹುದು, ಅದಕ್ಕೆ ಹಣ ಎಲ್ಲಿಂದ ತರುತ್ತೀರಿ ಎಂದು ಕೇಳುತ್ತಾರೆ. ಅದರಲ್ಲಿ ಸುಮಾರು ಪಟ್ಟು ಹಣ ರೈತರಿಗೆ ಮುಟ್ಟುತ್ತದೆಂದು ಹೇಳುತ್ತೀರಿ. ಅಷ್ಟರಮಟ್ಟಿನ ವಿದ್ಯುತ್‌ನ್ನು ರೈತರಿಗೆ ಒದಗಿಸಬೇಕು. ಅದು ಲೀಗಲ್ ಆಗಿ ತೆಗೆದುಕೊಳ್ಳುತ್ತಾರೋ, ಇಲ್ಲೀಗಲ್ ಆಗಿ

ತೆಗೆದುಕೊಳ್ಳುತ್ತಾರೋ, ಯಾವುದೇ ರೀತಿಯಲ್ಲಿ ವಿದ್ಯುತ್‌ನ್ನು ರೈತರಿಗೆ ಒದಗಿಸದೇ ಇದ್ದರೆ ಆರ್ಥಿಕ ಚಟುವಟಿಕೆ ನಿಂತು ತಮ್ಮ ಈ ಗ್ರೋತ್ ರೇಟ್ ಏನು ಇದೆ ಕೃಷಿ ಇರಬಹುದು, ಕೈಗಾರಿಕೆ ಇರಬಹುದು ಅದು ನಿಂತು ಹೋಗುವಂತಹ ಪರಿಸ್ಥಿತಿ ಬರುತ್ತದೆ. ಈಗಾಗಲೇ ಸಾಕಷ್ಟು ಸಂಕಷ್ಟಕ್ಕೆ ರೈತರು ಒಳಗಾಗಿದ್ದಾರೆ. ಇವತ್ತು ಅವರಿಗೆ ಮೀಟರ್ ಹಾಕುವಂತಹ ವ್ಯವಸ್ಥೆ ತರುತ್ತಿದ್ದೀರಿ, ಬೇಡವೆಂದು ನಾವು ಹೇಳುವುದಿಲ್ಲ. ಅಥವಾ ರೆಗ್ಯುಲರೈಜ್ ಮಾಡಬೇಕೆಂದು ಇದ್ದರೆ ಮಾಡಿ, ಅದರ ಬಗ್ಗೆ ಚಿಂತೆ ಇಲ್ಲ. ಆದರೆ ತಾವು ಹಾಕುವ ವಿದ್ಯುತ್ ಬೆಲೆಯನ್ನು ಅವರು ಪಡೆದುಕೊಂಡು ಅವರು ಕೃಷಿಯನ್ನು ನಿಭಾಯಿಸುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ನೋಡಬೇಕು. ರೈತರು ಒಂದು ವರ್ಷಕ್ಕೆ 10 ಹೆಚ್.ಪಿ. ಮೋಟಾರ್ ಹಾಕಿದರೆ, ಕಡಿಮೆ ಎಂದರು. ಒಂದು ಅವರು, ಮೀಟರ್ ಅಳವಡಿಸಿದರೆ ಒಂದು ವರ್ಷಕ್ಕೆ 25 ಸಾವಿರ ರೂಪಾಯಿಗಳು ವಿದ್ಯುತ್ ಖರ್ಚು ಕೊಡುವ ಸಂದರ್ಭ ಬರುತ್ತದೆಂದು ಅನುಭವದಿಂದ ಅವರು ಹೇಳುತ್ತಾರೆ. ಅದನ್ನು ಯಾರು ಕೊಡಲಿಕ್ಕೆ ಸಾಧ್ಯ ಅಧ್ಯಕ್ಷರೇ? ಅಷ್ಟು ಹಣವನ್ನು ಕೊಡಲಿಕ್ಕೆ ಆ ವಾಣಿಜ್ಯ ಬೆಳೆಗಳಾದ ಕಬ್ಬು ಇರಬಹುದು, ದ್ರಾಕ್ಷಿ ಇರಬಹುದು ಅದನ್ನು ಬೆಳೆಯತಕ್ಕಂತ ಇವರಿಗೆ ಮಾತ್ರ ಸ್ವಲ್ಪ ಮಟ್ಟಿಗೆ ಸಾಧ್ಯವಾಗಬಹುದು. ಇನ್ನು ಗೋಧಿ ಬೆಳೆಯುವವರಿಗೆ, ಜೋಳ ಬೆಳೆಯುವವರಿಗೆ ಏನು ದೇಶಕ್ಕಾಗಿ ನಾವು ಆಹಾರ ಕೊಡುತ್ತೇವೆ, ದೇಶಕ್ಕಾಗಿ ಬಹಳ ದೊಡ್ಡ ತ್ಯಾಗ ಮಾಡುತ್ತೇವೆ ಎಂದು ಹೇಳಿಕೊಂಡು ಅರೆ ಹೊಟ್ಟೆ ಉಂಡು, ಇವತ್ತೇನು ಬೇಸಾಯ ಮಾಡುತ್ತಿದ್ದಾರೆ ಅವರಿಗೆ ಮಾತ್ರ ಇದು ಸಾಧ್ಯ ಇಲ್ಲ. ಇಷ್ಟು ವಿದ್ಯುತ್ತಿನ ಬೆಲೆಯನ್ನು ಕೊಟ್ಟು, ಕೃಷಿಯನ್ನು ಮಾಡಲಿಕ್ಕೆ ಅವರಿಗೆ ಅಸಾಧ್ಯವಾಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕಾಗಿ, ತಾವೇನು ಅವರು ಕೊಡಬೇಕೆಂದು ಮಾಡುತ್ತಾ ಇದ್ದೀರಿ, ನಿಜವಾಗಿಯೂ ಒಳಗಡೆ ಏನು ವ್ಯವಸ್ಥೆ ಇದೆ, ಅದು ಡಿಸ್ಟರ್ಬ್ ಆಗದ ಹಾಗೆ ಒಂದು ವ್ಯವಸ್ಥೆಯನ್ನು ತರಬೇಕು. ಮತ್ತು ಆ ವಿಧವಾಗಿ, ಆ ರೈತರಿಗೆ ಒಂದು ರೀತಿಯಿಂದ ಸಹಾಯವನ್ನು ಮಾಡುವಂಥ ಪರಿಸ್ಥಿತಿಯನ್ನು ಉಂಟು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನೀರಾವರಿ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಒಂದು ರೀತಿಯಾದ ವಾತಾವರಣ ಇಲ್ಲ, ನೀರಾವರಿ ಬಗ್ಗೆ ಏನೇನೋ ಮಾಡುತ್ತೇವೆಂದು ಮಾನ್ಯ ನೀರಾವರಿ ಸಚಿವರು ಆಸೆಯನ್ನು ಹುಟ್ಟಿಸಿದ್ದಾರೆ. ಅದು ಯಾವ ರೀತಿಯಾಗಿ ಕನಸನ್ನು ನನಸು ಮಾಡುವಂಥ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಹೇಳಬೇಕು. ನಮ್ಮ ಜಿಲ್ಲೆಯಲ್ಲಿ ಬರುವಂಥ ಅನೇಕ ಯೋಜನೆಗಳಾದ ಮುಂಡರಗಿ, ಹತ್ತಿರ ಬರುವ ಯೋಜನೆ, ಸಿಂಗಟಾಲೂರು ವ್ಯಾಪ್ತಿ ನೀರಾವರಿ, ಹುಲಿಗುಡ್ಡ ಏತ ನೀರಾವರಿ, ಈ ಕಡೆ ಬೆಣ್ಣೆಹಳ್ಳಕ್ಕೆ ಅನೇಕ ವಿಧವಾದ ಲಿಫ್ಟ್‌ಗಳನ್ನು ಮಾಡುವುದು, ಮಲಪ್ರಭಾ ನದಿಗೆ ಮಾಡುವಂಥಾದ್ದು ಆಗಿರಬಹುದು. ಮಹದಾಯಿಯಂಥ ಯೋಜನೆ ಬಹಳ ವಿಳಂಬವಾಗುತ್ತಾ ಇದೆ; ಇದನ್ನು ನಾವು ಎಷ್ಟು ವರ್ಷಗಳಿಂದ ಕೇಳುತ್ತಾ ಇದ್ದೇವೆ. ಗೋವಾ ಸರ್ಕಾರದ್ದು ಆಯಿತು, ಮತ್ತೊಂದು ಕಡೆ ಹೋಯಿತು. ಕೇಂದ್ರ ಸರ್ಕಾರದ ವಾಟರ್ ಕಮೀಷನ್‌ನವರು ಅಡ್ಡ ಬಂದರು ಎಂದು ಹೇಳಿದರು, ಆ ಸರ್ಕಾರ ಅದಕ್ಕೆ ತಕರಾರು ಮಾಡುತ್ತೇವೆಂದು ಹೇಳಿದರು. ಮತ್ತೆ ಉಪ ನದಿಗಳನ್ನು ಸೇರಿಸಿಕೊಂಡು ಇಲ್ಲಿ ಬರಬೇಕೆಂದು ಹೇಳಿದರು. ಇದು ಮಂದಗತಿಯಿಂದ ಹೋಗಲಿಕ್ಕೆ, ನಾವೂ ಕೂಡ ಏನಾದರೂ ಒತ್ತಾಯ ಮಾಡುತ್ತಾ ಇಲ್ಲವೇ, ಜನ ಅದರ ಬಗ್ಗೆ ಆಗ್ರಹ ಮಾಡುತ್ತಾ ಇಲ್ಲವೇ ಏಕೆ ಇವು ಹಿಂದೆ ಬೀಳುತ್ತಿವೆ ಎಂಬ ಬಗ್ಗೆ ಸಂಶಯ ಉಂಟಾಗುತ್ತಿದೆ. ಬಹುತೇಕ ಇವೆಲ್ಲವನ್ನೂ ಬೇಗ ಕ್ಲಿಯರ್

ಮಾಡಬೇಕು. ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ನೀರಾವರಿ ಯೋಜನೆಗೆ ಸುಮಾರು 400-500 ಕೋಟಿ ರೂಪಾಯಿಗಳನ್ನು ......

ಶ್ರೀ ಕೆ. ಶ್ರೀನಿವಾಸಗೌಡ:- ಸ್ವಾಮಿ ಉಪಾಧ್ಯಕ್ಷರೇ, ಊಟಕ್ಕೆ ಬಿಡುತ್ತೀರೋ ಇಲ್ಲವೋ. ಏಕೆಂದರೆ ನಾವೆಲ್ಲಾ ಡಯಾಬಿಟಿಕ್ ಪೇಷೆಂಟ್ಸ್. ನೀವು ಹೋಗಿ ಎಂದರೆ, ನಾವು ಹೋಗಿ ಬರುತ್ತೇವೆ. ಅರ್ಧ ಅಥವಾ ಮುಕ್ಕಾಲು ಗಂಟೆ ಅಡ್ಜರ್ನ್ ಮಾಡಿ.

ಉಪಾಧ್ಯಕ್ಷರು:- ಮಾನ್ಯ ಯಾವಗಲ್‌ರವರೇ, ನೀವು ಊಟದ ನಂತರ ಮತ್ತೆ ನಿಮ್ಮ ಭಷಣವನ್ನು ಮುಂದುವರಿಸಿ....

ಶ್ರೀ ಎಸ್.ಎಸ್. ಪಾಟೀಲ್:- ಏಕೆಂದರೆ, ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಬಜೆಟ್‌ನ ಪರವಾಗಿ ಮಾತನಾಡುತ್ತಾರೋ ಅಥವಾ ವಿರೋಧವಾಗಿ ಮಾತನಾಡುತ್ತಾರೋ ನಮಗೆ ಅರ್ಥವೇ ಆಗುತ್ತಾ ಇಲ್ಲ.

ಶ್ರೀ ಬಿ.ಆರ್. ಯಾವಗಲ್:- ರೈತರ ಪರವಾಗಿ, ಈ ರಾಜ್ಯದ ಜನತೆಯ ಪರವಾಗಿಯೇ ನೀವು ಮಾತನಾಡುವುದು ಮತ್ತು ನಾವೂ ಮಾತನಾಡುವುದು. ಭಾಷೆಗಳು ಸ್ವಲ್ಪ ವ್ಯತ್ಯಾಸವಾಗಬಹುದು. ನೀವು ಬಹಳ ಖಾರವಾಗಿ ಮಾತನಾಡಬಹುದು, ನಾನು ನೇರವಾಗಿ ಹೇಳಬಹುದು; ಅಷ್ಟೇ ವ್ಯತ್ಯಾಸ.

ಉಪಾಧ್ಯಕ್ಷರು:- ನೀವು ಮತ್ತೆ ಮೂರು ಗಂಟೆಗೆ ಮುಂದುವರಿಸಿ. ಈಗ ಸದನವನ್ನು 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 2-03 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3-20 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ (ಶ್ರೀ ಮನೋಹರ್ ಹೆಚ್. ತಹಶೀಲ್ದಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ವಿಷಯ:- 2002-2003ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ:

ಶ್ರೀ ಬಿ.ಆರ್. ಯಾವಗಲ್ (ನರಗುಂದ್):- ಮಾನ್ಯ ಉಪಾಧ್ಯಕ್ಷರೇ, ನಾನು ಮಲಪ್ರಭಾ ಯೋಜನೆ ಬಗ್ಗೆ ಹೇಳುತ್ತಿದ್ದೆ. 42 ಟಿಎಂಸಿಯಷ್ಟನ್ನು ನೀರನ್ನು ಅಲ್ಲಿ ಶೇಖರಣೆ ಮಾಡಬಹುದು. ಅಂದಾಜು ರಕ್ಷಿತ ನೀರಾವರಿ ಅಂದರೆ ಪ್ರೊಟೆಕ್ಟೆಡ್ ಇರಿಗೇಷನ್ ಎಂದು ನಾವೇನು ಹೇಳುತ್ತೇವೆ, ಮಳೆ ಹೋದಾಗ ನೀರು ಬಿಡುವಂಥ ಒಂದು ಪದ್ಧತಿ; ಅದನ್ನು ಮಾಡಿದರೆ ಸುಮಾರು ಐದು ಲಕ್ಷ ಎಕರೆಗಳಿಗೆ ನೀರು ಸಿಗಬಹುದು ಎನ್ನುವ ಒಂದು ಅಂದಾಜು ಇದೆ. ಈ ರೀತಿ ಮಾಡಿದಂಥ ಯೋಜನೆ, ಇದೊಂದು ರೀತಿ ಅಯಶಸ್ವಿ ಯೋಜನೆಯಾಗಿ ಪರಿವರ್ತನೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. 42 ಟಿಎಂಸಿ ನೀರು ಬರಬಹುದು ಎಂದು ಅಂದಾಜು ಮಾಡಿದಂಥ ಯೋಜನೆಗೆ ಇವತ್ತು ಅವರದೇ ತಂತ್ರಜ್ಞರ ಅಂದಾಜಿನ ಪ್ರಕಾರ 27 ಟಿಎಂಸಿ ನೀರು ಮಾತ್ರ ಬರುತ್ತದೆ ಎನ್ನುವ ಒಂದು ಅಂದಾಜನ್ನು ಅವರು ಮಾಡುತ್ತಿದ್ದಾರೆ, ಹಾಗೆ ಮಾಡಿದರು. ಆ 27 ಟಿಎಂಸಿ ಅಂದರೆ ನಾವು ಅಪ್ಟಿಮಮ್ ಲೆವೆಲ್ ತೆಗೆದುಕೊಂಡಾಗ

27 ಟಿಎಂಸಿ ಬರುತ್ತದೆ, ಡ್ಯಾಮ್ 79 ಫೀಟ್ ಸಮುದ್ರ ದಂಡೆಯ ಮೇಲೆ ನಾವೇನು ಮಾಪನ ಇಟ್ಟುಕೊಂಡು ಹೇಳುತ್ತೇವೆ, ಆ ಮಾಪನಕ್ಕೆ ಬಂದಾಗ ಸುಮಾರು 27 ಟಿಎಂಸಿ-ಯಷ್ಟು ಮಾತ್ರ ನೀರು ಬರುತ್ತದೆ. ಆ ಮಳೆ ಬೀಳುವ ಪ್ರದೇಶದಿಂದ ಅಷ್ಟು ಮಾತ್ರ ನೀರಿನ ಉತ್ಪಾದನೆಯಾಗುತ್ತದೆ ಎನ್ನುವ ಒಂದು ತರ್ಕಕ್ಕೆ ಅವರು ಬಂದಿದಾರೆ. ಅದರ ಜೊತೆಗೆ ಆ 27 ಟಿಎಂಸಿ ನೀರು ಶೇಖರಣೆಯಾದಂಥ ಉದಾಹರಣೆಗಳು ಬಹುತೇಕ ಸುಮಾರು 15 ವರ್ಷಗಳಲ್ಲಿ ಒಂದು ಬಾರಿ, ಎರಡು ಬಾರಿ ಮಾತ್ರ ಇರಬಹುದು. ಇನ್ನುಳಿದ ಎಲ್ಲಾ ಅವಧಿಯಲ್ಲಿ 20 ಟಿಎಂಸಿಯನ್ನು ಅದು ಮೀರುತ್ತಿಲ್ಲ. ಈ ವರ್ಷ ಆಗಸ್ಟ್, ಸೆಪ್ಟೆಂಬರ್‌ವರೆಗೆ ಮಳೆಯಾಗಲಿಲ್ಲ. ಅಲ್ಪಸ್ವಲ್ಪ ಬಂದಂಥ ಮಳೆಯಿಂದಾಗಿ ನೀರು ಶೇಖರಣೆಯಾಗಿ 12 ಟಿಎಂಸಿಯಷ್ಟು ಮಾತ್ರ ನಿಂತುಬಿಟ್ಟಿತು. ಇದು ಒಂದು ವರ್ಷದ ಉದಾಹರಣೆಯಲ್ಲ. ಸುಮಾರು 12 ರಿಂದ 20 ರವರೆಗೆ ಮಾತ್ರ ನೀರು ಬರುತ್ತದೆ ಹೀಗಾಗಿರುವುದರಿಂದ ಜೂನ್, ಜುಲೈನಲ್ಲಿ ಮಳೆ ಬರುವುದಿಲ್ಲ. ರಿಸರ್ವಾಯರ್‌ನಲ್ಲಿ ನೀರೂ ಇರುವುದಿಲ್ಲ. ಜುಲೈನಲ್ಲಿ ನೀರು ಬರಲಿಕ್ಕೆ ಪ್ರಾರಂಭವಾಗುತ್ತದೆ.; ನೀರು ಶೇಖರಣೆ ಆಗಿ ಹೊಲಗಳಿಗೆ ಬರುವುದರಲ್ಲಿ ಆಗಸ್ಟ್ ಆಗುತ್ತದೆ. ಆಗಸ್ಟ್ ನಂತರ ಒಂದೋ, ಎರಡೋ ಟಿಎಂಸಿ ನೀರನ್ನು ಹಾಯಿಸಿಕೊಂಡು ಅಥವಾ ಮಳೆಯನ್ನು ಆಧರಿಸಿ ಬೆಳೆಗಳನ್ನು ನಾವು ಬಿತ್ತನೆ ಮಾಡಿದರೆ ಆ ಬೆಳೆಗಳು ಸುಮಾರು ನಾಲ್ಕೈದು ತಿಂಗಳಲ್ಲಿ ಬರುತ್ತವೆ. ಇದನ್ನು ಶಾರ್ಟ್ ಡ್ಯುರೇಷನ್ ಕ್ರಾಪ್ ಎಂದು ನಾವು ಹೇಳುತ್ತೇವೆ. ಮುಂಗಾರು ಬೆಳೆ, ಹಿಂಗಾರು ಬೆಳೆ ನಾಲ್ಕು-ನಾಲ್ಕು ತಿಂಗಳ ಬೆಳೆ, ಕನಿಷ್ಟ ನಾಲ್ಕು ತಿಂಗಳಾದರೂ ಬೆಳೆ ಬರಲು ಅವಧಿ ಬೇಕಾಗುತ್ತದೆ. ಬೆಳೆಯನ್ನು ಯಾವಾಗಲೂ ಬೇಕು ಬೇಕಾಗುವ ಹಾಕಿದ್ದರೆ ಬರಲಿಕ್ಕೆ ಸಾಧ್ಯವಿಲ್ಲ. ವಿಶೇಷವಾಗಿ ಮುಂಗಾರು ಬೆಳೆಗಳು, ಹಿಂಗಾರು ಬೇಳೆಗಳು ಮಳೆಯನ್ನು ಆಧರಿಸಿ, ಮತ್ತು ಆಗಿರುವಂತಹ ಹವಾಗುಣಕ್ಕೆ ಒಗ್ಗುವಂತಹ ಬೆಳೆಗಳನ್ನು ನಾವು ಬೆಳೆಯುತ್ತೇವೆ. ಇವತ್ತು ಆಗಸ್ಟ್‌ನಲ್ಲಿ ಆಗಲೀ, ಸೆಪ್ಟೆಂಬರ್‌ನಲ್ಲಿ ಆಗಲೀ ಮಳೆಯೋ, ನೀರೋ ಅಥವಾ ಲೀಟ್ ಜುಲೈ ಅಥವಾ ಆಗಸ್ಟ್ ಮಧ್ಯದಲ್ಲಿ ಹತ್ತಿ ಬೆಳೆಯನ್ನೋ ಗೋವಿನ ಜೋಳದ ಬೆಳೆಯನ್ನೋ ಅಥವಾ ಯಾವುದಾದರೂ ಪಲ್ಸಸ್, ಇಂತಹ ಏನಾದರೂ ಬೆಳೆಗಳನ್ನು ಹಾಕಿದರೆ ಆ ಬೆಳೆಯುವಂತಹ ಅವಧಿ, ಫಲ ಕೊಡುತ್ತದೆ, ಅದರಿಂದೇನು ಯೀಲ್ಡ್ ಬರಬೇಕು ಹೆಚ್ಚುವರಿ ಎಷ್ಟು ಉತ್ಪಾದನೆ ಆಗಬೇಕು, ಅದರಲ್ಲಿ ಒಂದನೇ ನಾಲ್ಕಂಶ ಬೆಳೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ವಿಧವಾದಂತಹ ರೋಗಗಳಿಗೆ ತುತ್ತಾಗುತ್ತವೆ. ಬೆಳೆ ಬರಲಿಕ್ಕೆ ಅನಾನುಕೂಲ ಆಗುತ್ತದೆ. ಪ್ರೀಮೆಚೂರ್ ಬೆಳೆ ಒಣಗಿ ಹೋಗುವಂತಹ ಸ್ಥಿತಿ ಬರುತ್ತದೆ. ಹೀಗಾಗಿ ಒಟ್ಟಾರೆ ಬೆಳೆಯನ್ನು ಒಂದು ಪದ್ಧತಿಗೆ ಅನುಗುಣವಾಗಿ, ವಿಧಾನಕ್ಕೆ ಅನುಗುಣವಾಗಿ ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಸುಮಾರು ವರ್ಷಗಳಿಂದ ಈ ಪರಿಸ್ಥಿತಿ ಇದೆ. ಈ ವರ್ಷದ್ದೂ ಸಹ ಬಹಳ ಕಷ್ಟಕರವಾಗಿತ್ತು; ತಮಗೆ ಗೊತ್ತಿದೆ. ಆ ಭಾಗದಲ್ಲಿ 25-30 ವರ್ಷಗಳ ಬರಗಾಲ ಇತ್ತು, ನಾವು ಹುಡುಗರಾಗಿದ್ದಾಗ ಬರಗಾಲವನ್ನು ನೋಡಿದ್ದೆವು. ಅಂತಹ ತೀವ್ರತರವಾದಂತಹ ಬರಗಾಲ ಆ ಪ್ರದೇಶದಲ್ಲಿತ್ತು. ಯಾವ ಜನ ಕೆಲಸಕ್ಕಾಗಿ, ಕಾಳಿಗಾಗಿ, ಹೊಟ್ಟೆಗಾಗಿ, ಗುಳೆ ಹೋಗುತ್ತಿದ್ದರು, ಮೈಗ್ರೇಷನ್ ಆಗುತ್ತಿದ್ದರು, ಆ ಜನ ಇವತ್ತು ಮೈಗ್ರೇಷನ್ ಮಂಗಳೂರಿಗೆ ಹೋಗಬೇಕೋ ಅಥವಾ ಗೋವಾಕ್ಕೆ ಹೋಗಬೇಕೋ, ಇಲ್ಲ ಅಲ್ಲೇ ಇರಬೋಕೋ? ಕೆಲಸಕ್ಕಾಗಿ ಅಲ್ಲೇ ನಮ್ಮ ಮೇಲೆ ಒತ್ತಾಯ ಮಾಡಬೇಕು, ಜಗಳ ಮಾಡಬೇಕು, ಧರಣೆ ಮಾಡಬೇಕು, ಯಾರು ಆ ಗುದ್ದಲಿಯನ್ನು ಅಥವಾ ಸನಿಕೆಯನ್ನು ಮಣ್ಣು ಕಡಿಯುವ ಕೆಲಸವನ್ನು ಬಿಟ್ಟು ಹಲವಾರು

ವರ್ಷಗಳು ಆಗಿತ್ತು, ಅವರು ತಮ್ಮೆಲ್ಲಾ ಮನೆಗಳಲ್ಲಿದ್ದಂತಹ ಸಾಮಾನುಗಳನ್ನು ತೆಗೆದುಕೊಂಡು ರಾತ್ರಿ, ಹಗಲು ಆ ಮಣ್ಣಿನ ಕೆಲಸವನ್ನು, ರಸ್ತೆಯ ಕೆಲಸವನ್ನು ಮಾಡುವಂತಹದು, ಕೆರೆ ಕಡಿಯುವಂತಹ ಕೆಲಸ; ಹೀಗೆ ಸುಮಾರು ಸಾವಿರಾರು ಸಂಖ್ಯೆಯಲ್ಲಿ ಗುದ್ದಲಿಗಳ ಜೊತೆ ಜೊತೆಯಾಗಿ ಬಂದು ಕಡಿದು, ಸಿಗುವಂತಹ ಕಾಳನ್ನು, ಕಾಳಿನಿಂದ ಹಣವನ್ನು ಪಡೆದುಕೊಂಡು ಹೋಗಿ ಜೀವನ ಮಾಡುವಂತಹ ಪರಿಸ್ಥಿತಿ ಅಲ್ಲಿಯ ಪ್ರದೇಶದಲ್ಲಿ ಬಂದಿತ್ತು ಎಂದರೆ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತು ಎಂಬುದು ಅದು ತಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸುತ್ತೇನೆ. ಹಾಗಾಗಿ ಆ ಯೋಜನೆ ಒಂದು ತರ್ಕಬದ್ಧವಾಗಿ ಆಗಲಿಲ್ಲ ಎನ್ನುವುದರ ಜೊತೆಗೆ ಇದರ ಭವಿಷ್ಯ ಏನು ಎನ್ನುವುದನ್ನು ಸಹಿತ ವಿಚಾರ ಮಾಡಬೇಕಾದಂತಹ ಅವಶ್ಯಕತೆ ಇದೆ. ಹಾಗಾಗಿ ಇರುವಂತಹ ನೀರನ್ನು ಸರಿಯಾಗಿ ಉಪಯೋಗ ಮಾಡಬೇಕು. ಎಷ್ಟು ನೀರು ಸಿಗುತ್ತದೋ ಅಷ್ಟನ್ನು ಉಪಯೋಗ ಮಾಡಬೇಕು. ಅದು ಎಲ್ಲಾ ಪ್ರದೇಶಕ್ಕೂ ಸುಮಾರು 136 ಕಿಲೋಮೀಟರ್‌ನಷ್ಟು ಕಡಿದು ಇವತ್ತು ರೋಡ್‌ವರೆಗೆ ಬಂದಿದೆ. ಇವತ್ತು ಬಾದಾಮಿ ಹದ್ದಿನ ಕಡೆಯ ಭಾಗದವರೆಗೂ ಬಂದಿದೆ. ಅವರೆಲ್ಲರಿಗೂ ಅಷ್ಟೋ ಇಷ್ಟೋ ಸಿಗುವಂತಹ ನೀರು ಸಿಗಬೇಕು. ಅದಕ್ಕೆ ಒಂದು ವ್ಯವಸ್ಥಿತವಾದಂತಹ ಕಾಲುವೆಗಳ ಜಾಲ ಬೇಕು. ಆ ಕಾಲುವೆಗಳೂ ಸಹಿತ ಇವತ್ತು ಸೋರಿಕೆಯಾಗಿ ಸುಮಾರು ಮೂರು ಭಾಗದಲ್ಲಿ ಒಂದು ಭಾಗ ನೀರು ನದಿಯೋ ಅಥವಾ ಹಳ್ಳನೋ, ಸಣ್ಣ ಸಣ್ಣ ಉಪ ಹಳ್ಳಗಳೋ ಇಂತಹವಕ್ಕೆ ಹರಿದು ಹೋಗಿ ವೇಸ್ಟ್ ಆಗುವುದನ್ನು ತಪ್ಪಿಸಬೇಕು. ಕಾಲುವೆಗಳನ್ನು ಸುಧಾರಣೆ ಮಾಡಬೇಕು. ಅದೆಲ್ಲಕ್ಕಿಂತ ಮುಖ್ಯವಾಗಿ ಇದರ ಕೊರತೆ ಏನು ಇದೆ? ಈ ಕನಿಷ್ಟ 27 ಟಿಎಂಸಿಗಾದರೂ ನೀವು ತರದೇ ಇದ್ದರೆ ಒಂದು ಬೆಳೆಗೂ ನೀರು ಕೊಡದೇ ಇರುವಂತಹ ಸ್ಥಿತಿ ಇದೆ. ಅದನ್ನು ಮಾಡಬೇಕಾದರೆ ಮಹದಾಯಿ ಯೋಜನೆಯನ್ನು ತಾವು ಮಾಡಲೇಬೇಕಾದಂತಹ ಅವಶ್ಯಕತೆ ಇವತ್ತು ಅಲ್ಲಿ ಇದೆ. ಇಲ್ಲದೇ ಇದ್ದರೆ ಆ ಯೋಜನೆ ಸಂಪೂರ್ಣವಾಗಿ ವ್ಯರ್ಥ. ಸುಮಾರು 500 ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿ ಆ ಯೋಜನೆ ಇವತ್ತು ತಯಾರಾಗಿದೆ. ಅದರಿಂದ ಏನೂ ಪ್ರಯೋಜನ ಆಗಿಲ್ಲ ಮತ್ತು ಸುಮಾರು 25-30 ವರ್ಷಗಳ ಹಿಂದೆ ಜನಗಳಿಗೆ ಯಾವ ಪರಿಸ್ಥಿತಿ ಇತ್ತು, ಒಣ ಪ್ರದೇಶದ ಯಾವ ರೀತಿ ವರ್ಷ ವರ್ಷವೂ ಬರಗಾಲದ ದವಡೆಗೆ ಸಿಕ್ಕಿಕೊಂಡು ಹೋಗುತ್ತಿದ್ದರು, ಅದೇ ಪರಿಸ್ಥಿತಿ ಬಂದಿರುವುದನ್ನು ಇವತ್ತು ನಾವು ಕಂಡಿದ್ದೇವೆ; ಪುನರಾವರ್ತನೆ ಆಗುತ್ತದೆ. ಕನಿಷ್ಟ ಅದನ್ನು ತಪ್ಪಿಸಲಿಕ್ಕಾದರೂ ಆ ಮಹದಾಯಿ ಯೋಜನೆಗೆ ಬಹಳ ದೊಡ್ಡ ಮಟ್ಟದಲ್ಲಿ, ಮಾನ್ಯ ಮುಖ್ಯಮಂತ್ರಿಗಳ ಮಟ್ಟದಲ್ಲಿ ಪ್ರಯತ್ನ ಆಗಬೇಕು. ನಾವು ಎಲ್ಲರನ್ನೂ ಕೇಳೋಣ ಈ ವಿಚಾರದ ಬಗ್ಗೆ. ಎಲ್ಲರ ಜವಾಬ್ದಾರಿ ಇದೆ. ಕರ್ನಾಟಕದಲ್ಲಿ ಅಧಿಕಾರ ಹಿಡಿದಂತಹ ಪಕ್ಷಗಳನ್ನೂ ನಾವು ಕೇಳುತ್ತೇವೆ. ಇದನ್ನು ದಯವಿಟ್ಟು ಆದಷ್ಟು ಬೇಗೆ ಮಾಡಿಕೊಡಿ ಎಂದು ಕೇಳುತ್ತೇವೆ.

ಶ್ರೀ ಸಿ. ಭೈರೇಗೌಡ:- ತಾವೇನು ಹೇಳುತ್ತಿದ್ದೀರಿ, ಅದರ ಬಗ್ಗೆ ತಕರಾರು ಇದೆ. ಆ ವಿಚಾರ ನಾನು ಹೇಳುತ್ತಿದ್ದೇನೆ. ಮಹದಾಯಿ ಯೋಜನೆಯದ್ದು ತಕರಾರು ಇದೆ.

ಶ್ರೀ ಬಿ.ಆರ್. ಯಾವಗಲ್:- ತಕರಾರು ಇರುವುದು ಮಹದಾಯಿ ಯೋಜನೆ ಬಗ್ಗೆ ಇಲ್ಲ. ತಕರಾರು ಮಾನ್ಯ ದೇಶಪಾಂಡೆಯವರಿಗೆ ಇಲ್ಲ ಗೋವಾದ ಜೊತೆ. ಮಾನ್ಯ ದೇಶಪಾಂಡೆಯವರ ಪಾತ್ರ ಇದೆ ಎಂದು ಹೇಳುತ್ತೀರಾ? ಆ ರೀತಿ ಆದರೆ ಹೇಳಿ, ಅವರು

ಭಾಗವಹಿಸಿದ್ದರೆ ಅದನ್ನು ಸರಿ ಮಾಡಿಕೊಡಲಿ, ನಾವೇನೂ ಬೇಡ ಎಂದು ಹೇಳುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನನಗೂ ಗೌಡರಿಗೂ ಗೋವಾಕ್ಕೂ ಏನು ಸಂಬಂಧವಿದೆ?

ಶ್ರೀ ಬಿ.ಆರ್. ಯಾವಗಲ್:- ಹಾಗಾಗಿ ಅದು ಯಾವ ಹಂತದಲ್ಲಿದೆ, ಅದಕ್ಕೆ ಹೆಚ್ಚು ಆದ್ಯತೆ ಕೊಟ್ಟು ಅದನ್ನು ಮಾಡುವಂತಹದು ಆಗಬೇಕು. ಬಹಳಷ್ಟು ಪರ್ಯಾಯಗಳು ಅದರಲ್ಲಿದೆ. ಉಪನದಿಗಳನ್ನು ತೆಗೆದುಕೊಳ್ಳಬೇಕು ಇಲ್ಲ ಮೂಲವಾಗಿ ಆ ಪವರ್ ಬೇಸ್ಡ್ ಯೋಜನೆಯಾಗಿ ಕೆಲಮಟ್ಟಿಗೆ ಅವವಿಗೆ ಕೊಡಬೇಕು. ಉಳಿದ ಸುಮಾರು 90 ಟಿಎಂಸಿ ನೀರನ್ನು ಈ ಕಡೆಗೆ ತೆಗೆದು ಕೊಳ್ಳಬೇಕು ಎನ್ನುವಂತಹ ಅದರಲ್ಲಿನ ಸಾಧ್ಯಾಸಾಧ್ಯತೆಗಳೇನು ಇವೆ. ಅದನ್ನು ಆದಷ್ಟು ಬೇಗ ಮಾಡಿ ಈ ಒಂದು ಯೋಜನೆ ಯಶಸ್ವಿಯಾಗುವ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದಂತೆ ನೀರಾವರಿ ಬಗ್ಗೆ ಒಂದು ಕನಸನ್ನು, ಒಂದು ರೀತಿಯ ಅಗತ್ಯತೆ, ಅದರ ಬಗ್ಗೆ ಒಂದು ಅನಿವಾರ್ಯತೆ ನಮ್ಮ ರಾಜ್ಯದಲ್ಲಿದೆ. ಇವತ್ತು ದೇಶದಲ್ಲಿಯೇ ಆಗಿದೆ. ಇವತ್ತು ಮಳೆ ಕಡಿಮೆ ಆಗುತ್ತಿದೆ. ಒಂದು ತಜ್ಞರ ಅಭಿಪ್ರಾಯದ ಪ್ರಕಾರ ಒಟ್ಟಾರೆ ಮಳೆ ಕಡಿಮೆ ಇಲ್ಲ ಎಂದು ಹೇಳುತ್ತಾರೆ. ಎಷ್ಟು ಮಳೆ ಬೇಕೋ ಅಷ್ಟು ಬೀಳುತ್ತದೆ. ಆದರೆ ಸಮಯ ಸಂದರ್ಭಕ್ಕೆ ಬರುವುದಿಲ್ಲ. ಸ್ಪ್ರೆಡ್ ಓವರ್ ಇರುವುದಿಲ್ಲ. ಯಾವಾಗಲೋ ಬಂದು ಯಾವಾಗಲೋ ಆಗಿ ಹೋಗಿ ಬಿಡುತ್ತದೆ, ಮತ್ತೆ ಬರುವುದಿಲ್ಲ. ಹೀಗಾಗಿ ಬೆಳೆಗಳು ಬರುವುದಿಲ್ಲ. ನೀರನ್ನು ಕನ್ಸರ್ವ್ ಮಾಡುವುದಕ್ಕೆ ಸಾಧ್ಯವಿಲ್ಲ. ನೀರನ್ನು ಹಿಡಿದಿರುವುದಕ್ಕು ಸಾಧ್ಯವಾಗುವುದಿಲ್ಲ. ಆ ಎಲ್ಲಾ ಕಾರಣಗಳಿಂದ ನೀರಾವರಿ ಯೋಜನೆಗಳು ಇವೆ. ನಾವು ಇವತ್ತು ಬಹಳ ಕಡೆ ನೋಡುತ್ತಿದ್ದೇವೆ, ಬಹಳಷ್ಟು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಇದನ್ನು ಇನ್ನೂ ಹೆಚ್ಚಿನ ರೀತಿ ಮಾಡಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕು ಎಂದರೆ ಇನ್ನೂ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಇನ್ನೂ ಹೆಚ್ಚಿನ ಆರ್ಥಿಕ ಬೆಂಬಲತೆಯನ್ನು ಕೊಟ್ಟು ಕಾವೇರಿ ಕಣಿವೆ ಆಗಿರಬಹುದು, ಕೃಷ್ಣಾ ಕಣಿವೆ ಆಗಿರಬಹುದು, ಆ ಯೋಜನೆಗಳನ್ನು ಆದಷ್ಟು ಬೇಗ ಮುಗಿಸಿ; ಯಾವ ರೀತಿ ಆಂಧ್ರದಲ್ಲಿ ತಮಿಳುನಾಡಿನಲ್ಲಿ, ಮಹಾರಾಷ್ಟ್ರದಲ್ಲಿ ಅಲ್ಲಿ ನೀರು ಬರುತ್ತದೋ ಬರುವುದಿಲ್ಲವೋ ಎನ್ನುವುದಕ್ಕಿಂತ ಹೆಚ್ಚಾಗಿ, ನೀರು ಬರುವ ಆಸೆಯ ಮೇಲೆಯೇ ಯೋಜನೆಗಳನ್ನು ಮಾಡುವಂತಹ ಸಂದರ್ಭವನ್ನು ನಾವು ನೋಡುತ್ತೇವೆ. ಅನೇಕ ಯೋಜನೆಗಳು ಅಲ್ಲಿ ಪ್ರಸ್ತಾವ ಆಗಿವೆ. ನೀರಾವರಿ ಸಿಗುವುದಿಲ್ಲ. ಬಚಾವತ್ ಅವಾರ್ಡ್ ಯಾವಾಗ ಸಿಗುತ್ತದೋ ಬಿಡುತ್ತದೋ ಅದಕ್ಕಿಂತ ಪೂರ್ವದಲ್ಲಿ ಅವರು ಯೋಜನೆ ಮಾಡಿಕೊಂಡು ಕೂರುತ್ತಾರೆ. ಆ ರೀತಿಯಾದಂತಹ ವ್ಯವಸ್ಥೆ ಬರಲಿ. ನೀರಿನ ಬಗ್ಗೆ, ಅದೂ ನೀರಾವರಿ ಯೋಜನೆಗಳ ಬಗ್ಗೆ ಜಾಗ್ರತೆ ಮೂಡಬೇಕಾದಂತಹ ಸಂದರ್ಭ ಇವತ್ತು ಇದೆ ಎಂದು ಹೇಳುತ್ತೇನೆ.

ಇನ್ನೊಂದು ವಿಚಾರದ ಬಗ್ಗೆ ಹೇಳಬೇಕು. ನಾನು ಸ್ವಲ್ಪ ಮಟ್ಟಿಗೆ ಕೃಷಿ ವಿಚಾರದ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಇದೊಂದು ಆರ್ಥಿಕವಾಗಿ ಅನ್-ವಯಬಲ್ ಪ್ರೊಫೆಷನ್ ಆಗಿದೆ ಎಂದು ಹೇಳಿ ಬಹುತೇಕ ಜನಗಳಿಗೆ ಗೊತ್ತಿದೆ. ಇದನ್ನು ಮಾಡಲು ಯಾರೂ ತಯಾರಿಲ್ಲ. ಏಕೆ? ಬಹುತೇಕ ನಮ್ಮ ಅಗತ್ಯತೆಗಳು ಜಾಸ್ತಿ ಆಗಿವೆ. ರೈತನ ಅಗತ್ಯಗಳೂ ಸಹ ಅನೇಕ ಕಾರಣಗಳಿಂದ ಜಾಸ್ತಿ ಆಗಿದೆ. ಅದು ಶಾಲೆ ಒದಗಿಸಬೇಕು ಎಂಬ ಅಭಿಲಾಶೆಯು ಇರಬಹುದು,

ಒಳ್ಳೆಯ ಆರೋಗ್ಯ ಪಡೆಯಬೇಕು ಎಂದು ಇವತ್ತು ಅವನ ಅಭಿಲಾಶೆ ಇರಬಹುದು. ಇವತ್ತೇನು ವಿಷ್ಯುಯಲ್ ಮೀಡಿಯಾ ಹಾಗೂ ಬೇರೆ ಬೇರೆ ಮಾಧ್ಯಮಗಳ ಮೂಲಕ ಅವನು ಅನೇಕ ಕನಸುಗಳನ್ನು ಕಟ್ಟಿಕೊಂಡಿರಬಹುದು. ಅವನ ಬೇಡಿಕೆಗಳು ಜಾಸ್ತಿ ಆಗಿವೆ. ಸರ್ಕಾರವೇ ಒಂದು ತರಹ ಅದಕ್ಕೆ ಚಾಲನೆ ಕೊಟ್ಟಿರಬಹುದು. ಅನೇಕ ಕಾರಣಗಳಿಂದ ಅವನ ಅಗತ್ಯಗಳು ಜಾಸ್ತಿ ಆಗಿವೆ. ಹಿಂದಿನ ಕಾಲದ ಹಾಗೆ ಸುಮಾರು 50 ವರ್ಷಗಳ ಹಿಂದೆ, 40 ವರ್ಷಗಳ ಹಿಂದೆ ಬಹಳ ಕನಿಷ್ಟ ಮಟ್ಟದಲ್ಲಿ ಅಗತ್ಯಗಳನ್ನು ಒದಗಿಸಿಕೊಂಡು ಜೀವನ ಮಾಡುವಂತಹ ಸ್ಥಿತಿ ಇವತ್ತು ಇಲ್ಲ. ಎಲ್ಲರಿಗೂ ಎಲ್ಲಾ ಬೇಕು. ಸಿನ್‌ಮಾಗಳು ಬೇಕು. ಮಜವಾಗಿ ಇರಬೇಕು. ಶಾಲೆಗಳಿಗೆ ಹೋಗಬೇಕು. ಊರೂರು ಅಲೆಯಬೇಕು. ಕೆಲಸ ಮಾಡುವುದನ್ನು ಬಿಡುತ್ತಿದ್ದಾರೆ. ಕೆಲಸ ಅಷ್ಟು ಪ್ರಮಾಣದಲ್ಲಿ ಇಲ್ಲ. ಹಾಗಾಗಿ ಅವನ ಅಗತ್ಯಗಳು, ಬೇಡಿಕೆಗಳು ಜಾಸ್ತಿ ಆದ ಹಾಗೆ ಅವನಿಗೆ ಇರುವಂತಹ ಮೂಲ ಸೌಕರ್ಯದಲ್ಲಿ ಅಷ್ಟು ಪ್ರಮಾಣದಲ್ಲಿ ಆದಾಯವನ್ನು ಹುಟ್ಟಿಸಿಕೊಳ್ಳಲು ಅವನಿಗೆ ಸಾಧ್ಯವಾಗುತ್ತಿಲ್ಲ. ಅದು ದೊಡ್ಡ ರೈತರಾಗಿರಬಹುದು ಅಥವಾ ಚಿಕ್ಕ ರೈತರಾಗಿರಬಹುದು. ಒಂದು ಎಕರೆ ಇದ್ದಂತಹವರು ಆಗಿರಬಹುದು, ಕಡಿಮೆ ಇದ್ದಂತಹವರು ಆಗಿರಬಹುದು; ಅದೊಂದು ಮೂಲ ತೊಂದರೆ; ಅಗತ್ಯಗಳು ಜಾಸ್ತಿ ಆಗಿವೆ, ಬೇಡಿಕೆಗಳು ಜಾಸ್ತಿ ಆಗಿವೆ. ಸ್ಥಾನಮಾನಕ್ಕೆ ತಕ್ಕ ಹಾಗೆ ಅವನ ಆಸೆಗಳು ಜಾಸ್ತಿ ಆಗಿವೆ. ಆದರೆ ನಾವು ಬೆಳೆಯುತ್ತಿರುವಂತಹ ಬೆಳೆಗಳು ಆ ಮಟ್ಟದ ಲಾಭವನ್ನು ನಮಗೆ ತರುತ್ತಿಲ್ಲ, ಇದೊಂದು. ಎರಡನೆಯದಾಗಿ ನಮ್ಮ ವರ್ಕ್ ಎಫಿಷಿಯೆನ್ಸ್ ಎಂದು ಏನು ಹೇಳುತ್ತೇವೆ ಒಂದು, ಜನ ಮಾಡುವಂತಹ ಕೆಲಸವನ್ನು ನಾಲ್ಕು ಜನ ಮಾಡುವಂತಹ ಸ್ಥಿತಿ ಇವತ್ತು ಇದೆ. ಒಬ್ಬ ಕೂಲಿಕಾರ ರೈತ ಏನು ಮಾಡಬಹುದಾಗಿತ್ತು 40 ವರ್ಷದ ಹಿಂದೆ, ಅಂತಹದನ್ನು ಇವತ್ತು ನಾಲ್ಕು ಜನ ಮಾಡುವಂತಹ ಸ್ಥಿತಿ ಇದೆ. ಇವತ್ತು ಆಫೀಸಿಗಳಿಗೆ ಹೋಗುವ ರೀತಿಯಿಂದ, ನಾವು ಮಾಲೀಕರು, ಕೂಲಿ ಕೆಲಸ ಮಾಡುವ ಜನ ಆಫೀಸಿಗೆ ಹೋಗುವ ರೀತಿಯಿಂದ ಹೊಲಕ್ಕೆ ಹೋಗಿ ಬಂದರೆ ಯಾವ ಮಟ್ಟಕ್ಕೆ ರೈತರ ಸ್ಥಿತಿ ಆಗುತ್ತದೆ. 24 ಗಂಟೆ, 12 ತಿಂಗಳು ಮಳೆ, ಬಿಸಿಲು, ಚಳಿ ಎನ್ನದೇ ಹೋರಾಟ ಮಾಡಿದಾಗ ಅಷ್ಟೋ ಇಷ್ಟೋ ಅದು ಉಳಿಕೆ ಆಗುತ್ತದೆ. ಇವತ್ತು ಆ ಪರಿಸ್ಥಿತಿ ಇಲ್ಲ. ಹಾಗಾಗಿ ಇವತ್ತು ನಾವು ಪರ್ಯಾಯ ವ್ಯವಸ್ಥೆಯನ್ನು ಮಾಡದೇ ಇದ್ದರೆ ಆ ಜನಗಳಿಗೆ ನೀವು ಮಾಡುತ್ತಿರುವಂತಹ ಆರ್ಥಿಕವಾಗಿ ಲಾಭದಾಯಕವಲ್ಲದ ಕೆಲಸವನ್ನು ಬಿಟ್ಟು ಅವರಿಗೆ ಬೇರೆ ಮಾರ್ಗದರ್ಶನ ಮಾಡಬೇಕು. ಅವರಿಗೆ ಸರಿಯಾದಂತಹ ದಾರಿಯನ್ನು ತೋರಿಸಿದ್ದರೆ ಅಥವಾ ಅದರಲ್ಲಿ ಯಾವ ರೀತಿಯಾಗಿ ಬೆಳೆಯಬಹುದು ಅಥವಾ ಖರ್ಚು ಮಾಡಬಹುದು, ಯಾವ ರೀತಿಯಾಗಿ ಲಾಭದಾಯಕವಾಗಿ ಮಾಡಿಕೊಳ್ಳಬಹುದು, ಅದಕ್ಕೆ ಯಾವ ರೀತಿಯಾಗಿ ಮಾರುಕಟ್ಟೆಗಳನ್ನು ಹುಡುಕಿಕೊಳ್ಳಬಹುದು, ಯಾವ ರೀತಿಯಾಗಿ ನಾವು ಇದೇ ಬೆಳೆಯನ್ನು ಅಗ್ರೋ ಕ್ಲೈಮೆಟಿಕ್ ಜೋನ್‌ನಲ್ಲಿ ಬೆಳೆಯಬಹುದು. ಎಷ್ಟು ನೀರನ್ನು ಪೋಲು ಆಗದ ಹಾಗೆ ನಾವು ಉಪಯೋಗ ಮಾಡಬಹುದು ಎಷ್ಟು ನೀರಿಗೆ ಬೆಲೆ ಇದೆ? ಮಣ್ಣಿಗೆ ಬೆಲೆ ಇದೆ ಎಂದು ಹೇಳಿ ಅವರಿಗೆ ಕಲ್ಪನೆ ಮಾಡಿಕೊಡದಿದ್ದರೆ ಇದು ಇನ್ನೂ ಬಹಳಷ್ಟು ಗಂಭೀರ ಸ್ಥಿತಿಗೆ ಹೋಗುತ್ತದೆ. ಇದರ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ ಎಂದು ಹೇಳಿ ನಾನು ಭಾವಿಸುತ್ತೇನೆ. ಆ ಕೆಲಸ ಮಾಡುವುದರಲ್ಲಿ ನಾವು ಬಹುತೇಕ ಹಿಂದೆ ಬೀಳುತ್ತಿದ್ದೇವೆ. ಅಷ್ಟೋ ಇಷ್ಟೋ ಘೋಷಣೆ ಮಾಡುತ್ತೇವೆ, ಎಕ್ಸ್‌ಪೋರ್ಟ್ ಕಾರ್ಪೊರೇಷನ್ ಮಾಡುತ್ತೇವೆಂದು ಮತ್ತೊಂದು ಸೆಂಟರ್ಸ್ ಮಾಡುತ್ತೇವೆಂದು ಹೇಳುತ್ತೇವೆ. ಅದು ಸಾಲದು. ರೈತನ ವಾಸ್ತವಿಕ

ಪರಿಸ್ಥಿತಿಯನ್ನು ಗಮನಿಸಿದಾಗ, ಆತನ ಮುಂದಿನ ಹತ್ತಾರು ವರ್ಷಗಳ ಭವಿಷ್ಯವನ್ನು ಕಲ್ಪಿಸಿಕೊಂಡಾಗ ಆತನ ಅಭಿವೃದ್ಧಿಗೆ ಎಷ್ಟು ಒತ್ತು ಸಿಗಬೇಕೋ ಅಷ್ಟು ಸಿಗುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಬಹಳಷ್ಟು ಯೋಜನೆಗಳನ್ನು ಪ್ರಕಟಿಸಿದ್ದು, ನಾನು ಅದನ್ನು ಸ್ವಾಗತಿಸುತ್ತೇನೆ. ಇದು ಲಾಜಿಕಲ್ ಎಂಡ್‌ಗೆ ಹೋಗಬೇಕು. ವಿಶೇಷವಾಗಿ, ಬಯೋ ಟೆಕ್ನಾಲಜಿ ಕುರಿತು ಹೇಳುವುದಾದರೆ, ಹೇಗೆ ಮಾಹಿತಿ ತಂತ್ರಜ್ಞಾನ ಇದೆಯೋ ಅದೇ ರೀತಿ ಬಯೋ ಟೆಕ್ನಾಲಜಿ ಸಹ ನಮ್ಮ ದೇಶದ ಮಟ್ಟಿಗೆ ಅತ್ಯಂತ ಪ್ರಮುಖ ಪಾತ್ರ ವಹಿಸುವಂಥದ್ದಾಗಿದೆ. ಇದು ಬಹಳಷ್ಟು ಪ್ರಾಮುಖ್ಯತೆ ಪಡೆದಿದೆಯಲ್ಲದೆ ಹಲವಾರು ದಿವಸಗಳಿಂದ ಈ ಕುರಿತಂತೆ ಚರ್ಚೆಯಾಗುತ್ತಿದೆ. ಇದಕ್ಕೆ ನಿಜವಾದ ಒತ್ತು ಇವೊತ್ತು ಸಿಗುತ್ತಿದೆಯೆಂದು ಭಾವಿಸುತ್ತೇನೆ. ಕೃಷಿ ವಿಶ್ವವಿದ್ಯಾನಿಲಯಕ್ಕೆ ಹಣ ಬಿಡುಗಡೆ ಮಾಡುವ ಮೂಲಕ ಕಾರ್ಯ ಕೈಗೆತ್ತಿಕೊಳ್ಳಬೇಕೆಂಬುದು ಒಳ್ಳೆಯ ಯೋಜನೆಯಾಗಿದೆ. ಕೃಷಿ ವಿಶ್ವವಿದ್ಯಾನಿಲಯಕ್ಕೆ ನೀಡುತ್ತಿರುವ ಅನುದಾನ ಸಾಲದಾಗಿದೆ. ಹಣವನ್ನು ನೀಡುವ ಮೂಲಕ ಇಲಾಖೆಯನ್ನು ಅಭಿವೃದ್ಧಿಯತ್ತ ಹೇಗೆ ಕಾರ್ಯೋನ್ಮುಖವಾಗಿಸಬೇಕು, ರೈತಮಿತ್ರ ಕೇಂದ್ರಗಳನ್ನು ಬಲಪಡಿಸಿ ಹೇಗೆ ಹೈಟೆಕ್ ಮಾಡಬೇಕು ಹಾಗೂ ರೈತರಿಗೆ ಅದನ್ನು ಹೇಗೆ ತಲುಪಿಸಬೇಕೆಂಬ ಬಗ್ಗೆ ಸ್ಟ್ರೀಮ್‌ಲೈನ್ ಆಗಬೇಕು. ಇದರ ಜೊತೆಗೆ ರೀಸರ್ಚ್ ಮತ್ತು ಎಕ್ಸ್‌ಟೆನ್‌ಷನ್ ವರ್ಕ್‌ಗಳನ್ನು ಯೂನಿವರ್ಸಿಟಿಗಳು ಸರಿಯಾಗಿ ಮಾಡುತ್ತಿಲ್ಲ. ಕಾರಣ, ಹಣಕಾಸಿನ ಕೊರತೆ. ಈ ಹಣಕಾಸು ಕೊರತೆಯನ್ನು ಪ್ರಸಕ್ತ ವರ್ಷ ನೀಗಿಸಿದ್ದೀರೆಂದು ಭಾವಿಸುತ್ತೇನೆ. ಆದರೆ, ಅದು ಸಾಲದು. ಇತ್ತೀಚೆಗೆ ನಾವು ಪಂಜಾಬ್ ರಾಜ್ಯಕ್ಕೆ ಭೇಟಿಯಿತ್ತು ಬಂದಿದ್ದೇವೆ. ನಾವು ನಮ್ಮ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಕ್ಕೆ 108 ಕೋಟಿ ರೂಪಾಯಿಗಳಷ್ಟು ಹಣವನ್ನು ನಿಗದಿಪಡಿಸಿದ್ದರೆ, ಆ ರಾಜ್ಯದವರು 120 ಕೋಟಿ ರೂಪಾಯಿಗಳನ್ನು ನಿಗಧಿಪಡಿಸಿದ್ದಾರೆ. ಅಲ್ಲದೆ, ಹಣ ದೊರಕುವ ಪೂರಕವಾದ ಅನೇಕ ಕಾರ್ಯಕ್ರಮಗಳನ್ನು ಸಹ ರೂಪಿಸಿಕೊಂಡಿದ್ದಾರೆ. ಹೀಗಾಗಿ ಬೆಳೆ ರೋಗ, ಬೆಳೆ ಅಭಿವೃದ್ಧಿ ಹಾಗೂ ಕೃಷಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳುವ ರೀಸರ್ಚ್ ಇರಬಹುದು, ಮಾರ್ಗದರ್ಶನ ಇರಬಹುದು, ವಿಜ್ಞಾನಿಗಳ ಮಟ್ಟದಲ್ಲಿ ಬಹುತೇಕ ರೈತರಿಗೆ ಅನೇಕ ರೀತಿಯಲ್ಲಿ ಕೃಷಿ ಕುರಿತಂತೆ ಜ್ಞಾನ ಹಾಗೂ ತರಬೇತಿ ನೀಡುವಂತಹ ಕ್ಲೋಸರ್ ಇಂಟರಾಕ್ಷನ್ ನಡೆಯುತ್ತಿರುವುದನ್ನು ನೋಡಿದ ನಾವು ದಂಗಾದೆವು. ರೈತರಿಗೆ ಆ ಮಟ್ಟದ ತಿಳಿವಳಿಕೆ, ಜಾಗೃತೆ ಮೂಡಿಸುತ್ತಿರುವುದನ್ನು ಗಮನಿಸಿದಾಗ ನಮ್ಮ ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ನಿಜವಾದ ಉದ್ದೇಶ ಈಡೇರಬೇಕಾದರೆ, ಇವೊತ್ತು ಅಧ್ಯಾಪನಕ್ಕಾಗಿ ಬೋಧಕರಿಗೆ ಜಾಗ ಹಾಗೂ ಅವರಿಗೆ ಸಂಬಳ ಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳದಿರುವಂತಹ ಸ್ಥಿತಿಯಿರುವುದರಿಂದ ವ್ಯವಸ್ಥೆಯನ್ನು ಬದಲಿಸಬೇಕು. ಅವರಿಗೆ ಕೆಲಸವನ್ನು ಹಂಚುವ ಮೂಲಕ ಇಲಾಖೆಯಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿ ಕುರಿತಂತೆ ಹೇಳುವುದಾದರೆ, ಇದರ ಮೂಲ ಕಲ್ಪನೆ ಎಂಪವರ್‌ಮೆಂಟ್ ಆಫ್ ಪೀಪಲ್ ಎಂದು ಏನು ಹೇಳುತ್ತೇವೆ, ಪ್ರಗತಿಯ ಕ್ರಿಯೆಯಲ್ಲಿ ಅವರನ್ನು ಪಾಲುಗಾರಿಕೆ ಮಾಡಿಕೊಳ್ಳುವಂಥ ಕೆಲಸಕ್ಕೆ ಒತ್ತುಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಆದರೆ, ಈ ಬಗೆಗಿನ ಫಲಿತಾಂಶ ಅಷ್ಟು

ಸಮಾಧಾನಕರವಾಗಿಲ್ಲ. ಮೂಲ ವಿಕೇಂದ್ರೀಕರಣವಾಗಿ ಅಧಿಕಾರ ಬಿಟ್ಟುಕೊಡುವಂಥ ಸಂದರ್ಭ ಬಂದಾಗಲೂ ವಿರೋಧವಿತ್ತು. ಅದು ಹಿಂದಿನ ಕಾಲದ್ದಾಗಿರಬಹುದು, ಅಥವಾ 1987ರಲ್ಲಿ ತಂದಂಥ ಕಾಯ್ದೆಯಾಗಿರಬಹುದು ಅಥವಾ 1993ರಲ್ಲಿ ಜಾರಿಗೆ ಬಂದ ಕಾಯ್ದೆಯಾಗಿರಬಹುದು. ಅದರಲ್ಲಿ ಅನೇಕ ವಿಧವಾದ ಅವಿಷ್ಕಾರದ ಹೊಸ ಅಂಶಗಳನ್ನು ಕೊಟ್ಟು ಜನರ ಸಮೀಪ ಆಡಳಿತ ತೆಗೆದುಕೊಂಡು ಹೋಗಿ ಅದರಲ್ಲಿ ಜನರು ಪಾಲ್ಗೊಳ್ಳುವಂಥ ವ್ಯವಸ್ಥೆ ಮುಂದುವರೆಯುತ್ತಾ ಸಾಗಿದೆ. ಅದರ ಫಲಿತಾಂಶ ಹಾಗೂ ಪರಿಣಾಮ ಸ್ಪಷ್ಟವಾಗಿ ನಿಜ ಸ್ವರೂಪದಲ್ಲಿ ಕಂಡಿಲ್ಲವೆನ್ನುವ ಚಿತ್ರಣ ನಮ್ಮೆದುರಿಗಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಏನೆಂದರೆ, ಇವೊತ್ತು ದೇಶದಲ್ಲಿ ಈ ಕುರಿತು ಸಾಕಷ್ಟು ಚರ್ಚೆಯಾಗುತ್ತಿದೆ. ವಿಕೇಂದ್ರೀಕರಣದ ವ್ಯವಸ್ಥೆ ಮಧ್ಯಪ್ರದೇಶದಲ್ಲಾಗಿರಬಹುದು, ಕೇಂದ್ರದಲ್ಲಾಗಿರಬಹುದು, ಅಲ್ಲಿ ಜನರು ಅಧಿಕಾರವನ್ನು ಯಾವ ರೀತಿ ಪಡೆದುಕೊಳ್ಳುತ್ತಿದ್ದಾರೆ ಹಾಗೂ ಅಧಿಕಾರದ ಕೊನೆಯ ಘಟಕದ ಪಂಚಾಯತ್ ರಾಜ್ಯ ವ್ಯವಸ್ಥೆಯಡಿ ಗ್ರಾಮಸಭೆ ಮೂಲಕ ಜನರು ತಮ್ಮನ್ನು ತೊಡಗಿಸಿಕೊಳ್ಳುತ್ತಿರುವ ಬಗ್ಗೆ ಮಾದರಿಗಳಿವೆ. ಆ ಎಲ್ಲಾ ಮಾದರಿಗಳಿಗೂ ಕರ್ನಾಟಕ ರಾಜ್ಯವೇ ಮೊದಲು. ಕೆಳಮಟ್ಟಿಗೆ ಅವರು ಇಂದು ಮುಂದೆ ಹೋಗಿದ್ದಾರೆ. ಅವರು ಗ್ರಾಮಸಭೆ ಕಲ್ಪನೆಯ ವ್ಯವಸ್ಥೆಯನ್ನು ಬಹಳ ಅರ್ಥವತ್ತಾಗಿ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಗ್ರಾಮಸಭೆ, ವಸತಿ ಸಭೆ ಹಾಗೂ ವಾರ್ಡ್ ಸಭೆ ಮುಂತಾದ ಅನೇಕ ವಿಧವಾದ ಕಲ್ಪನೆಗಳುಳ್ಳ ವ್ಯವಸ್ಥೆಯನ್ನು ಅಲ್ಲಿ ಜಾರಿಗೆ ತಂದಿದ್ದಾರೆ. ನಮ್ಮ ರಾಜ್ಯದ ಗ್ರಾಮ ಪಂಚಾಯಿತಿಯಲ್ಲಿ ಮಂತ್ರಿಗಳು, ಸೆಕ್ರೆಟರಿಯಿಂದ ಹಿಡಿದು ಕೆಳಗಿನ ಹಂತದವರೆಗೆ ದೊಡ್ಡ ಸಂಖ್ಯೆಯಲ್ಲಿ ಸಿಬ್ಬಂದಿಯಿದ್ದರೂ ಗ್ರಾಮ ಪಂಚಾಯಿತಿಯ ವ್ಯವಸ್ಥಿತವಾಗಿ ಅನುಷ್ಠಾನವಾಗುತ್ತಿಲ್ಲ. ಈ ಕುರಿತಂತೆ ಸಾಕಷ್ಟು ತರ್ಕ, ವ್ಯಾಖ್ಯಾನ, ಭಾಷಣ ಮಾಡುವುದರಲ್ಲಿ ನಾವು ಹಿಂದೆ ಬೀಳುವುದಿಲ್ಲ. ನಮ್ಮಲ್ಲಿ ಸಾಕಷ್ಟು ತಜ್ಞರಿದ್ದಾರೆ. ಆದರೆ, ಕೆಳ ಹಂತಕ್ಕೆ ಹೋಗಿ ಅದರ ವ್ಯವಸ್ಥೆ ಗಮನಿಸಿದಾಗ ನಿಜವಾಗಿಯೂ ನೋವು ಬರುತ್ತದೆ. ಇಂತಹ ವ್ಯವಸ್ಥೆ ದೇಶದಲ್ಲಿ ಬೇರೆಲ್ಲಿಯೂ ಕಾಣುವುದಿಲ್ಲ. ಆದಕಾರಣ, ಗ್ರಾಮಸಭೆಗಳನ್ನು ಸದೃಢಗೊಳಿಸುವುದು ಪಂಚಾಯಿತಿಯ ಮೂಲ ಕಲ್ಪನೆಯಾಗಿದೆ ಎಂಬುದು ನಮ್ಮ ಭಾವನೆ. ಇದು ದಿವಂಗತ ಅಬ್ದುಲ್ ನಜೀರ್‌ಸಾಬ್ ಇದ್ದಾಗ ಇರಬಹುದು ಅಥವಾ ನಂತರದಲ್ಲಿ ಆಗಿರಬಹುದು, ಪಂಚಾಯಿತಿಯ ಮೂಲ ಕಲ್ಪನೆ ಜನರಿಗೆ ಅಧಿಕಾರ ಕೊಡಬೇಕೆಂಬುದಾಗಿದೆ. ಈ ದಿಸೆಯಲ್ಲಿ ಗ್ರಾಮ ಮತ್ತು ಮಂಡಲ ಪಂಚಾಯಿತಿಗಳನ್ನು ಸದೃಢಗೊಳಿಸಬೇಕು, ತನ್ಮೂಲಕ ಅವುಗಳನ್ನು ಪ್ರಗತಿಯ ಕೇಂದ್ರಗಳನ್ನಾಗಿ ಆದಷ್ಟು ಬೇಗ ಮಾಡಿದರೆ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯವಿದೆ.

ಇನ್ನು ವಸತಿ ಕುರಿತಂತೆ ಹೇಳುವುದಾದರೆ, ಇದೊಂದು ಮಹತ್ವಾಂಕಾಂಕ್ಷಿಯಾಗಿರುವ ಬಹುದೊಡ್ಡ ಕಾರ್ಯಕ್ರಮವಾಗಿದೆ. ಇದರಲ್ಲಿ ಬಹುತೇಕ ಶಾಸಕರು ಸಾಕಷ್ಟು ಒತ್ತು ಕೊಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಇದು ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಎಂಬ ಸಂಶಯ ಇತ್ತು. ಕಾರ್ಯಗತಗೊಳಿಸು ಆದರೆ, ಇವೊತ್ತು ಅನೇಕ ಮಿತ್ರರು ಇದನ್ನು ಮಾಡಿದ್ದಾರೆ. ಉದಾಹರಣೆಗೆ, ಶ್ರೀ ಡಿ.ಆರ್. ಪಾಟೀಲ್, ಶ್ರೀ ಶಿವರಾಂ ಹಾಗೂ ಇನ್ನಿತರರು ಬಹಳ ಉತ್ತಮವಾಗಿ ಕೆಲಸವನ್ನು ವಸತಿ ಕ್ಷೇತ್ರದಲ್ಲಿ ಮಾಡಲು ಸಾಧ್ಯವಿದೆಯೆಂಬ ನಿದರ್ಶನವನ್ನು ಮಾಡಿ ತೋರಿಸಿಕೊಟ್ಟಿದ್ದಾರೆ.

ಇದರ ಮುಂದಿನ ಪ್ರಯೋಗ ಕೈಗೊಳ್ಳಲು ಸಜ್ಜಾಗುತ್ತಿರುವುದರಿಂದ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತಾ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದನೆ ಸಲ್ಲಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯವನ್ನು ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು.ಆರ್. ಸಭಾಪತಿ(ಉಡುಪಿ): ಸನ್ಮಾನ್ಯ ಉಪಾಧ್ಯಕ್ಷರೆ, 2002-03ನೇ ಸಾಲಿನ ಮುಂಗಡಪತ್ರ ಬಹಳ ಜನ ಪರವಾಗಿದೆ ಹಾಗೂ ವೈಜ್ಞಾನಿಕವಾಗಿದೆಯೆಂದು ಹೇಳುವ ಮೂಲಕ ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ವಿರೋಧಪಕ್ಷಗಳ ಹಿರಿಯ ನಾಯಕರ ಭಾಷಣಗಳನ್ನು ನಾನು ಕೇಳಿದ್ದು, ಅವರು ಮಾತನಾಡುವಾಗ ಶಬ್ದಗಳಿಗಾಗಿ ವಿರೋಧಕ್ಕಾಗಿ ಬಹಳ ಹುಡುಕಾಡುತ್ತಿರುವುದನ್ನು ಪರಿತಪಿಸುತ್ತಿರುವುದನ್ನು ಅವರ ಭಾಷಣದಲ್ಲಿ ನಾನು ಕಂಡುಕೊಂಡೆ. ಅವರ ಮಾತುಗಳಲ್ಲಿ ಹಿಂದಿನ ತೀಕ್ಷ್ಣತೆ ಇರಲಿಲ್ಲ. ಏಕೆಂದರೆ, ಇದರಲ್ಲಿ ಯಾವುದೇ ವಿಚಾರಗಳು ಸಿಗದೇ ಕಳೆದ ಎರಡು ವರ್ಷಗಳ ಹಿಂದಿನ ಆಯವ್ಯಯಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ಕೇಳಿದೆ. ಮುಂಗಡಪತ್ರದಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಗೋಚರವಾಗುತ್ತಿರುವುದೇನೆಂದರೆ, 1999ನೇ ಇಸವಿಯಲ್ಲಿ ಈ ರಾಜ್ಯದ ಜನತೆಯ ಮುಂದೆ ಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪಾಂಚಜನ್ಯದ ಕಹಳೆ ಊದುವ ಮೂಲಕ ಶ್ರೀಸಾಮಾನ್ಯರ ಸಮಸ್ಯೆಗಳಿಗೆ ಹಾಗೂ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಯಾವ ರೀತಿಯ ಆಡಳಿತ ಕೊಡುತ್ತದೆಂಬುದನ್ನು ಪ್ರತಿ ವರ್ಷದ ಮುಂಗಡ ಪತ್ರದಲ್ಲಿ ಕಂಡು ಬಹುಶಃ 2002-03ನೇ ಸಾಲಿನ ಮುಂಗಡಪತ್ರ ಕಳೆದ ಹತ್ತು ವರ್ಷಗಳಿಂದ ನಾವು ನೋಡಲಾರದಷ್ಟು ಬೆಳವಣಿಗೆಯ ದೃಷ್ಟಿಯಲ್ಲಿ ಒಂದು ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಿರುವ ಮುಂಗಡಪತ್ರ ಇದಾಗಿದೆಯೆಂದು ಹೇಳಬಯಸುತ್ತೇನೆ. ಇದರಲ್ಲಿ ಪ್ರಮುಖವಾಗಿ ಧೋರಣಾತ್ಮಕವಾದ ತೀರ್ಮಾನವನ್ನು ಸರ್ಕಾರ ಕೈಗೊಂಡಿದ್ದು ವಿಶಾಲ ದೃಷ್ಟಿಕೋನ ಇಟ್ಟುಕೊಂಡಿದೆ. ಹಾಗೂ ಶ್ರೀಸಾಮಾನ್ಯನ ಕುಂದು-ಕೊರತೆಗಳ ಬಗ್ಗೆ ಪ್ರಾಮಾಣಿಕವಾದ ಕಾಳಜಿಯನ್ನು ಮುಂಗಡಪತ್ರ ಪ್ರಕಟಿಸಿದೆ. ಇದರಲ್ಲಿ ಕೃಷಿ. ಗ್ರಾಮೀಣಾಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಆದ್ಯತೆ ನೀಡಲಾಗಿದೆ. ಕೆಲವು ನೇತಾರರು ಮಾತನಾಡುತ್ತಾ "ಸರ್ಕಾರದವರು ಐ.ಟಿ. ಧೋರಣೆ ಬಿಟ್ಟಿದ್ದರಿಂದ ಇದು ಬದುಕಿತು" ಎಂದರು. ಬಹುಶಃ ಅವರು ಮುಂಗಡಪತ್ರವನ್ನು ಪೂರ್ತಿಯಾಗಿ ಓದಿಲ್ಲವೆಂದು ಕಾಣಿಸುತ್ತದೆ. ಮಾಹಿತಿ ತಂತ್ರಜ್ಞಾನಕ್ಕೂ ಸಾಕಷ್ಟು ಒತ್ತನ್ನು ಮುಂಗಡಪತ್ರದಲ್ಲಿ ನೀಡಲಾಗಿದೆ. ಮೌಲ್ಯವರ್ಧಿತ ತೆರಿಗೆ ಪದ್ಧತಿ ಪ್ರಸಕ್ತ ವರ್ಷದಿಂದ ಜಾರಿಗೆ ಬರಬೇಕಾಗಿತ್ತು. ಆದರೆ, ಮುಂದಿನ ವರ್ಷದಿಂದ ಜಾರಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ದೂರದರ್ಶಿಗಾಮಿತ್ವ ಇಟ್ಟುಕೊಂಡು ತೆರಿಗೆಯಲ್ಲಿ ಯಾವ ರೀತಿಯ ಸರಳೀಕರಣ ಕ್ರಮ ಕೈಗೊಂಡರೆ ಭ್ರಷ್ಟಾಚಾರ ನಿಗ್ರಹಿಸಬಹುದು.

3.50 ಪಿಎಂ

ಪಾರದರ್ಶಕತೆಯನ್ನು ಪ್ರದರ್ಶಿಸಬಹುದು ಎನ್ನುವುದರ ಬಗ್ಗೆ ತನ್ನದೇ ಆದ ಒಂದು ಸ್ಪಷ್ಟ ನಿಲುವನ್ನು ಮಾನ್ಯ ಮುಖ್ಯಮಂತ್ರಿಯವರು ಈ ಮುಂಗಡ ಪತ್ರದಲ್ಲಿ ತೋರಿಸಿದ್ದಾರೆಂದು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತಿದ್ದೇನೆ. ಈ ಸಂದರ್ಭದಲ್ಲಿ ಅವರ ತೆರಿಗೆ ಸರಳೀಕರಣದ

ವಿಧಿವಿಧಾನಗಳ ಬಗ್ಗೆ ಏನು ದೂರಗಾಮಿತ್ವವನ್ನು ಪ್ರದರ್ಶಿಸಿದ್ದಾರೆ ಎನ್ನುವುದಾದರೆ, ಅವರು ತೆರಿಗೆ ಸುಧಾರಣಾ ಆಯೋಗವನ್ನು ನೇಮಕ ಮಾಡುವ ಮೊದಲೇ ಮಾನ್ಯ ಮುಖ್ಯಮಂತ್ರಿಗಳು ಮುಂದಿನ ದಿನಗಳಲ್ಲಿ ಬರುತ್ತಾರೆ ಎಂಬ ಸಂದೇಶ ನಮಗೆ ಆಗಲೇ ಸಿಕ್ಕಿತ್ತು. ಇವತ್ತು ತೆರಿಗೆ ಸುಧಾರಣಾ ಆಯೋಗ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪಮೊಯ್ಲಿಯವರ ಅಧ್ಯಕ್ಷತೆಯಲ್ಲಿ ಏನಿತ್ತು, ಹಿರಿಯ ಆರ್ಥಿಕ ತಜ್ಞರನ್ನೊಳಗೊಂಡಂತೆ ಅವರು ಮಾಡಿರತಕ್ಕ ಶಿಫಾರಸ್ಸುಗಳೇನಿತ್ತು ಅದಕ್ಕೆ ಅನುಗುಣವಾಗಿ, 21 ವರ್ಷಗಳ ಹಿಂದೆ ಜಾರಿಗೆ ಬಂದ ಪ್ರವೇಶ ತೆರಿಗೆ ಪದ್ಧತಿ ಏನಿತ್ತು ಅದನ್ನು ಮೊನ್ನೆ 21ನೇ ತಾರೀಖಿಗೆ ರದ್ದು ಮಾಡುವಂಥ ಮಹತ್ತರವಾದಂಥ ಕ್ರಾಂತಿಕಾರಕವಾದ ಹೆಜ್ಜೆಯನ್ನು ಅವರು ಇಟ್ಟಿದ್ದಾರೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತೆರಿಗೆ ಸರಳೀಕರಣವನ್ನು ಮಾಡಿದಾಗ ಅದರ ಜೊತೆಗೆ ಟಿ.ಒ.ಟಿ, ವೈಹಿವಾಟು ತೆರಿಗೆ, ಪ್ರವೇಶ ತೆರಿಗೆ, ಸೆಸ್ಸುಗಳನ್ನು ರದ್ದು ಮಾಡಿ ಅದನ್ನು ಮೂಲ ತೆರಿಗೆಗೆ ಸ್ವಲ್ಪಮಟ್ಟಿಗೆ ಅದರಲ್ಲಿ ಸಮಜಾಯಿಸಿಯನ್ನು ಮಾಡಿಕೊಂಡು ಸಂಪೂರ್ಣವಾಗಿ ಮಾಡಿದ್ದಾರೆ. ಮಾನ್ಯ ಸಿಂಧ್ಯಾರವರು 54 ಐಟಂಗಳಿಗೆ ತೆರಿಗೆ ಜಾಸ್ತಿ ಮಾಡಿದ್ದೀರಿ ಎಂಬ ಮಾತನ್ನು ಹೇಳಿದರು. ನಾನು ಸುಮಾರು 372 ಐಟಂಗಳಲ್ಲಿ ಯಾವ ರೀತಿ ತೆರಿಗೆ ವಿಶ್ಲೇಷಣೆಯಾಗಿದೆ ಎಂಬ ಬಗ್ಗೆ ಪರಿಶೀಲನೆ ಮಾಡಿದ್ದೇನೆ. ಅದರಲ್ಲಿ ಮೂಲ ತೆರಿಗೆ ಎಷ್ಟು, ಸೆಸ್ ಎಷ್ಟು, ಟಿ.ಒ.ಟಿ. ಎಷ್ಟು, ನಾಮಿನಲ್ ರೇಟ್ ರೇಂಜ್ ಟಿ.ಒ.ಟಿ. ತೆಗೆದಮೇಲೆ ಎಲ್ಲಿಗೆ ಮುಟ್ಟುತ್ತದೆ, ನಾವು ಇನ್‌ಕ್ರೀಸ್ ಮಾಡಿದ ಸಜೆಸ್ಟೆಡ್ ರೇಟ್ ಎಷ್ಟು ಕಂಪೇರ್ ಮಾಡಿದರೆ 12 ಪರ್‌ಸೆಂಟ್ ಇದ್ದುದ್ದನ್ನು 15 ಪರ್‌ಸೆಂಟ್ ಎಲ್ಲಿ ಮಾಡಿದ್ದಾರೋ ಅಲ್ಲಿ 15.6ರ ತನಕ, 17.8 ಪರ್‌ಸೆಂಟ್ ತನಕ ಹೋದ್ದದ್ದೂ ಉಂಟು. ಅದನ್ನು 15 ಕ್ಕೇ ತಂದು ನಿಲ್ಲಿಸಿದ್ದಾರೆ. ಪ್ರತಿಯೊಂದು ಕಮೊಡಿಟೀಸ್ ಏನಿದೆ ಅದರ ವರ್ಗೀಕರಣವನ್ನು ಮಾಡುವುದಾದರೆ, ಟ್ಯಾಕ್ಸ್ 12 ಪರ್‌ಸೆಂಟ್ ಇದ್ದುದ್ದನ್ನು 15 ಪರ್‌ಸೆಂಟ್ ಮಾಡುವಾಗ ಎಲ್ಲಿ ನಾವು ಟಿ.ಒ.ಟಿ., ಸೆಸ್ಸನ್ನು, ಪ್ರವೇಶ ತೆರಿಗೆಯನ್ನು ತೆಗೆದಿದ್ದೇವೋ. ಅದನ್ನು ಹೊಂದಾಣಿಕೆ ಮಾಡುವಾಗ ಅದರ ಮೂಲಕ ಹಿಂದಿನ ಟ್ಯಾಕ್ಸ್ ಎಷ್ಟಿತ್ತೋ ಅದಕ್ಕಿಂತ ಪಾಯಿಂಟ್ 5 ಪರ್‌ಸೆಂಟ್ ಕಡಿಮೆಯಾಗುತ್ತದೆಯೇ ವಿನಹ ಪಾಯಿಂಟ್ ಒಂದು ಪರ್‌ಸೆಂಟ್, ಎರಡು ಪರ್‌ಸೆಂಟ್ ಹೆಚ್ಚಾದದ್ದು ಬಹಳ ಕಡಿಮೆ, ಇಂಥದ್ದು ನೂರರಲ್ಲಿ ಹತ್ತು ಐಟಂಗಳಿಗೆ ಮಾತ್ರ ಎಂದು ಇದರಲ್ಲಿ ಸ್ಪಷ್ಟವಾಗಿ ಘೋಷಣೆಯಾಗುತ್ತದೆ. ಮೂಲತಃ ಇದನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವಾಗ, ಇವತ್ತು ಒಂದು ಕಡೆಯಿಂದ ರಾಮೆಟೀರಿಯಲ್ಸ್‌ನ್ನು ಪರ್ಚೇಸ್ ಮಾಡಿರತಕ್ಕಂಥ ಮ್ಯಾನ್ಯುಫ್ಯಾಕ್ಚರ್‌ಗಳಿಂದ ಹಿಡಿದು ಯಾರು ವಹಿವಾಟುಗಳನ್ನು ಮಾರುತ್ತಾರೆ, ಯಾರು ವ್ಯಾಪಾರಿ ವರ್ಗದವರಿದ್ದಾರೆ ಅವರೆಲ್ಲರಿಗೂ ಪೂರಕವಾದಂಥ ಸರಳತೆಯನ್ನು ಕೊಟ್ಟಂಥ ಈ ಮುಂಗಡ ಪತ್ರದ ಬಗ್ಗೆ ವಿರೋಧ ಪಕ್ಷದವರು ಸ್ವಾಗತ ಮಾಡಬೇಕಿತ್ತು. ಕಳೆದ ಹತ್ತು ವರ್ಷಗಳ ಹಿಂದಿನ ಇತಿಹಾಸವನ್ನು ವಿಶ್ಲೇಷಣೆ ಮಾಡುವುದಾದರೆ ಈ ಬಜೆಟ್ ಎಲ್ಲದ್ದಕ್ಕಿಂತ ಪೂರಕವಾಗಿ ಮಹತ್ತರವಾದ ಸಂದೇಶವನ್ನು ಕೊಡುತ್ತದೆ. ಇದರಲ್ಲಿ ಸಂಪೂರ್ಣವಾದ ಅಧ್ಯಯನದ ಹಿನ್ನೆಲೆ ಖಂಡಿತವಾಗಿ ಕಂಡುಬರುತ್ತದೆ. ನಾನು ಎಲ್ಲದರ ಬಗ್ಗೆ ವಿಪಧವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮೇಲಿಂದ ಮೇಲೆ ನಾನು ನೋಡುವುದಾದರೂ ಕೂಡ ಯಾವ ರೀತಿ ಇದು ಸಾಗಿದೆ ಎಂಬ ಬಗ್ಗೆ ಹೇಳುವುದಾದರೂ ಕೂಡ, ರೈತರಿಂದ ಹಿಡಿದು, ಕೃಷಿಕರಿಂದ ಹಿಡಿದು, ತೋಟಗಾರಿಕೆಯಿಂದ ಹಿಡಿದು ಪಶುಸಂಗೋಪನೆಯಿಂದ, ಮೀನುಗಾರಿಕೆಯಿಂದ ಹಿಡಿದು

ಪ್ರತಿಯೊಂದು ವಲಯಗಳಲ್ಲೂ ಕೆಲವೊಂದು ಕ್ರಾಂತಿಕಾರಕ ಹೆಜ್ಜೆಗಳನ್ನು ಇಡತಕ್ಕಂಥ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಕಳೆದ ಬಾರಿ ನಿರಂತರವಾಗಿ ವಿದ್ಯುತ್ ಒದಗಿಸುವ ಬಗ್ಗೆ ಹೇಳಿದ್ದಿರಿ, ಆದರೆ ಅದನ್ನು ಮಾಡಲು ಆಗಲಿಲ್ಲವೆಂದು ಹೇಳಿದರು. ಕೆಲವೊಂದು ಸಂದರ್ಭಗಳಲ್ಲಿ ಅವರು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದ್ದರೂ ತಾಂತ್ರಿಕ ಕಾರಣಗಳಿಂದ ಅದರ ಅಡತಡೆಯಾಗುತ್ತದೆ. ಆ ರೀತಿ ಆಗಿರುವುದು ನಿಜ, ಇಲ್ಲವೆಂದು ಹೇಳುವುದಿಲ್ಲ. ನಾವು ಘೋಷಣೆ ಮಾಡಿರತಕ್ಕಂಥ, ಚುನಾವಣಾ ಪ್ರನಾಳಿಕೆಗಳಲ್ಲಿ ನಾವು ಹೇಳಿಕೊಂಡು ಬಂದಂಥ, ಮುಂಗಡ ಪತ್ರದಲ್ಲಿ ನಾವು ಪ್ರಕಟಿಸಿರತಕ್ಕಂಥ ನಮ್ಮ ಯಾವುದೇ ಉದ್ದೇಶಗಳಿದ್ದರೂ ಅದರಲ್ಲಿ ನೂರಕ್ಕೆ ನೂರು ನಡೆದಾವು ಎಂಬ ಇಚ್ಛೆಯಿಂದ ನಾವು ಹೋಗುತ್ತೇವೆ, ಎಲ್ಲರೂ ನೂರಲ್ಲಿ ನೂರು ಸರಿಯಾಗಬೇಕೆಂದು, ಆದರೆ ನೂರರಲ್ಲಿ ಇಪ್ಪತ್ತೈದು ಪರೆಸೆಂಟ್ ಲೋಪದೋಷಗಳು ಇರುವುದು ಸ್ವಾಭಾವಿಕ. ನೂರರಲ್ಲಿ 25 ಪರ್‌ಸೆಂಟ್ ಲೋಪದೋಷವಿದ್ದಾಗ ಆ 75 ಪರ್‌ಸೆಂಟ್ ಬೆಳವಣಿಗೆಯನ್ನು ವಿರೋಧ ಮಾಡುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯ. ಇವತ್ತು ವಿದ್ಯುತ್ ವಲಯದಲ್ಲಿ ಆಗಿರತಕ್ಕಂಥ ಕ್ರಾಂತಿ ಈ ದೇಶದಲ್ಲೆಲ್ಲೂ ಆಗಿರಲಿಕ್ಕಿಲ್ಲ ಎಂದು ನಾನು ಹೇಳಬಯಸುತ್ತೇನೆ. ವಿದ್ಯುತ್‌ನಲ್ಲಿ ಆಗತಕ್ಕಂಥ ನಷ್ಟಗಳನ್ನು ಭರಿಸುವುದಕ್ಕೆ ಯಾವ ರೀತಿಯ ದೂರಗಾಮಿತ್ವದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೋ ಆ ಎಲ್ಲಾ ಕಾರ್ಯಕ್ರಮವನ್ನು ಹಾಕಿಕೊಂಡು ಬಂದು, ಯಾವ ರೀತಿಯಲ್ಲಿ ಇನ್ನೂ ಹೆಚ್ಚು ವಿದ್ಯುತ್‌ನ್ನು ಉತ್ಪಾದಿಸಬೇಕೆಂಬ ರಾಜಕೀಯ ಇಚ್ಛಾಶಕ್ತಿ ಪ್ರಕಟಿಸಿದ್ದಲ್ಲದೆ ತನ್ನ ಎಲ್ಲಾ ರೀತಿಯ ಆರ್ಥಿಕ ಮೌಲ್ಯಗಳನ್ನು ಕ್ರೋಢೀಕರಣ ಮಾಡಿಕೊಂಡು ಎಷ್ಟು ಉತ್ಪನ್ನ ಹೆಚ್ಚು ಮಾಡಬೇಕೆಂದು ಒಂದು ನಿಗದಿತವಾದ ಸಮಯವನ್ನು ಮಾಡಿದರೂ ಕೂಡ ನಮ್ಮ ದುರಾದೃಷ್ಟದಿಂದ ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಅನಾಹುತಗಳು ನಡೆದಿವೆ, ಆದ್ದರಿಂದ ನಿರಂತರವಾಗಿ ವಿದ್ಯುತ್‌ನ್ನು ಕೊಡಲು ಆಗದಿದ್ದರೂ, ನಿರಂತರವಾದ ವಿದ್ಯುತ್‌ನ್ನು ಕೊಡತಕ್ಕಂಥ ನಮ್ಮ ಸರ್ಕಾರದ ನೀತಿಯೇನಿದೆ ಅದನ್ನೇನು ನಿಲ್ಲಿಸಲಿಲ್ಲ. ಅದರ ಬಗ್ಗೆ ಇವತ್ತಿಗೂ ಕೂಡ ಸಾಕಷ್ಟು ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ವಿದ್ಯುತ್ ಇಲಾಖೆಯವರು ಮಾಡುತ್ತಿದ್ದಾರೆಂದು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ತಮ್ಮ ಸರ್ಕಾರವಿದ್ದಾಗ, ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ವಿದ್ಯುತ್ ವಿಭಾಗದಲ್ಲಿ ಬಹಳಷ್ಟು ಕ್ರಾಂತಿಕಾರಕವಾದ ಕೆಲಸಗಳು ನಡೆದಿವೆ. ಹಿಂದಿನ ಸರ್ಕಾರ ಮಾಡಿದ್ದನ್ನು ನಿಲ್ಲಿಸಿ ನಾವು ಮುಂದೆ ಹೋಗದಿದ್ದರೆ ನೀವು ನಮ್ಮನ್ನು ಟೀಕೆ ಮಾಡಬಹುದಿತ್ತು. ಆದರೆ ಹಿಂದಿನ ಸರ್ಕಾರ ಮಾಡಿದ್ದಕ್ಕಿಂತ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮ ವಿದ್ಯುತ್ ವಲಯದಲ್ಲಿ ನಮ್ಮ ಮುಖ್ಯಮಂತ್ರಿಯಾದ ಮಾನ್ಯ ಎಸ್.ಎಂ. ಕೃಷ್ಣರವರು ಬಂದ ಮೇಲೆ ಆಗಿದೆ ಎನ್ನುವುದನ್ನೂ ನಾನು ಘಂಟಾಘೋಷವಾಗಿ ಹೇಳಬಯಸುತ್ತೇನೆ.

ಇನ್ನು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾದ ಹೆಜ್ಜೆಯನ್ನಿಟ್ಟು ನಮ್ಮ ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಅಭಿನಂದಿಸುತ್ತೇನೆ. ಇವತ್ತು ಪಂಚಾಯತ್‌ರಾಜ್ ವ್ಯವಸ್ಥೆಗೆ ಮೂಲಭೂತವಾಗಿ ಗ್ರಾಮಸಭೆಗಳ ಆಧಾರದ ಮೇಲೆ, ಪ್ರಜೆಗಳು ಕೊಡತಕ್ಕ ಆದೇಶವೇನಿದೆ ಆ ಗ್ರಾಮಸಭೆಗೆ ಹೆಚ್ಚು ಮಹತ್ವ ಕೊಟ್ಟು ಗ್ರಾಮಸಭೆಗಳ ನಿರ್ಣಯಗಳೇನಿವೆ ಅದನ್ನು ಶಾಸನಸಭೆ ಕೂಡ ಅನುಷ್ಠಾನಗೊಳಿಸಬೇಕು ಎಂಬ ಇಚ್ಛಾಶಕ್ತಿಯನ್ನು ಸರ್ಕಾರ

ಪ್ರಕಟಪಡಿಸಿದೆ. ಆ ದೃಷ್ಟಿಯಿಂದ ಗ್ರಾಮಸಭೆಗಳನ್ನು ಗ್ರಾಮ ಪಂಚಾಯಿತಿಗಳನ್ನು ಬಲಪಡಿಸಬೇಕೆಂಬ ಇಚ್ಛಾಶಕ್ತಿ ಏಕೆ ಬಂತು? ಅಧಿಕಾರ ವಿಕೇಂದ್ರೀಕರಣ ಮಾಡಿ ಆ ಮೂಲಕ ಹಳ್ಳಿಗಳಲ್ಲಿ ಜನರ ಆಡಳಿತವನ್ನು ಸ್ವಯಂಪ್ರೇರಿತವಾಗಿ ಮಾಡಿಕೊಂಡು ಜನರ ಸಹಭಾಗಿತ್ವವನ್ನು ತೆಗೆದುಕೊಂಡು, ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್, ಸಹಭಾಗಿತ್ವದಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ, ವಿತ್ ಡೀಸೆಂಟ್ರಲೈಸ್ಡ್ ಗೌವರ್ನ್‌ನ್ಸ್. ಇವತ್ತು -ಜನರ ಸಹಭಾಗಿತ್ವವಿಲ್ಲದೆಯೇ ಗ್ರಾಮ ಪಂಚಾಯಿತಿ ಅಧಿಕಾರ ಮಾಡಲು ಆಗುವುದೇ ಇಲ್ಲ. ಹಿಂದಿನ ಸರ್ಕಾರವಿದ್ದಾಗ ಈಗ ಮಾತನಾಡಿದಂಥ ವಿರೋಧ ಪಕ್ಷದ ಮುಖಂಡರುಗಳಿಗೆ ಒಂದು ವಿಚಾರವನ್ನು ನೆನಸಿಕೊಡುತ್ತೇನೆ. ನಮ್ಮ ಆಡಳಿತ ಬಂದ ಪ್ರಾರಂಭದಲ್ಲೇ ಮುಖ್ಯವಾಗಿ ಗ್ರಾಮ ಪಂಚಾಯಿತಿಗಳಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ನಗರ ಸಭೆಗಳಲ್ಲಿ ಬಾಕಿ ಇರತಕ್ಕಂಥ ವಿದ್ಯುತ್ ಬಿಲ್ಲುಗಳನ್ನು ಸರ್ಕಾರದ ವತಿಯಿಂದ ಪಾವತಿ ಮಾಡಿಸಿದ್ದೇವೆ. ಹಾಗಾದರೆ ನಮ್ಮ ರಾಜಕೀಯ ಇಚ್ಛಾಶಕ್ತಿ ಇದೆ, ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ, ಜನರೇ ಆಡಳಿತದಲ್ಲಿ ಬರಬೇಕು ಎನ್ನುವಂಥ ನಮ್ಮ ಇಚ್ಛಾಶಕ್ತಿಯನ್ನು ಪ್ರಕಟಪಡಿಸಿದ್ದೇವೆ ಎನ್ನುವ ನಮ್ಮ ನಿಲುವನ್ನು ಈ ಮುಂಗಡ ಪತ್ರದಲ್ಲಿ ಸ್ಪಷ್ಟಪಡಿಸಿಕೊಳ್ಳಬಹುದು. ಅಷ್ಟು ಮಾತ್ರವಲ್ಲ ಇವತ್ತು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಸುಮಾರು 21 ನಗರದ 15 ಲಕ್ಷ ಕೊಳಗೇರಿ ನಿವಾಸಿಗಳಿಗೆ ನಿರ್ಮಲ ಜ್ಯೋತಿ ಕಾರ್ಯಕ್ರಮದ ಅನುಷ್ಠಾನ, ಈ ನಿರ್ಮಲ ಜ್ಯೋತಿ ಕಾರ್ಯಕ್ರಮದ ಅನುಷ್ಠಾನವಿರಲಿ, ಗ್ರಾಮೀಣಾಭಿವೃದ್ಧಿಯಲ್ಲಿ ತೋರಿಸಿರತಕ್ಕಂಥ 'ಸ್ವಚ್ಛ ಗ್ರಾಮ'ದ ಅನುಷ್ಠಾನವಿರಲಿ, ಅದನ್ನು ಇಂಟ್ರಡ್ಯೂಸ್ ಮಾಡುವಾಗ ನಮ್ಮ ಎಣಿಕೆ ಏನಿತ್ತು ಅದರಲ್ಲಿ ಕೆಲವು ಲೋಪದೋಷಗಳು ಕಂಡುಬಂದಿದ್ದರಿಂದ ಅದರ ತಿದ್ದುಪಡಿಗೆ ಸ್ವಲ್ಪ ವಿಳಂಬವಾಗಿರಬಹುದು, ಆದರೆ ದೂರಗಾಮಿ ದೃಷ್ಟಿಯನ್ನು ನಾವು ಇಟ್ಟುಕೊಳ್ಳವುದಿದ್ದರೆ ಮುಂದಿನ ದಿನಗಳಲ್ಲಿ 'ಸ್ವಚ್ಛ ಗ್ರಾಮದ' ಕಾರ್ಯಕ್ರಮಗಳು ಫಲವನ್ನು ಕೊಡಲೇಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲೇ ನಾಲ್ಕು ಗ್ರಾಮಗಳಲ್ಲಿ ಟೆಂಡರ್ ಕರೆದು ಈಗಾಗಲೇ ಕೆಲಸವನ್ನು ಪ್ರಾರಂಭಿಸಿದ್ದೇವೆ. ನಿಜ, ಇದನ್ನು ಜಾರಿಗೆ ತರುವಲ್ಲಿ ಸ್ವಲ್ಪ ಡಿಲೇ ಆಯಿತು. ಇಂಪ್ಲಿಮೆಂಟೇಷನ್ ಮಾಡುವಾಗ ಕೆಲವು ಲೋಪದೋಷಗಳನ್ನು ಸರಿಪಡಿಸಿಕೊಳ್ಳುವಲ್ಲಿ ವಿಳಂಬವಾಯಿತು. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅಧಿಕಾರಿಗಳ ಮಟ್ಟದಲ್ಲಿ ಕೆಲವು ಟಾಸಿಂಗ್ ಆಗುತ್ತಿರುತ್ತದೆ, ಎಲ್ಲಾ ಅಧಿಕಾರಿಗಳು ಒಂದೇ ರೀತಿಯಲ್ಲಿರುವುದಿಲ್ಲ. ಸರ್ಕಾರದ ನಿಲುವನ್ನು ಆದಷ್ಟು ಶೀಘ್ರದಲ್ಲಿ ಅನುಷ್ಠಾನಗೊಳಿಸಬೇಕೆಂಬ ಇಚ್ಛಾಶಕ್ತಿ ನಮ್ಮ ಅಧಿಕಾರಿಗಳಿಗೆ ಇನ್ನಷ್ಟು ಹೆಚ್ಚು ಬರಬೇಕೆಂಬ ಮಾತನ್ನು ಹೇಳಬೇಕಾಗುತ್ತದೆ. ಯಾವ ರೀತಿಯಲ್ಲಿ ನಮ್ಮ ಮುಖ್ಯಮಂತ್ರಿಗಳು ಎಷ್ಟು ಫಾಸ್ಟ್ ಆಗಿ ಹೋಗುತ್ತಿದ್ದಾರೆ ಅದಕ್ಕೆ ಸರಿಯಾಗಿ ಅಷ್ಟೇ ಪಾಸ್ಟ್ ಆಗಿ ನಮ್ಮ ಅಧಿಕಾರಿ ವರ್ಗ ಹೋಗಿದ್ದರೆ ನಮ್ಮ ಅನುಷ್ಠಾನಗಳನ್ನೆಲ್ಲಾ ಬಹಳಷ್ಟು ಶೀಘ್ರವಾಗಿ ಮಾಡಬಹುದಿತ್ತು. ಎಲ್ಲಾ ಅಧಿಕಾರಿಗಳು ಒಂದೇ ರೀತಿಯಲ್ಲಿರುವುದಿಲ್ಲ. ಎಲ್ಲಾ ಸರ್ಕಾರಗಳು ಒಂದೊಂದು ಕಾರ್ಯಕ್ರಮ ತರುತ್ತವೆ, ಇದು ನಡೆಯುತ್ತದೆಯೇ ಎನ್ನತಕ್ಕಂಥ ಹಗುರವಾದಂಥ ಉದ್ದೇಶ ಕೆಲವೊಂದು ಅಧಿಕಾರಿಗಳಲ್ಲಿ ಇರುವುದರಿಂದಾಗಿ ಕೆಲವು ಕಾರ್ಯಕ್ರಮಗಳು ಅನುಷ್ಠಾನಕ್ಕೆ ತರುವಾಗ ಬಹಳಷ್ಟು ತೊಂದರೆಗಳಾಗುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರ ಮಾದರಿ ಪಟ್ಟಣ ವಸತಿ ಕಾರ್ಯಕ್ರಮದ ಬಗ್ಗೆ ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಇದರಲ್ಲಿ ಏಕೆ ಹಣವನ್ನು ವಿಂಗಡಿಸಲಿಲ್ಲವೆಂದು ಹೇಳಿದರು. ಆದರೆ ನಾನು ತಿಳಿದುಕೊಂಡಂತೆ

ಇದರಲ್ಲಿ ಸ್ಪಷ್ಟವಾಗಿ ಇದೆ. "ನಗರದ ಅಡ್ಡಾದಿಡ್ಡಿ ಬೆಳವಣಿಗೆಯನ್ನು ನಿಯಂತ್ರಿಸಲು ಸಣ್ಣ ಪಟ್ಟಣಗಳನ್ನ ಅಭಿಪ್ರಾಯಗೊಳಿಸುವುದು ಅವಶ್ಯವಾಗಿದೆ 'ಮುಖ್ಯಮಂತ್ರಿಗಳ ಮಾದರಿ ಪಟ್ಟಣ ವಸತಿ ಕಾರ್ಯಕ್ರಮ' ಎನ್ನುವ ವಿನೂತನ ಯೋಜನೆಯಡಿ ಸಣ್ಣ ಪಟ್ಟಣಗಳಲ್ಲಿ ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಕರ್ನಾಟಕ ಗೃಹ ಮಂಡಳಿಯು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಸ್ವಯಂ ಹೂಡಿಕೆ ಆಧಾರದಲ್ಲಿ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಿದೆ" ಎಂದು ಸ್ಪಷ್ಟವಾಗಿ ಬಜೆಟ್‌ನಲ್ಲಿ ಹೇಳಿದ ಮೇಲೆ, ಇದಕ್ಕೆ ಏತಕ್ಕಾಗಿ ಬಜೆಟರಿ ಪ್ರಾವಿಷನ್ ಇಡಲಿಲ್ಲ ಎನ್ನುವ ಮಾತನ್ನು ಅವರು ಏಕೆ ಹೇಳಿದರೋ ನನಗೆ ಅರ್ಥವಾಗಲಿಲ್ಲ. ಗೃಹ ಮಂಡಳಿಯು ನಗರಾಭಿವೃದ್ಧಿ ಪ್ರಾಧಿಕಾರದ ಸಹಯೋಗದಿಂದ ಇದನ್ನು ಮಾಡಬಹುದು ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿರುವಂತಹ ನಗರಗಳಿಗೆ ಕಾಯಕಲ್ಪ ಕೊಡುವಲ್ಲಿ ಬಹುಶಃ ಈ ಕಾರ್ಯಕ್ರಮ ಅನುಷ್ಠಾನಕ್ಕೆ ತರುವಾಗ ಬಹಳಷ್ಟು ವಿನೂತನವಾಗಿ ಜಾರಿಗೊಳ್ಳುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಅದನ್ನು ನಾನಿಲ್ಲಿ ಹೇಳಯಬಸುತ್ತೇನೆ.

'ಸ್ತ್ರೀಶಕ್ತಿ' ಕಾರ್ಯಕ್ರಮದಡಿ ಕಳೆದ ಬಾರಿಯ ಸಾಲಿನಲ್ಲಿ 50 ಸಾವಿರ ಸ್ವಸಹಾಯ ಗುಂಪುಗಳ ತಂಡಗಳನ್ನು ರಚಿಸುವ ಗುರಿಯನ್ನು ನಾವು ಇಟ್ಟುಕೊಂಡಿದ್ದೆವು. ಆಗ ಎಲ್ಲರೂ ಕೂಡ ಇದು ಕಾರ್ಯಗತವಾಗುವುದಿಲ್ಲ ಎನ್ನುವ ಮಾತುಗಳನ್ನು ಹೇಳಿದ್ದರು. ಈ 'ಸ್ತ್ರೀ ಶಕ್ತಿ' ಕಾರ್ಯಕ್ರಮ ಇವತ್ತು ಬಹಳಷ್ಟು ಜನಪ್ರಿಯವಾಗಿದೆ. ನನ್ನ ಉಡುಪಿ ಕ್ಷೇತ್ರದಲ್ಲಿ 137 ಸ್ವಸಹಾಯ ಗುಂಪುಗಳಲ್ಲಿ 2,002 ಸ್ತ್ರೀಯರನ್ನು ಸದಸ್ಯರುಗಳನ್ನಾಗಿ ಮಾಡಿಕೊಂಡು ಅತ್ಯಂತ ಬಲಾಢ್ಯ ಸ್ವಸಹಾಯ ತಂಡಗಳ ಮೂಲಕ ನಾವು ಈ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದೇವೆ. ನಾವು ಕೇವಲ 50 ಸಾವಿರ ಸ್ವಸಹಾಯ ಗುಂಪುಗಳ ತಂಡದ ರಚನೆ ಮಾಡುವುದಾಗಿ ಘೋಷಣೆ ಮಾಡಿದ್ದೆವು. ಆದರೆ ಕಳೆದ ಒಂದು ವರ್ಷದಲ್ಲಿ ನಾವು ಗುರಿ ಮೀರಿ 74,512 ಸ್ವಸಹಾಯ ಗುಂಪುಗಳ ತಂಡಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದೇವೆ. ಪ್ರತಿ ಮುಂಗಡ ಪತ್ರದಲ್ಲಿ ಇಂತಹ ಕಾರ್ಯಕ್ರಮಗಳನ್ನು ಅಳವಡಿಸಿ ನಾವು ಗುರಿಯನ್ನು ನಿಗದಿಪಡಿಸುವುದು ಸ್ವಾಭಾವಿಕ. ಕೆಲವು ಸಂದರ್ಭಗಳಲ್ಲಿ ಗುರಿ ಈಡೇರಿಕೆಯಾಗುತ್ತದೆ, ಕೆಲವೊಮ್ಮೆ ಗುರಿ ಈಡೇರಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಕುಂದುಕೊರತೆಯಾಗಬಹುದು. ಅದೇ ರೀತಿ ಇವತ್ತು 'ಸ್ತ್ರೀ ಶಕ್ತಿ'ಯಲ್ಲಿ ಸಂಗ್ರಹವಾಗಿರತಕ್ಕಂಥ 40.49 ಕೋಟಿ ರೂ ....

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೇ, ಸ್ತ್ರೀ ಶಕ್ತಿ ಯೋಜನೆಗೆ ಸರ್ಕಾರದವರು ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ?

ಶ್ರೀ ಯು.ಆರ್. ಸಭಾಪತಿ:- ತಾವು ಪ್ರಶ್ನೋತ್ತರ ಸಮಯದಲ್ಲಿ ಆ ಪ್ರಶ್ನೆಯನ್ನು ಹಾಕಿ ಸರ್ಕಾರದಿಂದ ಉತ್ತರ ಪಡೆಯಬಹುದಾಗಿದೆ. ನಾನೇನು ಹೇಳುತ್ತಿದ್ದೇನೆ ಎಂದರೆ, ಸ್ತ್ರೀ ಶಕ್ತಿ ಸ್ವಸಹಾಯ ತಂಡಗಳು ರಚನೆಯಾಗಿರುವುದಕ್ಕೆ ಪ್ರತಿಯೊಂದಕ್ಕೆ ಐದು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುವಂತಹ ಕಾರ್ಯಕ್ರಮದ ಪ್ರಕಾರ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಮ್ಮಲ್ಲೂ ಸಹಾ ಹಣ ಬಿಡುಗಡೆಯಾಗಿದೆ. ಐದು ಸಾವಿರ ರೂಪಾಯಿಗಳಿಂದ ಹತ್ತು ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ನಾವು ಕೇಳಿದ್ದಕ್ಕೂ ಸಹಾ ಸರ್ಕಾರದವರು ನಮಗೆ ಅನುಮತಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ, ನಮ್ಮಲ್ಲಿ ರಚನೆಯಾದ

ಎಲ್ಲಾ ತಂಡಗಳಿಗೂ ಹಣ ಬಿಡುಗಡೆಯಾಗಿದೆ. ನಿಮ್ಮ ಕ್ಷೇತ್ರದಲ್ಲಿ ಹಣ ಬಿಡುಗಡೆಯಾಗಲಿಲ್ಲ ಎಂದ ಮಾತ್ರಕ್ಕೆ ನೀವು ಇಡೀ ಕಾರ್ಯಕ್ರಮ ವಿಫಲವಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೂ ಕೂಡ ಚುನಾಯಿತ ಪ್ರತಿನಿಧಿಗಳ ಇಚ್ಛಾಶಕ್ತಿ ಬೇಕು. ಶಾಸಕರುಗಳೂ ಕೂಡ ಯೋಜನೆಯನ್ನು ಸರ್ಕಾರ ಅನಾನ್ಸ್ ಮಾಡಿದ ತಕ್ಷಣ ಅಧಿಕಾರಿಗಳು ಅದನ್ನು ಅನುಷ್ಠಾನಗೊಳಿಸುತ್ತಾರೆ ಎಂದು ಭಾವಿಸಿ ಸುಮ್ಮನೆ ಕುಳಿತುಕೊಳ್ಳುವಂತಿಲ್ಲ. ಯಾವುದೇ ಸಾಕ್ಷರತಾ ಅಭಿಯಾನ ಇರಲಿ, ಸರ್ವ ಶಿಕ್ಷಣ ಅಭಿಯಾನ ಇರಲಿ, ಸ್ತ್ರೀ ಶಕ್ತಿ ಕಾರ್ಯಕ್ರಮ ಇರಲಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಕಾರ್ಯಕ್ರಮಗಳಿರಲಿ, ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಗಳೂ ಸಹ ಆ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಮಾತ್ರ ಅದು ಯಶಸ್ವಿಯಾಗುತ್ತದೆ, ಇಲ್ಲದಿದ್ದರೆ ಯಶಸ್ವಿಯಾಗುವುದಿಲ್ಲ. ನಾವು ಸರ್ಕೀಟಿ ಹೌಸ್‌ನಲ್ಲಿ ಕುಳಿತುಕೊಂಡರೆ ಸ್ತ್ರೀ ಶಕ್ತಿ ಕಾರ್ಯಕ್ರಮದಡಿ ಏನು ಪ್ರಗತಿಯಾಗಿದೆ ಎಂದು ಸಿ.ಡಿ.ಪಿ.ಒ.ಗೆ ಫೋನ್ ಮಾಡಿ ಕೇಳುವುದಲ್ಲ. ನಾವು ಪ್ರತಿ ಗ್ರಾಮ ಪಂಚಾಯಿತಿಗೆ ಹೋಗಿ, ನಮ್ಮ ಈ ಗ್ರಾಮ ಪಂಚಾಯಿತಿಯಲ್ಲಿ ಎಷ್ಟು ಸ್ತ್ರೀ ಶಕ್ತಿ ಸ್ವಸಹಾಯ ತಂಡಗಳನ್ನು ಮಾಡಲಿಕ್ಕೆ ಸಾಧ್ಯವಾಗಿದೆ ಎನ್ನುವ ಬಗ್ಗೆ ನಾವು ಸ್ವಲ್ಪ ಆಸಕ್ತಿ ವಹಿಸಿ ಪರಿಶೀಲಿಸಬೇಕು. ಆಗ ಮಹಿಳೆಯರು ಅದಕ್ಕೆ ಒಲವು ತೋರಿಸುತ್ತಾರೆ. ಸರ್ವಶಿಕ್ಷ ಅಭಿಯಾನ ಇರಲಿ, ಸಾಕ್ಷರತಾ ಅಭಿಯಾನ ಇರಲಿ, ಎಲ್ಲದರಲ್ಲೂ ಶಾಸಕರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸಾಕ್ಷರತಾ ಅಭಿಯಾನ ಎಲ್ಲಾ ಸುಳ್ಳು, ಅದು ಸಫಲವಾಗುವುದಿಲ್ಲ ಎಂದು ಹಲವಾರು ಮಂದಿ ಹೇಳಿದರು. ಎಲ್ಲೆಲ್ಲಿ ಚುನಾಯಿತ ಪ್ರತಿನಿಧಿಗಳು ಸಾಕ್ಷರತಾ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೋ ಅಂತಹ ಕಡೆಗಳಲ್ಲೆಲ್ಲಾ ಅದು ಯಶಸ್ವಿಯಾಗಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಶೇ. 100 ರಷ್ಟು ಸಾಕ್ಷರತೆ ಆಗಲಿಕ್ಕೆ ಏನಾದರೂ ಕಾರಣ ಇದ್ದರೆ, ನಾವೆಲ್ಲರೂ ಅದರಲ್ಲಿ ಸಕ್ರಿಯವಾಗಿ ನಮ್ಮನ್ನು ನಾವು ತೊಡಗಿಸಿಕೊಂಡಿದ್ದೇ ಆಗಿದೆ. ಜಿಲ್ಲಾ ಪಂಚಾಯತ್ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಸದಸ್ಯರುಗಳು, ಗ್ರಾಮ ಪಂಚಾಯತ್ ಸದಸ್ಯರುಗಳು ಯೋಜನೆಯ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಇಲ್ಲಿ ನಾವು ಕುಳಿತುಕೊಂಡು ವಿರೋಧ ಮಾಡುವುದು ಬಹಳ ಸುಲಭದ ಕೆಲಸ. ಅಲ್ಲಿ ಎಷ್ಟು ಹಣ ಬಂದಿದೆ? ಇಲ್ಲಿ ಎಷ್ಟು ಗುಂಪುಗಳು ರಚನೆಯಾಗಿವೆ? ಅಲ್ಲಿ ಅಧಿಕಾರಿಗಳು ಹಾಗಾಗಿದ್ದಾರೆ, ಹೀಗಾಗಿದ್ದಾರೆ ಎಂದು ಹೇಳುವುದು ಬಹಳ ಸುಲಭ. ಆದರೆ ಒಬ್ಬ ಚುನಾಯಿತ ಪ್ರತಿನಿಧಿಯಾದವರು ಪ್ರತಿಯೊಂದು ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವರ ಆದ್ಯ ಕರ್ತವ್ಯವಾಗಿದೆ. ನಾವು ಸಕ್ರಿಯವಾಗಿ ಪಾಲ್ಗೊಳ್ಳದೇ, ಅವನು ಯಾವ ಪಾರ್ಟಿಯವನು? ಇವನು ಯಾವ ಪಾರ್ಟಿಯವನು ಎಂಬುದನ್ನು ನೋಡಿಕೊಂಡು, ಇಂತಹ ಚರ್ಚೆಗಳಲ್ಲೇ ಕಾಲಹರಣ ಮಾಡುತ್ತಿದ್ದೇವೆ. ಡೆವಲಪ್ ಮೆಂಟ್ ಪ್ರೋಗ್ರಾಮ್‌ಗೆ ನಮ್ಮ ತಲೆಯನ್ನು ಉಪಯೋಗಿಸಿ ನಮ್ಮ ನಮ್ಮ ಬುದ್ಧಿಯನ್ನು ಖಚು ಮಾಡುವುದು ಬಹಳ ಕಡಿಮೆ ಎನ್ನಿಸುತ್ತಿದೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ಕೂಡ ನಾವು ಅನೇಕ ಹೆಗ್ಗಳಿಕೆಯನ್ನು ಪಡೆದುಕೊಂಡಿದ್ದೇವೆ.

ಇನ್ನು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಮೀನುಗಾರಿಕಾ ಉದ್ಯಮ ಪ್ರತಿ ವರ್ಷ ಕುಸಿಯುತ್ತಿದೆ. ಕರಾವಳಿ ಜಿಲ್ಲೆಯಲ್ಲಿ ಇರತಕ್ಕಂಥ ಮೀನುಗಾರರು ಬಹಳ ದುರದೃಷ್ಟವಂತರು. ಪ್ರತಿ ವರ್ಷ ಇಲ್ಲಿ ಮೀನುಗಾರಿಕೆ ಕ್ಷಾಮ ಬರುತ್ತಾ ಹೋಗುತ್ತಿದೆ. ಹೊಸ ಮೀನುಗಾರಿಕಾ ನೀತಿ

ಒಂದನ್ನು ರೂಪಿಸಿಬೇಕೆಂದು ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಾಕಷ್ಟು ಮನವಿಗಳನ್ನು ಮಾಡಿಕೊಂಡಿದ್ದೇವೆ. ನಮ್ಮ ಸರ್ಕಾರದ ನೀತಿಯಲ್ಲಿ ಹೊಸ ಮೀನುಗಾರಿಕಾ ನೀತಿಯನ್ನು ಅಳವಡಿಸಬೇಕು ಎನ್ನುವಂತಹ ಚಿಂತನೆಯನ್ನು ನಮ್ಮ ಮೀನುಗಾರಿಕೆ ಮತ್ತು ಬಂದರು ಸಚಿವರು ಮಾಡಿ, ಅದಕ್ಕೆ ಪ್ರಥಮವಾಗಿ 'ಮಾರಾಟ ತೆರಿಗೆ'ಯನ್ನು ರದ್ದು ಮಾಡಬೇಕೆಂಬ ಕೆಲಸವನ್ನು ನಾವು ಮಾಡಿದ್ದೇವೆ. ಹಿಂದಿನ ಸರ್ಕಾರದಲ್ಲಿ ಅದನ್ನು ಮಾಡಲಾಗಿತ್ತು, ಅದನ್ನು ನಾವು ಮುಂದುವರೆಸಿಕೊಂಡು ಬಂದಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ದಯವಿಟ್ಟು ಆ ಕಾರ್ಯಕ್ರಮಕ್ಕೋಸ್ಕರ ಈ ಮಾಾಟ ತೆರಿಗೆಯನ್ನು ರದ್ದು ಮಾಡಿದೆ ಎಂದು ಹೇಳಬೇಡಿ. ಹಿಂದೆ ಮಾನ್ಯ ಸಿದ್ಧರಾಮಯ್ಯನವರು ಮಾಡಿದ್ದನ್ನೇ ನೀವು ಮುಂದುವರೆಸಿಕೊಂಡು ಬರುತ್ತಿದ್ದೀರಿ. ಅದನ್ನು ಈಗ ಹೊಸದಾಗಿ ಕೊಟ್ಟಿದ್ದು ಎಂದು ನೀವು ಹೇಳಬಾರದು.

ಶ್ರೀ ಯು.ಆರ್. ಸಭಾಪತಿ:- ನಾನು ಮಾತನಾಡುವ ಮೊದಲೇ ನೀವು ಮಾತನಾಡಿ ಬಿಟ್ಟಿರಿ. ನಾನು ಪೂರ್ತಿಯಾಗಿ ಮಾತನಾಡುವುದನ್ನು ಕೇಳಿಸಿಕೊಂಡು ನಂತರ ನೀವು ಮಾತನಾಡಿ. ನೀವು ಮಾಡಲಿಲ್ಲ ಎಂದು ನಾನು ಹೇಳಲಿಲ್ಲ.

ಶ್ರೀ ಬಿ. ರಮಾನಾಥ ರೈ:- ನಿಮ್ಮ ಕಾಲದಲ್ಲಿ 30 ಸಾವಿರ ಕಿಲೋ ಲೀಟರ್ ಎಂದು ಇದ್ದರೆ, ನಾವು ಅದನ್ನು 50 ಸಾವಿರ ಕಿಲೋ ಲೀಟರ್‌ಗೆ ಏರಿಸಿದ್ದೇವೆ. ಈ ರೀತಿ ಜಾಸ್ತಿ ಮಾಡಿದ ಬಗ್ಗೆ ನೀವು ಏಕೆ ಹೇಳುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ನಾನು ಇದು ಹೊಸ ಕಾರ್ಯಕ್ರಮ ಅಲ್ಲ ಎಂದು ಮಾತ್ರ ಹೇಳಿದೆ. ಇದು ಆನ್-ಗೋಯಿಂಗ್ ಸ್ಕೀಮ್ ಮಾತ್ರವಾಗಿದೆ.

ಶ್ರೀ ಬಿ. ರಮಾನಾಥ ರೈ:- ಎಲ್ಲಾ ಮೀನುಗಾರರಿಗೂ ಸಿಗಬೇಕೆಂದು ನಾವು ಮಾಡಿದ್ದೇವೆ.

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ನಾನು ಒಂದು ರಾಷ್ಟ್ರೀಯ ಮೀನುಗಾರರ ಸಂಘಟನೆಯ ರಾಷ್ಟ್ರೀಯ ಮಟ್ಟದ ಅಧ್ಯಕ್ಷನ ನೆಲೆಯಲ್ಲಿ ಮಾನ್ಯ ಜಯಪ್ರಕಾಶ್ ಹೆಗ್ಗಡೆಯವರು ಮೀನುಗಾರಿಕಾ ಸಚಿವರಾಗಿ ಇರುವಾಗಲೇ ನಾವು ಹೋರಾಟವನ್ನು ಮಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಬಜೆಟ್ ಭಾಷಣ ಮಾಡುತ್ತಾ ನನ್ನನ್ನು ತೋರಿಸಿ 30 ಸಾವಿರ ಕಿಲೋ ಲೀಟರ್‌ಗೆ ಮಾರಾಟ ತೆರಿಗೆ ಮನ್ನಾ ಎಂದು ಹೇಳಿದರು. ಆದರೆ ಅದನ್ನು ಅನುಷ್ಠಾನಗೊಳಿಸಲಿಕ್ಕೆ ನಿಮಗೆ ಎಷ್ಟು ವರ್ಷ ಬೇಕಾಯಿತು? ಎಷ್ಟು ಹೆಚ್ಚು ಬಂದಿತು ಎಂಬುದನ್ನು ನೀವು ಹೇಳಿ. ಒಂದು ವರ್ಷದವರೆಗೆ ಅದನ್ನು ಅನುಷ್ಠಾನಗೊಳಿಸಲಿಕ್ಕೆ ಆ ಕಡೆಗೆ ಈ ಕಡೆಗೆ ಟಾಸಿಂಗ್ ಆಗುತ್ತಿತ್ತು. ಕಡೆಗೆ ನಮ್ಮ ಸರ್ಕಾರ ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮೀನುಗಾರರ ಎಲ್ಲಾ ನಿಯೋಗಗಳನ್ನು ಕರೆದುಕೊಂಡು ಹೋಗಿ ಕುಳಿತುಕೊಂಡು ಮಾತನಾಡಿ, ಇದು ಈ ರೀತಿ ಆಗಬೇಕು ಎನ್ನುವುದನ್ನು ನಾವು ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ನಾವು ಕೊಟ್ಟಿದ್ದನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಪ್ರತಿ ವರ್ಷ ಮೀನುಗಾರರು ನಿಮ್ಮ ಹತ್ತಿರ ಬಂದು ಏನೋ ಬೇಡಿಕೊಂಡಾಗ,

ನೀವು ಮಾಡಿದಂತೆ ಮಾಡುತ್ತಿದ್ದೀರಿ. ಅದಲ್ಲ, It should be a continuous programme ಒಂದು ವರ್ಷ ಕೊಟ್ಟಿದ್ದನ್ನು, ಪ್ರತಿ ವರ್ಷ 'ನಾವು ಕೊಟ್ಟಿದ್ದೇವೆ' ಎಂದು ಹೇಳಿಕೊಂಡು ಅದಕ್ಕೆ ಅಭಿನಂದನೆಗಳನ್ನು ಹೇಳಿಸಿಕೊಳ್ಳುವಂತಹ ಕೆಲಸವನ್ನು ಮಾಡಬೇಡಿ.

SRI. U.R. SABHAPATHI: It is not a continuous process. ಮತ್ಸ ಕ್ಷಾಮ ಬಂದಾಗ, ಮತ್ಸ್ಯ ಕ್ಷಾಮದ ಹಿನ್ನೆಲೆಯಲ್ಲೆ ಮಾರಾಟ ತೆರಿಗೆಯನ್ನು ಮನ್ನಾ ಮಾಡಿ ಎಂದು ನಾವು ಕೇಳಿದ್ದೇವೆಯೇ ವಿನಃ ಇದನ್ನು ಯಾವತ್ತೂ ಕೊಡಿ ಎಂದು ನಾವು ಕೇಳಲಿಲ್ಲ. ಕಳೆದ ಹಲವಾರು ವರ್ಷಗಳಿಂದ ಮತ್ಸ್ಯಕ್ಷಾಮ ಬಂದು ನಮ್ಮ ಮೀನುಗಾರಿಕಾ ಉತ್ಪನ್ನ ಕಡಿಮೆಯಾಗುತ್ತಾ ಹೋಗಿ ಮೀನುಗಾರಿಕಾ ಯಾಂತ್ರಿಕ ದೋಣಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು ಸ್ವಾಧೀನಪಡಿಸಿದ ಹಿನ್ನೆಲೆಯಲ್ಲಿ ಡೀಸೆಲ್‌ನ ಬೆಲೆ ಏರಿಕೆಯಾಗುತ್ತಾ ಹೋಯಿತು. ಎರಡು ರೂಪಾಯಿ ನಾವು ತೆರಿಗೆ ಮನ್ನಾ ಮಾಡಿದರೆ, ನಾಲ್ಕು ರೂಪಾಯಿ ಸೆಂಟ್ರಲ್‌ನಿಂದ ಡೀಸೆಲ್ ಬೆಲೆ ಏರಿಸಲಾಯಿತು. ಸನ್ಮಾನ್ಯ ಮಾಡಿಸಿದೆ, ಇಲ್ಲವೆಂದು ನಾನು ಹೇಳಲಿಲ್ಲ. ಆದರೆ ಇಂಪ್ಲಿಮೆಂಟೇಷನ್...

ಉಪಾಧ್ಯಕ್ಷರು:-ಮಾನ್ಯ ಹೆಗ್ಗಡೆಯವರೇ, ತಾವು ಮಾತನಾಡುವ ಸರದಿ ಬಂದಾಗ ಮಾತನಾಡಿ. ಅವರು ಮಾತನಾಡುವಾಗ ಮಧ್ಯೆ ಡಿಸ್ಟರ್ಬ್ ಮಾಡಬೇಡಿ.

ಶ್ರೀ ಯು.ಆರ್. ಸಭಾಪತಿ:- ನಾನೇನು ನೀವು ಕಾರ್ಯಕ್ರಮ ಮಾಡಲಿಲ್ಲ ಎಂದು ಹೇಳಲಿಲ್ಲ. ಮೀನುಗಾರರ ಸಮಸ್ಯೆಯ ಬಗ್ಗೆ ಸ್ಪಂದಿಸತಕ್ಕಂಥ ಒಂದು ಔದಾರ್ಯವನ್ನು ತೋರಿ ನಮ್ಮ ಸರ್ಕಾರ ಮಾಡಿದೆ. ಇವತ್ತು ಮತ್ಸ್ಯ ಕ್ಷಾಮ ಭೀಕರವಾಗಿ ಬಂದಿದ್ದರಿಂದಾಗಿ, ಆಮತ್ಸ್ಯ ಕ್ಷಾಮದ ಹಿನ್ನೆಲೆಯಲ್ಲಿ ಮೀನುಗಾರರಿಗೆ ಹೊಸ ಮೀನುಗಾರಿಕಾ ಸಂಪನ್ಮೂಲವನ್ನು ವೃದ್ಧಿಸಲಿಕ್ಕೆ ಹೊಸ ಮೀನುಗಾರಿಕಾ ನೀತಿಯನ್ನು ಮಾಡಬೇಕು ಎನ್ನುವಂತಹ ಮನವಿಯನ್ನೂ ಕೂಡ ಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ, ನಾವು ಅದಕ್ಕೋಸ್ಕರ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಯಾವ ರೀತಿ ಮೀನುಗಾರಿಕಾ ಉತ್ಪನ್ನಗಳನ್ನು ಬೆಳೆಸಬಹುದು ಎಂದು ಪರಿಶೀಲಿಸುತ್ತೇವೆ. ಇವತ್ತು 200-250 ಕೋಟಿ ರೂಪಾಯಿಗಳ ವಾರ್ಷಿಕ ವಿದೇಶ ವಿನಿಮಯದ ಆದಾಯ ಇರತಕ್ಕಂಥ ಒಂದು ಉದ್ದಿಮೆಯನ್ನು ಬದುಕಿಸಬೇಕಾಗಿದೆ. ಈ ದೃಷ್ಟಿಯ ಹಿನ್ನೆಲೆಯಲ್ಲಿ ಹೊಸ ಮೀನುಗಾರಿಕಾ ನೀತಿಯನ್ನೂ ಕೂಡಾ ನಾವು ಅಳವಡಿಸಬೇಕಾಗಿದೆ. ಯಾವ ರೀತಿಯಲ್ಲಿ ಡೀಸೆಲ್ ಅನ್ನು ಬಳಸಿ ಯಾಂತ್ರಿಕ ದೋಣಿಗಳಿಂದ ಮೀನುಗಾರಿಕೆ ಮಾಡುತ್ತಾರೋ ಅದು ಮುಂದಿನ ದಿನಗಳಲ್ಲಿ ಸಾಧ್ಯವಾಗುವುದಿಲ್ಲ. ಈಗಿನ ಡೀಸೆಲ್ ರೇಟ್‌ನಲ್ಲಿ ಅದು ಆಗುವುದಿಲ್ಲ. ಕೇಂದ್ರ ಸರ್ಕಾರ ಏನೂ ಮನಸ್ಸು ಮಾಡಲಿಲ್ಲ. ಯಾವ ರಾಜ್ಯಗಳು ಮಾರಾಟ ತೆರಿಗೆಯನ್ನು ಮನ್ನಾ ಮಾಡಿವೆಯೋ ಅಂತಹವುಗಳಿಗೆ ಕೇಂದ್ರ ಸರ್ಕಾರ ಅಬ್ಕಾರಿ ಶುಲ್ಕ ಮನ್ನಾ ಮಾಡಬೇಕೆಂಬ ನೀತಿಯೇ ಇದೆ. ಆದರೆ ಇವತ್ತು ಕಳೆದ ಮೂರು ವರ್ಷಗಳಿಂದ ಮಾರಾಟ ತೆರಿಗೆ ಮನ್ನಾ ಮಾಡಿದ್ದರೂ, ಕೇಂದ್ರ ಸರ್ಕಾರ ಅಬ್ಕಾರಿ ಶುಲ್ಕ ಮನ್ನಾ ಮಾಡುವ ಬಗ್ಗೆ ಒಂದಷ್ಟೂ ಕಾಳಜಿ ವಹಿಸಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಮಾಡಿದ ಬ್ಯಾಂಕುಗಳ ರಾಷ್ಟ್ರೀಕರಣ ಉದ್ದೇಶ ಏನಿತ್ತೋ ಅದು ಈಡೇರಿಲ್ಲ. ಇವತ್ತು ಕೇಂದ್ರ ಸರ್ಕಾರದ ಅಧೀನದಲ್ಲಿ ಇರುವಂತಹ ರಾಷ್ಟ್ರೀಕೃತ ಬ್ಯಾಂಕುಗಳ ಅವಸ್ಥೆ ಏನಾಗಿದೆ? ಅವು ಒಬ್ಬ ರೈತನಿಗೂ ಸಾಲ ಕೊಡುತ್ತಿಲ್ಲ. ಒಬ್ಬ ಬಡ ಮೀನುಗಾರರಿಗೂ

ಸಹಾ ಅವುಗಳು ಸಾಲ ಕೊಡುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಜನತೆಗೆ ಕೊಡತಕ್ಕಂಥ ಸಾಲವನ್ನೆಲ್ಲಾ ರದ್ದು ಪಡಿಸಿ, ಇವತ್ತು ಖಾಸಗಿ ವಲಯಕ್ಕೆ ಮಾತ್ರ ಕೊಡತಕ್ಕಂಥ ಕೆಲಸವನ್ನು ಇವತ್ತು ರಾಷ್ಟ್ರೀಕೃತ ಬ್ಯಾಂಕುಗಳು ಮಾಡುತ್ತಿವೆ. ಅಂತಹ ಕಠಿಣ ಪರಿಸ್ಥಿತಿಯಲ್ಲಿ ಇವತ್ತು ಸರ್ಕಾರ ಸಹಕಾರಿ ಸಂಸ್ಥೆಗಳ ಮೂಲಕ, ಬೇರೆ ಬೇರೆ ಮೀನುಗಾರಿಕಾ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ, ಡಿ.ಸಿ.ಸಿ. ಬ್ಯಾಂಕುಗಳ ಮೂಲಕ, ಹಿಂದುಳಿದ ವರ್ಗಗಳ ನಿಗಮದ ಮೂಲಕ ಬೇರೆ ಬೇರೆ ಕಾರ್ಯಕ್ರಗಳನ್ನು ಬಡ ಮೀನುಗಾರರಿಗೆ, ಬಡ ಹಿಂದುಳಿದ ವರ್ಗದ ಮಹಿಳೆಯರಿಗೆ ಕಾಯಕಲ್ಪ ಕೊಡತಕ್ಕಂಥ, ಆರ್ಥಿಕ ಚೈತನ್ಯವನ್ನು ಕೊಡತಕ್ಕಂಥ ಕಾರ್ಯಕ್ರಮ ಇವತ್ತು ರಾಜ್ಯ ಸರ್ಕಾರದಿಂದ ನಡೆಯುತ್ತಿದೆ. ಇದನ್ನು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಆದಕ್ಕಾಗಿ ನಾನು ಮತ್ತೆ ಮತ್ತೆ ಹೇಳಿದ್ದೇನೆ; ನಮ್ಮ ಸರ್ಕಾರ ಶ್ರೀಸಾಮಾನ್ಯನ ಕುಂದು ಕೊರತೆಗಳ ಬಗ್ಗೆ ಪ್ರಾಮಾಣಿಕವಾದ ಕಾಳಜಿಯನ್ನು ವ್ಯಕ್ತಪಡಿಸಿದೆ. ಇದರಲ್ಲಿ ಕ್ರಿಯಾಶೀಲ ಧೋರಣೆಯೂ ಇದೆ ಸಾಮಾಜಿಕ ಬದ್ಧತೆ ಇದೆ. ಪ್ರಾಥಮಿಕ ವಲಯಕ್ಕೆ ನಾವು ಆದ್ಯತೆಯನ್ನು ಕೊಟ್ಟಿದ್ದೇವೆ. ಧೋರಣಾತ್ಮಕವಾದ ತೀರ್ಮಾನವನ್ನು ನಾವು ಮಾಡಿದ್ದೇವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಧೋರಣಾತ್ಮಕ ತೀರ್ಮಾನ ತೆಗೆದುಕೊಳ್ಳುವಾಗ ಅಷ್ಟು ಸುಲಭವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ರಾಷ್ಟ್ರದ ಮತ್ತು ರಾಜ್ಯದ ಜಾಗತಿಕ ಆರ್ಥಿಕ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿಯು ಏನಿದೆ ಅದರ ಹಿನ್ನೆಲೆ ನೋಡೋಣ. ಜಾಗತಿಕ ಮಟ್ಟದಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿ ಕೋಲಾಹಲವಾದ ವ್ಯವಸ್ಥೆಯಲ್ಲಿದ್ದೇವೆ. ರಾಷ್ಟ್ರ ಮಟ್ಟದಲ್ಲಿ ನಾವು ಕೇಂದ್ರ ಸರ್ಕಾರದ ಕೋಲಾಹಲ ರೀತಿಯಲ್ಲಿರುವ ಒಂದು ಆರ್ಥಿಕ ವ್ಯವಸ್ಥೆಯನ್ನು ಸಮತೋಲನದಲ್ಲಿ ತರುವುದಕ್ಕೆ ಕೇಂದ್ರ ಸರ್ಕಾರದಿಂದ ಆಗದೇ ಇದ್ದ ಪರಿಸ್ಥಿತಿಯಲ್ಲಿ ಇವತ್ತು, ರಾಜ್ಯ ಸರ್ಕಾರ ಇಷ್ಟೊಂದು ಅಧ್ಯಯನ ಮಾಡಿ ಸಮತೋಲನವಾದ ಮುಂಗಡಪತ್ರವನ್ನು ಕರ್ನಾಟಕ ರಾಜ್ಯದ ಜನತೆಯ ಮುಂದಿಟ್ಟಾಗ ನೀವು ಅದಕ್ಕೆ ಪ್ರಶಂಸೆಯನ್ನು ಮಾಡಬೇಕು. ಇದ್ದ ವಸ್ತು ಸ್ಥಿತಿಯನ್ನು ತಿರುಚಿ, ಇದು ಕೇವಲ ಸೌಂದರ್ಯದ ಮಾತುಗಳು ಹಾಗೂ ರಂಗು ರಂಗಿನ ಮಾತಿನಲ್ಲಿ ಆಶ್ವಾಸನೆ ಕೊಡುತ್ತಿದ್ದಾರೆಂದು ನಮ್ಮ ಮುಖ್ಯಮಂತ್ರಿಗಳಿಗೆ ನೀವು ವಿವರಿಸುತ್ತೀರಿ, ಅದರ ಬಗ್ಗೆ ನಾನು ಹೇಳಬೇಕಾಗಿದೆ. ಅಲಂಕಾರಿಕ ಮಾತುಗಳೆಂದು ಹೇಳುತ್ತೀರಿ. ಪ್ರಾಥಮಿಕ ಆರೋಗ್ಯದ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದರು, ಪ್ರಾಥಮಿಕ ಆರೋಗ್ಯಕ್ಕೆ ನೀವು ಏನು ಮಾಡಿದಿರಿ ಎಂದು ನನ್ನ ಕ್ಷೇತ್ರದಲ್ಲಿ ಒಂದು ಜಿಲ್ಲಾ ಆಸ್ಪತ್ರೆ ಇದ್ದು ನಿಮ್ಮ ಸರ್ಕಾರ ಇರುವಾಗ 28 ಹುದ್ದೆಗಳು ವೇಕೆಂಟ್ ಇದ್ದಾಗ ನಾಲ್ಕು ಹುದ್ದೆಗಳು ಮಾತ್ರ ಫಿಲ್‌ಅಪ್ ಮಾಡುವುದಕ್ಕೆ ಆಯಿತು. ನನ್ನ ಜಿಲ್ಲಾ ಆಸ್ಪತ್ರೆಯಲ್ಲಿ 22 ವೈದ್ಯರನ್ನು ನೇಮಕಾತಿ ಮಾಡಿ ಸರ್ವ ಶ್ರೇಷ್ಠ ಆಸ್ಪತ್ರೆ ಎಂದು ಮುಂದೆ ಬಂದಿದೆ. ನಮ್ಮ ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಇರಲಿಲ್ಲ. ವೈದ್ಯರ ನೇಮಕ ಮಾಡಿ ಮೂಲಭೂತ ಸೌಕರ್ಯ ಕಲ್ಪಿಸತಕ್ಕಂತಹ ಪ್ರತಿಯೊಂದು ಆರೋಗ್ಯ ಕೇಂದ್ರಗಳಿಗೆ ಕೂಡ ಒಂದು ಸಣ್ಣ ಕಟ್ಟಡವನ್ನು ಒದಗಿಸುವ ಕೆಲಸ ನಡೆದಿದೆ. ಇಲ್ಲವೆಂದು ಹೇಳುವವರು ಯಾರಿದ್ದಾರೆ, ನಿಮ್ಮ ಕಡೆ ಒಂದೊಂದು ಕ್ಷೇತ್ರದಲ್ಲಿ ಆಗಿರಲಿಕ್ಕೆ ಇಲ್ಲ. ನಾನು ಇಲ್ಲವೆಂದು ಹೇಳುವವರು ಯಾರಿದ್ದಾರೆ, ನಿಮ್ಮ ಕಡೆ ಒಂದೊಂದು ಕ್ಷೇತ್ರದಲ್ಲಿ ಆಗಿರಲಿಕ್ಕೆ ಇಲ್ಲ. ನಾನು ಇಲ್ಲವೆಂದು ಹೇಳುವುದಿಲ್ಲ. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ನನಗೆ ಬಂದ ಮಾಹಿತಿ ಪ್ರಕಾರ ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸುವ್ಯವಸ್ಥಿತವಾದ ಕಟ್ಟಡ, ಅದಕ್ಕೆ ಬೇಕಾದ ವೈದ್ಯರನ್ನು

ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಗ್ರಾಮೀಣ ಜನರ ಆರೋಗ್ಯದ ಹಿತದೃಷ್ಟಿಯನ್ನು ನಮ್ಮ ಸರ್ಕಾರ ಕಾಪಾಡಿಕೊಂಡು ಬಂದಿದೆ. ಮುಖ್ಯವಾಗಿ ಎಷ್ಟೋ ಸಾರಿ ನಾವು ಹೇಳಿದ್ದೇವೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ, ಜಿಲ್ಲಾ ಆಸ್ಪತ್ರೆಗಳಿಗೆ ಸಂದರ್ಶಕ ಸಮಿತಿ ಮಾಡಿ ಎಂದು ಹೇಳಿದ್ದೆವು, ನಿಮ್ಮ ಕಾಲದಲ್ಲಿ ಸಂದರ್ಶಕ ಸಮಿತಿಗಳನ್ನು ಮಾಡಿಲಿಲ್ಲ. ಇವತ್ತು ನಾವು ಸಂದರ್ಶಕ ಸಮಿತಿಯನ್ನು ಮಾಡಿ ಪ್ರತಿ ತಿಂಗಳು ಸಂದರ್ಶಕ ಸಮಿತಿಯಲ್ಲಿ ಕೂತು ಆಸ್ಪತ್ರೆಯ ಕೆಲಸ ಕಾರ್ಯಗಳಲ್ಲಿ ನಾವೂ ಕೂಡ ನಮ್ಮನ್ನು ಕೂಲಂಕಷವಾಗಿ ತೊಡಗಿಸಿಕೊಳ್ಳುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಇರಲಿ, ಅಥವಾ ಇವತ್ತು ಸಾಕ್ಷರತಾ ಅಭಿಯಾನ ಇರಲಿ, ಅದರಲ್ಲಿ ಕೂಡ ಸಾಕಷ್ಟು ಕೆಲಸವನ್ನು ಮಾಡುವ ಇಚ್ಛಾಶಕ್ತಿಯನ್ನು ನಮ್ಮ ಸರ್ಕಾರ ಪ್ರದರ್ಶಿಸಿದೆ. ಬಹಳ ವರ್ಷಗಳ ಬೇಡಿಕೆಯಾದ ವಾಲ್ಮೀಕಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಬಗ್ಗೆ 15 ಲಕ್ಷ ರೂಪಾಯಿಗಳನ್ನು ನಿಗಧಿಗೊಳಿಸುವುದರ ಬಗ್ಗೆ ಇವರೆಲ್ಲಾ ಹೊಗಳಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಹೊಗಳಿದ್ದು ಬಹಳ ಜಾಸ್ತಿ, ತೆಗಳಿದ್ದು ಬಹಳ ಕಡಿಮೆ. ಮಾನ್ಯ ಸದಾನಂದಗೌಡರು ಮೊಸರಿನಲ್ಲಿ ಕಲ್ಲು ಹುಡುಕುವ ಪ್ರಯತ್ನ ಮಾಡುತ್ತಿರಬಹುದು, ಇಲ್ಲವೆಂದು ಹೇಳುವುದಿಲ್ಲ. ಮೊಸರಿನಲ್ಲಿ ಕಲ್ಲು ಹುಕುಕಬೇಕೇ ವಿನ: ಮುಂಗಡಪತ್ರದಲ್ಲಿ ವಿರೋಧಕ್ಕಾಗಿ ವಿರೋಧ ಮಾಡುವ ಉದ್ದೇಶ ಬಳಸಬೇಕೇ ವಿನಃ ರಚನಾತ್ಮಕವಾದ ಟೀಕೆ ಮಾಡುವ ಯಾವುದೇ ಅಂಶವೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಜಲ ನಿರ್ಮಲ ಯೋಜನೆ ಕಾರ್ಯಕ್ರಮಕ್ಕೆ 61 ಕೋಟಿ ರೂಪಾಯಿಗಳನ್ನು ನಿಗದಿಪಡಿಸತಕ್ಕಂತಹ ಕಾರ್ಯಕ್ರಮವನ್ನು ಮುಂಗಡಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಈ ಯೋಜನೆಯ ಅನುಷ್ಠಾನಕ್ಕೆ ಕೂಡ ಇದು ಸಮುದಾಯದ ಕೊಡುಗೆಯಾಗಿ 224 ಕೋಟಿ ರೂಪಾಯಿಗಳನ್ನು ಮುಂದಿನ ಆರು ವರ್ಷಗಳಲ್ಲಿ ನಿರೀಕ್ಷಿಸಿದ್ದೇವೆ.

ಮೂಲಭೂತವಾದ ಕಾರ್ಯಕ್ರಮವನ್ನು ಯೋಜನೆಯನ್ನು ಗ್ರಾಮೀಣ ನೈರ್ಮಲ್ಯ ಮತ್ತು ನೀರು ಪೂರೈಕೆ ಕಾರ್ಯಕ್ರಮಕ್ಕೆ ಇಟ್ಟುಕೊಂಡಿದ್ದೇವೆ. ಗ್ರಾಮೀಣಾಭಿವೃದ್ಧಿಯಲ್ಲಿ ಕುಡಿಯುವ ನೀರಿನ ಆದ್ಯತೆಗೋಸ್ಕರ ಕೆಲಸ ನಡೆದಿದೆ. ಇವತ್ತು ರಸ್ತೆಗಳ ಅಭಿವೃದ್ಧಿ ಬಗ್ಗೆ ಹೇಳಬೇಕೆಂದರೆ ಹಿಂದೆ ಎಂದೂ ಕಾಣದಷ್ಟು ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮ ನಡೆದಿದೆ. ನಮ್ಮಲ್ಲಿ ಕಾಂಕ್ರೀಟ್ ರಸ್ತೆಗಳು ಮಾಡಿದ್ದೇವೆ. ನಬಾರ್ಡ್‌ದಿಂದ ಬೇಕಾದಷ್ಟು ಹೊಸ ರಸ್ತೆಗಳನ್ನು ಮಾಡಿದ್ದೇವೆ. ನನ್ನ ಒಂದು ಕ್ಷೇತ್ರದಲ್ಲಿ 18 ಕಿ.ಮೀ. ನಷ್ಟು ಹೊಸ ರಸ್ತೆಗಳನ್ನು ಕಳೆದ ಎರಡು ವರ್ಷಗಳಲ್ಲಿ ನಬ್ರ್ಡ್ ಸಹಯೋಗದಲ್ಲಿ ಮಾಡಿದ್ದೇವೆ. ಗ್ರಾಮೀಣ ಮಟ್ಟದಲ್ಲಾಗಲಿ, ರಸ್ತೆಗಳ ಅಭಿವೃದ್ದಿಗೆ ರಾಜ್ಯ ಸರ್ಕಾರ ಏನೂ ಮಾಡಲಿಲ್ಲವೆಂಬ ಟೀಕೆ ಏನಿದೆ ಅದಕ್ಕೆ ಏನು ಅರ್ಥ ಉಳಿಯಿತು. ರಾಜಕೀಯ ಇಚ್ಛಾಶಕ್ತಿ ಇದ್ದೇ ಇದೆ ಎಂದು ಹೇಳುತ್ತಿದ್ದೇನೆ. ಇವತ್ತು ಪ್ರಯಾಣಿಕರಿಗೆ ಹೆಚ್ಚು ಸೌಕರ್ಯ ಕಲ್ಪಿಸುವುದಕ್ಕಾಗಿ ನೂತನ ಡಿಪ್ರೋಗಳು, ಶೌಚಾಲಯ ನಿರ್ಮಾಣ ವಿವಿಧ ಕಡೆ ಬಸ್ ನಿಲ್ದಾಣಗಳನ್ನು ನಿರ್ಮಿಸುವುದು, ಇಂಟರ್‌ನೆಟ್ ಮತ್ತು ಖಾಸಗಿ ಏಜೆಂಟ್ ಗಳ ಮೂಲಕ ಸೀಟು ಕಾದಿರಿಸುವ ವ್ಯವಸ್ಥೆಯನ್ನು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮಾಡಿದೆ, ಹಾಗೂ ಪ್ರಯಾಣಿಕರ ಬಗ್ಗೆ ಸಾಕಷ್ಟು ಕಾಳಜಿಯನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ ಎಂದು ಹೇಳುತ್ತಿದ್ದೇನೆ. ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಕೈಗೊಂಡ ಪಡಿತರ ಚೀಟಿ ಕಂಪ್ಯೂಟರೀಕರಣದ ಯಶಸ್ಸಿನ ಬಗ್ಗೆ

ಏನು ಹೇಳುತ್ತೀರಿ? ನೀವು ಉಪಯುಕ್ತವಾದ ಸಲಹೆಗಳನ್ನು ಕೊಡಿ, ಲೋಪದೋಷಗಳಿದ್ದರೆ ಆ ಲೋಪದೋಷಗಳನ್ನು ತಿದ್ದುಪಡಿಗೊಳಿಸೋಣ. ಪಯಲೀಟ್ ಪ್ರಾಜೆಕ್ಟಾಗಿ ಬೈಲಹೊಂಗಲ ತಾಲ್ಲೂಕಿನಲ್ಲಿ ಮಾಡಿರತಕ್ಕಂತಹ ಪಡಿತರ ಚೀಟಿಗಳ ಕಂಪ್ಯೂಟರೀಕರಣದಲ್ಲಿ ಏನು ಯಶಸ್ಸನ್ನು ನಾವು ನಿರೀಕ್ಷಿಸಿದ್ದೇವೆ, ಅದನ್ನು ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುವುದಕ್ಕೋಸ್ಕರ ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡೋಣ. ಅದಕ್ಕೆ ಏನಾದರೂ ನಿಮ್ಮ ಸಲಹೆ ಇದ್ದರೆ ಕೊಡಿ. ಭ್ರಷ್ಟಾಚಾರ ನಿಗ್ರಹ ಆಗಬೇಕೆನ್ನುವ ರಾಜಕೀಯ ಇಚ್ಛಾಶಕ್ತಿ ಪ್ರಕಟಿಸಿ ನಕಲಿ ಛಾಪಾ ಕಾಗದದ ಬಗ್ಗೆ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಕಾರ್ಯಕ್ರಮ ಏನಿದೆ ಅದು ನಮ್ಮ ಸರ್ಕಾರ ಯಾವುದೇ ರೀತಿಯಲ್ಲಿ ಭ್ರಷ್ಟಾಚಾರ ನಿಗ್ರಹಕ್ಕೆ ಒತ್ತು ಕೊಡುತ್ತದೆ. ಪಾರದರ್ಶಕತೆಗೆ ನಮ್ಮ ನಿಲುವು ಖಂಡಿತವಾಗಿ ಇದೆ ಎಂದು ತೋರಿಸುವುದಕ್ಕಾಗಿ ನಕಲಿ ಛಾಪಾ ಕಾಗದದ ಚಲಾವಣೆ ತೊಡೆದು ಹಾಕುವುದಕ್ಕೆ ಮುಂದಿನ ವರ್ಷದಿಂದ ಛಾಪಾ ಕಾಗದದ ಬಳಕೆಯನ್ನು ರದ್ದುಪಡಿಸುವ ಉದ್ದೇಶವನ್ನು ಸಾರಿದ್ದಾರೆ. ಇದು ಕ್ರಾಂತಿಕಾರಕವಾದ ಕಾರ್ಯಕ್ರಮ ಅಲ್ಲವೇ? ಯಾವಾಗ ನಕಲಿ ಛಾಪಾ ಕಾಗದದ ಹಗರಣ ಆಯಿತು, ಅದರಲ್ಲಿ 10,000 ಕೋಟಿ ರೂಪಾಯಿಗಳಷ್ಟು ಅನ್ಯಾಯವಾಗಿದೆ ಎಂದು ಇಲ್ಲಿ ಬೇಕಾದಷ್ಟು ಚರ್ಚೆ ನಡೆಯಿತು; ಇಡೀ ಸದನ ಕಿಡ್‌ನ್ಯಾಪ್ ಮಾಡಿಕೊಂಡು ಹೋದ ಹಾಗೆ ಈ ಸದನದ ಎಲ್ಲಾ ಕಾರ್ಯಕ್ರಮಗಳನ್ನು ನಕಲಿ ಛಾಪಾ ಕಾಗದದ ಹಿದೆ ಹಾಕಿಬಿಟ್ಟರು. ಸರ್ಕಾರದ ಇಚ್ಛಾಶಕ್ತಿ ಇದ್ದುದರಿಂದ ನಮ್ಮ ಗೃಹ ಇಲಾಖೆಯ ಅಧಿಕಾರಿಗಳ ಮೂಲಕ ನಕಲಿ ಛಾಪಾ ಕಾಗದದ ಹಗರಣವನ್ನು ಪತ್ತೆ ಹಚ್ಚಿದ್ದು; ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲದಿದ್ದರೆ ಅದನ್ನು ಮುಚ್ಚಿಬಿಡಬಹುದಿತ್ತು, ಮುಚ್ಚಿ ಇಡಲಿಲ್ಲ. ನಾವು ಆ ಬಗ್ಗೆ ತನಿಖೆ ಮಾಡಿದ್ದೇವೆ. ತನಿಖೆ ಮಾಡುವುದು ಮಾತ್ರವಲ್ಲದೆ, ರಾಜ್ಯಪಾಲರ ಭಾಷಣದಲ್ಲಿ ಅದಕ್ಕೆ ವಿಶೇಷ ನ್ಯಾಯಾಲಯವನ್ನು ರಚಿಸುವ ಇಚ್ಛಾಶಕ್ತಿ ಪ್ರದರ್ಶಿಸಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಈ ನಕಲಿ ಛಾಪಾ ಕಾಗದ ಹಗರಣಗಳು ಆಗಬಾರದು ಎನ್ನುವ ಉದ್ದೇಶದಿಂದ ನಕಲಿ ಛಾಪಾ ಕಾಗದದ ಪ್ರಿಂಟ್ ಮಾಡಿಸುವುದನ್ನು ನಿಲ್ಲಿಸುವಂತಹ ವಿಚಾರವನ್ನು ಹೇಳಿದ್ದಾರೆ. ಅಷ್ಟೇ ಅಲ್ಲದೆ ಜನರಿಗೆ ಸುಲಭವಾಗುವುದಕ್ಕೋಸ್ಕರ ಸ್ಟ್ಯಾಂಪ್ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಅಥವಾ ಖಜಾನೆ ಚಲನ್ ಮೂಲಕ ಪಾವತಿಸುವಂತಹ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಇವತ್ತು ಟ್ಯಾಕ್ಸ್ ಕಲೆಕ್ಷನ್ ಏನಿದೆ, ಬ್ಯಾಂಕುಗಳ ಮೂಲಕ ಟ್ಯಾಕ್ಸ್ ಕಲೆಕ್ಷನ್ ಮಾಡುವ ಕಾರ್ಯಕ್ರಮ ಈ ಮುಂಗಡ ಪತ್ರದಲ್ಲಿ ಪ್ರಕಟವಾಗಿದೆ. ಇದು ಕ್ರಾಂತಿಕಾರಕವಾದ ಬದಲಾವಣೆ ಅಲ್ಲವೇ? ಅದರ ಬಗ್ಗೆ ನೀವು ಏನು ಹೇಳುತ್ತೀರಿ? ಆಡಳಿತ ವೆಚ್ಚ ನಿಯಂತ್ರಿಸುವುದು, ಆಡಳಿತದಲ್ಲಿ ಸುಧಾರಣೆ ತರಬೇಕು, ಆಡಳಿತವನ್ನು ಸುವ್ಯವಸ್ಥಿತ ಹದ್ದುಬಸ್ತಿಗೆ ತರಬೇಕೆನ್ನುವ ಇಚ್ಛಾಶಕ್ತಿಯನ್ನು ನೋಡುವುದಾದರೆ, ಇವತ್ತು ಆಡಳಿತ ಸುಧಾರಣಾ ಆಯೋಗವನ್ನು ಸ್ಥಾಪಿಸುವುದು ಮಾತ್ರವಲ್ಲದೆ, ಅದರ ಶಿಫಾರಸ್ಸಿನ ಅನ್ವಯ ಪ್ರತಿ ಐದು ವರ್ಷಗಳ ಬದಲಿಗೆ ಪ್ರತಿ 10 ವರ್ಷಗಳಿಗೊಮ್ಮೆ ವೇತನ ಆಯೋಗ ರಚನೆ ಮಾಡುವುದು ಎಂದು ಹೇಳಿದ್ದಾರೆ. ಇದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಸರ್ಕಾರೀ ನೌಕರರಿಗೆ ಕೇಂದ್ರ ಸರ್ಕಾರದವರು ಯಾವ ರೀತಿ ಅವರಿಗೆ ಸ್ವಯಂ ನಿವೃತ್ತಿ ಯೋಜನೆ ಘೋಷಿಸಿದ್ದಾರೆ ಅದೇ ರೀತಿಯಲ್ಲಿ ರಾಜ್ಯ ಸರ್ಕಾರದಲ್ಲಿ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಇಷ್ಟೇ ಅಲ್ಲದೆ ಆಡಳಿತ ಮಟ್ಟದಲ್ಲಿ ಗುಣಮಟ್ಟ ಸುಧಾರಿಸಲಿಕ್ಕೆ ದಕ್ಷತಾ ಮಟ್ಟ ಗುರುತಿಸುವ

ಪರೀಕ್ಷೆ ಜಾರಿಗೊಳಿಸುವುದು; ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಲೋಪದೋಷಗಳು ಇರಬಹುದು, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದೆ ಎಂದು ಕಂಡುಬಂದರೆ, ಅದಕ್ಕೆ ನೀವು ಸಲಹೆ ಕೊಡಿ. ಸುಮ್ಮನೆ ವಿರೋಧಕ್ಕಾಗಿ ವಿರೋಧ ಮಾಡಿಕೊಂಡು ಹೋಗಿ ಇದನ್ನು ವಿರೋಧಿಸುತ್ತೇವೆಂದು ಹೇಳಿದರೆ ಹೇಗೆ? ಈ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುವಾಗ ಇಂತಹ ಲೋಪದೋಷಗಳು ಆಗಬಹುದು ಎಂಬ ಅನಿಸಿಕೆ ನಿಮ್ಮಲ್ಲಿ ಇದೆ, ಇದನ್ನು ಈ ರೀತಿಯಲ್ಲಿ ತಿದ್ದುಪಡಿ ಮಾಡಿ ಎಂದು ಹೇಳಿದ್ದರೆ ನಮಗೆ ಸಂತೋಷವಾಗುತ್ತಿತ್ತು. ಸರ್ಕಾರ ಮುಂದೆ ರೂಪಿಸಲಿರುವ ನಿಯಮಗಳಿಗನುಸಾರವಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಿಕ್ಕೆ ಇಲಾಖೆಗಳಿಗೆ ಉತ್ತೇಜಿಸಲಾಗುವುದು. ಇದರಲ್ಲಿ ಸರ್ಕಾರದ ಇಚ್ಛಾಶಕ್ತಿ ಏನಿದೆ ಎಂದು ಗೊತ್ತಾಗುವುದಿಲ್ಲವಾ?

ಇದರ ಬಗ್ಗೆ ನೀವು ಏಕೆ ಮಾತನಾಡುವುದಿಲ್ಲ? ವಿಳಂಬವನ್ನು ತಡೆಗಟ್ಟಲು ಆಡಳಿತವನ್ನು ಹೆಚ್ಚು ಪ್ರತಿಸ್ಪಂದನಗೊಳಿಸಲು ಅನುವಾಗುವಂತೆ ಕೆಲವು ಆಯ್ದ ಇಲಾಖೆಗಳ ಆಯುಕ್ತರುಗಳನ್ನು ಸರ್ಕಾರದ ವಿಶೇಷ ಕಾರ್ಯದರ್ಶಿಗಳಾಗಿ ನೇಮಿಸಲು ಉದ್ದೇಶಿಸಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದ್ದಾರೆ. ಇದು ಏನನ್ನು ತೋರಿಸುತ್ತದೆ? ಈ ರಾಜ್ಯದ ಜನತೆಗೆ ಏನನ್ನು ನಮ್ಮ ಸರ್ಕಾರ ಕೊಡುತ್ತದೆ ಎಂಬ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕೆಂದು ಅವರಲ್ಲಿ ಕಳಕಳಿಯಿಂದ ಹೇಳಬಯಸುತ್ತೇನೆ. ಈ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ತೆರಿಗೆ ಸರಳೀಕರಣದ ಬಗ್ಗೆ ಸರ್ಕಾರ ತೆಗೆದುಕೊಂಡ ನೀತಿಯನ್ನು ನಾವು ಬಹುವಾಗಿ ಪ್ರಶಂಸಿಸಬೇಕಾಗುತ್ತದೆ. ಶೇಕಡ 10ರ ತೆರಿಗೆ ದರವನ್ನು ರದ್ದುಗೊಳಿಸಿ ಬಹುತೇಕ ಸರಕುಗಳಿಗೆ ಪುನಃ 2-4-8-12 ರಂತೆ ತೆರಿಗೆ ಮರು ವಿಂಗಡಿಸಿ ಈ ಮೂಲಕ ಎಷ್ಟು ಸಾಧ್ಯ ಅಷ್ಟು ತೆರಿಗೆ ಕಡಿಮೆ ಮಾಡುವುದಕ್ಕೆ ಒಂದು ಪ್ರಯತ್ನವನ್ನು ಈ ಮುಂಗಡಪತ್ರದಲ್ಲಿ ನಾವು ಕಾಣುತ್ತಿದ್ದೇವೆ. ಇದರಲ್ಲಿ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಆದ ಗೋಧಿ ಹಿಟ್ಟು, ಮೈದ, ರವೆ, ಒಣಮೆಣಸಿನಕಾಯಿ, ಛತ್ರಿ, ಸೌದೆ, ಇದ್ದಿಲು, ತೆಂಗಿನ ನಾರಿನ ಉತ್ಪನ್ನ, ಟೂತ್‌ಪೇಸ್ಟ್, ಟೂತ್ ಪೌಡರ್, ಇವು ಯಾರ ಸಾಮಾನುಗಳು? ಇವು ಬಡವರಿಗೆ ಬೇಕಾಗುವ ಸಾಮಾನುಗಳು; ಇದರಲ್ಲಿ ಯಾವುದೇ ಮೂಲ ತೆರಿಗೆ ಬದಲಾವಣೆ ಮಾಡಲಿಲ್ಲ. ಅದನ್ನು ಯಾವುದೇ ರೀತಿಯಲ್ಲಿ ಬದಲಾಯಿಸಲಿಲ್ಲ.

4.20 ಪಿ.ಎಂ.

ರಾಸಾಯಮಿಕ ಗೊಬ್ಬರಗಳು, ಕೀಟನಾಶಕಗಳು, ಟ್ರ್ಯಾಕ್ಟರ್ ಸಹಿತ ಕೃಷಿ ಉಪಕರಣಗಳಿಗೆ ಇರತಕ್ಕಂಥ ತೆರಿಗೆಯನ್ನು ಕಡಿಮೆ ಮಾಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ನೀವ್ಯಾರೂ ಮಾತನಾಡುತ್ತಾ ಇಲ್ಲ. ತೆರಿಗೆ 8 ಪರ್ಸೆಂಟ್ ಇದ್ದದ್ದನ್ನು 4 ಪರ್ಸೆಂಟ್‌ಗೆ ಮತ್ತು 4 ಪರ್ಸೆಂಟ್ ಇದ್ದದ್ದನ್ನು 2 ಪರ್ಸೆಂಟ್‌ಗೆ ತೆರಿಗೆ ಇಳಿಸಿರುವ ಬಗ್ಗೆ ತಾವು ಸ್ವಲ್ಪ ಹೇಳಿ. ಅದೇ ರೀತಿ ತೆರಿಗೆ ಜಾಸ್ತಿ ಮಾಡಿರುವಲ್ಲಿ 12 ಪರ್ಸೆಂಟ್ ಇದ್ದುದ್ದನ್ನು 15 ಪರ್ಸೆಂಟ್ ಮಾಡಿರುವ ಬಗ್ಗೆ, 10 ಪರ್ಸೆಂಟ್ ಇದ್ದದ್ದನ್ನು 12 ಪರ್ಸೆಂಟ್ ಮಾಡಿರುವ ಬಗ್ಗೆ ಮಾತನಾಡಿ. ಯಾವ ರೀತಿಯಲ್ಲಿ ತೆರಿಗೆಯನ್ನು ಹೆಚ್ಚು ಮಾಡಲಾಯಿತು ಎನ್ನುವ ಬಗ್ಗೆ ನೀವು ಹೇಳಬಹುದು. ಅದಕ್ಕೆ ಸರಿಯಾದ ಕಾರಣಗಳನ್ನು ಕೂಡ ಸರ್ಕಾರ ಕೊಡುತ್ತದೆ. ಇನ್ನು ಮಧ್ಯಂತರ ತನಿಖಾ ಠಾಣಾಗಳ ರದ್ಧತಿ ಬಗ್ಗೆ ಹೇಳುವುದಾದರೆ ಶಿರಾ ಗೇಟ್‌ನಲ್ಲಿ, ಚಾರ್ಮಾಡಿ ಗೇಟ್‌ನಲ್ಲಿ, ಶ್ರೀರಂಗಪಟ್ಟಣದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ಕೆಲವು ಠಾಣೆಗಳಿವೆ, ಅದರಲ್ಲಿ ಯಾವ ಪ್ರಯೋಜನವೂ

ಆಗುವುದಿಲ್ಲ, ಇದರಿಂದ ಉದ್ಭವಿಸುತ್ತಿದ್ದ ಸಮಸ್ಯೆಗಳನ್ನು ಗಂಭೀರ ಸಮಸ್ಯೆಗಳೆಂದು ತಿಳಿದು ಇಂಥ ತನಿಖಾ ಠಾಣೆಗಳನ್ನೇ ರದ್ಧತಿ ಮಾಡುವುದೊಂದಿಗೆ ಮತ್ತು ಇನ್ನು ಮುಂದೆ ಬ್ಯಾಂಕ್‌ಗಳ ಮೂಲಕ ತೆರಿಗೆ ಸಂಗ್ರಹಣೆ ಮಾಡುವ ನಿಟ್ಟಿನಲ್ಲಿ ಇವೊತ್ತು ರಿಸರ್ವ್ ಬ್ಯಾಂಕ್‌ನೊಂದಿಗೆ ಸಂಪರ್ಕ ಬೆಳಸಿ ಜನ ಸಾಮಾನ್ಯರು ತೆರಿಗೆಯನ್ನು ಕಟ್ಟುವುದಕ್ಕೆ ಅನುಕೂಲ ಆಗುವ ರೀತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ತೆರಿಗೆಯನ್ನು ಕಟ್ಟುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಮೂಲಕ ಜನ ಸಾಮಾನ್ಯರಿಗೆ ಸರ್ಕಾರ ಸಹಾಯ ಮಾಡಿದೆಯೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಸ್ಟ್ರಿಂಕ್ಲರ್ ಮತ್ತು ಹನಿ ನೀರಾವರಿ ಸಾಧನಗಳ ಮೇಲಿನ ಮಾರಾಟ ತೆರಿಗೆಯನ್ನು ರದ್ದುಗೊಳಿಸಿ ಇಂದು ಕೃಷಿಗೆ ಆದ್ಯತೆಯನ್ನು ಕೊಡಲಾಗಿದೆ. ಇದೇ ರೀತಿ ಕ್ಯಾನ್ಸರ್, ಏಡ್ಸ್, ಮೂತ್ರಪಿಂಡ ರೋಗಗಳ ಚಿಕಿತ್ಸೆಗೆ ಬಳಸುವ ಔಷಧಿಗಳ ಮೇಲೆ ತೆರಿಗೆ ವಿನಾಯಿತಿಯನ್ನು ಮುಂದುವರೆಸಲು ಪ್ರಸ್ತಾಪಿಸಿ ತಮ್ಮ ಮುಂದೆ ಇಟ್ಟಿದ್ದಾರೆ. ಮೂರ್ಛೆ ರೋಗ ಚಿಕಿತ್ಸೆಯಲ್ಲಿ ಕೆಲವು ನಿರ್ದಿಷ್ಟ ಔಷಧಿಗಳಿಗೆ ತೆರಿಗೆ ವಿನಾಯಿತಿಯಂಥವುಗಳನ್ನು ಘೋಷಿಸಿದ್ದಾರೆ. ಆರೋಗ್ಯದ ದೃಷ್ಟಿಯಿಂದ ನೋಡುವುದಾದರೆ, ನಮ್ಮ ಜನ ಇಂದು ವಿವಿಧ ರೋಗರುಜಿನಗಳಿಗೆ ಬಲಿಯಾಗುತ್ತಿದ್ದಾರೆ. ರಾಜ್ಯದಲ್ಲಿ ಏಡ್ಸ್ ರೋಗ ಬಹಳ ವೇಗವಾಗಿ ಹಬ್ಬುತ್ತಿದೆ; ಅದರಲ್ಲೂ ಧಾರವಾಡ ಜಿಲ್ಲೆ ಪ್ರಥಮ ಜಿಲ್ಲೆಯಾಗಿ ಬಂದಿದೆ ಮತ್ತು ಬೆಂಗಳೂರು ಜಿಲ್ಲೆ ದ್ವಿತೀಯ ಸ್ಥಾನದಲ್ಲಿದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಸಭಾಪತಿಯವರೆ, ಪುಟ 93ರ 193ನೇಯದ್ದನ್ನು ಸ್ವಲ್ಪ ಓದಿ. ಅದರಲ್ಲಿ ಟ್ಯಾಕ್ಸ್ ಇದೆಯೋ ಇಲ್ಲವೋ ಎಂಬ ಬಗ್ಗೆ ಹೇಳಿ. ಟ್ಯಾಕ್ಸ್ ತೆಗೆಯುತ್ತೇವೆಂದು ಮೊದಲು ಹೇಳಿದ್ದಾರೆ, ಆದರೆ ಇಲ್ಲಿ 4 ಪರ್ಸೆಂಟ್ ಟ್ಯಾಕ್ಸ್ ಇಟ್ಟಿದ್ದಾರೆ. ಕೃಷಿ ಮತ್ತು ತೋಟಗಾರಿಕಾ ಕಾರ್ಯಕ್ಕಾಗಿ ಉಪಯೋಗಿಸುವ ಸ್ಟ್ರಿಂಕ್ಲರ್ಸ್ ಮತ್ತು ಡ್ರಿಪ್ ಇರಿಗೇಶನ್ ಉಪಕರಣಗಳಿಗೆ 4 ಪರ್ಸೆಂಟ್ ಟ್ಯಾಕ್ಸ್ ಎಂದು ಇದೆ. ಟ್ಯಾಕ್ಸ್ ಏನೂ ಇಲ್ಲವೇ ಇಲ್ಲ ಎಂದು ಹೇಳಿ ಇಲ್ಲಿ 4 ಪರ್ಸೆಂಟ್ ಟ್ಯಾಕ್ಸ್ ಇಟ್ಟಿದ್ದೀರಿ. ನಮ್ಮ ನಾಯಕರಿಗೂ ಕೂಡ ಆ ವಿಷಯದಲ್ಲಿ ಮೋಸವಾಗಿಬಿಟ್ಟಿತು. ಟ್ಯಾಕ್ಸ್ ತೆಗೆದುಬಿಟ್ಟಿದ್ದಾರೆ ಎಂದು ವರ್ಣನೆ ಮಾಡಿ ಹೇಳಿಬಿಟ್ಟರು. ಆದರೆ ಇಲ್ಲಿ 4 ಪರ್ಸೆಂಟ್ ಟ್ಯಾಕ್ಸ್ ಎಂದು ತಿಳಿಸಿದ್ದಾರೆ. ಇನ್ನು ಬಹಳಷ್ಟು ವಿಚಾರಗಳು ಇವೆ, ನಾವು ಮುಂದೆ ಅವುಗಳ ಬಗ್ಗೆ ಮಾತನಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ:- ಆಯಿತು, ನೀವು ಮಾತನಾಡುವಾಗ ಅದನ್ನು ಹೇಳಿ. ಮಾನ್ಯ ಉಪಾಧ್ಯಕ್ಷರೆ, ಏಡ್ಸ್ ಹಾಗೂ ಇನ್ನಿತರ ಭಯಂಕರ ರೋಗಗಳ ಚಿಕಿತ್ಸಾ ಉಪಕರಣಗಳ ಮೇಲೆ ತೆರಿಗೆ ಕಡಿಮೆ ಮಾಡಬೇಕೆಂದು ಆ ನಿಟ್ಟಿನಲ್ಲಿ ಸರ್ಕಾರ ಕಾಳಜಿ ವಹಿಸಬೇಕೆಂದು ನಾನು ಹೇಳಬಯಸುತ್ತೇನೆ. ಇವೊತ್ತು ಮುಂಬೈನಂಥ ಬೃಹತ್ ನಗರಗಳಲ್ಲಿ ನಮ್ಮ ರಾಜ್ಯದ ಅನೇಕರು ಹೋಟೆಲ್ ಕಾರ್ಮಿಕರಾಗಿ, ಬಸ್ ಕಾರ್ಮಿಕರಾಗಿ ಮತ್ತು ಲಾರಿ ಕಾರ್ಮಿಕರಾಗಿ ಅಲ್ಲಿ ದುಡಿಯುತ್ತಿರುವವರಲ್ಲಿ ಕೆಲವರು ಅಲ್ಲಿ ಯಾವ ಯಾವುದೋ ರೋಗಕ್ಕೆ ತುತ್ತಾಗಿರುತ್ತಾರೆ. ಇವರುಗಳು ಅಂಥ ನಗರಗಳಲ್ಲಿ ಸಂಪಾದನೆ ಮಾಡುವ ಕಾಲದಲ್ಲಿ ನಮ್ಮ ರಾಜ್ಯದಲ್ಲಿರುವ ಅವರ ಕುಟುಂಬಗಳವರು ಅವರನ್ನೇ ಆಧಾರವಾಗಿ ನಂಬಿರುತ್ತಾರೆ. ಆದರೆ ಆತನಿಗೆ ಏಡ್ಸ್ ಬಂದು ಮನೆಗೆ ಬಂದರೆ ಆತನನ್ನು ಮುಟ್ಟುವುದಕ್ಕೂ ಅವರ ಕುಟುಂಬದವರೇ ಹತ್ತಿರ ಹೋಗುವುದಿಲ್ಲ.

ಅವನು ಸಂಪಾದನೆ ಮಾಡುವ ಕಾಲದಲ್ಲಿ ಊರಿಗೆ ಬರುತ್ತಾನೆ ಎಂದರೆ ಬೇಕಾದರೆ ಬಸ್ ಸ್ಟ್ಯಾಂಡ್ ಗೆ ಹೋಗಿ ಕರೆದುಕೊಂಡು ಬರುತ್ತಾರೆ. ಆದರೆ ಆತ ಏನೋ ಒಂದು ರೋಗಕ್ಕೆ ತುತ್ತಾದಾಗ ಅವರ ಕುಟುಂಬದವರ ಕಡೆಯಿಂದಲೇ ಮಾನವೀಯತೆಯ ದೃಷ್ಟಿ ಕೂಡ ಇರುವುದಿಲ್ಲ. ಆದುದರಿಂದ ಇಂಥ ಒಂದು ಭೀಕರ ವ್ಯಾಧಿಯನ್ನು ನಿಗ್ರಹಿಸತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ದೊಡ್ಡ ಮನಸ್ಸಿನಿಂದ ಹಾಕಿಕೊಂಡಿರುವುದಕ್ಕೆ ನಾನು ಅಭಾರಿಯಾಗಿದ್ದೇನೆ. ಇದರ ಜೊತೆಗೆ ಕಂಪ್ಯೂಟರ್ ಸಾಫ್ಟ್‌ವೇರ್‌ಗೆ ಶೇಕಡ 4 ರಷ್ಟು ತೆರಿಗೆಯನ್ನು ಏನು ವಿಧಿಸಬೇಕೆಂದಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. ಆದರೆ ಅದರಲ್ಲಿ ಒಂದರ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸೂಚನೆ ಕೊಡುತ್ತಿದ್ದೇನೆ. ಕಂಪ್ಯೂಟರ್ ಸಾಫ್ಟ್‌ವೇರ್‌ನ ಮೇಲಿನ ಶೇಕಡ 4ರ ತೆರಿಗೆ ದರವನ್ನು ಸೇಕಡ ಎರಡಕ್ಕಾದರೂ ಇಳಿಸಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಸಾಫ್ಟ್‌ವೇರ್ ಡೆವಲಪ್‌ಮೆಂಟ್‌ಗೆ ನಾವು ಇನ್ನಷ್ಟು ಆದ್ಯತೆಯನ್ನು ಕೊಡಬೇಕಾಗಿದೆ. ಸಾಫ್ಟ್‌ವೇರ್‌ನ ಬಗ್ಗೆ ಅನೇಕ ಮಂದಿಗೆ ಇನ್ನೂ ಮಾಹಿತಿ ಲಭ್ಯವಾಗಿಲ್ಲ. ಯಾವ ರೀತಿಯಲ್ಲಿ ನೀವು ಹಾರ್ಡ್‌ವೇರ್‌ಗೆ ಮಹತ್ವ ಕೊಟ್ಟಿದ್ದೀರಿ ಅದೇ ರೀತಿಯಲ್ಲಿ ಸಾಫ್ಟ್‌ವೇರ್‌ಗೂ ಮಹತ್ವ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಕಲ್ಯಾಣ ಮಂಟಪಗಳಿಗೆ ಶೇಕಡ 15ರ ಮನರಂಜನಾ ತೆರಿಗೆ ಈಗಾಗಲೇ ಇದೆ. ಆದರೆ 5000 ರೂಪಾಯಿಗಳು ಮತ್ತು ಅದಕ್ಕಿಂತ ಕಡಿಮೆ ಬಾಡಿಗೆ ಬರುವ ಗ್ರಾಮೀಣ ಕಲ್ಯಾಣ ಮಂಟಪಗಳೇನಿವೆ ಅವಕ್ಕೆ ಶೇಕಡ 15ರ ಮನರಂಜನಾ ತೆರಿಗೆಯಿಂದ ವಿನಾಯಿತಿ ಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಇನ್ನು ಮೀನುಗಾರಿಕಾ ಉದ್ಯಮದಲ್ಲಿ ಮಂಜುಗೆಡ್ಡೆ ಶೀಥಲೀಕರಣ ಕಾರ್ಖಾನೆಗಳು ಇವೆ. ಇಲ್ಲಿ ಮಂಜುಗೆಡ್ಡೆಯನ್ನು ಬಳಸತಕ್ಕಂಥದ್ದಕ್ಕೆ ಶೇಕಡ 15ರ ತೆರಿಗೆ ಹಾಕಲಾಗಿದೆ, ಅದನ್ನು ಶೇಕಡ 4ಕ್ಕೆ ಇಳಿಸಬೇಕೆಂದು ವಿನಂತಿಸುತ್ತೇನೆ. ಏಕೆಂದರೆ ಕೋಸ್ಟಲ್ ಏರಿಯಾದಲ್ಲಿರುವ ಸುಮಾರು 300 ಮಂಜುಗೆಡ್ಡೆ ಶೀಥಲೀಕರಣ ಘಟಕಗಳು ಏನಿವೆ ಅವುಗಳೆಲ್ಲವೂ ಬಹಳ ತೀವ್ರವಾಗಿ ಮತ್ತು ಸಂಪೂರ್ಣವಾಗಿ ಬಹಳ ತೊಂದರೆಯಲ್ಲಿವೆ. ಏಕೆಂದರೆ ಅವರು ಮಾಡಿ ಸಂಪಾದನೆಯನ್ನು ಪೂರ್ಣವಾಗಿ ವಿದ್ಯುತ್ ಪಾವತಿಗಾಗಿಯೇ ಕೊಡಬೇಕಾಗಿದೆ. ವಿದ್ಯುತ್ ದರ ಬಾಕಿಯವರಿಗೆ ಎಷ್ಟು ಇದೆಯೋ ಅಷ್ಟೇ ದರವನ್ನು ಇವರೂ ಕೂಡ ಕಟ್ಟಬೇಕಾಗಿದೆ. ಆದುದರಿಂದ ಐಸ್ ಫ್ಯಾಕ್ಟರಿಯಿಂದ ಬರತಕ್ಕಂಥ ಐಸ್‌ಗೆ ಶೇಕಡ 15ರ ತೆರಿಗೆ ಬದಲಾಗಿ ಶೇಕಡ 4ರ ತೆರಿಗೆ ವಿಧಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಒಟ್ಟಾರೆಯಾಗಿ ಸದನದಲ್ಲಿ ಮಂಡಿಸಿರುವ ಬಜೆಟ್ ಕ್ರಾಂತಿಕಾರಕವಾದ ಬಜೆಟ್ ಆಗಿದೆಯೆಂದು ನಾನು ಹೇಳಬಯಸುತ್ತೇನೆ. ಇನ್ನು ರಾಜ್ಯ ಸರ್ಕಾರ ವ್ಯಾಪಾರಿಗಳಿಗೆ ಅನುಕೂಲವಾಗಲು ಫಾರಂ 39 ಅಬಾಲಿಷ್ ಮಾಡಿ ಭ್ರಷ್ಟಾಚಾರವನ್ನು ನಿಯಂತ್ರಿಸಲು ಸರಳೀಕರಣ ವ್ಯವಸ್ಥೆಯನ್ನು ಮಾಡಿದೆ. ಇದೇ ರೀತಿ ಫಾರ್ಮ್ 32(ಬಿ), ಫಾರ್ಮ್ 37 ಅಬಾಲಿಷ್, ಮಾಡಲಾಗಿದೆ. ಫಾರ್ಮ್ 39 ಅಬಾಲ್ಷ್, ಮಾಡಿದ್ದರಿಂದ ಸುಮಾರು 25 ಸಾವಿರ ಡೀಲರ್‌ಗಳಿಗೆ ಅನುಕೂಲವಾಗಿದೆ. ಅದೇ ರೀತಿಯಲ್ಲಿ ಫಾರ್ಮ್ 32 (ಬಿ)ಯನ್ನು ಅಬಾಲಿಷ್ ಮಾಡಿದ್ದರಿಂದ ಸುಮಾರು ಒಂದೂವರೆ ಲಕ್ಷ ವ್ಯಾಪಾರಿಗಳಿಗೆ ಅನುಕೂಲವಾಗಿದೆ. ಅದೇ ರೀತಿ ಫಾರ್ಮ್ 37 ಅಬಾಲಿಷ್ ಮಾಡಿದ್ದರಿಂದ ಸುಮಾರು 17 ಸಾವಿರ ವ್ಯಾಪಾರಸ್ಥರಿಗೆ ಅನುಕೂಲವಾಗಿದೆ. ಎಲ್ಲದ್ದಕ್ಕಿಂತಲೂ ಓಲ್ಡ್ ಕಾರ್ಡ್ ಸಿಸ್ಟಂನ್ನು ಇಂಟ್ರಡ್ಯೂಸ್ ಮಾಡಿದ್ದರಿಂದಾಗಿ ಸುಮಾರು ಐದು ಸಾವಿರ ಉದ್ದಿಮೆದಾರಿಗೆ ಅನುಕೂಲವಾಗಿದೆ.

ಇವೊತ್ತು ಟರ್ನ್ ಓವರ್ ಟ್ಯಾಕ್ಸ್‌ನಲ್ಲಿ 840 ಕೋಟಿ, ರೂ.ಗಳು ಸೆಸ್‌ನಿಂದ ಬರತಕ್ಕಂಥ 143 ಕೋಟಿ ರೂ.ಗಳು ಹಾಗೂ ಇನ್ನಿತರ ಕಾರ್ಯಕ್ರಮಗಳಿಂದ ಬರತಕ್ಕಂಥ ಸುಮಾರು 200 ಕೋಟಿ ರೂ.ಗಳು ಹೀಗೆ ಇವೆಲ್ಲವೂ ಸೇರಿ ಸುಮಾರು ಒಂದೂವರೆ ಸಾವಿರ ಕೋಟಿ ರೂ. ಕೊರತೆ ಇದ್ದರೂ ಕೂಡ ಆ ಕೊರತೆಯನ್ನು ನೀಗಿಸಿಕೊಂಡು ಒಂದು ವೈಜ್ಞಾನಿಕ ರೀತಿಯಲ್ಲಿ ಈ ಮುಂಗಡ ಪತ್ರದಲ್ಲಿ ಟ್ಯಾಕ್ಸೇಷನ್ ಮಾಡಿ ಆ ಮೂಲಕ ಮುಂದೆ ಬರತಕ್ಕಂಥ ಮೌಲ್ಯ ವರ್ಧಿತ ತೆರಿಗೆಯ ಕಾರ್ಯಕ್ರಮಕ್ಕೆ ಹಂತಹಂತವಾಗಿ ನಮ್ಮ ರಾಜ್ಯದ ಜನತೆಯನ್ನು ಸಿದ್ಧಪಡಿಸುವುದಕ್ಕೆ ನಮ್ಮ ಸರ್ಕಾರ ಈ ಮುಂಗಡಪತ್ರದಲ್ಲಿ ಉತ್ತಮವಾದಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಹೇಳಿ ನಾನು ಈ ಮುಂಗಡ ಪತ್ರಕ್ಕೆ ಬೆಂಬಲವನ್ನು ಸೂಚಿಸುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):- ಮಾನ್ಯ ಉಪಾಧ್ಯಕ್ಷರೆ, ಪ್ರಥಮವಾಗಿ ಮಾನ್ಯ ಸಭಾಪತಿಯವರು ಬಜೆಟ್‌ನ್ನು ಮತ್ತೊಮ್ಮೆ ಸದನದಲ್ಲಿ ಓದಿದ್ದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು ಎರಡೂವರೆ ಗಂಟೆಗಳ ಕಾಲ ಅತ್ಯಂತ ಸ್ಥಿತಪ್ರಜ್ಞರಾಗಿ ಆಯವ್ಯಯ ಭಾಷಣವನ್ನು ಸದನದಲ್ಲಿ ಮಾಡಿದರು. ಪ್ರಾಯಶಃ ಅದನ್ನು ನಾವು ಕೂಡ ಚೆನ್ನಾಗಿ ಕೇಳಿಕೊಳ್ಳುವಂಥ ಪ್ರಯತ್ನವನ್ನು ಮಾಡಿದ್ದೇವೆ. ಈ ಬಜೆಟ್ ಕರ್ನಾಟಕ ರಾಜ್ಯದ ಜನರ ಅಶೋತ್ತರಗಳಿಗೆ ಸ್ಪಂದಿಸದ, ಪರೋಕ್ಷವಾಗಿ ರಾಜ್ಯದ ಅರ್ಥ ವ್ಯವಸ್ಥೆಗೆ ಪೂರಕವಲ್ಲದ ಮತ್ತು ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ಕೊಡದಂತಹ ಬಜೆಟ್ ಇದಾಗಿದೆ ಎಂದು ಪ್ರಾರಂಭದಲ್ಲಿಯೇ ಹೇಳಬೇಕಾಗುತ್ತದೆ. ನಮ್ಮ ಮಿತ್ರ ಸಭಾಪತಿಯವರು ಮಾತನಾಡುವಾಗ ನೀವು ಸಲಹೆ ಹೇಳಿ, ಪ್ರಶ್ನೆ ಕೇಳಿ ಎನ್ನುವಂಥ ಮಾತನ್ನು ನಮಗೆ ಹೇಳಿದ್ದಾರೆ. ಹಲವಾರು ಅಂಕಿಅಂಶಗಳ ಆಧಾರಗಳ ಸಮೇತ ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಹಾಗೂ ಮಾನ್ಯ ಸಿಂಧ್ಯಾರವರು ಸದನದ ಮುಂದೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆಯಾದ ಕಾರಣ ನಾನು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಚಾರವನ್ನು ಸತ್ಯ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಪ್ರಾಯಶಃ ಯೋಜನಾ ಗಾತ್ರಕ್ಕೆ ತಕ್ಕದಾದಂಥ ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವಂಥಾದ್ದರಲ್ಲಿ ರಾಜ್ಯ ವಿಫಲವಾಗಿದೆ. ಕೇಂದ್ರ ಯೋಜನಾ ಆಯೋಗ ಒಂದು ಹೇಳಿಕೆಯನ್ನು ಸರ್ಕಾರಕ್ಕೆ ನೀಡಿ 6 ಸಾವಿರ ಕೋಟಿಗೆ ಯೋಜನಾ ಗಾತ್ರವನ್ನು ನಿಗದಿಪಡಿಸಿ ಎಂದು ಹೇಳಿತ್ತು. ಆದರೂ ಯೋಜನಾ ಗಾತ್ರವನ್ನು 7250 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವ ಪ್ರಸ್ತಾಪವನ್ನು ರಾಜ್ಯ ಸರ್ಕಾರ ಇಟ್ಟಾಗ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆದರೆ ರಾಜ್ಯ ಸರ್ಕಾರ ಏನು ಹೇಳುತ್ತದೆಂದರೆ, ಈ ಯೋಜನಾ ಗಾತ್ರ ಹೆಚ್ಚು ಮಾಡಿದ್ದು ಹೌದು, ಆದರೆ ಯೋಜನಾ ಗಾತ್ರದ ಖೋತಾವನ್ನು ಕೂಡ ಕೇಂದ್ರ ಸರ್ಕಾರವೇ ಭರ್ತಿ ಮಾಡಬೇಕು. ಎಂದು ಹೇಳುವಂತಹ ಮಾತುಗಳ ಮುಖಾಂತರ ಈ ರಾಜ್ಯ ಸರ್ಕಾರದ ಬಜೆಟ್ ವ್ಯತ್ಯಾಸಗಳನ್ನು ಕೇಂದ್ರ ಸರ್ಕಾರದ ಮೇಲೆ ದೋಷಾರೋಪಣ ಮಾಡುವಂತಹ ಒಂದು ಪ್ರಯತ್ನಗಳನ್ನು ಮಾಡಿದೆ. ಇದು ಸರಿಯಲ್ಲವೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ ಕಳೆದ ವರ್ಷ ನಮ್ಮ ಯೋಜನಾ ಗಾತ್ರ 5888 ಕೋಟಿ ರೂಪಾಯಿಗಳಷ್ಟು ಇತ್ತು. ಅದು ಪರಿಷ್ಕೃತ ಆದನಂತರ 5231 ಕೋಟಿ ರೂಪಾಯಿಗಳಿಗೆ ಇಳಿದಿತ್ತು. ಈ ವರ್ಷ

ಶೇಕಡ 40ರಷ್ಟು ಹೆಚ್ಚು ಮಾಡಿದ್ದಾರೆ. ಆದರೂ ಕೂಡ ಯೋಜನಾ ಆಯೋಗ ಅದಕ್ಕೆ ಅನುಮತಿ ನೀಡಿದೆ. ಆದರೆ ನಾನು ರಾಜ್ಯಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ; ಈ ಯೋಜನಾ ಗಾತ್ರಕ್ಕೆ ತಕ್ಕುದಾದಂತಹ ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವಂತಹ ಪ್ರಯತ್ನಗಳನ್ನು ಮಾಡಿದೆಯಾ? ಖಂಡಿತವಾಗಿ ಮಾಡಲಿಲ್ಲ. ವಿವಿಧ ಕ್ಷೇತ್ರಗಳಿಗೆ ನಿಗದಿಪಡಿಸಿದ ಹಣವನ್ನು ವಿವೇಚನೆಯಿಂದ ಆಯಾಯ ಬಾಬುಗಳಿಗೆ ಖರ್ಚು ಮಾಡುವಲ್ಲಿ ಕೂಡ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಬಜೆಟ್ ಪೂರ್ವದಲ್ಲಿ ಸಮಾಲೋಚನೆ ಮಾಡಬೇಕಾಗಿತ್ತು. ಬಹುಶಃ ಇಂತಹ ಒಂದು ಬಜೆಟ್ ಮಂಡನೆ ಆಗುವಂತಹ ಸಂದರ್ಭದಲ್ಲಿ ಬಜೆಟ್ ಪೂರ್ವಕವಾದಂತಹ ಸಮಾಲೋಚನೆ ಎಲ್ಲಾ ವಿಚಾರಗಳಿಗೆ ಒತ್ತುಕೊಟ್ಟು ಈ ಆಯವ್ಯಯವನ್ನು ಯಶಸ್ವಿಯಾಗಿ ಮಾಡುವಂತಹ ಸಂದರ್ಭಗಳು ಇತ್ತು. ಅದು ಆಗಲಿಲ್ಲ. ಅದರ ಹಿನ್ನೆಲೆಯಲ್ಲಿ ಇವತ್ತು ಈ ಒಂದು ಬಜೆಟ್ ಪೂರ್ತಿಯಾಗಿ ಜನರ ಪರವಾಗಿಲ್ಲ.ಅದಕ್ಕೆ ಆ ಸಂಪನ್ಮೂಲ ಕ್ರೋಢೀಕರಣದ ವಿಫಲತೆ ಈ ಬಜೆಟ್‌ನ್ನು ಕಾಡುತ್ತದೆ ಎಂದು ಒತ್ತಿ ಹೇಳವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ 2-3 ಬಾಬ್ತುಗಳಲ್ಲಿ ನಮಗೆ ವಿಶೇಷವಾಗಿ ಸಂಪನ್ಮೂಲ ಕ್ರೋಡೀಕರಣವಾಗುತ್ತದೆ. ಇವತ್ತು ಕರ್ನಾಟಕದಲ್ಲಿ ವಿಶೇಷವಾಗಿ ವಾಣಿಜ್ಯ ತೆರಿಗೆ ಸಂಗ್ರಹಣೆ, ನಮ್ಮ ಬಜೆಟ್‌ಗೆ ಕೊಡುವಂತಹ ಹೆಚ್ಚಿನ ಒತ್ತು; ನಾವು ಇವತ್ತು ಆಲೋಚನೆ ಮಾಡಿ ನೋಡಿದರೆ, ವಾಣಿಜ್ಯ ತೆರಿಗೆ ಸೋರಿಕೆಗಳ ಬಗ್ಗೆ ನಾವು ಪ್ರಶ್ನೆ ಮಾಡಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇದೆ. 6200 ಕೋಟಿ ರೂಪಾಯಿಗಳ ವಾಣಿಜ್ಯ ತೆರಿಗೆ ಕಳೆದ ಸಾಲಿನಲ್ಲಿ ಸಂಗ್ರಹವಾಗಿದೆ ಎಂದು ನಮಗೆ ಗೊತ್ತಿದೆ. ಆದರೆ ನಮ್ಮ ಮಂತ್ರಿಯವರಾದ ಮಾನ್ಯ ಶಿವಣ್ಣನವರು 17 ಪರ್ಸೆಂಟ್ ಹೆಚ್ಚುವರಿ ತೆರಿಗೆ ವಸೂಲು ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದರು. ಅವರು ಹೇಳಿದ ಹಾಗೆ ಸುಮಾರು 17 ಪರ್ಸೆಂಟ್ ಹೆಚ್ಚುವರಿ ವಸೂಲು ಆಗಿದ್ದಿದ್ದರೆ ಸುಮಾರು 7342 ಕೋಟಿ ರೂಪಾಯಿಗಳು ಆಗಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಇವತ್ತು ಹೆಚ್ಚುವರಿಯಾಗಿ ಆದಂತಹ ಸಂಗ್ರಹಣೆ ಕೇವಲ 7.25 ಕೋಟಿ ರೂಪಾಯಿಗಳಷ್ಟು ಮಾತ್ರ. ಅಂದರೆ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಏನು ಮಾಡುತ್ತೇವೆಂದು ಹೇಳಿದ್ದರು ಅದರಲ್ಲಿ 550 ಕೋಟಿ ರೂಪಾಯಿಗಳಷ್ಟು ಸಂಗ್ರಹಣೆಯಲ್ಲಿ ವಿಫಲವಾಗಿದ್ದಾರೆಂದು ಹೇಳುವಂತಹ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಲೇಬೇಕಾಗುತ್ತದೆ. ಈ ರೀತಿಯ ಒಂದು ಆದಾಯವನ್ನು ಸಂಗ್ರಹ ಮಾಡುವುದರಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದ್ದರೆ ಈ ರಾಜ್ಯದ ಖೋತಾ ಬಜೆಟ್‌ಗಳು, ಈ ರೀತಿ ಅವ್ಯವಸ್ಥೆ ನಮ್ಮ ಆರ್ಥಿಕಸ್ಥಿತಿಯಲ್ಲಿ ಉಂಟಾಗುತ್ತಾ ಇರಲಿಲ್ಲವೆಂದು ಹೇಳಬೇಕಾಗುತ್ತದೆ.

ಇನ್ನು ಕರ ಸಮಾದಾನ ಯೋಜನೆ. ಇದರ ಬಗ್ಗೆ ಆಲೋಚನೆ ಮಾಡಿ ನೋಡಬಹುದು. ಕರ ಸಮಾಧಾನ ಯೋಜನೆಯಿಂದಾಗಿ ರಿಕವರಿ ಜಾಸ್ತಿಯಾಗಿದೆ. ನಾವು ಹೆಚ್ಚಿನ ಆರ್ಥಿಕ ಕ್ರೋಢೀಕರಣ ಮಾಡಿದ್ದೇವೆ ಎಂದು ಹೇಳಬಹುದು. ಆದರೆ ಅದು ಸರಿಯಲ್ಲ. ಕಳೆದ ಭಾರಿ ಸನ್ಮಾನ್ಯ ಮುಖ್ಯಮಂತ್ರಿಗಳು ಕರ ಸಮಾಧಾನ ಯೋಜನೆ ತಂದಂತಹ ಸಂದರ್ಭದಲ್ಲಿ ಹೇಳದ್ದರು. ಶೇಕಡ 20ರಷ್ಟು ಹೆಚ್ಚು ರಿಕವರಿ ಮಾಡುತ್ತೇವೆ ಆದರೆ ಅದನ್ನು ಮಾಡಲಾಗಲಿಲ್ಲವೆಂದರೆ We will roil back ಎಂದು ಹೇಳಿದ್ದರು.ಮೊನ್ನೆ ಅವರು ಸದನದಲ್ಲಿ ಕೊಟ್ಟಂತಹ ಅಂಕಿಅಂಶಗಳ ಪ್ರಕಾರ ಕೇವಲ 8.25ರಷ್ಟು ಮಾತ್ರ ಹೆಚ್ಚುವರಿಯಾಗಿದೆ ಎಂದು ನಮ್ಮ ಗಮನಕ್ಕೆ ಬಂದಿದೆ. ನಾನು

ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ, ಶೇಕಡ 20ರಷ್ಟು ಹೆಚ್ಚು ರಿಕವರಿ ಮಾಡುತ್ತೇವೆಂದು ಹೇಳಿದಿರಿ, ಆದರೆ ಅದು ಕೇವಲ 8.25ರಷ್ಟು ಮಾತ್ರ ಆಗಿದೆ. Will; you roll back to the original system? ಏಕೆಂದರೆ ಇವತ್ತು ಇದರ ಒಂದು ವ್ಯವಸ್ಥೆಯಿಂದ ಇನ್ನಷ್ಟು ಸೋರಿಕೆಗಳು ಬೇರೆ ಬೇರೆ ವಿಚಾರದಲ್ಲಿ ಹೆಚ್ಚಾಗಿದೆ ಎಂದು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಮಾನ್ಯ ಸಿಂಧ್ಯರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಕೈಗಾರಿಕೆಗಳಿಗೆ ಕೊಟ್ಟಂತಹ ವಿನಾಯಿತಿ. ಇದು ನಿಜವಾಗಿ ದೊಡ್ಡ ಕೈಗಾರಿಕೆಗಳಿಗೆ ಕೊಟ್ಟಂತಹ ವಿನಾಯಿತಿಗಳು ನಮ್ಮ ಇಡೀ ಅರ್ಥ ವ್ಯವಸ್ಥೆ ಮೇಲೆ ಭಾರಿ ದೊಡ್ಡ ಪ್ರಮಾಣದಲ್ಲಿ ತೊಂದರೆ ಮಾಡುವಂತಹ ಕೆಲಸಗಳನ್ನು ಮಾಡಿದೆ. 3000 ಕೋಟಿ ರೂಪಾಯಿಗಳಷ್ಟು ತೆರಿಗೆ ನಮ್ಮ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತದೆಂದು ನಮ್ಮ ವಾಣಿಜ್ಯ ತೆರಿಗೆ ಕಮೀಷನರ್ ಹಿಂದೆ ಹಣಕಾಸು ಇಲಾಖೆಗೆ ಪತ್ರ ಬರೆದು ದೂರಿದ್ದರು. ದೊಡ್ಡ ಉದ್ಯಮಗಳಿಗೆ ನೀಡಿದ ರಿಯಾಯಿತಿಯಿಂದ 2058 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ಸಣ್ಣ ಮತ್ತು ಮಧ್ಯಮ ಘಟಕದ ಉದ್ಯಮಗಳಿಗೆ ನೀಡಿದ ರಿಯಾಯಿತಿ 200 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ ಎಂದು ಹೇಳಿದ್ದಾರೆ. ನಾವು ಈ ಸಂದರ್ಭದಲ್ಲಿ ವಿಶೇಷವಾಗಿ ಹೇಳಬೇಕಾಗುತ್ತದೆ. ಅದೇನೆಂದರೆ ಈ ರೀತಿಯ ಒಂದು ಅವ್ಯವಸ್ಥೆಯನ್ನು ನಾವು ಸರಿ ಮಾಡುವಂತಹ ಪ್ರಯತ್ನಗಳನ್ನು ಮಾಡದೇ ಇದ್ದರೆ ನಮ್ಮ ಅರ್ಥವ್ಯವಸ್ಥೆ ಪೂರ್ಣವಾಗಿ ಕುಸಿಯುವಂತಹ ಪರಿಸ್ಥಿತಿ ಉಂಟಾಗಬಹುದು. ನಮಗೆ ಗೊತ್ತಿದೆ ಈಗಾಗಲೇ ತಾವು ಹೇಳಿದ ರೀತಿಯಲ್ಲಿ ಮೊನ್ನೆ ಟೊಯೋಟಾ ಕಂಪನಿಗೆ ಸ್ಪೆಷಲ್ ಕೇಸ್ ಎಂದು ಕನ್ಸಿಡರ್ ಮಾಡಿ ಅವರಿಗೆ ರಿಜಿಸ್ಟ್ರೇಷನ್‌ನಲ್ಲಿ 435 ಎಕರೆಗೆ ರಿಯಾಯಿತಿ ಕೊಟ್ಟಿ ಸದರ್ಶನ ಇದೆ. ಅಲ್ಲಿ ಒಂದು ಎಕರೆಗೆ 10 ಲಕ್ಷ ರೂಪಾಯಿಗಳು ಇದೆ. ಇವತ್ತು 'ಎ' ಜೋನ್‌ನಲ್ಲಿ ಕೊಟ್ಟಂತಹ ರಿಯಾಯಿತಿ ಸುಮಾರು ಐದೂವರೆ ಕೋಟಿ ರೂಪಾಯಿಗಳಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇದನ್ನು ತೀವ್ರವಾಗಿ ಪರಿಗಣನೆ ಮಾಡುವಂತಹ ಅವಶ್ಯಕತೆ ಇದೆ. ಈ ರೀತಿಯ ತೊಂದರೆಗಳು ಬೇರೆ ಬೇರೆ ಕಡೆ ಆಗುವುದನ್ನು ನೋಡಿದರೆ ನಾವು ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾದಂತಹ ಹಿನ್ನಲೆಯಲ್ಲಿ ಈ ಬಜೆಟ್ ಮೇಲೆ ದೊಡ್ಡ ಛಾಯೆ ಬೀರುತ್ತದೆ. ಉದಾಹರಣೆಗೆ ಈಗಾಗಲೇ ಹೇಳಿದ ರೀತಿಯಲ್ಲಿ ಸುಮಾರು 550 ಕೋಟಿ ರೂಪಾಯಿಗಳಷ್ಟು ಕಮರ್ಷಿಯಲ್ ಟ್ಯಾಕ್ಸ್ ವಸೂಲಾತಿಯಲ್ಲಿ ಕಡಿಮೆಯಾಗಿದೆ. ಬೇರೆ ಬೇರೆ ಇಂಡಸ್ಟ್ರೀಸ್‌ಗೆ ಕೊಟ್ಟಂತಹ ರಿಯಾಯಿತಿಯಿಂದ 2000 ಕೋಟಿ ರೂಪಾಯಿಗಳಷ್ಟು ನಮಗೆ ಆರ್ಥಿಕ ವ್ಯವಸ್ಥೆಯಲ್ಲಿ ಸಂಪನ್ಮೂಲ ಕ್ರೋಢೀಕರಣದಲ್ಲಿ ತೊಂದರೆಯಾಗಿದೆ. ಇಲ್ಲಿ ವಿಶೇಷವಾಗಿ ಇನ್ನೊಂದು ವಿಚಾರವನ್ನು ಉಲ್ಲೇಖ ಮಾಡಬೇಕಾಗಿದೆ. ಈಗಾಗಲೇ 31-3-2001ಕ್ಕೆ ಬಂದಂತಹ ಸಿ.ಎ.ಜಿ. ರಿಪೋರ್ಟ್‌ನಲ್ಲಿ ತೀಕ್ಷಣವಾಗಿ ಈ ರಾಜ್ಯಸರ್ಕಾರದ ಬೇರ ಬೇರೆ ಇಲಾಖೆಗಳಲ್ಲಿ ತೆರಿಗೆ ಸೋರಿ ಹೋಗುತ್ತಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಮಾರಾಟ ತೆರಿಗೆ ಇರಬಹುದು, ಬೇರೆ ವಿಚಾರ ಇರಬಹುದು, ಅವುಗಳ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. 2000-2001ನೇ ವರ್ಷದಲ್ಲಿ ನಡೆಸಲಾದ ರಾಜ್ಯ ಮಾರಾಟ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ತೆರಿಗೆ, ಕೃಷಿ ವರಮಾನ ಮೇಲಿನ ತೆರಿಗೆಗಳು, ಭೂಕಂದಾಯ, ಮುದ್ರಾಂಕ ಮತ್ತು ನೋಂದಣಿ ಶುಲ್ಕ, ಪ್ರವೇಶ ತೆರಿಗೆ ಮತ್ತು ವೃತ್ತಿ ತೆರಿಗೆ, ವಿದ್ಯುಚ್ಛಕ್ತಿ ಮೇಲಿನ ತೆರಿಗೆ ಮತ್ತು ಸುಂಕಗಳು, ಪದಾರ್ಥಗಳು ಮತ್ತು ಸೇವೆಯ ಇತರೆ ತೆರಿಗೆಗಳು

ಮತ್ತು ಸುಂಕಗಳು, ಅರಣ್ಯ ಸ್ವೀಕೃತಿಗಳು, ಖನಿಜ ವಸ್ತುಗಳಿಂದ ಸ್ವೀಕೃತಿಗಳು, ಲೋಕೋಪಯೋಗಿ ಕಾಮಗಾರಿ ಸ್ವೀಕೃತಿಗಳು ಮುಂತಾದ ಪರಿಶೀಲನೆಯಲ್ಲಿ ಸುಮಾರು 2062 ಪ್ರಕರಣಗಳಲ್ಲಿ 692.97 ಕೋಟಿ ರೂಪಾಯಿಗಳ ಮೊತ್ತದ ಕಡಿಮೆ ಕರ ನಿರ್ಧರಣೆಗಳು, ತೆರಿಗೆಗಳು ಬಡ್ಡಿ ಮತ್ತು ದಂಡ ಇತರ ಸ್ವೀಕೃತಿಗಳು ವಿಧಿಸದೆ ಇರುವುದು ಮತ್ತು ಕಡಿಮೆ ವಿಧಿಸಿರುವುದು ರಾಜಸ್ವದ ನಷ್ಟ ಇತ್ಯಾದಿ ಎಂದು ಬಹಿರಂಗಪಡಿಸಿತ್ತು. 2000-2001ನೇ ಸಾಲಿನಲ್ಲಿ ಸಂಬಂಧಿಸಿದ ಇಲಾಖೆಗಳ 888 ಪ್ರಕರಣಗಳಲ್ಲಿ 92.34 ಕೋಟಿ ರೂಪಾಯಿಗಳನೊಳಗೊಂಡ ಕಡಿಮೆ ಕರ ನಿರ್ಧರಣೆಗಳು ವಿಧಿಸದೆ ಇರುವುದು, ಕಡಿಮೆ ವಿಧಿಸಿರುವುದು, ಮುಂತಾದವುಗಳ ಪೈಕಿ 887 ಪ್ರಕರಣಗಳಲ್ಲಿ ಮುಂಚಿನ ವರ್ಷಗಳಲ್ಲಿ 9.42 ಕೋಟ್ಟಿ ರೂಪಾಯಿಗಳನ್ನು ತೋರಿಸಿಕೊಡಲಾಗಿತ್ತು. ಇದೆಲ್ಲಾ ನಾವು ನೋಡಿದರೆ ನಮಗೆ ಅನಿಸುತ್ತದೆ. ಮೊದಲು ನಾವು ಇದಕ್ಕೆಲ್ಲಾ ಲಗಾಮು ಹಾಕಬೇಕು. ಇಲ್ಲೆ ತೆರಿಗೆ ಸೋರಿಕೆ ಆಗುವಂತಹ ಕೆಲಸ ಕಾರ್ಯಗಳಾಗುತ್ತವೆ ಎಂದು ಬೇರೆ ಬೇರೆ ಇಲಾಖೆಗಳನ್ನು ತೋರಿಸಿಕೊಟ್ಟಾಗ ಕೂಡ ಸರ್ಕಾರ ಆ ಸೋರಿಕೆಯನ್ನು ತಡೆಗಟ್ಟಲು ವಿಫಲವಾಗಿರುವುದು ಎಲ್ಲಾ ಅವ್ಯವಸ್ಥೆಗೆ ಕಾರಣವಾಗಿದೆ. ಮಾರಾಟ ತೆರಿಗೆ ಬಗ್ಗೆ ಖಂಡಿಕೆ 2.2ರಲ್ಲಿ ಹೇಳಿದ್ದಾರೆ. ತಪ್ಪು ವಿನಾಯಿತಿ ಮತ್ತು ರಿಯಾಯಿತಿ ಮಂಜೂರು ಮಾಡಿದ್ದು 93 ಪ್ರಕರಣಗಳಲ್ಲಿ 4.54ರಷ್ಟು ತೆರಿಗೆ ಕಡಿಮೆ ವಿಧಿಸಿದ ಪರಿಣಾಮ ಕಡಿಮೆಯಾಯಿತು. ವಹಿವಾಟು ತೆರಿಗೆ ತಪ್ಪಿನಿಂದಾಗಿ 1.55 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ. ತೆರಿಗೆ ತಪ್ಪು ದರದ ಅನುಷ್ಠಾನದಿಂದ 98 ಪ್ರಕರಣದಲ್ಲಿ 2.15 ಕೋಟಿ ರೂಪಾಯಿಗಳಷ್ಟು ಹಾಗೂ ಅಧಿಕ ದರ ಮತ್ತು ಉಪಕರಣಗಳನ್ನು ವಿಧಿಸಿದ್ದರಿಂದ 0.53 ಕೋಟಿ ರೂಪಾಯಿಗಳು ಈ ರೀತಿಯಾಗಿ ಬೇರೆ ಬೇರೆ ವಿಚಾರಗಳನ್ನು ತೆರಿಗೆ ಸೋರಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾವು ವಿಶೇಷವಾಗಿ ನೋಡಬೇಕಾದ್ದು ರಾಜ್ಯದ ಅಬಕಾರಿ, ಇದರ ಬಗ್ಗೆ ಸಿಎಜಿ ರಿಪೋರ್ಟ್‌ನಲ್ಲಿ ಹೇಳಿದ್ದಾರೆ 1998-99 ಮತ್ತು 1999-2000ನೇ ಸಾಲಿನ ಗುತ್ತಿಗೆ ಮೇಲಿನ ಷರತ್ತಿನ ಅನುಪಸ್ಥಿತಿಯಿಂದ, ಸರ್ಕಾರವು 116.98 ಕೋಟಿ ರೂಪಾಯಿಗಳಷ್ಟು ಕಡಿಮೆ ಇಲ್ಲದ ರಾಜಸ್ವ ನಷ್ಟವನ್ನು ಅನುಭವಿಸಿದೆ ಎಂದು ತೋರಿಸಿಕೊಟ್ಟಿದ್ದಾರೆ. ನಾನು ಇದನ್ನು ಏಕೆ ಪ್ರತ್ಯೇಕವಾಗಿ ಉಲ್ಲೇಖ ಮಾಡುತ್ತೇನೆಂದರೆ ಮಾನ್ಯ ಸಭಾಪತಿಯವರು ಭಾರಿ ಭಾರಿ ಹೇಳಿದರು. ನಾವು ಚೆನ್ನಾಗಿ ಮಾಡಿದ್ದೇವೆ ಎಂದು ಹೇಳಿದರು. ಚೆನ್ನಾಗಿ ಮಾಡಬೇಕೆಂಬುದು ನಮ್ಮೆಲ್ಲಾ ಜನರ ಅಪೇಕ್ಷೆ ಇದೆ. ಆದರೆ ಅದನ್ನು ಮಾಡಬೇಕಾದರೆ ಅದಕ್ಕೆ ಮೂಲಭೂತವಾದಂತಹ ಸೌಲಭ್ಯ ಏನಿದೆ ಅದನ್ನು ಕಲ್ಪಿಸಿಕೊಡುವುದರಲ್ಲಿ ಇವರು ತಪ್ಪಿದ್ದಾರೆಂದು ಉಲ್ಲೇಖ ಮಾಡುವಂತಹ ಅವಶ್ಯಕತೆ ಇದೆ. ಅದನ್ನು ರೆಕ್ಟಿಫೈ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು. ಇನ್ನು ಅಬಕಾರಿ ಇಲಾಖೆಯಲ್ಲಿ ಹೇಗೆ ಎಲ್ಲಾ ಸೋರಿಕೆಯಾಗುತ್ತಿದೆ ಎನ್ನುವುದು ಮೊನ್ನೆ ಮೊನ್ನೆ ಗೊತ್ತಾಯಿತು. ಒಟ್ಟು 175 ತಾಲ್ಲೂಕುಗಳ ಪೈಕಿ 80 ತಾಲ್ಲೂಕುಗಳನ್ನು ಮಾತ್ರ ಮರು ಹರಾಜಿನಲ್ಲಿ ಗ್ಯಾರಂಟಿ ಪಡೆದುಕೊಳ್ಳುವಂತಹ ಕೆಲಸವಾಯಿತು. ಇನ್ನು 95 ತಾಲ್ಲೂಕುಗಳಲ್ಲಿ ಗ್ಯಾರಂಟಿ ಪಡೆದುಕೊಳ್ಳಲೇ ಇಲ್ಲ. 29 ತಾಲ್ಲೂಕುಗಳಲ್ಲಿ ಮರು ಹರಾಜು ಆಯಿತು ಎಂದರೆ ಒಂದು ತಿಂಗಳಿಗೆ 4-5 ಕೋಟಿ ರೂಪಾಯಿಗಳಷ್ಟು ವ್ಯತ್ಯಾಸಗಳು ಸರ್ಕಾರದ ಬೊಕ್ಕಸಕ್ಕೆ ಕೊರತೆ ಬರುತ್ತದೆ. ಅದು ಎಷ್ಟಾಯಿತು ಎಂದು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಸುಮಾರು 54 ಕೋಟಿ ರೂಪಾಯಿಗಳಷ್ಟು ಆದಾಯ ವರ್ಷಕ್ಕೆ ಸರ್ಕಾರದ ಖಜಾನೆಗೆ ಬರುವುದರಲ್ಲೆ ಕಡಿಮೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಏನು ಚಿಂತನೆ ಮಾಡಿದೆ? ಇದರ ಬಗ್ಗೆ ಆಲೋಚನೆ ಮಾಡುವಂತಹ

ಅವಶ್ಯಕತೆ ಇದೆ. ಇವೆಲ್ಲಾ ಸಣ್ಣ ಸಂಗತಿಗಳು ಎಂದು ನಾವೆಲ್ಲಾ ತಿಳಿದುಕೊಳ್ಳಬಹುದು. ಇನ್ನೊಂದು ವಿಚಾರವೇನೆಂದರೆ ಮಾರುಕಟ್ಟೆಯಲ್ಲಿ 100 ಎಂ.ಎಲ್. ಸಾಜೆಟ್‌ನಲ್ಲಿ ಅರಾಕ್ ಮಾರುತ್ತಾರೆ. ವಾಸ್ತವವಾಗಿ ಅದರ ಬೆಲೆ ಎಂಟೂವರೆ ರೂಪಾಯಿಗಳು ಇರಬಹುದು. ಅದನ್ನು ಈಗ ಮಾರುಕಟ್ಟೆಯಲ್ಲಿ 11 ರಿಂದ 13 ರೂಪಾಯಿಗಳಿಗೆ ಮಾರುತ್ತಾರೆ. ಒಂದು ಸಾಜೆಟ್‌ನಲ್ಲಿ 100 ಎಂ.ಎಲ್. ಇರುವಲ್ಲಿ 80 ಅಥವಾ 90 ಎಂ.ಎಲ್.ಗೆ ಮಾತ್ರ ಬಿಲ್ ಮಾಡುತ್ತಾರೆ. ನಮ್ಮ ಅಂಕಿಅಂಶಗಳ ಪ್ರಕಾರ ಬೆಂಗಳೂರಿನಲ್ಲಿ ಪ್ರತಿನಿತ್ಯ 60 ಲಕ್ಷ ಸಾಜೆಟ್‌ಗಳು ಖರ್ಚಾಗುತ್ತದೆ. ಎಂದರೆ ಅದರಲ್ಲಿ ಆರು ಲಕ್ಷ ಲೀಟರ್‌ನಷ್ಟು ವ್ಯತ್ಯಾಸಗಳು ಬರುತ್ತವೆ. ಒಂದು ಲೀಟರ್‌ಗೆ 180 ರೂಪಾಯಿ ಹಣ ವ್ಯತ್ಯಾಸ ಬರುತ್ತದೆ. ಎಂದರೆ 12 ತಿಂಗಳಿಗೆ 72 ಕೋಟಿ ರೂಪಾಯಿಯಷ್ಟು ನಮ್ಮ ಸರ್ಕಾರಕ್ಕೆ ನಷ್ಟವಾಗುತ್ತದೆ. ಇದು ಯಾರಿಂದ ಈ ರೀತಿಯಾಗುತ್ತಿದೆ? ಬೇರೆ ಯಾರಿಂದಲೂ ಅಲ್ಲ, ಎಂ.ಎಸ್.ಐ.ಎಲ್ ಮತ್ತು ಮೈಶುಗರ್ ನಿಂದಾಗಿ ಈ ಲುಕ್ಸಾನು ಆಗುವುದನ್ನು ನೋಡುತ್ತಿದ್ದೇನೆ. ಇದನ್ನು ರೆಕ್ಟಿಫೈ ಮಾಡುವಂತಹ ಕೆಲಸಗಳಿಗೆ ಸರ್ಕಾರವೂ ಏನು ಕಾರ್ಯಕ್ರಮಗಳನ್ನು ಕೈಗೊಂಡಿವೆ? ಇದನ್ನು ತಿಳಿದುಕೊಂಡು ವಿಶದೀಕರಿಸುವಂತಹ ಅವಶ್ಯಕತೆ ಇದೆಯೆಂಬುದನ್ನು ಸರ್ಕಾರಕ್ಕೆ ನಾನು ಮತ್ತೊಮ್ಮೆ ತಿಳಿಸುವುದಕ್ಕಿಚ್ಛಿಸುತ್ತೇನೆ "ಕರ ಸಮಾಧಾನ ಯೋಜನೆ" ಎಂದು ಹಿಂದೆ ಮಾನ್ಯ ರಾಜಶೇಖರ್ ಮೂರ್ತಿಯವರು ಇದ್ದಂತಹ ಸಂದರ್ಭದಲ್ಲಿ ಎಕ್ಸೈಜ್ ಆ್ಯಕ್ಟ್‌ಗೆ ಸಂಬಂಧಪಟ್ಟಂತೆ ತರದಂತಹ ಅಮೆಂಡ್‌ಮೆಂಟ್ ಆಗಿದ್ದು, ಇದರಿಂದ ಏನಾಗುತ್ತಿತ್ತು ಎಂದರೆ ಒಂದು ರೀತಿಯಲ್ಲಿ ಬೇರೆ ಬೇರೆ ವ್ಯವಸ್ಥೆಗಳಿಂದ ಎಕ್ಸೈಜ್ ಲಾಬಗಳಿಗೆ ನಾವುಗಳು ಬಲಿಯಾದ ರೀತಿಯಲ್ಲಿ ಆಗುತ್ತಿದ್ದೇವೆ. ಅವರು ಆಸ್ತಿಗಳನ್ನು ಜಪ್ತಿ ಮಾಡಿ ಅದಕ್ಕೆ ಅಟ್ಯಾಚ್‌ಮೆಂಟ್ ಮಾಡುವಂತಹ ಕೆಲಸ ಕಾರ್ಯಗಳು ಇತ್ತು; ಉದಾಹರಣೆಗೆ ಹೇಳುವುದಾದರೆ ದಾಸಪ್ಪ ಅಂಡ್ ಕಂಪನಿ, ಇವರದ್ದು ಸುಮಾರು 24 ಕೋಟಿ ರೂಪಾಯಿಗಳು ಬಾಕಿ ಇದೆ ಎಂದು ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ಇಲ್ಲಿರುವಂತಹ ಕಪಾಲಿ ಚಿತ್ರಮಂದಿರ, ಇನ್ನು ಎರಡು, ಮೂರು ಚಿತ್ರಮಂದಿರಗಳಿಗೆ ಸಂಬಂಧಪಟ್ಟಿದ್ದು ಇದೆ. ಇದರ ಮುಖಾಂತರ ವಸೂಲು ಮಾಡಲು ಏನು ತೊಂದರೆ? ಅದೇ ಒಬ್ಬ ರೈತನು ಸಾಲದ ಹಣ ಕಟ್ಟಲಿಲ್ಲವೆಂದರೆ ಅವನ ಮನೆಯಲ್ಲಿರುವಂತಹ ಸ್ವತ್ತುಗಳೆಲ್ಲವನ್ನು ಹಿಡಿದುಕೊಂಡು ಬರುತ್ತಾರೆ. ಅವನಿಗೆ ಸಮಯಾವಕಾಶವನ್ನು ಕೊಡುವುದಿಲ್ಲ, ಆದರೆ ಇಂಥವರಿಗೆ ಇವತ್ತು ಮಣೆಯನ್ನು ಹಾಕುವಂತಹ ಕೆಲಸ ರಾಜ್ಯದಲ್ಲಿ ನಡೆದರೆ, ನಮ್ಮ ಸಂಪನ್ಮೂಲದ ಕ್ರೋಢೀಕರಣ ಹೇಗೆ ಆಗುತ್ತದೆ ಎನ್ನುವಂತಹ ಬಗ್ಗೆ ಗಮನ ಹರಿಸುವ ಅವಶ್ಯಕತೆ ಇದೆಯೆನ್ನುವ ವಿಚಾರವನ್ನು ಹೇಳಲಿಚ್ಛಿಸುತ್ತೇನೆ. ಈ ರೀತಿಯಾಗಿ ರಾಜ್ಯಕ್ಕೆ ಬರುವಂತಹ ಆದಾಯ, ಅದರ ವಸೂಲಾತಿಯಲ್ಲಿ ವ್ಯತ್ಯಾಸಗಳು ಇದ್ದರೆ, ಇನ್ನೊಂದು ಭಾಗದಲ್ಲಿ ಕೇಂದ್ರ ಸರ್ಕಾರದ ಮೇಲೆ ಎಲ್ಲಾ ರೀತಿಯಲ್ಲೂ ಗೂಬೆ ಕೂರಿಸುವಂತಹ ಕೆಲಸ ಕಾರ್ಯಗಳು ಇಲ್ಲಿ ನಡೆಯುತ್ತಿವೆ. ಆದರೆ ಕೇಂದ್ರ ಸರ್ಕಾರದಿಂದ ಬರುವಂತಹ ಆದಾಯ ಸಮರ್ಪಕವಾಗಿ ವಿನಿಯೋಗವಾಗುತ್ತಿಲ್ಲವೆನ್ನುವುದನ್ನು ನೋಡಬೇಕಾಗಿದೆ, ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೇಂದ್ರ ಸರ್ಕಾರ ಈ ರಾಜ್ಯಕ್ಕೆ ಕೊಡುವಂತಹ ಬೇರೆ ಬೇರೆ ಸಹಾಯಗಳನ್ನು, ಆರ್ಥಿಕವಾಗಿ ಕೊಡುವಂತಹ ಸಹಕಾರಗಳನ್ನು ಅವರು ಸದ್ವಿನಿಯೋಗ ಮಾಡುತ್ತಿಲ್ಲವೆನ್ನುವಂತಹ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ರೀತಿಯಲ್ಲಿ ನಮ್ಮ ಆದಾಯದ ಕ್ರೋಢೀಕರಣ, ಇನ್ನೊಂದು ಕಡೆ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಆದರ ಸದ್ ವಿನಿಯೋಗವಾಗುವಂತಹ ಅವಶ್ಯಕತೆಯ

ಇದೆ. ನಾನು ಕೇಂದ್ರ ಸರ್ಕಾರದ ಕೆಲವು ಪ್ರಾಯೋಜಿತ ಯೋಜನೆಗಳು ಮತ್ತೆ ಈ ಸರ್ಕಾರಕ್ಕೆ ಬಂದಂತಹ ಯಾವ ರೀತಿಯಲ್ಲೂ ಸದ್ ವಿನಿಯೋಗವಾಗಲಿಲ್ಲವೆನ್ನುವ ಬಗ್ಗೆ ಅಂಕಿಅಂಶಗಳ ಮುಖಾಂತರ ತಮ್ಮಗಮನಕ್ಕೆ ತರಲಿಚ್ಛಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಬಿಡುಗಡೆ ಮಾಡಿದಂತಹ ಹಣದ ವಿವರಗಳು ಮತ್ತು ರಾಜ್ಯ ಖರ್ಚು ಮಾಡಿದಂತಹ ಹಣದ ವಿವರಗಳು ಈ ಕೆಳಕಂಡಂತೆ ಇವೆ. ಐಡಿಎಂಎಸ್‌ಡಿ ಯೋಜನೆಯಡಿಯಲ್ಲಿ 2000-2001ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಿಂದ 536.31 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ, 510.31 ಕೋಟಿ ರೂಪಾಯಿಗಳು ಖರ್ಚಾಗಿದೆ, 58.85 ಕೋಟಿ ರೂಪಾಯಿಗಳು ಉಳಿಕೆ ಹಣವಾಗಿದೆ. ಇವರು ಕೇಂದ್ರ ಸರ್ಕಾರ ನಮಗೆ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಇನ್ನು ಎಸ್‌ಜೆಎಸ್‌ಆರ್‌ವೈ ಯೋಜನೆಯಡಿಯಲ್ಲಿ 1999-2000ನೇ ಇಸವಿಯಲ್ಲಿ 1340.11 ಕೋಟಿ ರೂಪಾಯಿಗಳು ನಮಗೆ ಅಲಾಟ್‌ಮೆಂಟ್ ಆಗಿದೆ, ಇಲ್ಲ ಕೇವಲ 2165.2 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ, 2000-2001ರಲ್ಲಿ 168 ಕೋಟಿ ರೂಪಾಯಿಗಳು ಬಂದಿದ್ದರಲ್ಲಿ ಅಷ್ಟನ್ನು ಖರ್ಚು ಮಾಡಲಾಗಿದೆ. 10ನೇ ಹಣಕಾಸು ಆಯೋಗದಲ್ಲಿ ನಮಗೆ ಕೊಟ್ಟಂತಹ ಮೊತ್ತವನ್ನು ವಿನಿಯೋಗ ಮಾಡಲಾಗಿದೆ. ಆದರೆ ಮೆಗಾಸಿಟಿ ಯೋಜನೆಯಡಿಯಲ್ಲಿ ಕೊಟ್ಟಂತಹ ಹಣದ ಮೊತ್ತ ಇನ್ನು ಸದ್ವಿನಿಯೋಗವಾಗಿಲ್ಲ. 1998-99ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಿಂದ 1355 ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದು, ಕೇವಲ 410.08 ಕೋಟಿ ರೂಪಾಯಿಗಳು ಮಾತ್ರ ಖರ್ಚು ಆಗಿದ್ದು, 944.02 ಕೋಟಿ ರೂಪಾಯಿಗಳು ಉಳಿಕೆ ಹಣವಾಗಿದೆ. 1999-2000ರಲ್ಲಿ 1391 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಯಿತು, 1118.17 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದ್ದು, 207.84 ಕೋಟಿ ರೂಪಾಯಿಗಳಷ್ಟು ಉಳಿಕೆ ಹಣವಾಗಿದೆ. 2000-2001ನೇ ಇಸವಿಯಲ್ಲಿ 1368 ಕೋಟಿ ರೂಪಾಯಿಗಳು ನಮಗೆ ಅಲಾಟ್‌ಮೆಂಟ್ ಆಗಿದೆ, ಆದರೆ 624.21 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಇದು ಸರ್ಕಾರದ ಅಧಿಕೃತ ದಾಖಲೆಗಳನ್ನು ನೋಡಿ ಹೇಳುತ್ತಿದ್ದೇನೆ. ನಾನು ವಿನಂತಿ ಮಾಡುವುದೇನೆಂದರೆ, ತಾವು ಕೇಂದ್ರ ಸರ್ಕಾರದ ಮೇಲೆ ದೋಷಾರೋಪಣೆ ಮಾಡುವಂಥಾದ್ದನ್ನು ತಕ್ಷಣ ನಿಲ್ಲಿಸಿ; ಎಲ್ಲಕ್ಕೂ ಆರ್ಥಿಕ ಯೋಜನಾ ಗಾತ್ರವನ್ನು ಕಡಿಮೆ ಮಾಡುವಂಥಾದ್ದು ಒಂದು ಕಾರಣವಾಗಿದೆ. ಕೇಂದ್ರ ಸರ್ಕಾರದಿಂದ ಬರುವಂತಹ ಆ ಯೋಜನಾ ಗಾತ್ರದಲ್ಲಿ ಕಡಿಮೆ ಮಾಡಬೇಕೆನ್ನುವಂತಹ ಸೂಚನೆ, ಸುಮಾರು 500 ಕೋಟಿ ರೂಪಾಯಿಗಳು ಕಡಿಮೆಯಾಗುವಂತಹ ಮೊತ್ತದಿಂದಾಗಿ ಇಲ್ಲಿನ ವ್ಯವಸ್ಥೆಗಳಲ್ಲಿ, ತೊಂದರೆಯಾಗಿದೆ, ಎಂದು ಗೂಬೆ ಕೂರಿಸುವಂತಹ ಕೆಲಸಗಳನ್ನು ಪ್ರಾಥಮಿಕ ಹಂತದಲ್ಲಿ ರಾಜ್ಯ ಸರ್ಕಾರ ಕೈಬಿಟ್ಟರೆ ಮಾತ್ರ ಎಲ್ಲಾ ಕೆಲಸ ಕಾರ್ಯಗಳು ಸುಸೂತ್ರವಾಗಿ ಆಗಲು ಸಾಧ್ಯವಿದೆ. ಇನ್ನು ಹಲವಾರು ವಿಚಾರಗಳು ಇವೆ, ಅದನ್ನು ನಾನು ಓದಿ ಹೇಳಿದರೆ ಅದು ಬಹಳ ಸುದೀರ್ಘವಾಗಿದೆ. ಕೇಂದ್ರ ಪ್ರಾಯೋಜಿತ ಯೋಜೆಗಳು ಇನ್ನು ಕೆಲವು ಇವೆ, 2000-2001ರಲ್ಲಿ ಸಮಗ್ರ ಸಣ್ಣ ಮತ್ತು ಮಧ್ಯಮ ಪಟ್ಟಿಯ ಅಭಿವೃದ್ಧಿ ಯೋಜನೆಗಳಲ್ಲಿ ಬಿಡುಗಡೆ ಆದದ್ದು 1333.80 ಕೋಟಿ ರೂಪಾಯಿಗಳು, ಅದರಲ್ಲಿ 1274. 95ಕೋಟಿ ರೂಪಾಯಿಗಳು ಖರ್ಚಾಗಿದೆ, 58.85 ಕೋಟಿ ರೂಪಾಯಿಗಳು ಉಳಿಕೆ ಹಣವಾಗಿದೆ. "ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆಯಲ್ಲಿ 2622.19 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಈ ಹಣ ಪೂರ್ತಿ ಖರ್ಚಾಗಿದೆ, 10ನೇ ಹಣಕಾಸು ಆಯೋಗದಲ್ಲಿ ಪುನಃ

3510 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ, 3509 ಕೋಟಿ ರೂಪಾಯಿಗಳು ಖರ್ಚು ಆಗಿದು, 11 ಕೋಟಿ ರೂಪಾಯಿಗಳು ಉಳಿದಿದೆ. ಈ ರೀತಿಯಾಗಿ ಕೇಂದ್ರ ಸರ್ಕಾರ 11,579 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಕೇವಲ 9,624 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿ, 1,954.68 ಲಕ್ಷ ರೂಪಾಯಿಗಳನ್ನು ಇಲ್ಲಿಯವರೆಗೆ ಸರ್ಕಾರ ಖರ್ಚು ಮಾಡಿಲ್ಲ, ಇದಕ್ಕೆ ಯಾರು ಜವಾಬ್ದಾರರು? ಈ ರೀತಿಯಾಗಿ ಬೇರೆ ಬೇರೆ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಸಾಕಷ್ಟು ಕೊಡುತ್ತೇವೆಂದರೂ ಇದು ನಮಗೆ ಅಂಕಿ ಅಂಶಗಳ ಆಧಾರದಿಂದ ಗೊತ್ತಾಗಿದೆ. ಆಂಧ್ರ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಅವರು ಶೇಕಡಾ 111ರಷ್ಟು ಸಾಧನೆಯನ್ನು ಮಾಡಿದ್ದರೆ, ಕರ್ನಾಟಕ ಸರ್ಕಾರ ಶೇಕಡಾ 47ರಷ್ಟು ಮಾತ್ರ ಕೇಂದ್ರ ಸರ್ಕಾರದ ಸಹಾಯದಿಂದ ಸಾಧನೆ ಮಾಡಿದೆ, ಎಂದು ಹೇಳುವಂತಹ ಅಂಕಿಅಂಶಗಳು ನಮ್ಮಲ್ಲಿ ಲಭ್ಯವಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಎಲ್ಲಾ ವ್ಯವಸ್ಥೆಗಳನ್ನು ಮಾಡುವಂತಹ ಸಂದರ್ಭಗಳಲ್ಲಿ ನಾವು ಕೇವಲ ಒಂದೇ ದೃಷ್ಟಿ ಕೋನದಿಂದ ನೋಡುವಂಥಾದ್ದು ಸಮರ್ಪಕವಲ್ಲ. ಇದನ್ನು ತಾವು ಸರಿ ಮಾಡಬೇಕು; ಪ್ರಧಾನಮಂತ್ರಿಯವರ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 2001-2002ರಲ್ಲಿ 10,052 ಲಕ್ಷ ರೂಪಾಯಿಗಳು ರಾಜ್ಯಕ್ಕೆ ಬಿಡುಗಡೆಯಾಗಿತ್ತು, 955.98ಲಕ್ಷ ರೂಪಾಯಿಗಳನ್ನು ಕಾಮಗಾರಿಗಳಿಗೆ ಬಿಡುಗಡೆ ಮಾಡಿದ್ದು, ಅಕ್ಟೋಬರ್ ಅಂತ್ಯದವರೆಗೆ ಕೇವಲ 723 ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಲಾಗಿದೆ. ಈ ರೀತಿ ಕೇಂದ್ರ ಸರ್ಕಾರದ ಯೋಜನಾ ಕಾರ್ಯ ಕ್ರಮದಡಿಯಲ್ಲಿ ಕೇಂದ್ರಸರ್ಕಾರದಿಂದ 520 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಈ ಪೈಕಿ 2001ರ ಡಿಸೆಂಬರ್‌ವರೆಗೆ 260 ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದು, 190 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಈ ರೀತಿ ರಾಜ್ಯ ಸರ್ಕಾರ ಸ್ವಲ್ಪಮಟ್ಟಿಗೆ ಎಲ್ಲವನ್ನು ಸೀರಿಯಸ್ ಆಗಿ ತೆಗೆದುಕೊಳ್ಳದೇ ಎಲ್ಲಾ ಕೆಲಸಕಾರ್ಯಗಳನ್ನು ತನ್ನ ಹೊಣೆಯಿಂದ ಜಾರಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದೆ. ಆದುದರಿಂದ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಡೆಗಟ್ಟುವ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು, ಈ ತೆರಿಗೆ ಸೋರಿಕೆ ತಡೆಗಟ್ಟುವ ಬಗ್ಗೆ ಕೂಡ ಹೆಚ್ಚಿನ ಒತ್ತನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ಇತ್ತೀಚಿನ ದಿನಗಳಲ್ಲಿ ನಡೆದಂತಹ ಘಟನೆ ಇದು, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ಬಂದಿದೆ ಎಂದು ನಾನು ಭಾವಿಸುತ್ತೇನೆ. ಬೆಂಗಳೂರಿನ ಪರಿಸರದಲ್ಲಿ ಸುಮಾರು 239 ಕೋಟಿ ರೂಪಾಯಿಗಳ ಹಣ ಎಕ್ಸೆಸ್ drawal "Even as the Chief Minister S.M. Krishna, who also holds the Finance Portfolio, is struggling to find resources for development works in the State, 20 officers in Bangalore Urban District Registrar's office, two town municipalities and six city municip[al councils, have paid an excess surcharge arrears of Rs.239.87 crores to Urban Local Bodies between 1994-95 to 2000-2001."

ಎಂದು ಹೇಳುವಂಥಾದ್ದು ತಮ್ಮ ಗಮನಕ್ಕೆ ಬಂದಿದೆ, ಎಂದು ನಾನು ಭಾವಿಸುತ್ತೇನೆ. ಇದರಿಂದ ಏನಾಗುತ್ತದೆಂದರೆ ನಮ್ಮ ಅರ್ಥ ವ್ಯವಸ್ಥೆಯಲ್ಲಿ ಸ್ವಲ್ಪ ಏರುಪೇರುಗಳಾಗಬಹುದು. ತಾವು ಸಹ ಈಗಾಗಲೇ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚನೆ ನೀಡಿದ್ದೀರೆಂಬುದನ್ನು ನಾವು ಈಗಾಗಲೇ ಓದಿದ್ದೇವೆ. ಯಾರು ಇದರ ಹಿನ್ನೆಲೆಯಲ್ಲಿದ್ದಾರೆ,

ಅವರ ಮೇಲೆ ಯಾವುದೇ ರೀತಿಯ ಕ್ರಮವನ್ನು ಜರುಗಿಸಿಲ್ಲವೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಷ್ಟು ದೊಡ್ಡ ಹಗರಣ ಸುಮಾರು 239 ಕೋಟಿ ರೂಪಾಯಿಗಳ ಎಕ್ಸೆಸ್ ಪೇಮೆಂಟ್ ಆಗಿರುವುದನ್ನು ತಾವು ಸಿ.ಬಿ.ಐ.ಗೆ. ಒಪ್ಪಿಸುವುದರ ಮೂಲಕ ಇದರ ಪೂರ್ಣ ಸತ್ಯಾಂಶವನ್ನು ಹೊರತರಬೇಕು. ಈ ಎಕ್ಸೆಸ್ ಪೇಮೆಂಟ್ ಆಗಿರುವುದನ್ನು ಅಕೌಂಟೆಂಟ್ ಜನರಲ್‌ರವರು ಸಹ ಉಲ್ಲೇಖ ಮಾಡಿದ್ದಾರೆ, ಇದರ ಬಗ್ಗೆ ಸರ್ಕಾರವೂ ತೀವ್ರ ಗಮನಹರಿಸಬೇಕೆಂದು ಹೇಳಿದ್ದಾರೆ. ಅದರಲ್ಲಿ ಕೆ.ಆರ್. ಪುರಂಗೆ ಎಕ್ಸೆಸ್ ಪೇಮೆಂಟ್ 6,707.37 ಲಕ್ಷ ರೂಪಾಯಿಗಳು, ಮಹಾದೇವಪುರಂಗೆ 3,395.96 ಲಕ್ಷ ರೂಪಾಯಿಗಳು, ಬೊಮ್ಮನ ಹಳ್ಳಿಗೆ 1,478.40 ಲಕ್ಷ ರೂಪಾಯಿಗಳು, ಪಟ್ಟಣಗೆರೆಗೆ 2,595.67 ಲಕ್ಷ ರೂಪಾಯಿಗಳು, ದಾಸರ ಹಳ್ಳಿಗೆ 2,778.36 ಲಕ್ಷ ರೂಪಾಯಿಗಳು, ಬ್ಯಾಟರಾಯನಪುರಕ್ಕೆ 3,687.64 ಲಕ್ಷ ರೂಪಾಯಿಗಳು, ಯಲಹಂಕದಲ್ಲಿ 2,507.96 ಲಕ್ಷ ರೂಪಾಯಿಗಳು, ಕೆಂಗೇರಿಗೆ ಟಿಎಂಸಿಗೆ 834.42 ಲಕ್ಷ ರೂಪಾಯಿಗಳು, ಒಟ್ಟು ಸುಮಾರು 23,985.79 ಲಕ್ಷ ರೂಪಾಯಿಗಳು, ಆಗಿದೆ. ಇದರ ಬಗ್ಗೆ ತಾವು ಈಗಾಗಲೇ ಗಮನ ಹರಿಸಿ ಕೆಲವು ಅಧಿಕಾರಿಗಳ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕೆಂಬುದನ್ನು ಹೇಳಿದ್ದೀರೆಂದು ನಮ್ಮ ಗಮನಕ್ಕೆ ಬಂದಿದೆ. ಆದರೆ ನಿಜವಾಗಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಇನ್ನೂ ಕಾರ್ಯಗತವಾಗಿಲ್ಲ. ಅದರ ಬಗ್ಗೆ ಅತ್ಯಂತ ಶೀಘ್ರವಾಗಿ ತನಿಖೆಯನ್ನು ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹಿಡಿತವನ್ನು ಸಾಧಿಸಬೇಕು.

4.50 ಪಿ.ಎಂ.

ಏಕೆಂದರೆ, ಇವತ್ತು ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಬೀರಬಲ್ಲ ಕೆಲಸಗಳು ಇವಾಗಿವೆ. ಈ ರೀತಿಯ ಕೆಲಸಗಳನ್ನು ಮಾಡಿದವರನ್ನು ಶೀಘ್ರವಾಗಿ ಶಿಕ್ಷಿಸುವಂಥ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಬಹುಶಃ ಕೆಸಿಟಿಸಿಎಲ್ ಬಗ್ಗೆ ಸುದೀರ್ಘವಾಗಿ ಮಾತನಾಡಲು ನಾನು ಇಚ್ಛಿಪಡುತ್ತಿಲ್ಲ, ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ನಮ್ಮ ನಾಯಕರು ಹೇಳಿದ್ದಾರೆ. ಈಗಾಗಲೇ ಮೊನ್ನೆ ಮೊನ್ನೆ ಕಂದು ಮತ್ತು ಬೂದು ಪ್ರದೇಶವಿರುವ ಕಡೆಯಲ್ಲಿ ಅಕ್ರಮ. ಸಕ್ರಮ ಮಾಡಲು ತಾವು ಅವಕಾಶ ಮಾಡಿಕೊಡುತ್ತೀರೆಂಬ ಭಾವನೆ ನಮಗೆ ಬಂದಿದೆ ಮತ್ತು ತಾವು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೀರೆಂದು ನಾನು ಭಾವಿಸುತ್ತೇನೆ. ಪ್ರಾಯಶಃ ಏಪ್ರಿಲ್ 6ನೇ ತಾರೀಖು ಕೊನೆಯ ದಿನಾಂಕ ಮಾಡಿದ್ದೀರಿ, ಬಹುಶಃ ತುಂಬಾ ಜನರಿಗೆ ಈ ಬಗ್ಗೆ ಮಾಹಿತಿ ಲಭ್ಯವಿರುವುದಕ್ಕೆ ಸಾಧ್ಯವಿಲ್ಲ. ಏಪ್ರಿಲ್ 6ನೇ ತಾರೀಖು ಕೊನೆಯ ದಿನಾಂಕವೆಂದು ತಿಳಿದುಕೊಂಡು ಗ್ರಾಮೀಣ ಜನರು ಆ ಕೆಲಸಗಳಿಗೆ ಸ್ಪಂದನೆ ಮಾಡುವ ವಿಚಾರಗಳು ಸಾಧ್ಯವಿಲ್ಲ. ಇದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕನಿಷ್ಟ ಮೂರು ತಿಂಗಳ ಅವಧಿಗೆ ಈ ರೀತಿಯ ಕಂದು ಮತ್ತು ಬೂದು ಪ್ರದೇಶದಲ್ಲಿ ಅಕ್ರಮವನ್ನು ಸಕ್ರಮೀಕರಣ ಮಾಡುವ ಕೆಲಸವನ್ನು ಏನು ಹಮ್ಮಿಕೊಳ್ಳಲಾಗಿದೆ, ಇದು ಸಾಮಾನ್ಯ ರೈತರಿಗೆ ತಲುಪುವಂತಹ ಕೆಲಸಕಾರ್ಯಗಳಾಗುತ್ತಿಲ್ಲ; ಆ ವಿಚಾರಗಳನ್ನು ಅವರಿಗೆ ತಲುಪಿಸಿ ಸಕ್ರಮೀಕರಣ ಮಾಡುವ ವಿಷಯದಲ್ಲಿ ಅವರಿಗೆ ಸ್ವಲ್ಪ ಹೆಚ್ಚು ಸಮಯಾವಕಾಶವನ್ನು ಕೊಡಬೇಕು ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ಅಡಿಕೆ ಬೆಳೆಗಾರರ ಬಗ್ಗೆ ನಿಮ್ಮ ಗಮನಹರಿಯಲಿಲ್ಲ; ಮಾನ್ಯ ಸಚಿವರಾದ

ಚಂದ್ರೇಗೌಡರಿಗೂ ಕೂಡ ಅವರ ಮನಸ್ಸಿನಲ್ಲಿ ಅಡಿಕೆ ಬೆಳೆಗಾರರ ಬಗ್ಗೆ ಸಾಕಷ್ಟು ಇನ್ನೂ ಕೆಲಸಗಳಾಗಲಿಲ್ಲವೆಂದು ಸ್ವಲ್ಪ ಬೇಸರವಿದೆ ಎಂದು ಕಾಣುತ್ತಿದೆ. ಅತ್ಯಂತ ಕಂಗೆಟ್ಟ ಬೆಳೆಗಾರರಲ್ಲಿ ಅಡಿಕೆ ಬೆಳೆಗಾರನು ಕೂಡ ಒಬ್ಬ. ಮಾನ್ಯ ದೇಶಪಾಂಡೆಯವರಿಗೆ ಅದು ಗೊತ್ತಿದೆ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಉತ್ತರ ಕನ್ನಡ ಈ ಭಾಗದಲ್ಲಿರುವ ರೈತ ಕಂಗಾಲಾಗಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳೇ, ಮೊನ್ನೆ ಆನಂದ ಪೂಜಾರಿ ಎಂಬುವವರು ಶಾಂತಗೂಡು ಗ್ರಾಮದಲ್ಲಿ ಸೊಸೈಟಿಯ ಸಾಲ ಕಟ್ಟುವುದಕ್ಕೆ ಸಾಲದ ನೋಟೀಸ್ ಬಂತೆಂದೂ, ಮರುಪಾವತಿ ಮಾಡಲಾಗದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಪುತ್ತೂರಿನಲ್ಲಿ ದಾಖಲಾಗಿದೆ. ತಮ್ಮನ್ನು ನಾವು ಬೇರೆ ಬೇರೆ ವೇದಿಕೆಯಲ್ಲಿ ವಿನಂತಿ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿದ್ದೇವೆ. ಕಳೆದ ಸಾರಿ ಕ್ವಿಂಟಾಲ್ ಅಡಿಕೆಗೆ ರೂ. 15,000 ಇದ್ದದ್ದು, ಈಗ ಸುಮಾರು ಮೂರ್ನಾಲ್ಕು ಸಾವಿರಕ್ಕೆ ಬಂದು ಇಳಿದಿದೆ; ಸಾಲ ಕಟ್ಟುವಂತಹ ಸಂದರ್ಭಗಳು ಬಂದಿವೆ. ಆದರೆ ಒಂದು ವಿಷಯವನ್ನು ತಮ್ಮ ಆಯವ್ಯಯದಲ್ಲಿ ಹೇಳಿದ್ದೀರಿ. ಅದೇನೆಂದರೆ, ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ, ಕೇಂದ್ರ ಸರ್ಕಾರದ ಯೋಜನೆಯ ಜೊತೆ ನಿಮಗೆ ಸಹಕಾರ ಮಾಡುವ ಪ್ರಯತ್ನಗಳನ್ನು ಇತರೆ ವ್ಯವಸ್ಥೆಗಳಿಗೆ ಮಾಡಿದಂತೆ ಮಾಡತ್ತೇವೆಂದು ಹೇಳಿದ್ದೀರಿ. ಪ್ರಾಯಶಃ ಅದು ಮುಂಗೈಗೆ ತುಪ್ಪ ಸವರಿದಂತಾಗಿದೆ ಎಂದು ನಾನು ಭಾವಿಸುತ್ತೇನೆ. ಇವತ್ತು ತುರ್ತಾಗಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಸಾಲ ಮರುಪಾವತಿ ಮಾಡಬೇಕು, ರೈತ ಇವತ್ತು ಆ ಸಾಲವನ್ನು ಮರುಪಾವತಿ ಮಾಡುವ ಸ್ಥಿತಿಯಲ್ಲಿ ಇಲ್ಲವೇ ಇಲ್ಲ. ಇವತ್ತು ನೇರ ರಾಜ್ಯವಾದ ಕೇರಳದಲ್ಲಿ ಸನ್ಮಾನ್ಯ ಅಂಟನಿಯವರ ಸರ್ಕಾರವಿದ್ದು, ಆ ರಾಜ್ಯದ ಅರ್ಥ ವ್ಯವಸ್ಥೆ ತಮಗೆ ಗೊತ್ತಿದೆ; ಇವತ್ತು ಸರ್ಕಾರಿ ನೌಕರರಿಗೆ ಸಂಬಳ ಕೊಡಲಾಗದಂತಹ ಪರಿಸ್ಥಿತಿ ಇದ್ದಾಗಲೂ ಕೂಡ, ಅವರು ಬೇರೆ ಬೇರೆ ಕಡೆಯಿಂದ ಪಡೆದುಕೊಂಡ ಸಾಲದಿಂದ ಕರ್ನಾಟಕ ರಾಜ್ಯದ ಮೂರನೇ ಒಂದು ಭಾಗಕ್ಕಿಂತಲೂ ಕಡಿಮೆ ಅಡಿಕೆ ಬೆಳೆಯುವಂತಹ ಪ್ರದೇಶ ಕೇರಳದಲ್ಲಿದ್ದಾಗಲೂ ಕೂಡ, ಕೇರಳ ರಾಜ್ಯದಲ್ಲಿ ಈಗಾಗಲೇ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಪ್ರತಿ ತಿಂಗಳು 10 ಕ್ವಿಂಟಾಲ್ ಅಡಿಕೆ ಮಾರಾಟ ಮಾಡುವ ಯಾವ ಒಬ್ಬ ವ್ಯಕ್ತಿಗೆ ಸರ್ಕಾರದಿಂದ ಒಂದು ಕೆ.ಜಿ.ಗೆ 10 ರೂಪಾಯಿಗಳ ಸಬ್ಸಿಡಿಯನ್ನು ಕೊಡಲಾಗುತ್ತಿದೆ, ಇದು ಮಾರುಕಟ್ಟೆ ಮದ್ಯಪ್ರವೇಶ ಯೋಜನೆಯಲ್ಲ. ಇದು ರಾಜ್ಯ ಸರ್ಕಾರದ ಒಂದು ಯೋಜನೆಯಾಗಿದೆ. ರೈತ ಕಂಗಾಲಾಗಿದ್ದಾನೆ, ಆದುದರಿಂದ ಮಾರುಕಟ್ಟೆಯಲ್ಲಿರುವ ಬೆಲೆಗಿಂತ ಒಂದು ಕೆ.ಜಿ. ಅಡಿಕೆಗೆ 10 ರೂಪಾಯಿಗಳನ್ನು ರೈತನಿಗೆ ಹೆಚ್ಚಿಗೆ ಕೊಡಲು ಕೇರಳ ರಾಜ್ಯ ಸರ್ಕಾರವು 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕ್ಯಾಂಪ್ಕೊ ಮುಖಾಂತರ ಅದನ್ನು ಪಾವತಿ ಮಾಡುವ ಕೆಲಸವನ್ನು ಕಳೆದ ಮೂರನೇ ತಾರೀಖು ಅಲ್ಲಿಯ ಮಂತ್ರಿಗಳಾದ ಅಬ್ದುಲ್‌ರವರು ಉದ್ಘಾಟನೆಯನ್ನೂ ಕೂಡ ಮಾಡಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರ್ತ ನಿಧಿಯನ್ನು ಸಾಕಷ್ಟು ಕ್ರೋಢೀಕರಣ ಮಾಡಬೇಕೆನ್ನುವ ಉದ್ದೇಶ ತಮ್ಮದು, ಮತ್ತೆ ರೈತರಿಗೆ ನೆರವನ್ನು ಕೊಡಬೇಕೆನ್ನುವ ಮನಸ್ಸು ಕೂಡ ತಮ್ಮಲ್ಲಿದೆ, ಇವತ್ತು ಅಡಿಕೆ ಬೆಳೆಗಾರರನ್ನು ಹೊರಗೆ ಇಡಬಾರದು. ಅಡಿಕೆ ಬೆಳೆಗಾರನಿಗೆ ಸ್ಪಂದಿಸಲು ಕನಿಷ್ಠ 25 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ, ಮಾರುಕಟ್ಟೆಯಲ್ಲಿರುವ ವ್ಯವಸ್ಥೆಗೆ ಪೂರಕವಾಗಿ ಕನಿಷ್ಠ 10-15 ರೂಪಾಯಿಗಳನ್ನು ಸಬ್ಸಿಡಿಯ ರೀತಿಯಲ್ಲಿ ಅಡಿಕೆ ಬೆಳೆಗೆ ಕೊಡುವ ಕೆಲಸವನ್ನು ಮಾಡಿ, ತಕ್ಷಣ ಆ ಸಾಲವನ್ನು ಮರುಪಾವತಿ ಮಾಡಬೇಕಾದ ರೈತನಿಗೆ ದೀರ್ಘಾವಧಿ

ಸಾಲವನ್ನಾಗಿ ಪರಿವರ್ತನೆ ಮಾಡುವ ಕೆಲಸವನ್ನು ಮಾಡಬೇಕು. ವಿಶೇಷವಾಗಿ ನಮ್ಮ ಮನಸ್ಸಿನಲ್ಲೊಂದು ಭಾವನೆ ಇತ್ತು, ನಾವು ಒಂದು ವಿಚಾರವನ್ನು ನಿಮ್ಮಲ್ಲಿ ಪ್ರಸ್ತಾಪ ಮಾಡಿದ್ದೆವು. ಇವತ್ತು ಮಾರುಕಟ್ಟೆಯ ಸ್ಥಿತ್ಯಾಂತರಗಳಿಗೆ ಅಡಿಕೆಯ ಮೇಲಿರುವ ತೆರಿಗೆ ಕೂಡ ಇವತ್ತು ಒಂದು ಕಾರಣವಾಗಿದೆ, ಆದಕಾರಣ ಅಡಿಕೆಯ ಮೇಲೆ ವಿಧಿಸಿರುವ ತೆರಿಗೆಯನ್ನು ತಾತ್ಕಾಲಿಕವಾಗಿ ಮನ್ನಾ ಮಾಡಬೇಕೆನ್ನುವ ಬೇಡಿಕೆಯನ್ನು ಕೂಡ ನಾವು ತಮ್ಮ ಮುಂದಿಟ್ಟಿದ್ದೇವೆ. ತಾವು ಶೇಕಡ 4 ರಷ್ಟು ತೆರಿಗೆಯನ್ನು ವಿಧಿಸಿದ್ದೀರಿ, ಇದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದು, ಇದನ್ನು ಶಾಶ್ವತವಾಗಿ ಮಾಡಿ ಎಂದು ಹೇಳುತ್ತಿಲ್ಲ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಆದಾಯ ಬರಲೇಬೇಕು, ಮಾರುಕಟ್ಟೆ ಸ್ಥಿರೀಕರಣವಾಗುವವರೆಗೆ, ಸ್ವಲ್ಪಮಟ್ಟಿಗೆ ರೈತನಿಗೆ ಸಹಕಾರ ಕೊಡಲು, ಮಾರುಕಟ್ಟೆಯಲ್ಲಿರುವ ಸಹಕಾರಿ ಮತ್ತು ಬೇರೆ ವರ್ತಕರ ಮಧ್ಯೆ ಪೈಪೋಟಿ ಬಂದು ಮಾರುಕಟ್ಟೆ ವ್ಯತ್ಯಯವಾಗುವ ಸಂದರ್ಭದಲ್ಲಿ ತೆರಿಗೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದರಿಂದ ಅವನಿಗೆ ಸ್ವಲ್ಪ ಜೀವಾಳ ಬರಬಹುದೆನ್ನುವ ದೃಷ್ಟಿಯಿಂದ ಈ ಬೇಡಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳ ಮುಂದಿಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ, ಈಗ ಇಂಪೋಸ್‌ ಮಾಡಿರುವ ಶೇಕಡ 4ರಷ್ಟು ತೆರಿಗೆಯನ್ನು ತಡೆಹಿಡಿಯುವ ಆದೇಶವನ್ನು ಕೂಡಲೇ ಮಾಡಬೇಕು; ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತಿಸಬೇಕು. ಮಾನ್ಯ ಮಂತ್ರಿಗಳಾದ ಚಂದ್ರೇಗೌಡರು ಹಾಗೂ ರಂಗನಾಥ್‌ರವರು ಸದನದಲ್ಲಿದ್ದಾರೆ, ಬಹುಶಃ ಕಾಫಿ ಬೆಳೆಗಾರರಿಗಿಂತ ನಿಕೃಷ್ಟ ಪರಿಸ್ಥಿತಿಯಲ್ಲಿ ಇವತ್ತು ಅಡಿಕೆ ಬೆಳೆಗಾರರು ಇದ್ದಾರೆ. ತಂಬಾಕು ಬೆಳೆಗಾರರಿಗಿಂತ ನಿಕೃಷ್ಟ ಪರಿಸ್ಥಿತಿಯಲ್ಲಿ ಇವತ್ತು ಅಡಿಕೆ ಬೆಳೆಗಾರರು ಇದ್ದಾರೆ, ಇದನ್ನು ದಯವಿಟ್ಟು ಗಂಭೀರವಾಗಿ ಪರಿಗಣನೆ ಮಾಡಬೇಕು; ಕೇರಳ ರಾಜ್ಯದಲ್ಲಿ ಒಂದು ಕೆ.ಜಿ. ಅಡಿಕೆಗೆ 10 ರೂಪಾಯಿಗಳ ಸಬ್ಸಿಡಿಯನ್ನು ಯಾವ ರೀತಿ ಕೊಡುತ್ತಾರೆ, ಅದೇ ರೀತಿ ನಮ್ಮ ರಾಜ್ಯದಲ್ಲಿ ಸ್ವಲ್ಪ ಹೆಚ್ಚಿಗೆ ಕೊಡುತ್ತೀರೆನ್ನುವ ವಿಶ್ವಾಸವಿದೆ. ಆದುದರಿಂದ ಒಂದು ಕೆ.ಜಿ. ಅಡಿಕೆಗೆ 10-15 ರೂಪಾಯಿಗಳ ಸಬ್ಸಿಡಿ ಕೊಡುವುದರ ಮೂಲಕ ಅಡಿಕೆ ಬೆಳೆಗಾರರು ಬದುಕಲು ಅವಕಾಶ ಮಾಡಿ ಕೊಡಬೇಕು ಎನ್ನುವ ಒಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಶೇಕಡ 4 ರಷ್ಟು ತೆರಿಗೆ ಮನ್ನಾ, ಅಲ್ಪಾವಧಿ ಸಾಲಗಳನ್ನು ದೀರ್ಘಾವದಿ ಸಾಲಗಳನ್ನಾಗಿ ಪರಿವರ್ತನೆ ಮಾಡುವುದು ಮತ್ತು ಈ ಸಬ್ಸಿಡಿಯ ವಿಚಾರದಲ್ಲಿ ತಾವು ಶೀಘ್ರವಾಗಿ ಗಮನಹರಿಸಬೇಕು. ಮೊನ್ನೆ ತಮ್ಮ ಮಂತ್ರಿಗಳು ಹೇಳಿದರು, ಬಿಸಿಲಯ್ಯರವರ ವರದಿ ಬಂದ ತಕ್ಷಣ ನಾವು ಅಡಿಕೆಯ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಗೆ ಬೇಕಾದ ವ್ಯವಸ್ಥೆಯನ್ನು ಮಾಡುವ ಒಂದು ಇರಾದೆಯನ್ನು ಹೊಂದಿದ್ದೇವೆಂದು ಹೇಳಿದರು. ಬಹುಶಃ ಅದರ ಕಾಸ್ಟ್ ಪ್ರೈಸ್ ಎಷ್ಟೆಂಬುದನ್ನು ತಿಳಿದುಕೊಳ್ಳುವ ಜವಾಬ್ದಾರಿ ಸರ್ಕಾರದ್ದಾಗಿದೆ. ಇವತ್ತು ನಮ್ಮಲ್ಲಿ ಸಾಧಾರಣವಾಗಿ ಕೂಲಿ ಕೆಲಸ ಮಾಡುವವನಿಗೆ ಕನಿಷ್ಟ ದಿನಕ್ಕೆ ನೂರು ರೂಪಾಯಿ, ವಾರದ ಏಳು ದಿವಸವು ಅವನಿಗೆ ಕೂಲಿ ಕೆಲಸ ಸಿಗುತ್ತಿತ್ತು, ಇವತ್ತು ಅಡಿಕೆ ಧಾರಣೆ ಇಳಿದ ಕಾರಣ, ಆ ಕೂಲಿಯವನಿಗೆ ಕೆಲಸವಿಲ್ಲದೆ ಅವನ ಕೂಲಿ 50-40 ರೂಪಾಯಿಗಳಿಗೆ ಇಳಿದಿದೆ, ವಾರದಲ್ಲಿ ಏಳು ದಿವಸ ಕೆಲಸ ಮಾಡುವವನಿಗೆ ವಾರದಲ್ಲಿ ಎರಡು ಮೂರು ದಿವಸ ಕೆಲಸವಿಲ್ಲ. ಇವತ್ತು ಅಡಿಕೆ ಬೆಳೆಗಾರನ ಈ ತೊಂದರೆ ಕೇವಲ ಅಡಿಕೆ ಬೆಳೆಗಾರನಿಗೆ ಸೀಮಿತವಾಗಿಲ್ಲ, ಸಾಮಾನ್ಯವಾಗಿರುವ ಕೃಷಿ ಕೂಲಿ ಕಾರ್ಮಿಕನ ಮನೆಯಲ್ಲೂ ಕೂಡ ಮೂರು ಹೊತ್ತು ಊಟಕ್ಕಿಲ್ಲದ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಮಾರುಕಟ್ಟೆ

ಮಧ್ಯಪ್ರವೇಶ ಯೋಜನೆಗೆ ಮತ್ತಷ್ಟು ಕಾಲಾವಕಾಶ ತೆಗೆದುಕೊಳ್ಳುತ್ತದೆ, ಏಕೆಂದರೆ ತಮ್ಮ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಬೇಕು, ಕೇಂದ್ರ ಸರ್ಕಾರ ಕೂಡ ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು, ಮಾರುಕಟ್ಟೆ ಮಧ್ಯಪ್ರವೇಶದ ಏನು ವ್ಯತ್ಯಾಸದ ಮೊತ್ತವಿದೆ ಶೇಕಡ 50 ರಾಜ್ಯ ಸರ್ಕಾರ, ಶೇಕಡ 50 ಕೇಂದ್ರ ಸರ್ಕಾರ ಭರಿಸುವ ಯೋಜನೆ ಜಾರಿಗೊಳಿಸಲು ಕನಿಷ್ಟ 3-4, 5-6 ತಿಂಗಳು ಕಾಲಾವಕಾಶ ತೆಗೆದುಕೊಳ್ಳಬಹುದು; ಅದರಲ್ಲೂ ಸಣ್ಣ ಅಡಿಕೆ ಬೆಳೆಗಾರರು 5-6 ತಿಂಗಳ ಕಾಲ ತೆಗೆದುಕೊಂಡು ಬದುಕುವ ಸಾಧ್ಯತೆ ಇಲ್ಲ, ಆದುದರಿಂದ ಅಡಿಕೆ ಬೆಳೆಗಾರನ ಮೇಲೆ ತಮ್ಮ ಕೃಷ್ಣಾ ಕಟಾಕ್ಷ ಬೀಳಬೇಕು, ಮತ್ತು ಅವರು ಬದುಕುವುದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಎನ್ನುವ ವಿನಂತಿ ಮಾಡಿ, ಈ ಆಯವ್ಯಯದಲ್ಲಿ ಅದಕ್ಕೆ ಬೇಕಾದ ಪೂರ್ವಭಾವಿ ತಯಾರಿಯನ್ನು ಮಾಡಬೇಕೆಂದು ವಿನಂತಿ ಮಾಡಿ, ಸನ್ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ನಮ್ಮ ಸರ್ಕಾರ ಇವತ್ತು 2002-03ನೇ ಸಾಲಿನ ಆಯವ್ಯಯವನ್ನು ನಮ್ಮ ಮುಂದೇನು ಮಂಡಿಸಿದೆ ಅದನ್ನು ನಾನು ಯಾವ ಕಾರಣಕ್ಕಾಗಿ ಸ್ವಾಗತ ಮಾಡುತ್ತೇನೆಂಬುದನ್ನು ವಿಷಾದವಾಗಿ ಹೇಳುತ್ತೇನೆ. ನಾನು ಪೂರ್ಣವಾಗಿ ಇದನ್ನು ಅಧ್ಯಾಯನ ಮಾಡಿದ ಮೇಲೆ, ಇದು Non-Political Oriental Budget ಎಂಬುದನ್ನು ಎಕಾನಾಮಿಕ್ಸ್‌ನಲ್ಲಿ ನಂಬಿಕೆ ಇರುವ ಯಾರಾದರೂ ಕೂಡ ಇದನ್ನು ಅರ್ಥೈಸಿಕೊಳ್ಳಬಹುದು, it is not a politically-oriented budget. It is a Developmental oriented budget and it is more focussed towards agriculture. ಐಡಿಯಲ್ ಬಜೆಟ್ ಎಂದರೆ ಏನು ಎನ್ನುವುದನ್ನು ಎಕಾನಮಿಸ್ಟ್ ಹೇಳುತ್ತಾರೆ. ಅವಠ ಪ್ರಕಾರ, There should be less taxation. There should be less burden on the public. They should generate more employment. It should attack the poverty. It should create more developmental activities. It should spend more money. These are the ideal characters of any ideal budget. ಇದನ್ನು ನಾವು ಈ ಬಜೆಟ್‌ನಲ್ಲಿ ಕಾಣುತ್ತೇವೆ. ಇದರಲ್ಲಿರುವ ಅಂಕಿಅಂಶಗಳನ್ನು ನೋಡಿದಾಗ ನನಗೆ ಮನವರಿಕೆಯಾಗಿದೆ; This is purely a non-olitical developmental budget. ಇಂಥ ಒಂದು ಬಜೆಟ್ ಅನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಬಹಳ ಎಕ್ಸರ್‌ಸೈಸ್ ಮಾಡಿ, ಇವತ್ತಿರತಕ್ಕಂಥ ವಿಶೇಷ ಪರಿಸ್ಥಿತಿಯಲ್ಲಿ, ಕಳೆದ 2-3 ವರ್ಷಗಳಿಂದ ಇದ್ದಂಥ ಇನ್ ಫರ್ಮಿಟಿಗಳೆಲ್ಲವನ್ನೂ ಸರಿದೂಗಿಸಿಕೊಂಡು ಈ ಬಜೆಟ್ ಅನ್ನು ತಯಾರು ಮಾಡಿದ್ದಾರೆ. ಕಳೆದ ಎರಡು ಬಜೆಟ್‌ಗಳಲ್ಲಿದ್ದಂಥ ಇನ್ ಲೀಕ್ವಾಲಿಟೀಸ್ ಮತ್ತು ಇಂಬ್ಯಾಲೆನ್ಸಸ್‌ಗಳನ್ನು ಸರಿಪಡಿಸಿಕೊಂಡು ಸರಿಯಾದಂಥ ಒಂದು ಬಜೆಟ್ ಮಾಡುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದ್ದಾರೆ. ಈ ಬಜೆಟ್‌ಗೆ ಒಂದು ಗುರಿ ಇದೆ ಮತ್ತು ಒಂದು ಉದ್ದೇಶವಿದೆ ಎನ್ನುವುದನ್ನು ಬಿಡಿಸಿ ಹೇಳಲು ನಾನು ಇಚ್ಛೆಪಡುತ್ತೇನೆ."ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂದು ಕನ್ನಡದಲ್ಲಿ ಒಂದು ಗಾದೆ ಇದೆ. Cut your cloth according to the needs. ಹಾಗೆ, ನಮ್ಮಲ್ಲಿರತಕ್ಕಂಥ ಫೈನ್ಯಾನ್ಷಿಯಲ್ ಮೊಸಿಷನ್, ಆರ್ಥಿಕ ವ್ಯವಸ್ಥೆ ಮತ್ತು ಇತರೆ ಸನ್ನಿವೇಶಗಳನ್ನು ನೋಡಿದಾಗ, ಎಲ್ಲಾ

ವರ್ಗದವರೂ ಅಭಿವೃದ್ಧಿ ಆಗಬೇಕು ಎನ್ನುವ ದೃಷ್ಟಿಯಿಂದ ಈ ಬಜೆಟ್ ಅನ್ನು ಸಮತೋಲನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಇವತ್ತಿನ ಯಾವುದೇ ರಾಜ್ಯ ಸರ್ಕಾರದ ಬಜೆಟ್ ಆಗಿರಲೀ ಅಥವಾ ಕೇಂದ್ರ ಸರ್ಕಾರದ ಬಜೆಟ್ ಆಗಿರಲೀ ಅದು ಒಂದು ವಿಶೇಷ ಪರಿಸ್ಥಿತಿಗೆ, ಒತ್ತಡಕ್ಕೆ ಗುರಿಯಾಗಿರುತ್ತದೆ. ಎಕ್ಸ್‌ಟ್ರೇನಿಯಸ್ ಸರ್ ಕಂಸ್ಟ್ಯಾನೆಸಸ್ ಅಂದರೆ ಯಾವುದೋ ದೇಶದಲ್ಲಿ ಯಾವುದೋ ಘಟನೆ ನಡೆದರೆ ಅದರ ಪರಿಣಾಮ ನಮ್ಮ ಬಜೆಟ್ ಮೇಲೂ ಆಗುತ್ತದೆ. ಎಲ್ಲೋ ಭೂಕಂಪವಾದರೆ ಅಥವಾ ಎಲ್ಲೋ ಇರತಕ್ಕಂಥ ಡಬ್ಲ್ಯು.ಟಿ.ಓ. ಕಟ್ಟಡದ ಮೇಲೆ ಅಟ್ಯಾಕ್ ಆದರೆ ಅದರ ಪರಿಣಾಮ ನಮ್ಮ ರಾಜ್ಯದ ಮೇಲೂ ಆಗುತ್ತದೆ. ಈ ರೀತಿ ಬರಬಹುದಾದ ನ್ಯಾಚುರಲ್ ಕೆಲಾಮಿಟೀಸ್ ಮತ್ತು ಅನ್ ಎಕ್ಸ್ ಪೆಕ್ಟೆಡ್ ಈ ವೆಂಟ್ಸ್ ಗಳೆಲ್ಲವನ್ನೂ ಫೇಸ್ ಮಾಡಲು ಎಕ್ಸ್ ಪೆಕ್ಟೇಷನ್ ಇಟ್ಟುಕೊಂಡು ಈ ಬಜೆಟ್ ಅನ್ನು ರಿಯಲಿಸ್ಟಿಕ್ ಆಗಿ ಮಾಡಲಾಗಿದೆ. ಈಗ ಪ್ರೆಸೆಂಟ್ ಮಾಡಿರುವಂಥ ಸ್ಟ್ಯಾಟಿಸ್ಟಿಕ್ ಬೇಸ್ಡ್ ಬಜೆಟ್ ಅನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಕೇಂದ್ರ ಸರ್ಕಾರದವರು ಸುಮಾರು 600 ಕೋಟಿ ರೂಪಾಯಿಗಳ ಹಣವನ್ನು ನಮ್ಮ ರಾಜ್ಯಕ್ಕೆ ಕೊಡದೇ ಇದ್ದಾಗ ಅದು ನಮ್ಮ ರಾಜ್ಯ ಸರ್ಕಾರದ ಮೇಲೆ ಪರಿಣಾಮ ಬೀರಿದೆ ಎನ್ನುವುದನ್ನು ಯಾರೂ ಮರೆಯಬಾರದು. ಇಂಥ ಪರಿಸ್ಥಿತಿಯಲ್ಲಿ, ಕೊರತೆಯನ್ನು ಕಡಿಮೆ ಮಾಡಿಕೊಂಡು ಕಡಿಮೆ ಟ್ಯಾಕ್ಸೇಷನ್ ಹಾಕಿ ಇಂಥ ಒಂದು ಬಜೆಟ್ ಅನ್ನು ಪ್ರೆಸೆಂಟ್ ಮಾಡಿರತಕ್ಕಂಥಾದ್ದು ಬಹಳ ಸ್ವಾಗತಾರ್ಹವಾದುದು. ನಮಗೆಲ್ಲರಿಗೂ ಗೊತ್ತಿದೆ, The Central Government treats the State Governments as vassal states.

ಅಂದರೆ, ಇವರು ಅವರ ಕೈಕೆಳಗಿರತಕ್ಕಂಥ ಸರ್ಕಾರವೆಂದು ಭಾವಿಸಿ, ಅನೇಕ ಸಲ ಬೇಕಾದಷ್ಟು ಎಕನಾಮಿಕ್ ಡಿಸಿಷನ್ ತೆಗೆದುಕೊಂಡಿರುವುದನ್ನು ನಾವು ನೀವು ನೋಡುತ್ತಿದ್ದೆವೆ. ಆ ಹೊಡೆತಗಳನ್ನೂ ಕೂಡ ತಡೆದುಕೊಂಡು, ರಾಜ್ಯ ಸರ್ಕಾರದವರು ಒಂದು ಬ್ಯಾಲೆನ್ಸ್ಡ್ ಬಜೆಟ್ ಅನ್ನು ಪ್ರೆಸೆಂಟ್ ಮಾಡುತ್ತಾರೆ ಎಂದರೆ that is something great. Even today I appeal through you, that the State and the Central relationship with regard to the fiscal relationship, with regard to the resources, the economic compulsions in our Constitution ಇದನ್ನು ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಗಳನ್ನು ಇಂಪ್ಲಿಮೆಂಟ್ ಮಾಡುವುದರ ಮುಖಾಂತರ economic justice has to be given. It is not being done till now. Uptill now, it is not at all a brotherly treatment by the central government. Let not my friends from the cetnral government mistake it. The Central Government has never given a brotherly treatment to any state government with regard to the resources mobilistion With all that, ಇದನ್ನು ಇವುಗಳೆಲ್ಲದರ ನಡುವೆ ನಮ್ಮ ಮುಖ್ಯಮಂತ್ರಿಗಳು ಈ ಬಜೆಟ್ ಅನ್ನು ಬ್ಯಾಲೆನ್ಸ್ ಮಾಡಿರತಕ್ಕಂಥಾದ್ದನ್ನು ನಾನು ಇಲ್ಲಿ ನೋಡುತ್ತಿದ್ದೇನೆ. ಅತಿ ಎಕ್ಸ್‌ಟ್ರೀಂ ಇಲ್ಲ; ಅತಿ ರೈಟ್ ಇಲ್ಲ, ಲೆಫ್ಟು ಇಲ್ಲ, ಮಧ್ಯಮ ವರ್ಗದ ಒಂದು ಬಡ್ಜೆಟ್‌ನ್ನು ಎಲ್ಲರಿಗೂ ಒಪ್ಪಿಗೆಯಾಗುವಂಥ ಈ ಒಂದು ಬಜೆಟ್ ಅನ್ನು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಅಂಕಿಅಂಶಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಇದು ಕೇವಲ ಬಾಯಲ್ಲಿ ಹೇಳುವಂಥಾದ್ದು ಅಲ್ಲ. Anybody who goes through the literature or the figures, could make out that it is a balanced budget. ಇಂಥ ಒಂದು ಬಜೆಟ್ ಅನ್ನು ಸ್ವಾಗತ ಮಾಡತಕ್ಕಂಥಾದ್ದು ಎಲ್ಲಾ ಸ್ನೇಹಿತರಿಗೂ ಕೂಡ ಬಹಳ ಮುಖ್ಯವಾದುದು ಎನ್ನುವ ವಿಚಾರವನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇಲ್ಲಿ ಅನೇಕ ಹಿರಿಯ ಸದಸ್ಯರುಗಳಿದ್ದಾರೆ. ಅವರೆಲ್ಲರಿಗೂ ಗೊತ್ತು. What do you call a good budget or an ideal budget? An ideal budget is one- ಲೆಸ್ ಟ್ಯಾಕ್ಸೇಷನ್ ಇರುವಂಥಾದ್ದು ಜಾಸ್ತಿ ಟ್ಯಾಕ್ಸ್ ಹಾಕದೇ ಇರುವಂಥಾದ್ದು, ಇರುವಂಥ ರಿಸೋರ್ಸಸ್ ಅನ್ನು ಕ್ರೋಢೀಕರಣ ಮಾಡಿ ಕೆಲಸ ಮಾಡುವಂಥಾದ್ದು, ಲೆಸ್ ಡಿಫಿಸಿಟ್ ಇರುವಂಥಾದ್ದು, ಲೆಸ್ ಅನ್ ಪ್ರೊಡಕ್ಟೀವ್ ಎಕ್ಸ್ ಪೆಂಡಿಚರ್ ಇರುವಂಥಾದ್ದು; ಅನ್ ಪ್ರೊಡಕ್ಟೀವ್ ಎಕ್ಸ್ ಪೆಂಡಿಚರ್ ಅನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು, ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್‌ನಲ್ಲಿರತಕ್ಕಂಥ ಶಿಫಾರಸ್ಸುಗಳನ್ನು ಅಳವಡಿಸಿಕೊಂಡಿದ್ದಾರೆ. ಎಕ್ಸ್‌ಟ್ರಾ ಇರತಕ್ಕಂಥ ಗರ್ವನಮೆಂಟ್ ಎಂಪ್ಲಾಯೀಸ್‌ಗಳನ್ನು ತೆಗೆಯಬೇಕು ಎನ್ನುವ ಪ್ರಯತ್ನ ಮಾಡಿದ್ದಾರೆ. 100ಕ್ಕೆ 60ರಷ್ಟು ಖರ್ಚು ಮಾಡುವ ಅನ್ ಪ್ರೊಡಕ್ಟೀವ್ ಎಕ್ಸ್ ಪೆಂಡಿಚರ್ ಅನ್ನು ಕಡಿಮೆ ಮಾಡಲು he has taken a bold step. He has introduced VRS. The central government has also introduced VRS. I believe, in the course of time, like Americal Government, privatisation of services is very good. ಕೆಲವು ವೆಹಿಕಲ್‌ಗಳನ್ನು ಪ್ರೈವೇಟ್ ನವರಿಂದ ಪಡೆದುಕೊಳ್ಳಿ, ನೀವು ಇಟ್ಟುಕೊಳ್ಳಬೇಡಿ ಎಂದು ಹೇಳಿದ್ದಾರೆ. ಎಕ್ಸ್ ಪೆಂಡಿಚರ್ ಕಡಿಮೆಯಾಗಲಿ ಎಂದು ಹೀಗೆ ಹೇಳಿದ್ದಾರೆ. ಎಕ್ಸಸ್ ಇರತಕ್ಕಂಥ ಎಂಪ್ಲಾಯಿಗಳನ್ನು ಇಟ್ಟುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ನಾವು ಅವರನ್ನು ಗಂಭೀರವಾಗಿ ಗೌರವಯುತವಾಗಿ ಕಳುಹಿಸಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. This is nothing but a curtailment of unproductive expenditure. ಮಾತನಾಡಿದಂಥ ಬಹಳಷ್ಟು ಜನರು, ಇಲ್ಲಿ ತಪ್ಪು ಮಾಡಿದ್ದೀರಿ, ಅಲ್ಲಿ ತಪ್ಪು ಮಾಡಿದ್ದೀರಿ, ಏನೋ ತಪ್ಪಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಹಾಗೆ ಹೇಳುವವರಿಗೆ ನನ್ನ ಒಂದೇ ಒಂದು ಪ್ರಶ್ನೆ ಇದೆ. ಇಲ್ಲಿಯವರೆಗೂ ಬಂದಂಥ ಯಾವುದಾದರೂ ಸರ್ಕಾರ, 100ಕ್ಕೆ ಶೇ. 60-70ರಷ್ಟು ಸರ್ಕಾರಿ ನೌಕರರಿಗಾಗಿ ಖರ್ಚು ಮಾಡುತ್ತಿರುವ ಅನ್ ಪ್ರೊಡಕ್ಟೀವ್ ಎಕ್ಸ್ ಪೆಂಡಿಚರ್ ಅನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಂಡಿವೆಯೇ Which does not create any investment, does not create any profit, does not create any economic growth, No government has taken a bold step to see that unproductive expenditure is brought down. This is the first time that my goverment has been able to attempt to bring down unproductive expenditure.

(ಈ ಹಂತದಲ್ಲಿ ಸನ್ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಬಡತನದ ವಿರುದ್ದ ವಾರ್ ಡಿಕ್ಲೇರ್ ಮಾಡುವಂಥ ಬಜೆಟ್ ಯಾವುದಾದರೂ ಇದ್ದರೆ ಅದನ್ನು ಐಡಿಯಲ್ ಬಜೆಟ್ ಎನ್ನಬಹುದು. ನಾವು ಆ ಪ್ರಯತ್ನವನ್ನು ಮಾಡಿದ್ದೇವೆ. ಸ್ತ್ರೀಶಕ್ತಿ ಕಾರ್ಯಕ್ರಮವಾಗಲೀ ಅಥವಾ ಅರ್ಬನ್ ಆಶ್ರಯ ಯೋಜನೆಯಾಗಲೀ ಅಥವಾ ರೂರಲ್ ಆಶ್ರಯ ಯೋಜನೆಯಾಗಲೀ, ಇವುಗಳ ಮೂಲಕ ಕೋಟಿಗಟ್ಟಲೆ ಖರ್ಚು ಮಾಡುವ

ಹಣ ಬಡತನದ ರೇಖೆಗಿಂತ ಕೆಳಗಿರತಕ್ಕಂಥ ರಾಜ್ಯದ ಎಲ್ಲಾ ಜಾನಂಗಕ್ಕೆ ಅನುಕೂಲ ಮಾಡುವಂಥ ಒಂದು ಕಾರ್ಯಕ್ರಮ ಎನ್ನುವುದನ್ನು ನಾವು ಮರೆಯಬಾರದು. ಹಾಗೆಯೇ, ಹೆಚ್ಚು ಜನರಿಗೆ ನೌಕರಿಯನ್ನು ಕೊಡುವಂಥ ಒಂದು ಅಟೆಂಪ್ಟ್ ಅನ್ನು ಕೂಡ ಇಲ್ಲಿ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ. ಈ ಬಜೆಟ್‌ನಿಂದ ಶೇ. 3ರಷ್ಟು ಎಕನಾಮಿಕ್ ಡೆವೆಲಪ್ ಮೆಂಟ್ ಅನ್ನು ಎಕ್ಸ್ ಪೆಕ್ಟ್ ಮಾಡಬಹುದು ಎಂದು ಕೆಲವು ಎಕನಾಮಿಕ್ ಓರಿಯೆಂಟೆಡ್ ಪ್ರೊಫೆಸರ್ಸ್ ಹಾಗೂ ನನ್ನ ಮಿತ್ರರು ಹೇಳಿದರು. ಡೆವೆಲಪ್ ಮೆಂಟ್ ಆಗುತ್ತದೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದು ನಾನು ಅವರನ್ನು ಕೇಳಿದಾಗ, ಅವರು ಹೇಳಿದರು, ಯಾವ ಬಜೆಟ್‌ನಲ್ಲಿ ಇನ್ ವೆಸ್ಟ್ ಮೆಂಟ್ ಜಾಸ್ತಿಯಾಗುತ್ತದೆ, ಇನ್ ವೆಸ್ಟ್ ಮೆಂಟ್ ಅನ್ನು ಮೊಬಲೈಸ್ ಮಾಡುತ್ತಾರೆ, ಅಲ್ಲಿ ಪ್ರಾಫಿಟ್ಸ್ ಬರುತ್ತದೆ, ಎಕನಾಮಿಕ್ ಓರಿಯೆಂಟೇಷನ್ ಆಗುತ್ತದೆ ಎಂದು ಹೇಳಿದರು. ಈ ಬಜೆಟ್‌ನಲ್ಲಿ ಕೃಷಿಗೆ ಮತ್ತು ನೀರಾವರಿಗೆ ಯತೀಚ್ಛವಾಗಿ ಹಣ ಖರ್ಚು ಮಾಡುತ್ತಿದ್ದಾರೆ, ಇವುಗಳೆಲ್ಲದರ ಪರಿಣಾಮವಾಗಿ ಎಕನಾಮಿಕ್ ಡೆವೆಲಪ್ ಮೆಂಟ್ ಆಗುವುದರ ಜೊತೆಗೆ ಉದ್ಯೋಗಾವಕಾಶಗಳು ಕೂಡ ಸೃಷ್ಟಿಯಾಗುತ್ತದೆ ಎನ್ನುವುದನ್ನು ನಾವು ಇದರಲ್ಲಿ ಕಾಣಬಹುದು. This budget exercise is more of fiscal management than of political management. ಹೀಗೆ ಮಾಡಿರತಕ್ಕಂಥಾದ್ದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಹೊಗಳಬೇಕು ಎನ್ನುವುದಕ್ಕಾಗಿ ನಾನು ಇದನ್ನು ಹೇಳುತ್ತಿಲ್ಲ. ಮುಖ್ಯಮಂತ್ರಿಗಳನ್ನು ಹೊಗಳಿ ಅದರಿಂದ ನಾನು ಪಡೆಯುವಂಥಾದ್ದು ಇದರಲ್ಲಿ ಏನೂ ಇಲ್ಲ. It has more fiscal exercises than the political exercises. ಆ ಸ್ಥಾನದಲ್ಲಿ ಯಾರೇ ಇದ್ದರೂ ಸಹ, ಇವತ್ತಿನ ಪರಿಸ್ಥಿತಿಯಲ್ಲಿ ಇದನ್ನು ಮಾಡಬೇಕಾಗಿತ್ತು. ಅದನ್ನು ಬಹಳ ಚೆನ್ನಾಗಿ ಮಾಡಿದ್ದಾರೆ ಎನ್ನುವುದನ್ನು ನಾನು ಇಲ್ಲಿ ಮನಗಾಣುತ್ತೇನೆ. ನಾನು ತುಂಬು ಹೃದಯದಿಂದ ಒಂದು ಮಾತು ಹೇಳಬೇಕೆಂದರೆ, ಅನೇಕ ಸಲ ನಾವು ರಾಜಕೀಯ ಸಮಸ್ಯೆಗಳಿಗೆ ಆರ್ಥಿಕ ಪರಿಹಾರವನ್ನು ಹುಡುಕುವಂಥ ಪರಿಸ್ಥಿತಿಗೆ ನಾವೆಲ್ಲಾ ಸಿಕ್ಕಿಕೊಂಡಿದ್ದೇವೆ. ನಾವೂ ಸಿಕ್ಕಿಹಾಕಿಕೊಂಡಿದ್ದೇವೆ, ಹಿಂದಿನವರೂ ಸಿಕ್ಕಿಹಾಕಿಕೊಂಡಿದ್ದಾರೆ. ಪೊಲಿಟಿಕಲ್ ಪ್ರಾಬ್ಲಮ್ಸ್‌ಗೆ ಎಕನಾಮಿಕ್ ಸಲ್ಯೂಷನ್ಸ್ ನಾವು ಹುಡುಕುವುದು. This is the fate of my country, of my government or out state. ಆದರೆ ಇಲ್ಲಿ ಅವರು ಪೊಲಿಟಿಕಲ್ ಸಮಸ್ಯೆಗೆ ಆರ್ಥಿಕ ಪರಿಹಾರವನ್ನು ಹುಡುಕುವುದಕ್ಕೆ ಹೋಗಿಲ್ಲ. ಆರ್ಥಿಕವಾಗಿ ಬೆಳವಣಿಗೆ ದೃಷ್ಟಿಯಿಂದ ಪ್ರಯತ್ನವನ್ನು ಮಾಡಿದ್ದಾರೆ ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನು ನಮ್ಮ ಸರ್ಕಾರ 2002-2003ನೇ ಸಾಲಿನ ಬಜೆಟ್‌ನ್ನು ಏನು ಮಂಡನೆ ಮಾಡಿದೆ ಇದು ಕಳೆದ ಎರಡು ವರ್ಷಗಳ ತಳಹದಿಯ ಮೇಲೆ ನಿಂತಿರತಕ್ಕಂಥ ಬಜೆಟ್. ಸುಮ್ಮನೆ ಏನೋ ಒಂದು ಬಜೆಟ್‌ನ್ನು ಮಂಡನೆ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿರತಕ್ಕಂಥಾದ್ದು ಅಲ್ಲ. ಕಳೆದ ಎರಡು ವರ್ಷಗಳಲ್ಲಿ ಆಗಿರತಕ್ಕಂಥ ನ್ಯೂನತೆಗಳನ್ನು ಇಲ್ಲಿ ಸರಿಪಡಿಸಿಕೊಂಡು ಈ ಮುಂಗಡ ಪತ್ರವನ್ನು ರೂಪಿಸಿದ್ದಾರೆನ್ನುವುದನ್ನು ನಾನು ಬಜೆಟ್‌ನ್ನು ಓದಿದಾಗ ನನ್ನ ಮನಸ್ಸಿಗೆ ಅದು ಮನವರಿಕೆ ಆಗಿದೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತಿನ ಜಾಗತೀಕರಣ ಮತ್ತು ತಂತ್ರಜ್ಞಾನದ ಪರಿಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾದ ಆರ್ಥಿಕ ಬೆಳವಣಿಗೆಯನ್ನು ಕೊಡತಕ್ಕಂಥ ಬಜೆಟ್‌ನ್ನು ಪ್ರಸೆಂಟ್ ಮಾಡುವುದಕ್ಕೆ ಬರುವುದಿಲ್ಲ. ಆದರೂ ಇದನ್ನು ಮಾಡಿತಕ್ಕಂಥ ನಮ್ಮ ಮಾನ್ಯ ಮುಖ್ಯಮಂತ್ರಿಯವರನ್ನು ಈ ಸಂದರ್ಭದಲ್ಲಿ ನಾನು

ಅಭಿನಂದಿಸುತ್ತೇನೆ. ಈ ಎಕನಾಮಿಕ್ಸ್ ಬಗ್ಗೆ ಬಹಳ ಡೀಪ್ ಆಗಿ, ಬಹುಶಃ ಬಹಳ ಹಿಂದೆ ಎಕನಾಮಿಕ್ಸ್ ಓದಿದ್ದರು ಎಂದು ಕಾಣುತ್ತದೆ, ಆದರೆ ಮರೆತಿಲ್ಲ. ಕೇನ್ಸ್ ಥಿಯರಿ, ಮತ್ತು ಅಮರ್ಥ್ಯ ಸೇನ್ ಏನೇನು ವಿಚಾರ ಹೇಳಿದ್ದಾರೆ. ಅದನ್ನೆಲ್ಲಾ ಈ ಬಜೆಟ್‌ನಲ್ಲಿ ಅಳವಡಿಸಿದ್ದಾರೆ. ಇದು ಬಹಳ ಒಳ್ಳೆಯದು. ಇಂಥ ಒಂದು ಬಜೆಟ್‌ನ್ನು ನಾನು ನೋಡಿದಾಗ, ಈ ಎರಡು ವರ್ಷಗಳಲ್ಲಿ ನಾವು ಏನು ಬದಲಾವಣೆಗಳನ್ನು ಕಂಡಿದ್ದೇವೆ ಅದನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಇಲ್ಲಿ ಪ್ರಯತ್ನವನ್ನು ಮಾಡಿದ್ದಾರೆ. ಪ್ರತಿ ಸಲ ಬಜೆಟ್ ಮಂಡನೆ ಮಾಡಿದಾಗ-ಏನ್ರೀ ಈ ಬಜೆಟ್ ನೋಡಿದಾಗ ಇವರು ಹೈಟೆಕ್ ಮುಖ್ಯಮಂತ್ರಿಗಳು, ಬರೀ ನಗರದಲ್ಲಿ ಮಾತ್ರ ಬೆಳವಣಿಗೆ ಮಾಡುತ್ತಾರೆ, ಕೇವಲ ನಗರದವರಿಗೆ ಮಾತ್ರ ಯೋಜನೆಗಳನ್ನು ಮಾಡುತ್ತಾರೆ, ಬೇರೆಯವರಿಗೆ ಯಾರಿಗೂ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಅನೇಕ ಸಲ ಕೆಲವರು ಹೇಳುತ್ತಿದ್ದರು. ಪ್ರಸಕ್ತ ಸಾಲಿನ ಬಜೆಟ್‌ನ್ನು ನೋಡಿದವರು ಯಾರಾದರೂ ಹಾಗೆ ಹೇಳಲಿಕ್ಕೆ ಬರುತ್ತದೆಯೇ? Can anybody say that it is urban-oriented budget? Is it not so. It is I.T.-oriented budget? It is not so. It is purely oriented towards the agriculture now. ಬಹುಶಃ ನಮಗೂ ಒಂದು ಅನುಭವ ಆಗಿರಬೇಕು ಮೊನ್ನೆ, ಆದಮೇಲೆ ಅದು ಬೇರೆ ಮಾತು. ಒಟ್ಟಿನಲ್ಲಿ it is directed towards the development of agriculture and irrigation. ಇದರಲ್ಲಿ ಎರಡು ಮಾತು ಇಲ್ಲವೇ ಇಲ್ಲ. ಇದನ್ನು ಬಹಳ ಶ್ರಮಪಟ್ಟು ಆ ಎರಡು ವರ್ಗಕ್ಕೆ ಹಣವನ್ನು ಹೆಚ್ಚು ಖರ್ಚು ಮಾಡಲಿಕ್ಕೆ ಪ್ರಯತ್ನವನ್ನು ಮಾಡಿರತಕ್ಕಂಥಾದ್ದನ್ನು ನಾವು ಇಲ್ಲಿ ನೋಡುತ್ತೇವೆ. ಆದರೆ ಕೆಲವು ಜಿಲ್ಲೆಗಳಿಗೆ ಕೊಟ್ಟಿರತಕ್ಕಂಥ ಹಣ ಕಡಿಮೆ ಆಯಿತು ಎನ್ನುವ ಕೊರಗು ನನಗೆ ಇತ್ತು. ನಾನು ಮೈಸೂರು ಜಿಲ್ಲೆಯವನು. ಮೈಸೂರು ಜಿಲ್ಲೆಯ ಡೀಟೈಲ್ ಬಜೆಟ್‌ನ್ನು ನಾನು ತಿರುವಿ ಹಾಕಿ ನೋಡಿದೆ. Estimated proposals of Mysore District-irrigation, public works, ಇದನ್ನು ನೋಡಿದರೆ ನಮ್ಮಲ್ಲಿ ವಿಧಾನಸೌಧ ಕಟ್ಟಿಸುವುದಕ್ಕೂ ದುಡ್ಡು ಇಲ್ಲ. ವರುಣಾ ನಾಲೆ ಸಲುವಾಗಿ 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣದಲ್ಲಿ ಮೂರೂವರೆಯಿಂದ ನಾಲ್ಕು ಕೋಟಿ ರೂಪಾಯಿಗಳಷ್ಟು ಹಣವನ್ನು ಬರೀ ಸಂಬಳಕ್ಕೆ ಕೊಡುತ್ತಾರೆ. ಚಾನಲ್‌ಗಳಿಗೆ, ಡಿಸ್ಟ್ರಿಬ್ಯೂಟರಿಗಳಿಗೆ ಮತ್ತು ಉಪ ಕಾಲುವೆಗಳಿಗೆ ಕೊಟ್ಟಿರುವಂಥ ಹಣ ಕೇವಲ 80 ಲಕ್ಷ ರೂಪಾಯಿಗಳು ಮಾತ್ರ. ಬರೀ 80 ಲಕ್ಷ ರೂಪಾಯಿಗಳ ಕೆಲಸ ಮಾಡಲಿಕ್ಕೆ ನಾಲ್ಕು ಕೋಟಿ ರೂಪಾಯಿಯಷ್ಟು ನೌಕರರಿಗೆ ಸಂಬಳ ಕೊಡುವಂಥ ಪರಿಸ್ಥಿತಿ ಅದು ಹೇಗೆ ಬಂತು ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಇದರ ಬಗ್ಗೆ ಯಾರೂ ಯೋಜನೆ ಮಾಡಿರಲಿಲ್ಲ. ಸಂಬಳ ಕಡಿಮೆ ಇರಬೇಕು ಮತ್ತು ಡೆವಲಪ್‌ಮೆಂಟಲ್ ಮನಿ ಜಾಸ್ತಿ ಇರಬೇಕಾಗಿತ್ತು. ಆದರೆ ಅದರಲ್ಲಿ ಎಲ್ಲೋ ಒಂದು ಕಡೆ ಲೋಪ ಆಗಿದೆ. ಮಾನ್ಯ ಅಧ್ಯಕ್ಷರ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಸವಿನಯ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ರೀತಿ ವರ್ಷಕ್ಕೆ 80 ಲಕ್ಷ ರೂಪಾಯಿಗಳನ್ನು ವರುಣಾ ನಾಲೆಗೆ right Bank of KRS ನೀವು ಕೊಡುವುದಾದರೆ ಇನ್ನು ಹದಿನೈದು ವರ್ಷಗಳಾದರೂ ಅದು ಮುಗಿಯುವುದಿಲ್ಲ. 18 ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದ್ದಂಥ ವರುಣಾ ಚಾನಲ್ ಇವತ್ತು ಎಸ್ಟಿಮೇಟ್ 340 ಕೋಟಿ ರೂಪಾಯಿಗಳಿಗೆ ಆಗಿದೆ ಎಂದರೆ ಇದು ಯಾರ ಹಣ? ಹೀಗಾದರೆ ಈ ಕೆಲಸವನ್ನು ಏಕೆ ಮಾಡಬೇಕು? ಇದೇ ರೀತಿ ಕಡಿಮೆ ಹಣ ಕೊಟ್ಟರೆ ಇನ್ನು

10-12 ವರ್ಷಗಳಾದರೂ ಕೆಲಸ ಮುಗಿಯುವುದಿಲ್ಲ. ಆದ್ದರಿಂದ ಎಲ್ಲಿ ಸಂಬಳಕ್ಕೆ ಕೊಡುತ್ತಿರುವ ಹಣಕ್ಕಿಂತ ಒಂದರಿಂದ 5 ರಷ್ಟು ಹೆಚ್ಚಿಗೆ ಡೆವಲಪ್‌ಮೆಂಟ್‌ಗೆ ಹಣ ಕೊಟ್ಟರೆ ಮಾತ್ರ ಸ್ವಲ್ಪ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬಜೆಟ್‌ನಲ್ಲಿನ ಫಿಗರ್ಸ್‌ನ್ನು ನೋಡಿದಾಗ ನನಗೆ ಒಂದು ವಿಚಾರ ಮನವರಿಕೆಯಾಗುವಂಥಾದ್ದು ಏನೆಂದರೆ, 2004-2005ರ ಸಾಲಿಗೆ ಫಿಸಿಕಲ್ ಡಿಫಿಸಿಟ್ ಏನಿದೆ ಇದು ಶೇಕಡ 3ರಷ್ಟಕ್ಕೆ ನಿಲ್ಲಿಸಲು ಪ್ರಯತ್ನ ಮಾಡಿದ್ದಾರೆ. This is a laudable one. ಈ ಒಂದು constraint ಒಳಗಡೆ 3 ಪರ್ಸಂಟ್ ಫಿಸಿಕಲ್ ಡಿಫಿಸಿಟ್‌ಗೆ ತಂದಿರತಕ್ಕಂಥಾದ್ದು ಒಂದು ಒಳ್ಳೆಯ ಬೆಳವಣಿಗೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಕೆಲವು ಇಲಾಖೆಗಳು ಸಿದ್ಧಪಡಿಸಿದಂಥ ಮಧ್ಯಮಾವಧಿ ಆರ್ಥಿಕ ಯೋಜನೆಗಳು ಏನಿವೆ, ಇವುಗಳನ್ನು ಜಾರಿಗೆ ತರಲಿಕ್ಕೆ ಸರ್ಕಾರ ಮುಂದಾಗಿದೆ. ಇಯರ್ಲಿ ಬೇಸ್ಡ್ ಪ್ರಾಜೆಕ್ಟ್ಸ್ ಏನಿವೆ ಅವುಗಳ ಮಧ್ಯೆ ಮಧ್ಯಮಾವಧಿ ಆರ್ಥಿಕ ಯೋಜನೆಗಳನ್ನು ಕೂಡ ಅಂದರೆ ಎಂ.ಟಿ.ಎಫ್.ಪಿ. ಈ ಯೋಜನೆಗಳು ಇವು ಕಲ್ಯಾಣ, ವೈದ್ಯಕೀಯ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ ಇವೆಲ್ಲ ಜಾರಿಯಾಗುತ್ತದೆ. ಅದನ್ನು ಕೂಡ ಜಾರಿಗೊಳಿಸುತ್ತೇವೆ ಎನ್ನತಕ್ಕಂಥ ಮಾತನ್ನು ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಅಭಯ ಕೊಟ್ಟಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಕೃಷಿಗೆ ಆಧ್ಯತೆ ಕೊಟ್ಟಿರುವಂಥಾದ್ದು, ನೀರಾವರಿಗೆ ಆದ್ಯತೆ ಕೊಟ್ಟಿರುವಂಥಾದ್ದು this is purely a development-oriented. ಇದರಲ್ಲಿ ಯಾವ ಲೆಫ್ಟಿಸಂ ಇಲ್ಲ, ರೈಟಿಸಂ ಇಲ್ಲ. It is purely a middlism. ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರಿನಲ್ಲಿ ಒಂದು ದೊಡ್ಡ ಏರ್ ಪೋರ್ಟ್‌ನ್ನು ಕಟ್ಟಬೇಕೆನ್ನತಕ್ಕಂಥ ಏರ್ಪಾಡನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಏನು ಮಾಡಿದ್ದಾರೆ, ಇನ್ನು ಕೆಲವೇ ದಿನಗಳಲ್ಲಿ ಅದು ಕಾರ್ಯಗತವಾಗುತ್ತದೆ. ಈ ಏರ್ ಪೋರ್ಟ್ ಬರುವುದರಿಂದ ನಮ್ಮ ಹಳ್ಳಿಯವರು ಏರೋಪ್ಲೇನ್‌ನಲ್ಲಿ ಹೋಗುವುದಿಲ್ಲ. ಆದರೆ ಆ ಹಳ್ಳಿಯವನು ಬೆಳೆದಂಥ ಪದಾರ್ಥಗಳು ಎಕ್ಸ್ ಪೋರ್ಟ್ ಆಗಲಿಕ್ಕೆ ಒಂದು ಒಳ್ಳೆಯ ಅವಕಾಶವಾಗುತ್ತದೆ. ಇದರಿಂದ ಆತನು ಬೆಳೆದ ಪದಾರ್ಥಕ್ಕೆ ಒಳ್ಳೆಯ ರೇಟ್ ಬರುತ್ತದೆ. ಬೆಂಗಳೂರಿನ ಸುತ್ತಮುತ್ತ ಬೇಕಾದಷ್ಟು ಹೂವುಗಳನ್ನು ಬೆಳೆಯುತ್ತಾರೆ. ಆ ಬೆಳೆದಂಥ ಹೂವುಗಳನ್ನು ಮಾರಾಟ ಮಾಡುವುದಕ್ಕಾಗದೆ ಇವತ್ತು ರೈತ ಒದ್ದಾಡುತ್ತಿದ್ದಾನೆ. ಅದನ್ನು ಹೊರದೇಶಕ್ಕೆ ಕಳುಹಿಸಲಿಕ್ಕೆ ಏರ್‌ಪೋರ್ಟ್ ಬರುವುದರಿಂದ ಅನುಕೂಲವಾಗುತ್ತದೆ. ಇವತ್ತು ತೋಟಗಾರಿಕೆಗೆ ನಾವು ಬೇಕಾದಷ್ಟು ಹಣವನ್ನು ಕೊಡುತ್ತಿದ್ದೇವೆ. ಇಸ್ರೇಲ್‌ನಿಂದ 2-3 ಟೆಕ್ನಾಲಜಿಯನ್ನು ಇಂಪೋರ್ಟ್ ಮಾಡಿಕೊಂಡು ಎರಡು ಜಿಲ್ಲೆಯಲ್ಲಿ ನಾನು ಎಕ್ಸ್ ಪೆರಿಮೆಂಟ್ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಇವತ್ತು ಬಜೆಟ್‌ನಲ್ಲಿ ಹೇಳುತ್ತಿದ್ದಾರೆ. ಇದೆಲ್ಲಾ ಬೆಳವಣಿಗೆ ಆದಾಗ ಎಕ್ಸ್ ಪೋರ್ಟ್ ಮಾಡುವುದು ಹೇಗೆ? ಎಕ್ಸ್‌ಪೋರ್ಟ್ ಮಾಡಲಿಕ್ಕೆ ಒಂದು ಏಜೆನ್ಸಿ ಬೇಕಲ್ಲವೇ? ಆ ಎಜನ್ಸಿಯೇ ಈ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಆದಾಗ ಬಹುಶಃ ನಮ್ಮ ರೈತರಿಗೆ ಹೆಚ್ಚು ಹೆಚ್ಚಿನ ಬೆಲೆ ಸಿಗುತ್ತದೆ, ಅವರ ಆರ್ಥಿಕ ಶಕ್ತಿ ಕೂಡ ಬೆಳವಣಿಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾರುಕಟ್ಟೆ ಸೌಲಭ್ಯಗಳ ಬಗ್ಗೆ ನಾವು ಏನು ಯೋಚನೆ ಮಾಡುತ್ತೇವೆ ಇದನ್ನು ಕೂಡ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಜೊತೆ ಜೋಡಿಸಬಹುದು. ಈ ಫಲ ತಿನ್ನುವವರಿಗೆ, ಬಿರಿಯಾನಿ ತಿನ್ನುವವರಿಗೆ ಎಷ್ಟೋ ಲಕ್ಷ ಟನ್ ಬಾಸುಮತಿ ಅಕ್ಕಿ

ಬೇಕಾಗುತ್ತದೆಯಂತೆ. ಇವತ್ತು ಬಾಸುಮತಿ ಅಕ್ಕಿಯನ್ನು ನಮ್ಮ ರೈತ ಏನು ಬೆಳೆಯುತ್ತಾನೆ ಅದನ್ನು ಡೈರೆಕ್ಟ್ ಆಗಿ ಎಕ್ಸ್‌ಪೋರ್ಟ್ ಮಾಡಲಿಕ್ಕೆ ನಮ್ಮಲ್ಲಿ ವ್ಯವಸ್ಥೆ ಇಲ್ಲ. ಅದನ್ನು ಮಿಡ್ ವೆಸ್ಟ್ ಕಂಟ್ರೀಸ್ ಕಳುಹಿಸುವುದಾದರೆ ಹೆಚ್ಚಿನ ಬೆಲೆಯನ್ನು ರೈತ ಪಡೆಯುತ್ತಾನೆ. ಇದು ಇಂಟರ್ ನ್ಯಾಷನಲ್ ಏರ್‌ಪೋರ್ಟ್‌ನಿಂದ ಬರತಕ್ಕಂಥ ಒಂದು ಲಾಭ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ರೈತರ ಉತ್ಪನ್ನಗಳ ಬಗ್ಗೆ ನಾನು ಒಂದು ವಿಚಾರ ಹೇಳಬೇಕಾಗಿದೆ. ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಮುಸುಕಿನ ಜೋಳದ ಬಗ್ಗೆ ಒಂದು ಎಕ್ಸಿಬಿಷನ್ ಇಟ್ಟಿದ್ದರು. ಮುಸುಕಿನ ಜೋಳವನ್ನು ಕೋಳಿಗೆ, ದನಕ್ಕೆ ಮಾತ್ರ ತಿನ್ನುವುದಕ್ಕೆ ಹಾಕುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಕೃಷಿ ಮಂತ್ರಿಯವರನ್ನು ನಾನು ನೆನಪಿಸಿಕೊಳ್ಳುತ್ತೇನೆ. ಈ ಮೆಕ್ಕೆ ಜೋಳದಿಂದ 8-9 ತರಹದ ಇಂಡಸ್ಟ್ರೀಯಲ್ ಪ್ರೊಡಕ್ಷನ್‌ನ್ನು ಮಾಡಬಹುದು, ಜೊತೆಗೆ ಆಲ್ಕೋ ಹಾಲ್ ಕೂಡ ಮಾಡಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಗುಟ್ಟನ್ನು ತೋರಿಸಿಕೊಟ್ಟವರು ನಮ್ಮ ಮಾನ್ಯ ಕೃಷಿ ಇಲಾಖೆಯ ಮಂತ್ರಿಯವರು. ನಮ್ಮ ದೊಡ್ಡ ಲಾಬಿಯವರಿಗೆ ಇದು ಏನಾದರೂ ಗೊತ್ತಾಗಿಬಿಟ್ಟರೆ ಬಹುಶಃ ಮುಸುಕಿನ ಜೋಳವನ್ನು ಬೆಳೆಯುವುದಕ್ಕೆ ಬಿಡುವುದಿಲ್ಲವೇನೋ. ಇದನ್ನು ಬೆಳೆಯುವುದಕ್ಕೆ ತಾಪತ್ರಯ ಆಗಬಹುದೇನೋ. ಒಟ್ಟಿನಲ್ಲಿ ನಮ್ಮ ರೈತರಿಗೆ ಅನುಕೂಲ ಆಗುವ ಹಾಗೆ ಮಾಡಿದರೆ ಒಳ್ಳೆಯದು. ಇವತ್ತು ರಾಗಿಗೆ ಬೆಲೆ ಇಲ್ಲ, ಜೋಳಕ್ಕೆ ಬೆಲೆ ಇಲ್ಲ. ಬೆಲೆ ಕುಸಿದು ಹೋಗಿರುವಂಥ ರೈತರ ಇಂಥ ಪದಾರ್ಥಗಳು ಏನಿವೆ, ಇಂಥವುಗಳಿಗೆ ಕೂಡ ತಾವು ಎಕ್ಸಿಬಿಷನ್‌ಗಳನ್ನು ಕಂಡಕ್ಟ್ ಮಾಡಿ ಆ ಇಂಡಸ್ಟ್ರೀಯಲ್ ಪರ್‌ಪಸ್‌ಗೆ ಯೂಸ್ ಆಗುವಂಥ ಮೆಥಡ್‌ನ್ನು ಮಾಡಬೇಕು. ಈ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಗಮನ ಹರಿಸಬೇಕೆಂದು, ಮತ್ತು ಇಂಡಸ್ಟ್ರೀಯಲ್ ಪ್ರಾಡಕ್ಟ್ ಆಗಿ ಕನ್‌ವರ್ಟ್ ಆದಾಗಲೇ ರೈತರಿಗೆ ಬೆಲೆ ಸಿಗುತ್ತದೆ ಎನ್ನತಕ್ಕಂಥ ಮಾತನ್ನು ನಾವು ಯಾರೂ ಮರೆಯಬಾರದು. Unless agriculture is treated as industry, the agriculture will never be a productive one. It can never be helpful to my farmers community. ಇದನ್ನು ತಾವು ಮನಗಾಣಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಅಪೀಲ್ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರದ ಬಗ್ಗೆ ಹೆಮ್ಮೆ ಪಡುವಂಥ ಮತ್ತೊಂದು ವಿಚಾರ ಏನೆಂದರೆ ಈ ರೈತ ಸಂಪರ್ಕ ಕೇಂದ್ರ. ಇತ್ತೀಚೆಗೆ ಹೋಬಳಿ ಹೆಡ್ ಕ್ವಾರ್ಟರ್ಸ್ ನಲ್ಲಿ ಏನು ಒಂದೊಂದು ಮಾಡಿದ್ದಾರೆ, ಆ ಹೋಬಳಿ ಹೆಡ್ ಕ್ವಾರ್ಟರ್ಸ್‌ನ ರೈತ ಸಂಪರ್ಕ is nothing but agricultural clinics, ryots' clinics, farmers. clinics ಮನುಷ್ಯರಿಗೆ ಏನು ಕ್ಲಿನಿಕ್‌ಗಳಿವೆ, ಹಾಗೆಯೇ ರೈತರು ಬೆಳೆದಂಥ ಬೆಳೆಗಳಿಗೆ ಬರತಕ್ಕಂಥ ಸಮಸ್ಯೆಗಳಿಗೆ ಪರಿಹಾರ ಕೊಡತಕ್ಕಂಥ ಒಂದು ಕ್ಲಿನಿಕ್ ಎಂದರೆ ಈ ಒಂದು ರೈತ ಸಂಪರ್ಕ ಕೇಂದ್ರ ಆಗಿದೆ. ಇಲ್ಲಿಯವರೆಗೆ 12 ಕೋಟಿ ರೂಪಾಯಿಗಳಷ್ಟು ಉತ್ತಮವಾದ ಬೀಜಗಳನ್ನು ಅಲ್ಲಿ ಮಾರಾಟ ಮಾಡುವುದಕ್ಕೆ ಆಗುತ್ತಿದೆ. ಯಾರಾದರೂ ಕಳಪೆ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅವರು ಇವತ್ತು ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಮೊದಲು ಸಂತೆ ಮತ್ತಿತರ ಕಡೆ ಕಳಪೆ ಬೀಜಗಳನ್ನು ತಂದು ಮಾರಾಟ ಮಾಡುತ್ತಿದ್ದರು. ಇವತ್ತು ರೈತ ಕ್ಲಿನಿಕ್ ಕೇಂದ್ರಗಳು ಬಂದಮೇಲೆ ಅಷ್ಟು ಸುಲಭವಾಗಿ ಹಳ್ಳಿಯ ಕಡೆ ಹೋಗಿ ಬೇರೆ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ರೈತ ಕ್ಲಿನಿಕ್ ಕೇಂದ್ರಗಳು ಜನಗಳನ್ನು ಎಚ್ಚರಿಸುತ್ತಿದ್ದಾರೆ,

ಅವರು ಮಾಹಿತಿ ಕೊಡುತ್ತಿದ್ದಾರೆ, ವಿಚಾರ ಹೇಳುತ್ತಿದ್ದಾರೆ.

5.20 ಪಿ.ಎಂ.

ಹೀಗಾಗಿ ಈ ಸೀಡ್ಸ್ ಪ್ರೊಡಕ್ಷನ್ ಏನಿದೆ ಇದನ್ನು ಬಹಳ ಜನ ಲಾಭದಾಯಕವಾಗಿ ಮಾಡಿಕೊಂಡಿದ್ದರು, ಅದನ್ನು ನಿಲ್ಲಿಸುವುದಕ್ಕೆ ನಮ್ಮ ಸರ್ಕಾರ ಪ್ರಯತ್ನಿಸಿದಲ್ಲದೆ, ಉತ್ತಮವಾದ ಬಿತ್ತನೆಗಳನ್ನು ನಮ್ಮ ರೈತರಿಗೆ ಕೊಡುವುದರಲ್ಲಿ ಬಹಳ ಪ್ರಯತ್ನ ಮಾಡಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಗುರುಸ್ವಾಮಿಯವರೆ, ನಮ್ಮ ಪಟ್ಟಿಯಲ್ಲಿ ಮಾತನಾಡುವವರು 20 ಜನ ಇದ್ದಾರೆ, ನಿಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎ.ಎಸ್. ಗುರುಸ್ವಾಮಿ: ನೀವು ಹೆಸರು ಕರೆದಾಗ ಒಬ್ಬರೂ ಇರಲಿಲ್ಲ, ಈಗ ಬಂದರೆ ನಾನೇನು ಮಾಡಲಿ? ನನ್ನ ಮನವಿ ಏನೆಂದರೆ, ಬೆಳಿಗ್ಗೆ ಉಪಾಧ್ಯಕ್ಷರು 8-9 ಹೆಸರು ಕರೆದರೂ ಒಬ್ಬರೂ ಇಲ್ಲ, ತಾವು 9 ಜನರ ಹೆಸರನ್ನು ಕರೆದರೂ ಒಬ್ಬರೂ ಇಲ್ಲ, ಕೊನೇ ಪಕ್ಷ ಗುರುಸ್ವಾಮಿ ನೀವು ಮಾತನಾಡಿ ಎಂದು ಹೇಳಿದ್ದಕ್ಕೆ ನಾನು ಮಾತನಾಡುತ್ತಿದ್ದೇನೆ. ನಾಳೆ ಇನ್ನೂ ಸ್ವಲ್ಪ ವಿಚಾರ ಹೇಳಬೇಕು ಎಂದಿದ್ದೆ ಆದರೂ ಇವತ್ತೇ ಹೇಳಿಬಿಡುತ್ತೇನೆ. ದಯಮಾಡಿ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ನೀವು ಮಾತನಾಡಿ, ನಾನು ಕೇಳಿದ್ದು ನಿಮಗೆ ಇನ್ನು ಎಷ್ಟು ಹೊತ್ತು ಬೇಕಾಗಬಹುದು ಅಂತ?

ಶ್ರೀ ಎ.ಎಸ್. ಗುರುಸ್ವಾಮಿ: 'ಭೂಮಿ' ಕಾರ್ಯಕ್ರಮವನ್ನು ಹೊಸದಾಗಿ ಏನೂ ಇಂಟ್ರಡ್ಯೂಸ್ ಮಾಡಿದ್ದಾರೆ ಇದು ಬಹಳ ಅಪೀಲಾಗಿದ್ದು, ಸಾರ್ವಜನಿಕವಾಗಿ ರೈತರು ಇದನ್ನು ತುಂಬಾ ಸ್ವಾಗತಿಸಿದ್ದಾರೆ, ಏಕೆಂದರೆ ಅವರಿಗೆ ಕೊಡುವ ಡಾಕ್ಯುಮೆಂಟೇಷನ್ ಏನಿದೆ ಇವುಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘಗಳ ಮೂಲಕ ಕೊಡುವುದು ಬಹಳ ಒಳ್ಳೆಯ ಕಾರ್ಯವಾಗಿದ್ದು, ವೈಯಕ್ತಿಕವಾಗಿ ನಾನು ಇದನ್ನು ಇಂಟ್ರಡ್ಯೂಸ್ ಮಾಡಿದವರಿಗೆ ಹಾಗೂ ಇದರ ಕಾನ್ಸಫ್ಟ್ ಅನ್ನು ಜಾರಿಗೆ ತಂದಂಥವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ಇರಿಗೇಟೆಡ್ ಏರಿಯಾ ಒಟ್ಟಾರೆ ಪರ್ಸೆಂಟ್ ನೋಡಿದಾಗ ನಾವು 22 ಪರ್ಸೆಂಟ್ ಒಳಗೆ ಇದ್ದೇವೆಂದು ಯಾರೋ ಕೆಆರ್‌ಎಸ್ ಮೀಟಿಂಗ್ ನಲ್ಲಿ ಹೇಳಿದ್ದರು. I an subject to correction. ಆ 22 ಪರ್ಸೆಂಟ್ ಒಳಗಿರುವ ಇರಿಗೇಟೆಡ್ ಏರಿಯಾ ಇರುವ ಈ ರಾಜ್ಯದಲ್ಲಿ ಇನ್ನು ಒಂದು ಅಥವಾ ಒಂದೂವರೆ ವರ್ಷದೊಳಗೆ ನಮ್ಮ ನೀರಾವರಿ ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ರಾಷ್ಟ್ರಕ್ಕಾಗಿ ಹಲವಾರು ಯೋಜನೆಗಳನ್ನು ಅರ್ಪಿಸುವರು ಇದ್ದಾರೆ. ಸುಮಾರು 18 ಲಕ್ಷ ಎಕರೆಗಳನ್ನು ನೀರಾವರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. It is not a small achievement. Really, it is a big achievement, I tell you. We should pat the man who has taken pains, with all constraints.

ನಾವು ಇದನ್ನು ಈ ಪುಸ್ತಕದಲ್ಲಿ ನೋಡುತ್ತಿದ್ದೇವೆ. ಅಂಥ ಒಳ್ಳೆಯ ಎಫರ್ಟ್ಸ್ ಮಾಡಿದಂಥ ನಮ್ಮ ನಾಯಕರುಗಳಿಗೂ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ. ಈ ಒಣ ಬೇಸಾಯದ ಬಗ್ಗೆ

ಹೇಳುವುದಾದರೆ, ಸುಮಾರು 690 ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕ್ ನಿಂದ ಪಡೆದುಕೊಂಡು 61,882 ಹೆಕ್ಟೇರ್ ಪ್ರದೇಶದಲ್ಲಿ 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಇದು ತುಂಬಾ ಅನುಕೂಲಕರವಾಗಿರತಕ್ಕಂಥದ್ದು, ಅದರಲ್ಲೂ ವಿಶೇಷವಾಗಿ, ಕೋಲಾರ, ಮೈಸೂರು, ಕೆಲವು ಡ್ರೈಬೆಲ್ಟ್ ಏರಿಯಾ ಗಳು ಏನಿವೆ ಇದಕ್ಕೆ ಬಹಳ ಪೂಜನೀಯವಾಗಿ ಕಾಣುವಂಥ ಪ್ರಾಜೆಕ್ಟ್ ಎಂದರೆ, ಈ ವಿಶ್ವಬ್ಯಾಂಕ್ ನೆರವಿನಿಂದ ಬಂದಿರುವ ಒಣ ಭೂಮಿ ಅಭಿವೃದ್ಧಿ ಯೋಜನೆ ಏನು ಇದೆ ಇದು ಬಹಳ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಇದನ್ನು ಸ್ವಾಗತಿಸುತ್ತೇನೆ. ವಿಶೇಷವಾಗಿ ಹೇಳುವುದಾದರೆ ಈ ತೋಟಗಾರಿಕೆ ಇಲಾಖೆಯವರು ಈ ಸಲ ಇಸ್ರೇಲ್ ತಂತ್ರಜ್ಞಾನದಿಂದ ಎರಡು ತೋಟಗಾರಿಕೆ ಫಾರಂಗಳನ್ನು ಕೈಗೆತ್ತಿಕೊಂಡಿದ್ದಾರೆ. ಮಳೆ ಬಾರದೆ ಇರುವ ಪ್ರದೇಶ ಎಂದರೆ ಇಸ್ರೇಲ್, ಕುಡಿಯುವುದಕ್ಕೆ ನೀರು ಸಿಕ್ಕುವುದಿಲ್ಲ ಪೆಟ್ರೋಲ್ ಮಾತ್ರ ಬೇಕಾದಷ್ಟು ಸಿಕ್ಕುತ್ತದೆ. ಅಂಥ ದೇಶದಲ್ಲಿರುವ ಈ ಮಾಡರ್ನ್ ಹಾರ್ಟಿಕಲ್ಚರ್ ಟೆಕ್ನಾಲಜಿ ಏನಿದೆ ಇದನ್ನು ಎರಡು ಪಾರಂನಲ್ಲಿ ಕೈಗೆತ್ತಿಕೊಂಡು ಸುಮಾರು ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾಡಲ್ ಫಾರಂ ಆಗಿ ಮಾಡಿ, ಇವತ್ತು ನಮ್ಮ ರೈತರು ನೀರು ನೀರು ಬೇಕು ಎನ್ನುವ ಏನು ಹಾಹಾಕಾರ ಎದ್ದಿದೆ ಅದಕ್ಕೆ ಆ ಎರಡು ಫಾರಂಗಳು ಉತ್ತರ ಕೊಡುತ್ತದೆ ಎಂದು ನನಗೆ ಅನ್ನಿಸುತ್ತದೆ. ಆ ಇಸ್ರೇಲ್‌ನಲ್ಲಿರುವ ಟೆಕ್ನಾಲಜಿಯನ್ನು ಇಲ್ಲಿ ಜಾರಿಗೆ ತಂದಿರುವುದು ಸ್ವಾಗತಾರ್ಹವಾದ ಸಂಗತಿ ಎಂದು ಹೇಳುತ್ತಾ, ಗ್ರಾಮ ತೋಟಗಾರಿಕೆ ಎನ್ನುವ ಮತ್ತೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮುಖೇನ ಗ್ರಾಮ ಗ್ರಾಮದಲ್ಲಿ ತೋಟಗಾರಿಕೆ ಏನು ಲಭ್ಯತೆ ಇಲ್ಲ ಅದನ್ನು ಕೂಡ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ತರುವಂಥ ವಿಶೇಷವಾದ ಪ್ರಯತ್ನವನ್ನು ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ. ನೀರಾವರಿ ಸಾಮರ್ಥ್ಯವನ್ನು ಅತಿ ಹೆಚ್ಚಿನ ಆದ್ಯತೆ ನೀಡಿ 2790 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ, ಇದು ಬಹಳ ಸ್ವಾಗತಾರ್ಹವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು 2002-2003ನೇ ಸಾಲಿನಲ್ಲಿ ಈ ಬಜೆಟ್‌ನಲ್ಲಿ ಒಂದು ಕಮಿಟ್ ಮೆಂಟ್ ಮಾಡಿಕೊಂಡಿದ್ದಾರೆ. ಏನೆಂದರೆ, ಆಲಮಟ್ಟಿ ಅಣೆಕಟ್ಟು ಸಮರ್ಪಣೆ ಆಗಿದೆ. ಆದರೆ ಬೆಣ್ಣೆ ತೂರ, ಲೋವರ್ ಮುಲ್ಲಮರಿ, ಚುಲ್ಕಿನಾಲೆ, ಮಸ್ಕಿನಾಲೆ ಮತ್ತು ನಾರಾಯಣಪುರ ಬಲದಂಡೆ ಕಾಲುವೆ ಹಾಗೂ ವರುಣಾ ಚನಾಲ್ ಇವುಗಳನ್ನು ಈ ಸಾಲಿನಲ್ಲಿ ರಾಷ್ಟ್ರಕ್ಕೆ ಸಮರ್ಪಿಸಲಾಗುವುದು ಎನ್ನುವ ಮಾತನ್ನು ಹೇಳಿದ್ದಾರೆ. ಇಂಥ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಹಣ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟೊಂದು ಕಾರ್ಯಕ್ರಮಗಳನ್ನು ರೈತರಿಗಾಗಿ ರಾಷ್ಟ್ರಕ್ಕಾಗಿ ಸಮರ್ಪಣೆ ಮಾಡುತ್ತಿರುವುದು ತುಂಬಾ ಸ್ವಾಗತಾರ್ಹವಾದ ವಿಚಾರ. ನೀರು ಕೊಡುವುದು ಮುಖ್ಯ ಅಲ್ಲಿ, ನೀರು ಕೊಟ್ಟ ಮೇಲೆ ಮತ್ತೊಂದು ರೀತಿಯ ಸಮಸ್ಯೆಗಳು ಹಳ್ಳಿಗಳಲ್ಲಿ ಬರುತ್ತವೆ, ಬರೀ ನೀರಿಗಾಗಿ ಜಗಳ, ಕೋರ್ಟ್ ವ್ಯಾಜ್ಯ, ಇವುಗಳೆಲ್ಲವನ್ನು ಬಗೆಹರಿಸಲು ರೈತರು ತಮ್ಮ ತಮ್ಮ ಮಟ್ಟದಲ್ಲಿ ಸಹಕಾರಿ ಸಂಘಗಳನ್ನು ರಚಿಸಿಕೊಂಡು ಒಂದು ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಇವರು ಅನುಕೂಲ ಮಾಡಿಕೊಟ್ಟಿದ್ದಾರೆನ್ನುವ ಮಾತನ್ನು ತುಂಬು ಹೃದಯದಿಂದ ನಾನು ಹೇಳಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ ನಮ್ಮ ಸರ್ಕಾರದಲ್ಲಿ ಇತ್ತೀಚೆಗೆ ಪಾರದರ್ಶಕತೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಅನೇಕ ಎಡರುತೊಡರುಗಳು ಬಂದಿದ್ದರೂ ಸಹ, ಈಗ ಅವರು ಈ-ಟೆಂಡರ್ ವ್ಯವಸ್ಥೆಯನ್ನು ಆರಂಭಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ಬಹುಶಃ

90 ಪರ್ಸೆಂಟ್ ಫುಲ್‌ಪ್ರೂಫ್ ಆಗುತ್ತದೆನ್ನುವ ನಂಬಕೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳುವುದಾದರೆ, ಮಾನ್ಯ ಮಂತ್ರಿಗಳು ಬಂದಿಲ್ಲ, ಆದರೆ ನನ್ನ ಅನುಭವದಲ್ಲಿ ಹೇಳುವುದಾದರೆ, ಮಾನ್ಯ ಅಬ್ದುಲ್ ನಜೀರ್ ಸಾಬ್ ಇದ್ದಾಗ ವಿಕೇಂದ್ರೀಕರಣ ವ್ಯವಸ್ಥೆ ತರುವುದರ ಮೂಲಕ ಜನತೆಯು ತಮ್ಮ ಕಲ್ಯಾಣವನ್ನು ಬಯಸಿಕೊಳ್ಳುತ್ತಾರೆ, ಜನತೆಯೇ ತಮ್ಮ ಕೆಲಸ ಮಾಡಿಕೊಳ್ಳುತ್ತಾರೆ, ಜನತೆಯೇ ನಿಂತುಕೊಂಡು ಮಾಡುವ ಕೆಲಸದ ಬಗ್ಗೆ ಸೂಪರ್‌ವಿಷನ್ ಮಾಡುತ್ತಾರೆ ಎನ್ನುವ ಭಾವನೆ ನನಗಿತ್ತು. ಆದರೆ ಇವತ್ತು ನಡೆಯುತ್ತಿರುವ ಪರಿಸ್ಥಿತಿ ನೋಡಿದರೆ, It is nothing but a decentralisation of corruption. It is nothing but a decentralisation of the agency to make money. Everybody sits for the share. ಯಾವ ಮೆಂಬರ್ ತೆಗೆದುಕೊಂಡರೂ ನನ್ನ ಕ್ಷೇತ್ರ, ನನ್ನ ಕ್ಷೇತ್ರ, ಅಷ್ಟು ಕೊಡು, ಇಷ್ಟು ಕೊಡು, ನನ್ನ ಕಡೆಯವನಿಗೆ ಕೆಲಸ ಕೊಡು; ಇದೇ ಆಗಿದೆ, ಬೇರೆ ಏನು ಕೆಲಸ ಇಲ್ಲವೆ? ಇವರ ಜಗಳ ಪರಿಹರಿಸಲು ಗ್ರಹಚಾರಕ್ಕೆ ನಾವು ಎಂಎಲ್ ಎಗಳಾಗಿ ಬರಬೇಕಾ? ನಮಗೆ ಬೇರೆ ಇನ್ನೇನೂ ಇಲ್ಲವೇ ಇಲ್ಲ. ಇಂಥ ವ್ಯವಸ್ಥೆಯಿಂದ ಕೂಡಿರುವ ಈ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ನಾವು ಕಳೆದ ಸಭೆಯಲ್ಲಿ ಮಾನ್ಯ ಸಿಂಧ್ಯಾರವರು ಸೇರಿದಂತೆ ಅನೇಕ ವಿರೋಧ ಪಕ್ಷದ ನನ್ನ ಮಿತ್ರರೂ ಕೂಡ ಅರ್ಜಿ ಮಾಡಿದ್ದಾರೆ. ಇದರ ಬಗ್ಗೆ ಮರುಚಿಂತನೆ ನಡೆಸಿ, ಒಂದು ಕಮಿಟಿ ರಚಿಸಿ, ಯಾವ ರೀತಿ ನಡೆಸಿದರೆ ಈ ವ್ಯವಸ್ಥೆ ಸರಿ ಹೋಗುತ್ತದೆ ಎಂಬುದರ ಬಗ್ಗೆ ಮರುಚಿಂತನೆ ಮಾಡಬೇಕೆಂದು ಹಾಗೂ ಈ ವ್ಯವಸ್ಥೆಯನ್ನು ಸರಿಯಾದ ಫುಟಿಂಗ್‌ನಲ್ಲಿ ಇಡಲಿಕ್ಕೆ ಬರುತ್ತದೆ ಎನ್ನುವ ಅಪೀಲ್ ಮಾಡುವುದಕ್ಕೆ ನಾನು ಇಚ್ಛಿಸುತ್ತೇನೆ. ನಾವು ಎಲ್ಲರೂ ಕೂಡ ಸ್ವಲ್ಪ ಹೆಚ್ಚು ಕಡಿಮೆ 90 ಪರ್ಸೆಂಟ್ ಹಳ್ಳಿಗಾಡಿನಿಂದ ಬಂದಿರತಕ್ಕಂಥ ಸದಸ್ಯರಾಗಿದ್ದೇವೆ. ನಮಗೆ ಏನು ನೋವು ಎಂದರೆ, ಈ ಬಿಲ್ ಕಲೆಕ್ಟರ್ಸ್ ಏನು ಇದ್ದಾರೆ ಅವನು ಪಂಚಾಯಿತಿ ಎಂಪ್ಲಾಯಿ, ಅವನು ಅಲ್ಲಿ ಕೆಲಸಕ್ಕೆ ಸೇರಿ ಅಲ್ಲಿಯೇ ನಿವೃತ್ತಿಯಾಗುತ್ತಾನೆ he is much more powerful than any MLA, much more powerful than any village panchayat. ಅವನನ್ನು ವರ್ಗಾವಣೆ ಮಾಡುವುದಾಗಲಿ, ಅವನ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದಾಗಲಿ, ಬರುವುದಿಲ್ಲ. ಪಂಚಾಯಿತಿಯವರು ಆ್ಯಕ್ಷನ್ ತೆಗೆದುಕೊಳ್ಳಬೇಕು, ಅವನು ಅಲ್ಲಿಯವನಾಗಿರುವುದರಿಂದ ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದಿಲ್ಲ, ಆದ್ದರಿಂದ ಈ ಬಗ್ಗೆ ತಾವು ಯೋಚಿಸಬೇಕು. ಹಳ್ಳಿಗಳಲ್ಲಿರುವ ವಾಟರ್ ಮೆನ್‌ಗಳು, they are the politicians of the vilalge. They create the rift in the village. They are creating the communal disharmony in the village. ಅವರ ಬಗ್ಗೆ ನಾವು ಇವತ್ತು ಆ್ಯಕ್ಷನ್ ತೆಗೆದುಕೊಳ್ಳಲಿಕ್ಕೆ ಆಗುತ್ತಿಲ್ಲ, ಪಂಚಾಯಿತಿ ಯವರನ್ನೆ ಆಟ ಆಡಿಸಿಕೊಂಡು ಕುಳಿತಿರುತ್ತಾರೆ, ಅಲ್ಲಿ ಛೇರ್ಮನ್ ಒಂದು ಕಡೆ, ವೈಸ್ ಛೇರ್ಮನ್ ಒಂದು ಕಡೆ, ಮೆಂಬರ್ಸ್ ಒಂದು ಕಡೆ, ಎಲ್ಲರನ್ನು ಡಿವೈಡ್ ಮಾಡಿಕೊಂಡು they rule the panchayat, actually, ಇದರ ಬಗ್ಗೆ there should be a re-thinking on the village system, what we are now facing. ನಾನು ನನ್ನ ಕಣ್ಣಿನಿಂದ ಕಂಡಂಥ ಅನೇಕ ಗ್ರಾಮಗಳಲ್ಲಿನ ಜಗಳಾಟ ನೋಡಿ ನಾನು ಏಕೆ ಎಂಎಲ್‌ಎ ಆಗಿ ಆಯ್ಕೆಯಾದೆ, ಜಗಳ ಬಿಡಿಸುವುದೇ ನನ್ನ ಕೆಲವಾಗಿದೆಯೆಲ್ಲಾ ಎಂದು

ಬೇಸರವಾಗಿದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಮರುಚಿಂತನೆ ಮಾಡಲೇಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ರಸ್ತೆ ಬಗ್ಗೆ ಬಹಳ ಕಾಳಜಿ ವಹಿಸಿದ್ದಾರೆ, ಕಾಳಜಿ ಇದೆ, ಮಮತೆ ಇದೆ, ಮುತುವರ್ಜಿ ಇದೆ, ಆದರೆ ಎಲ್ಲಾ ಜಿಲ್ಲೆಗಳಿಗೂ ಸಮನಾಗಿ ಬಂದಿಲ್ಲವಲ್ಲಾ ಎನ್ನುವ ಕೊರಗು ಇದೆ. ತಾವು ಯಾರಾದರೂ ಬಜೆಟ್ ಓದಿ ನೋಡಿದರೆ ಗೊತ್ತಾಗುತ್ತದೆ. ಎಲ್ಲಾ ಜಿಲ್ಲೆಗಳಿಗೂ ಸಮನಾಗಿ ಕೊಟ್ಟಿರುವುದನ್ನು ನಾವು ಕಾಣುತ್ತಿಲ್ಲ. Where has gone to your socialism? Now, we have to ask the socialism to come to our rescue.

ನಾನು ಯಾವ ಜಿಲ್ಲೆಯ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ, ಹೇಳಿದರೆ ಜಗಳ ಹತ್ತಿಕೊಂಡು ನಾವು ಕದನ ಮಾಡಬೇಕಾಗುತ್ತದೆ, ಎಲ್ಲಾ ಜಿಲ್ಲೆಗಳಿಗೂ ಸಮಾನವಾಗಿ ಕೊಡುವುದು ಬಹಳ ಮುಖ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಬಜೆಟ್‌ನಲ್ಲಿ important technique of framing the budget ಎಲೆಮೆಂಟ್ ಬಗ್ಗೆ ನಮ್ಮ ಅಧಿಕಾರಿಗಳಾಗಲಿ, ನಾವಾಗಲಿ, ಯೋಚಿಸುವುದೇನೆಂದರೆ, attention should be given to the human development. Human deveopment ಈ ಕಾನ್ಸ್ ಫ್ಟ್ ಏನಿದೆ, that is to make the man to work, to earn, to share with others, to pay the tax.

ಈ ಒಂದು ಹ್ಯೂಮನ್ ಡೆವಲಪ್ ಮೆಂಟ್ ಆಗಬೇಕು. This is one of the concepts which any budget should also have a goal when they frame the budget. ಈ ಒಂದು ಹ್ಯೂಮನ್ ಡೆವಲಪ್ ಮೆಂಟ್, ಟೆಂಡರ್ ಮೆಂಟ್, ಅನ್ನು ಬೆಳೆಸುವ ಕಾರ್ಯಕ್ರಮಕ್ಕೆ ನಮ್ಮ ಮುಖ್ಯಮಂತ್ರಿಗಳು ಈ ಗ್ರಾಮಮೀಣಾಭಿವೃದ್ಧಿಗೆ ಒಂದು ಟ್ರೈನಿಂಗ್ ಇಡಬೇಕು ಎನ್ನುವ "ರುಡ್‌ಸೆಟ್" ಎಂದು ಯೋಚಿಸಿದ್ದಾರೆ. ರೂರಲ್ ಡೆವಲಪ್ ಮೆಂಟ್ ಟ್ರೈನಿಂಗ್ ಇನ್ಸ್ ಟ್ಯೂಟ್ ಎಂದು ಒಂದು ಕಾರ್ಯಕ್ರಮವನ್ನು ಇಲ್ಲಿ ನಿಯೋಜಿಸಿದ್ದಾರೆ. ಇದು ಪ್ರತಿ ಪಂಚಾಯಿತಿ ಹಾಗೂ ಪ್ರತಿ ಊರುಗಳಿಗೂ ಈ ಸ್ಕೀಮ್ ತಲುಪಬೇಕು. ಇದು ಎಲ್ಲಾ ಕಡೆ ತಲುಪಿದಾಗ ಶೋಂಬೇರಿ ಕಟ್ಟೆ ಆಗಿರತಕ್ಕಂಥ ನಮ್ಮ ಊರು, ಹೋಟೆಲ್ ಹಾಗೂ ಬಾರ್‌ಗಳಲ್ಲಿ ಜನಸಂದಣಿ ಕಡಿಮೆಯಾಗುತ್ತದೆ. ಅವಶ್ಯಕವಾಗಿ ಬೇಕಾಗಿರತಕ್ಕಂಥ 'ರುಡ್‌ಸೆಟ್' ಸ್ಕೀಂನ್ನು ಜಾಲು ಮಾಡಿದರೆ ಬಹಳ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ವಿಶೇಷವಾಗಿ ಶಾಸಕರ ಮಾನ ಮತ್ತು ಗೌರವವನ್ನು ಕಾಪಾಡಿದ್ದಾರೆ. ಕಾರಣ ಏನೆಂದರೆ, ನಾವು ಜಿಲ್ಲಾ ಪಂಚಾಯತ್ ಸಭೆಗೆ ಹೋಗಿ ಅವರ ಹತ್ತಿರ ಬಯಸಿಕೊಳ್ಳುವುದು ಸಾಕಾಗಿರುವುದರಿಂದ ನಮಗೆ ಈಗ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 50 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದೆವು. ಆದರೆ, ಒಂದೊಂದು ಕ್ಷೇತ್ರದ ರಸ್ತೆಗಾಗಿ 1 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅಂತೂ, ನನ್ನ ಮಾನ ಉಳಿಯಿತು. ಹಾಗೆಯೇ ನಿಮ್ಮೆಲ್ಲರ ಮಾನ ಉಳಿದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಹಣವನ್ನು ಜಾಗ್ರತೆ ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಈಗ 12.5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಉಳಿದ 12.5 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ. ಆದರೆ ನಮ್ಮ ಮೈಸೂರು ಜಿಲ್ಲೆಗೆ ಇನ್ನೂ ಬಂದಿಲ್ಲ. ಮಾಗಡಿ ತಾಲ್ಲೋಕಿಗೆ ಬಂದಿರಬಹುದೇನೋ ನನಗಂತೂ

ಗೊತ್ತಿಲ್ಲ. ಒಟ್ಟಿನಲ್ಲಿ ಬಾಕಿ ಉಳಿದಿರತಕ್ಕಂಥ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು. ಇವತ್ತಿನದಿವಸ ಜಿಲ್ಲಾ ಪಂಚಾಯತ್ ಹಿಂಸೆಯಿಂದ ಶಾಸಕರ ಮಾನ ಮತ್ತು ಗೌರವವನ್ನು ಕಾಪಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಈ ಸಂದರ್ಭದಲ್ಲಿ ವಂದಿಸುತ್ತೇನೆ.

ಇನ್ನು ಸ್ರೀ ಶಕ್ತಿ ಕಾರ್ಯಕ್ರಮದ ಬಗ್ಗೆ ನನ್ನದೇ ಆದಂಥ ಒಂದು ಒಲವು ಇದೆ. This fellow loves woman ಎಂದು ಆಗಬಾರದು. ಸ್ರೀ ಶಕ್ತಿ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸತಕ್ಕಂಥ ಹಿನ್ನೆಲೆ ಏನೆಂದರೆ, ಹಳ್ಳಿಗಳಲ್ಲಿರತಕ್ಕಂಥ ಹೆಣ್ಣುಮಕ್ಕಳು ಪೆದ್ದರು ಮತ್ತು ಓದುವುದಕ್ಕೆ ಬರುವುದಿಲ್ಲ ಹಾಗೂ ಯಾವುದೇ ಒಂದು ರೀತಿಯ ಸಂಘ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದೆವು. ಆದರೆ, ಇವತ್ತಿನದಿವಸ ಸಂಘ ಮಾಡುವುದಕ್ಕೆ ಒಬ್ಬರ ಮೇಲೊಬ್ಬರು ಬೀಳುತ್ತಿದ್ದಾರೆ. ಇವತ್ತಿನದಿವಸ ಒಂದೊಂದು ಊರಿನಲ್ಲಿ ಸುಮಾರು 8 ರಿಂದ 10 ಸಂಘಗಳಿವೆ. ನಾಳೆ ದಿವಸ ಈ ಸಂಘಗಳು ಜಗಳ ಮಾಡಿಕೊಂಡು ನಮ್ಮ ಮೇಲೆ ಹುಲಿ ಸವಾರಿ ಮಾಡುತ್ತಾರೆಂದು ಕಾಣುತ್ತದೆ. ಹಾಗೆಯೇ ಇನ್ನು ಮುಂದೆ ಗಂಡಸರು ಮನೆಗೆ ಬೀಗ ಹಾಕಿಕೊಂಡು ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ ಎಂದು ನಮಗೆ ಭಯ ಬಂದಿದೆ. ಇವತ್ತಿನದಿವಸ ಸ್ರೀ ಶಕ್ತಿ ಪ್ರಬಲಿತವಾಗಿ ಬೆಳೆಯುತ್ತಿರುವುದು ಬಹಳ ಸಂತೋಷದ ವಿಷಯ. In the right way it should be channelised. ಸ್ರೀ ಶಕ್ತಿಗೆ ಸಂಬಂಧಪಟ್ಟಂಥ ಮಂತ್ರಿಗಳು ಇವತ್ತು ಇಲ್ಲಿಗೆ ಬಂದಿಲ್ಲ. my humble request to you, Sir, is ಇವತ್ತಿನದಿವಸ ಸ್ರೀ ಶಕ್ತಿಯನ್ನು ಸರಿಯಾಗಿ ಚಾನಲೈಜ್ ಮಾಡದೇ ಇದ್ದರೆ, ಹುಲಿ ಸವಾರಿ ಮಾಡಿದಂತಾಗುತ್ತದೆ. ಹಾಗೆಯೇ ಗಂಡಸರೆಲ್ಲಾ ಹೆಂಗಸರ ಬಾಯಿಗೆ ಸಿಕ್ಕಿ ಹಾಕಿಕೊಂಡು ನರಳಬೇಕಾಗುತ್ತದೆ. ಆನಂತರ ನಾವೇ ಒಂದು ಸಂಘ ಮಾಡಿಕೊಂಡು ನಮ್ಮ ಮಕ್ಕಳನ್ನು ಸಾಕುವುದಕ್ಕೆ ನಮ್ಮ ಹೆಂಡತಿಯರನ್ನು ಮನೆಗೆ ವಾಪಸ್ಸು ಬರಬೇಕೆಂದು ಕೇಳಬೇಕಾದ ಪರಿಸ್ಥಿತಿ ಬರುತ್ತದೆ. ದಯವಿಟ್ಟು ಆ ಪರಿಸ್ಥಿತಿಗೆ ನೂಕಬಾರದೆಂದು ಸಂಬಂಧಪಟ್ಟಂಥ ಮಂತ್ರಿಯವರಲ್ಲಿ ಸವಿನಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲಾ ಶಾಸಕರ ಪರವಾಗಿ ನನ್ನದೊಂದು ವಿನಂತಿ ಏನೆಂದರೆ, 5 ರಿಂದ 10 ಸಾವಿರ ರೂಪಾಯಿಗಳನ್ನು ಒಂದೊಂದು ಸಂಘಕ್ಕೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಇವರು ಕೊಟ್ಟಿದ್ದರು. ಆದರೆ, ಸದರಿ ಹಣ ಇದುವರೆಗೂ ಬಿಡುಗಡೆಯಾಗಿಲ್ಲ. I am subject to correction, Sir.

ಅಧ್ಯಕ್ಷರು:- ಬಿಡುಗಡೆಯಾಗಿದೆ.

SRI. A.S. GURUSWAMY:- I am subject to correction. I have no egoism. ಈಗ ಬಿಡುಗಡೆಯಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ನಮಗಂತೂ ಇನ್ನೂ ಬಂದಿಲ್ಲ.

ಅಧ್ಯಕ್ಷರು:- ಬಜೆಟ್ ಪುಸ್ತಕದ ಪ್ರತಿಯೊಂದು ಪ್ಯಾರಾಗ್ರಾಫ್‌ನ್ನು ತಾವು ರಿವ್ಯೂ ಮಾಡುತ್ತಿದ್ದೀರಿ.

ಶ್ರೀ ಎ.ಎನ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೆ, ನನಗೆ ಯಾವುದು ಸರಿಯೆಂದು ಕಾಣುತ್ತದೆಯೋ ಅದನ್ನು ಹೇಳುತ್ತಿದ್ದೇನಷ್ಟೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗುರುಸ್ವಾಮಿಯವರು ಮಾತನಾಡುತ್ತಿದ್ದಾರೆ. ಅಂದರೆ, ಮುಂದಿನಸಾರಿ ಇವರಿಗೆ ಚಾನ್ಸ್ ಇರಬಹುದೆಂದು ಕಾಣುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಸದರಿ ಬಜೆಟ್ ನಲ್ಲಿ ಎಲ್ಲಿ ಫಾಲ್ಟ್ ಇದೇ ಎನ್ನತಕ್ಕಂಥಾದ್ದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ಈ ವಿಷಯವನ್ನು ಹೇಳುವುದಕ್ಕೆ ನನಗೇನೂ ಬೇಜಾರಿಲ್ಲ. Where we have erred, i do point out. I don't hesitate to bring out. ನನ್ನ ಬೆನ್ನು ನನಗೆ ಕಾಣಿಸುವುದಿಲ್ಲ, ಹಾಗೆಯೇ ಯಾರ ಬೆನ್ನು ಕೂಡ ಯಾರಿಗೂ ಕಾಣಿಸುವುದಿಲ್ಲ. ನಾನು ಈಗಾಗಲೇ ಹೇಳಿದಂತೆ ಬಜೆಟ್‌ನಲ್ಲಿ ಏನೇನು ಡೀಮೆರಿಟ್ಸ್ ಇದೆ ಎನ್ನತಕ್ಕಂಥದ್ದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ಆದ್ದರಿಂದ ದಯವಿಟ್ಟು ನನಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ಮತ್ತು ಮೈಸೂರು ಸುತ್ತ ಇರತಕ್ಕಂಥ ನಗರಗಳನ್ನು ಅಭಿವೃದ್ಧಿಪಡಿಸಲು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮ ಸ್ವಾಗತಾರ್ಹವಾಗಿರುತ್ತದೆ. ಏಕೆಂದರೆ, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಇವತ್ತಿನ ದಿವಸ ಒಳ್ಳೆಯ ನೀರು ಮತ್ತು ಗಾಳಿ ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ನಮಗೆ ಒಂದು ಸಮಸ್ಯೆ ಇದ್ದರೆ, ನಗರಪ್ರದೇಶಗಳಲ್ಲಿ ಚುನಾಯಿತರಾಗಿರತಕ್ಕಂಥ ಸದಸ್ಯರಿಗೆ ಡಬಲ್ ಸಮಸ್ಯೆ ಇರುತ್ತದೆ. ಈ ಒಂದು ವಾತಾವರಣದಿಂದ ಬಿಡುಗಡೆ ಮಾಡುವುದಕ್ಕೆ ಮುಖ್ಯಮಂತ್ರಿಗಳ ಮಾದರಿ ಅಭಿವೃದ್ಧಿ ವಸತಿ ಕಾರ್ಯಕ್ರಮವನ್ನು ಇಂಟ್ರಡ್ಯೂಸ್ ಮಾಡಿರತಕ್ಕಂಥಾದ್ದು ಸ್ವಾಗತಾರ್ಹವಾದದು. ಹಾಗೆಯೇ ಹುಬ್ಬಳ್ಳಿ ಮತ್ತು ಧಾರವಾಡ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಇದೇ ರೀತಿಯಾದಂಥ ಸಮಸ್ಯೆ ಇದ್ದರೆ, ಅಲ್ಲಿಯೂ ಕೂಡ ಇದನ್ನು ಜಾರಿಗೆ ತರತಕ್ಕಂಥದ್ದು ಬಹಳ ಮುಖ್ಯ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ಸಭೆಗೆ ಮಾನ್ಯ ಶಿಕ್ಷಣ ಸಚಿವರು ಬಂದಿಲ್ಲ. ತಮ್ಮ ಮೂಲಕ ಅವರ ಗಮನಕ್ಕೆ ತರುವುದೇನೆಂದರೆ, ಇವತ್ತಿನದಿವಸ ನಮ್ಮಲ್ಲಿ ಬಹಳಷ್ಟು Spurious ಇನ್‌ಸ್ಟಿಟ್ಯೂಷನ್‌ಗಳು ನಡೆಯುತ್ತಿವೆ. ನಾವು ಇವುಗಳಿಗೆ ನ್ಯಾಯಬದ್ಧವಾಗಿ ಗ್ರ್ಯಾಂಟ್-ಇನ್-ಏಡ್ ಕೊಡದೇ ಇರುವುದರಿಂದ ಸದರಿ ಸಂಸ್ಥೆಗಳು ಅಡ್ಡ ದಾರಿ ಹಿಡಿಯುತ್ತಿವೆ. ಬಹಳ ದಿನಗಳಿಂದ ಬಾಕಿ ಇದ್ದಂಥ ಶಿಕ್ಷಣ ಅನುದಾನ ಪದ್ಧತಿಯನ್ನು ಸಮಗ್ರವಾಗಿ ಪುನರ್ ಪರಿಶೀಲನೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದು ನಮ್ಮ ಸರ್ಕಾರ ಹೇಳಿದೆ. ಇದು ಬಹಳ ಒಳ್ಳೆಯ ಪದ್ಧತಿಯಾಗಿದೆ. ಇವತ್ತಿನದಿವಸ ಸರಿಯಾದ ರೀತಿಯಲ್ಲಿ ಮತ್ತು ಗೌರವ ಯುತವಾಗಿ ಒಂದು ಸಂಸ್ಥೆಯನ್ನು ನಡೆಸುವುದಕ್ಕೋಸ್ಕರ ತಾವು ತೆಗೆದುಕೊಂಡಿರತಕ್ಕಂಥ ತೀರ್ಮಾನ ತುಂಬಾ ಚೆನ್ನಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರದಲ್ಲಿ ಒಳ್ಳೆಯ ಗಾಳಿ ಸಿಗುವುದಿಲ್ಲವೆಂದು ನಾನು ಶಾಸಕರಭವನ ಬಿಟ್ಟು ಬೇರೆ ಕಡೆಗೆ ಹೋಗುತ್ತಿಲ್ಲ. ನನಗೆ ಹೊರಕ್ಕೆ ಹೋಗುವುದಕ್ಕೆ ಭಯವಾಗುತ್ತಿದೆ. ಆದರೆ, ಶಾಸಕರ ಭವನದ ಪಕ್ಕದಲ್ಲಿ ಸ್ವಲ್ಪ ಪಾರ್ಕ್ ಇರುವುದರಿಂದ ವಾಕ್ ಮಾಡುವುದಕ್ಕೆ ಸ್ವಲ್ಪ ಅನುಕೂಲವಾಗಿದೆ. ಇಲ್ಲಿ, ಎಲ್ಲಿ ನೋಡಿದರೂ ಕೂಡ ಬರೀ ಹೊಗೆ, ಉಸಿರಾಡುವುದಕ್ಕೆ ಒಳ್ಳೆಯ ಗಾಳಿ ಇಲ್ಲ. ಇಂಥ ಒಂದು ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಒಂದು ಒಳ್ಳೆಯ ಸ್ಟೆಪನ್ನು ತೆಗೆದುಕೊಂಡಿದ್ದಾರೆ. ಅದೇನೆಂದರೆ,

15 ವರ್ಷ ಮೇಲ್ಪಟ್ಟ ವಾಹನಗಳನ್ನು ದೆಹಲಿಯಲ್ಲಿ ಯಾವರೀತಿ ಬ್ಯಾನ್ ಮಾಡಿದ್ದಾರೆ, ಅದೇ ರೀತಿ ಇಲ್ಲಿಯೂ ಕೂಡ ಬ್ಯಾನ್ ಮಾಡಿರತಕ್ಕಂಥಾದ್ದು ಸ್ವಾಗತಾರ್ಹವಾದದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಕೆಎಸ್‌ಆರ್ ಟಿಸಿ ಛೇರ್ಮನ್ ಆಗಿರತಕ್ಕಂಥ ಶ್ರೀ ದೇವರಾಜ್‌ರವರು ಬಂದಿಲ್ಲವೆಂದು ಕಾಣುತ್ತದೆ. ನಾನು ಅವರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಕೆಎಸ್‌ಆರ್ ಟಿಸಿ ಹಳೆಯ ಬಸ್‌ಗಳನ್ನು ತೆಗೆಯುವಂಥ ಕೆಲಸ ಮೊದಲು ಆಗಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಇವತ್ತಿನದಿವಸ ಕಾರ್ಪೊರೇಷನ್ ವಾಹನಗಳನ್ನು ಸಹ ಬದಲಾವಣೆ ಮಾಡಬೇಕಾಗಿದೆ.

ಇನ್ನು ರೈಲ್ವೆ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿ ಇದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಬೆಂಗಳೂರು ಮತ್ತು ಮೈಸೂರಿಗೆ ಕಾರಿಡಾರ್ ರಸ್ತೆ ಮಾಡಬೇಕು ಎನ್ನತಕ್ಕಂಥ ವಿಚಾರ ಇತ್ತು. ನನಗೆ ನೆನಪು ಇರುವ ಹಾಗೆ ಶ್ರೀಮಾನ್ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮೈಸೂರಿಗೆ ಬಂದಾಗ, ಮೈಸೂರು ಮತ್ತು ಬೆಂಗಳೂರಿಗೆ ಡಬಲ್ ವೇ ಎಲೆಕ್ಟ್ರಿಫೈ ಮಾಡಿ ಎಂದು ನಾವೊಂದು ಬಿನ್ನವತ್ತಳೆಯನ್ನು ಅರ್ಪಿಸಿದ್ದೆವು. ಆ ಸಂದರ್ಭದಲ್ಲಿ ಸದರಿ ಕಾರ್ಯಕ್ಕೆ ಸುಮಾರು 800 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಲಾಗಿತ್ತು. ಆದ್ಧರಿಂದ, ಡಬಲ್ ವೇ ಎಲೆಕ್ಟ್ರಿಕಲ್ ರೈಲ್ವೆ ಲೈನ್ ನನ್ನು ಮಾಡುವುದಕ್ಕೆ ಮನಸ್ಸು ಮಾಡಿ ಈಗ ಜಾರಿಗೆ ತಂದರೆ ಬಹುಶಃ ಬಹಳಷ್ಟು ಹಣ ಉಳಿಸಬಹುದೆದು ನನಗೆ ಅನ್ನಿಸುತ್ತಿದೆ. ಇಲ್ಲಿ ಸನ್ಮಾನ್ಯ ದೇವೇಗೌಡರು ಹೇಳಿದರು ಎನ್ನತಕ್ಕಂಥ ಪ್ರಶ್ನೆ ಅಲ್ಲ. The question is of economic development. Economic development ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿದ್ಯುತ್ ಸಮಸ್ಯೆ ಬಗ್ಗೆ ಮಧ್ಯಾಹ್ನ ಬೆಳಗಾಂ ಜಿಲ್ಲೆಯ ನನ್ನ ಸ್ನೇಹಿತರ ಜೊತೆ ಮಾತನಾಡುತ್ತಿರುವಾಗ ಅವರೇನು ಹೇಳಿದರು ಎಂದರೆ, ಬೆಳಗಾಂ ಜಿಲ್ಲೆಯ ಜನರು ಏನು ಬೇಕಾದರೂ ಸಹಿಸಿಕೊಳ್ಳುತ್ತಾರಂತೆ ಆದರೆ, ಕರೆಂಟ್ ತೊಂದರೆ ಮಾತ್ರ ಅವರ ಜನ್ಮದಲ್ಲೂ ತಡೆದುಕೊಳ್ಳುವುದಿಲ್ಲವೆಂದು ಹೇಳಿದರು. ಹಾಗೆಯೇ ಎಂಎಲ್‌ಎ ಮತ್ತು ಎಂಪಿ ಹಾಗೂ ಮಂತ್ರಿಗಳನ್ನು ಹಿಡಿದುಕೊಂಡು ಹೊಡೆಯುತ್ತಾರಂತೆ. ಏಕೆಂದರೆ, ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚಾಗಿ ಕಬ್ಬು ಬೆಳೆಯತಕ್ಕಂಥ ಪ್ರದೇಶವಾಗಿರುವುದರಿಂದ, ವಿದ್ಯುತ್ ಅತ್ಯವಶ್ಯಕವಾಗಿದೆ. ಈ ಒಂದು ಕಾರಣದಿಂದ ಅಲ್ಲಿ ವಿದ್ಯುತ್ ಬಹಳ ಸೆನ್ಸಿಟಿವ್ ವಿಷಯವಾಗಿದೆ. ಇವತ್ತಿನದಿವಸ ನಮ್ಮ ಕಡೆಯೂ ಕೂಡ ಇದೇ ಪರಿಸ್ಥಿತಿ ಉಂಟಾಗಿದೆ. ನಾವು ನಮ್ಮಕ್ಷೇತ್ರದ ಊರುಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲ. ಒಂದು ವೇಳೆ ಊರಿಗೆ ಹೋಗಬೇಕಾದರೆ, ವಿದ್ಯುತ್ ಚೆನ್ನಾಗಿ ಇದೆಯೇ ಅಥವಾ ಬೋರ್‌ವೆಲ್‌ನಲ್ಲಿ ನೀರು ಬಂದಿದೆಯೇ ಎಂದು ಕೇಳಿಕೊಂಡು ಊರಿಗೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಇಲ್ಲದಿದ್ದರೆ ನಮ್ಮ ಗ್ರಹಚಾರ ಬಿಡಿಸುತ್ತಾರಷ್ಟೆ. ಇಂಥ ಒಂದು ಪರಿಸ್ಥಿತಿಯಲ್ಲಿ 467 ಮೆಗಾವ್ಯಾಟ್ ನಷ್ಟು ವಿದ್ಯುತ್‌ನ್ನು ವಿದ್ಯುತ್ ಜಾಲಕ್ಕೆ ಸೇರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ಒಳ್ಳೆಯ ಮಾತು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹಾಗೆಯೇ ಆಡಳಿತ ವೆಚ್ಚವನ್ನು ಕಡಿಮೆ ಮಾಡುವುದಕ್ಕೋಸ್ಕರ ಮಾನ್ಯ

ಮುಖ್ಯಮಂತ್ರಿಯವರು ವಿಆರ್ ಎಸ್ ಅನ್ನು ಇಂಟ್ರಡ್ಯೂಸ್ ಮಾಡಿರತಕ್ಕಂಥಾದ್ದು ಸ್ವಾಗತಾರ್ಹವಾದುದು. I also congratulate the Central Government. ಕೇಂದ್ರದಲ್ಲಿ ಇದನ್ನು ಮಾಡಿದ್ದರಿಂದ ಇಲ್ಲಿಯೂ ಕೂಡ ಅದನ್ನು ಜಾರಿಗೆ ತಂದಿರತಕ್ಕಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ. This is an economic decision. It is not a political decision. ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವೇತನವನ್ನು ರಿವೈಜ್ಡ್ ಮಾಡುವುದಕ್ಕೋಸ್ಕರ ಐದು ವರ್ಷಕ್ಕೊಂದು ಸಾರಿ ವೇತನ ಆಯೋಗ ರಚನೆ ಮಾಡಲಾಗುತ್ತಿತ್ತು. ಈಗ ಅದನ್ನು ಪ್ರತಿ 10 ವರ್ಷಕ್ಕೆ ರಚನೆ ಮಾಡಬೇಕು ಎನ್ನತಕ್ಕಂಥ ಒಳ್ಳೆಯ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇವತ್ತಿನ ದಿವಸ ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 60 ರಿಂದ 70ರಷ್ಟು ಸಂಬಳಕ್ಕೆ ಖರ್ಚಾಗುತ್ತಿದೆ. ಇವತ್ತಿನದಿವಸ ಪೇ ಕಮೀಷನ್‌ನ್ನು 10 ವರ್ಷಕ್ಕೆ ಒಂದು ಸಾರಿ ಮಾಡಿರತಕ್ಕಂಥಾದ್ದು ನಿಜವಾಗಿಯೂ ಕೂಡ it is a bold decision. You have taken the wrath of the employees. With all that, it is a good economic decision. ಎನ್ನತಕ್ಕಂಥ ವಿಚಾರವನ್ನು ಈ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಲಾ-ಆಫ್-ಟ್ಯಾಕ್ಸೇಷನ್ ಬಗ್ಗೆ ಹೇಳುವುದಾದರೆ, ಇವತ್ತಿನದಿವಸ ಯಾರೊಬ್ಬರು ಬಂದಾಗಲೂ ಕೂಡ ಕೆಲವು ಸಂದರ್ಭಗಳಲ್ಲಿ ತೆರಿಗೆ ಜಾಸ್ತಿ ಮತ್ತು ಕಡಿಮೆ ಆಗತಕ್ಕಂಥಾದ್ದು ಇದ್ದೇ ಇರುತ್ತದೆ. ಆದರೆ, ಇಲ್ಲಿ ಮಾತ್ರ, ಯಾರು ತೆರಿಗೆ ಕೊಡಲು ಶಕ್ತಿ ಇರುತ್ತದೆಯೋ ಅಂಥವರ ಮೇಲೆ ಮಾತ್ರ ತೆರಿಗೆಯನ್ನು ಹಾಕಲಾಗಿದೆ. ಇವತ್ತಿನದಿವಸ ಯಾರು ಪದಾರ್ಥಗಳನ್ನು ಪ್ರೊಸೆಸ್ ಮಾಡುವುದಕ್ಕೆ ಇಚ್ಚೆ ಇದೆ, ಅಂಥ ಐಟಂಗಳಿಗೆ ತೆರಿಗೆ ಹಾಕಿರತಕ್ಕಂಥಾದ್ದು, we should comgratulate the framers of the budget. ಹಾಗೆಯೇ ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ತೆರಿಗೆ ಸುಧಾರಣೆ ಬಗ್ಗೆ ಕೆಲವೊಂದು ನಿಯಮಗಳನ್ನು ರಚನೆ ಮಾಡಿರತಕ್ಕಂಥಾದ್ದು ನಿಜವಾಗಿಯೂ ಕೂಡ ಒಳ್ಳೆಯದು. ತೆರಿಗೆ ಸುಧಾರಣೆ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ನೀಡಿರತಕ್ಕಂಥ ಪ್ರಪೋಸಲ್ ಎಲ್ಲವನ್ನು ಕೂಡ ನೀವು ಜಾರಿಗೆ ತರಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟುಪಡುತ್ತೇನೆ. ಹಾಗೆಯೇ ಬ್ಯಾಂಕ್‌ಗಳ ಮುಖಾಂತರ ತೆರಿಗೆಯನ್ನು ಕಟ್ಟಬಹುದು ಎನ್ನತಕ್ಕಂಥ ವ್ಯವಸ್ಥೆಯನ್ನು ತಂದಿರತಕ್ಕಂಥಾದ್ದು ನಿಜವಾಗಿಯೂ ಕೂಡ ಒಳ್ಳೆಯ ತೀರ್ಮಾನವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹೆಸರಿನಿಂದ ಖಾತೆ ಇರುವ ಬ್ಯಾಂಕಿಗೆ ಹೋಗಿ ತೆರಿಗೆಯನ್ನು ಕಟ್ಟಿ ಬಿಡಬಹುದು. ಮೊದಲು ಹೋಗಿ ಕ್ಯೂ ನಿಲ್ಲಬೇಕು, ಚಲನ್ ಬರೆಯುವವನಿಗೆ ದುಡ್ಡು ಕೊಡಬೇಕು ಹಾಗೂ ಅಕೌಂಟೆಂಟ್‌ನಿಗೆ ದುಡ್ಡು ಕೊಡಬೇಕು, ಏನಿದು ಸರ್? it is an Indian life? ಪ್ರತಿಯೊಂದಕ್ಕೂ ಬೆಳಿಗ್ಗೆಯಿಂದ ಸಂಜೆಯವರೆಗೆ ದುಡ್ಡು ಕೊಡುವುದಾ? ಅದನ್ನು ತಪ್ಪಿಸುವ ಒಂದು ಕಾರ್ಯಕ್ರಮ ಬ್ಯಾಂಕುಗಳ ಮೂಲಕ ತೆರಿಗೆಯ ಸಂಗ್ರಹಣೆಯನ್ನು ಏನು ಮಾಡುತ್ತಿದ್ದಾರೆ ಇದು ಬಹಳ ಒಳ್ಳೆಯ ಕಾರ್ಯ ಎನ್ನತಕ್ಕಂದ್ದನ್ನು ಹೇಳುತ್ತೇನೆ.

ಆಡಳಿತಾತ್ಮಕ ದೃಷ್ಟಿಯಿಂದ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೆಲವು ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಫೈಲ್ ಮೂವ್‌ಮೆಂಟ್ ಬಗ್ಗೆ ನನ್ನದೊಂದು ಸಲಹೆ ಇದೆ. ಮಾನ್ಯ ಅಧಿಕಾರಿಗಳು ಮತ್ತು ಮಾನ್ಯ ಮಂತ್ರಿಗಳು ಸಂಬಂಧಪಟ್ಟವರು ಗಮನವನ್ನು ಹರಿಸಬೇಕು.

ಫೈಲ್ ಮೂವ್‌ಮೆಂಟ್ ಮಾಡುವುದಕ್ಕೆ ಹಾರ್ಡ್‌ವೇರ್ ಇವತ್ತು ಬಂದಿವೆ, ಬೇಕಾದಷ್ಟು ಕಂಪ್ಯೂಟರ್ ಸಿಸ್ಟಮ್ ಬಂದ್ವಿ. ಒಬ್ಬ ಮನುಷ್ಯ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕುಳಿತುಕೊಂಡಿದ್ದರೆ ಎಷ್ಟು ಫೈಲ್‌ಗಳನ್ನು ಕ್ಲಿಯರ್ ಮಾಡಿದನು, ಎಷ್ಟು ಫೈಲ್ ಕ್ಲಿಯರ್ ಆಯಿತು, ಯಾವ ಸ್ಟೇಜ್‌ನಲ್ಲಿದೆ, ಎಂಬುದನ್ನು ಕಂಡು ಹಿಡಿಯುವುದಕ್ಕೆ ಇವತ್ತು ಹಾರ್ಡ್‌ವೇರ್‌ನ್ನು ಪತ್ತೆ ಮಾಡಿದ್ದಾರೆ. ಅದನ್ನು ಅಟೆಮ್ಪ್ಟ್ ಮಾಡಬೇಕೆಂದು ತಾವು ಮಾಡಿರುತ್ತೀರಿ. ಅದು ಬರಬೇಕು ಎನ್ನುವುದು ಇದೆ, ಏಕೆಂದರೆ, ಬೆಳಿಗ್ಗೆ 11 ಗಂಟೆಗೆ ಕ್ಯಾಂಟೀನ್‌ಗೆ ಬಂದು ಕಾಫಿ ಕುಡಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ, ಇದು ದೌರ್ಭಾಗ್ಯ. ಕಚೇರಿಗೆ ಬಂದ ತಕ್ಷಣ ಒಂದು ಫೈಲ್ ಓಪನ್ ಮಾಡುತ್ತಾರೆ, ಕ್ಯಾಂಟೀನ್‌ಗೆ ಬಂದು ಕಾಫಿ ಕುಡಿದುಕೊಂಡು 11.30ಕ್ಕೆ ಕಳಿತುಕೊಂಡಿರುತ್ತಾರೆ. ಇದನ್ನು ತಪ್ಪಿಸಲಿಕ್ಕೆ ಹಾರ್ಡ್‌ವೇರ್ ತರುವುದು ಬಹಳ ಮುಖ್ಯವೆನ್ನುವುದನ್ನು ಈ ಸಮಯದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ರೋಗಿಗಳ ಬಗ್ಗೆ ಕೂಡ ಒಂದು ಫಂಡ್ ಮಾಡಬೇಕೆಂದು ಮಾಡಿರುತ್ತೀರಿ ಅದಕ್ಕೂ ಕೂಡ ಸ್ವಾಗತವನ್ನು ಮಾಡುತ್ತೇನೆ. To conclude, I welcome this Budget, Sir. ಇದ್ದದ್ದರಲ್ಲಿ ಬ್ಯಾಲೆನ್ಸ್ ಆಗಿ ಸರಿದೂಗಿಸಿಕೊಂಡು ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾನಾದರೂ ಕೂಡ ಇದನ್ನು ವೈಯಕ್ತಿಕವಾಗಿ ಸ್ವಾಗತ ಮಾಡುತ್ತೇನೆ. ರಿಜಿಸ್ಟ್ರೇಷನ್ ಬಗ್ಗೆ ಒಂದು ಸಮಸ್ಯೆ ಇದೆ, ಇಲ್ಲೊಬ್ಬರು ನಮ್ಮ ಪಕ್ಕದಲ್ಲಿ ಕುಳಿತವರು ಬೆಳಿಗ್ಗೆ ಹೇಳಿದರು, ಅವರು ಎಕ್ಸ್ ಮ್ಯಾಜಿಸ್ಟ್ರೇಟ್ ಇದ್ದಂತೆ ಕಾಣಿಸುತ್ತದೆ. ಒಂದು ಟೆಕ್ನಿಕಲ್ ಇಷ್ಯೂ ರೈಸ್ ಮಾಡಿದರು. ಅವರು ನನ್ನ ಎಡಗಡೆ ಕುಳಿತಿದ್ದಾರೆ, ಅವರು ನಿಮಗೆ ಗೊತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಒಂದು ಟೆಕ್ನಿಕಲ್ ಕ್ವೊಶ್ಚನ್ ಪೋಸ್ ಮಾಡಿದ್ದಾರೆ. ಏನೆಂದರೆ ಈ ಫ್ರಾಡ್ ಫೇಕ್ ಡಾಕ್ಯುಮೆಂಟ್ಸ್ ರಿಜಿಸ್ಟ್ರೇಷನ್ ಆಗಿರತಕ್ಕಂಥ ಪ್ರಾಪರ್ಟಿಗಳು ಇವೆ, ಇದರ ಗತಿ ಏನು? ಇವುಗಳನ್ನು ಹೇಗೆ ವ್ಯಾಲಿಡೇಷನ್ ಮಾಡುತ್ತೀರಿ ಎಂದು ಅದಕ್ಕೊಂದು ಉತ್ತರವನ್ನು ಹೇಳಿದರು, 'Unless somebody brings it to the notice of the government, what can we do?' That is not the thing. There should be a wholesale justice, whether you bring it to the notice or not. For example, I quote.

ಫೇಕ್ ನೋಟನ್ನು ಯಾರೇ ಇಟ್ಟುಕೊಂಡರೂ it is an offence. ನಮಗೆ ಗೊತ್ತಿಲ್ಲದೆ ನಮ್ಮ ಜೇಬಿಗೆ ಯಾರಾದರೂ 1000 ಅಥವಾ 500 ರೂಪಾಯಿಗಳ ಫೇಕ್ ನೋಟನ್ನು ಇಟ್ಟರೆ, I am subjected to the violation of the law. I am subjected to be prosecutred under the IPC. I made an offnece. ಎಂದು ಆಗುತ್ತದೆ.

ಆ ತರಹ ಒಂದು ಸಿಸ್ಟಮ್‌ನ್ನು ನೀವು ಇಲ್ಲಿ ತರಬೇಕೆಂದು ನನ್ನದೊಂದು ರಿಕ್ವೆಸ್ಟ್ ಇದೆ. ಇನ್ನು ಏನೂ ಜಾಸ್ತಿ ಹೇಳುವುದಕ್ಕೆ ಬರುವುದಿಲ್ಲ. ವಿತ್ತೀಯ ಕೊರತೆಯನ್ನು 153 ಕೋಟಿ ರೂಪಾಯಿಗಳಿಗೆ ಇಳಿಸಿರುವುದು ಬಹಳ ಶ್ಲಾಘನೀಯ ಎನ್ನುವ ಮಾತನ್ನು ಹೇಳುತ್ತೇನೆ. ಬಜೆಟ್‌ನಲ್ಲಿ ಇನ್ನು ಕೆಲವು ಮೊಬಲೈಸ್ ರಿಸೋರ್ಸ್ ಬಗ್ಗೆ ಒಂದು ಪ್ರಯತ್ನವನ್ನು ತಾವು ಬಗೆಹರಿಸಬೇಕೆಂದು ಹೇಳುತ್ತೇನೆ. ಅಸೆಂಬ್ಲಿಯಲ್ಲಿ ಕ್ವೊಶ್ಚನ್ ಅವರ್ ಮುಗಿದ ತಕ್ಷಣ ಬಹಳಷ್ಟು ನೋಟಿಫಿಕೇಷನ್‌ಗಳನ್ನು 'Placed before the House'. ಎಂದು ಬರೀ ರೆಕಾರ್ಡ್ ಪರ್ಪಸ್‌ಗೆ ಇಡುತ್ತಾರೆ. ಅದನ್ನು ಸಭೆಯ ಗಮನಕ್ಕೆ ತರುತ್ತಾರೆ. ಇಷ್ಟೊಂದು ಪೇಪರ್‌ಗಳನ್ನು ಪ್ರೆಸೆಂಟ್ ಮಾಡುತ್ತಾರಲ್ಲಾ

ಎಂದು ತೆಗೆದು ನೋಡಿದಾಗ ಬಹಳಷ್ಟು ನೋಟಿಫಿಕೇಷನ್‌ಗಳು ಕನ್ಸಿಷನ್ ಬಗ್ಗೆ ಅಲ್ಲಿರುತ್ತವೆ. ಒಂದು ಸಲ ಜಾಸ್ತಿ ಮಾಡಿ ಕನ್ಸಿಷನ್ ಕೊಟ್ಟಾಗ ಅಲ್ಲಿ ಏನಾದರೂ ನಡೆದು ಹೋಗಿರುತ್ತದೆ, ಇದು ಆಗಬಾರದು. ಒಂದೇ ಸಲ ಯೋಜನೆ ಮಾಡಿ ಒಂದು ಯುನಿಫಾರ್ಮ್ ಆಗಿ ಕನ್ಸಿಷನ್ ಕೊಡುವುದಿದ್ದರೆ ಅದನ್ನು ಕಡಿಮೆ ಮಾಡುವುದು ಇದ್ದರೆ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇದನ್ನು ಮಾಡಿದರೆ ಜಾಸ್ತಿ ರಿಸೋರ್ಸ್‌ನ್ನು ಮೊಬಲೈಸ್ ಮಾಡಬಹುದು ಎನ್ನುವ ಮಾತನ್ನು ಹೇಳುತ್ತಾ, ತಾವು ನನಗೆ ಸಾಕಷ್ಟು ಸಮಯವನ್ನು ಕೊಟ್ಟಿರುತ್ತೀರಿ, ಕೊನೆಯ ಆರು ಸಾಲಿನಲ್ಲಿ ಕುಳಿತಿರುವ ನಮಗೆಲ್ಲರಿಗೂ ಗೌರವ ಬಂದಂತಾಯಿತು, ತಾವೂ ಕೂಡ ನಮಗೆ ಗೌರವವನ್ನು ಸಲ್ಲಿಸಿರುತ್ತೀರಿ, ಈ ಸಂದರ್ಭದಲ್ಲಿ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಭಾಧ್ಯಕ್ಷರು:- ಸಿ.ಚನ್ನಿಗಪ್ಪ, ಚೆಲುವರಾಯಸ್ವಾಮಿ, ಕೆ.ಬಿ. ಕೃಷ್ಣಮೂರ್ತಿ, ಹೆಸರನ್ನು ಕೊಟ್ಟಾಗ, ಅವರನ್ನು ಮಾತನಾಡಲು ಕರೆದಾಗ ಅವರ ಪಾರ್ಟಿಯಿಂದ ಒಬ್ಬರಾದರೂ ಮಾತನಾಡದಿದ್ದರೆ ಹೇಗೆ? 4-5 ಜನ ಇದ್ದಾರೆ, ಸುಮ್ಮನೆ ನೇಮ್ಸ್ ಕೊಟ್ಟು ಹೊರಟು ಹೋದರೆ ಹೇಗೆ? ನಾಳೆ ದಿವಸ ಮೂರು ಜನ ಮಾತನಾಡಬೇಕೆಂದರೆ ಹೇಗೆ? It is every possible? That is not possible. ಮಾನ್ಯ ವಿಶ್ವೇಶ್ವರ ಹೆಗಡೆ, ಅರಗ್ ಜ್ಞಾನೇಂದ್ರ, ಕೃಷ್ಣಪ್ಪ, ಹಾಗೂ ಸುಬ್ಬಾರೆಡ್ಡಿಯವರು ಮಾತನಾಡಿ. ಮಾನ್ಯ ಬಚ್ಚೇಗೌಡ, ಮಹಾಂತೇಶ ಕೌಜಲಗಿರವರೇ, ನಾಳೆ ಚುನಾವಣೆ ಇರುವುದರಿಂದ ಇವತ್ತಿಗಿಂತ ಬಿಜಿಯಾಗಿರುತ್ತೀರಿ. ಮಾನ್ಯ ಸಂಗಣ್ಣ ಕರಡಿ, ಹೆಚ್.ಎಸ್. ಮಹಾದೇವ ಪ್ರಸಾದ್, ಎ.ಆರ್. ಕೃಷ್ಣಮೂರ್ತಿರವರುಗಳಲ್ಲಿ ಇವತ್ತು ಮಾತನಾಡುವವರು ಯಾರು? ಆಡಳಿತ ಪಕ್ಷದವರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಮಾನ್ಯ ಸಿನಿಯಾರಿಟಿ ಪ್ರಕಾರ ಯಾರು ಕೊಟ್ಟಿದ್ದಾರೆ ಅದೇ ರೀತಿಯಾಗಿ ಓದುತ್ತಿದ್ದೇನೆ. ಮಾನ್ಯ ಡಿ.ಆರ್. ಪಾಟೀಲ್, ಶಹಜಹಾನ್ ಡೊಂಗರಗಾಂವ್, ಜೆ.ಡಿ. ನಾಯಕ್, ದಿನೇಶ್ ಗುಂಡೂರಾವ್, ಎಂ.ಜಿ. ಮೂಳೆ ಇವತ್ತು ಯಾರೂ ಮಾತನಾಡದಿರುವುದಕ್ಕೆ ಕಾರಣವೇನು? Just, I want to know the reason. ನಾವು ಬೆಳಿಗ್ಗೆ 10 ರಿಂದ ಸಂಜೆ 7 ಗಂಟೆಯವರೆಗೆ ಪ್ರೊಗ್ರಾಮ್ ಹಾಕಿರುತ್ತೇವೆ.I am very sorry. ಮಾತನಾಡುವುದಕ್ಕೆ ಸಮಯ ಕೊಡದಿದ್ದರೆ ಕೊಟ್ಟಿಲ್ಲವೆಂದುಹೇಳುತ್ತೀರಿ, ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ, ಇಷ್ಟು ಜನ ಇದ್ದುಕೊಂಡು ಮಾತನಾಡದಿರುವುದಕ್ಕೆ ಅರ್ಥ ಏನು? ಇದರ ಬಗ್ಗೆ ನನಗೆ ಅರ್ಥವೇನು ಆಗುತ್ತಿಲ್ಲ. ಯಾರು ಮಾತನಾಡುತ್ತೀರಿ? ಮಾತನಾಡಿ.

ಶ್ರೀ ಕೆ. ಗೋಪಾಲ್ ಭಂಡಾರಿ (ಕಾರ್ಕಳ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅರ್ಥ ಮಂತ್ರಿಗಳೂ ಆಗಿರತಕ್ಕಂಥ ಎಸ್.ಎಂ. ಕೃಷ್ಣಾಜಿಯವರು 2002-03ನೇ ಸಾಲಿನ ಮುಂಗಡ ಪತ್ರವನ್ನು ಇಲ್ಲಿ ಮಂಡಿಸಿರುತ್ತಾರೆ. ಈ ಮುಂಗಡ ಪತ್ರ ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಂತ ಉತ್ತಮವಾದ ಒಂದು ಮುಂಗಡಪತ್ರವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಸಾಮಾನ್ಯ ಜನರ ಮೇಲೆ, ಯಾವುದೇ ಒಂದು ಹೆಚ್ಚಿನ ಹೊರೆ ಇಲ್ಲದಿರತಕ್ಕಂಥ ಒಂದು ಅಭಿನಂದನಾರ್ಹವಾದಂಥ ಒಂದು ಬಜೆಟ್ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ

ಮಾಡುತ್ತೇನೆ. ನಮ್ಮ ಕೃಷಿಗೆ ಮತ್ತು ರೈತರಿಗೆ ಅನೇಕ ಅನುಕೂಲಗಳನ್ನು ಒದಗಿಸತಕ್ಕಂಥ, ಅವರಿಗೆ ಯಾವುದೇ ಒಂದು ವಿಶೇಷವಾದ ಹೊರೆ ಬೀಳದಂತೆ ಮತ್ತು ಬಹಳ ಉತ್ತಮವಾದಂಥ ಬಜೆಟ್ ಇದು ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಬಜೆಟ್‌ನಲ್ಲಿ ಜಲಾನಯನ ಅಭಿವೃದ್ಧಿಗೆ ಬಹಳ ವಿಶೇಷವಾದಂಥ ಒಂದು ಒತ್ತನ್ನು ಕೊಟ್ಟಿದ್ದಾರೆ. ಬಹುಶಃ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಬಹಳ ಅಗತ್ಯವಾದಂಥ ಒಂದು ಕಾರ್ಯಕ್ರಮ. ಅದರಲ್ಲಿಯೂ ವಿಶೇಷವಾಗಿ ನಮ್ಮ ಕರಾವಳಿ ಜಿಲ್ಲೆಗಳಿಗೆ ಈ ಕಾರ್ಯಕ್ರಮ ಅತ್ಯಂತ ಅವಶ್ಯಕವಾಗಿದೆ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಮಳೆ ಬರುವ ಒಂದು ಪ್ರದೇಶ. ಎಷ್ಟು ಮಳೆ ಬಂದರೂ ಕೂಡ ಈಗಾಗಲೇ ಕುಡಿಯುವ ನೀರಿಗೆ ಸಮಸ್ಯೆಯಾಗಿರುವ ಹತದಲ್ಲಿ ಅಂತರ್ಜಲ ಮಟ್ಟ ವರ್ಷದಿಂದ ವರ್ಷಕ್ಕೆ ಕೆಳಗಡೆ ಹೋಗತಕ್ಕಂಥ ಪರಿಸ್ಥಿತಿ ನಮ್ಮಲ್ಲಿದೆ. ಇಂತಹ ಒಂದು ಅಂತರ್ಜಲವನ್ನು ಇನ್ನಷ್ಟು ಎತ್ತರಕ್ಕೆ ಮಾಡಿ ಅದನ್ನು ಉಳಿಸಿಕೊಳ್ಳತಕ್ಕಂಥ ಕೆಲಸವನ್ನು ಈ ಜಲಾನಯನ ಒಂದು ಕಾರ್ಯಕ್ರಮದಿಂದ ಸಾಧ್ಯವಾಗುತ್ತದೆ. ಇನ್ನು ಇದು ಬಹಳ ಅವಶ್ಯಕವಾದಂಥ ಒಂದು ಕಾರ್ಯಕ್ರಮ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ನಮ್ಮಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷಕ್ಕೆ ಕುಡಿಯುವ ನೀರಿಗೆ ಸಮಸ್ಯೆ ಜಾಸ್ತಿಯಾಯಿತು. ಆದ್ದರಿಂದ ಈ ಕಾರ್ಯಕ್ರಮ ಬಹಳ ದೂರದೃಷ್ಟಿಯುಳ್ಳ ನಮ್ಮ ಭೌಗೋಳಿಕ ಸಂಪತ್ತನ್ನು ಉಳಿಸಿಕೊಳ್ಳತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ.

ವಸತಿ ನಿರ್ಮಾಣಕ್ಕೆ ಎಸ್.ಎಂ. ಕೃಷ್ಣಾಜಿಯವರ ನೇತೃತ್ವದ ಸರ್ಕಾರ ಕರ್ನಾಟಕದಲ್ಲಿ ಅನುಷ್ಟಾನಕ್ಕೆ ಬಂದ ನಂತರ ಸಾಕಷ್ಟು ಗ್ರಾಮೀಣ ಪ್ರದೇಶದ ದುರ್ಬಲ ಜನತೆಯ ವರ್ಗದವರಿಗೆ ರಾಜೀವ ಗಾಂಧಿ ವಸತಿ ನಿಗಮದ ಮುಖೇನ ಆಶ್ರಯ ಯೋಜನೆ, ಅಂಬೇಡ್ಕರ ಯೋಜನೆ, ಇಂದಿರಾ ಆವಾಸ್ ಯೋಜನೆ ಮುಖೇನ ಬಹಳಷ್ಟು ಮನೆಗಳನ್ನು ಕೊಡಲಾಗಿದೆ. ಪುನಃ ಈ ವರ್ಷಕ್ಕೆ ಎರಡು ಲಕ್ಷ ಮನೆಗಳನ್ನು ಕೊಡತಕ್ಕಂಥ ಒಂದು ಪ್ರಸ್ತಾಪ ಖಂಡಿತವಾಗಿ ಕೂಡ ಸಮಾಜದ ದುರ್ಬಲ ವರ್ಗದವರ ಜನರ ಹಿತದೃಷ್ಟಿಯಿಂದ ಸ್ವಾಗತಾರ್ಹವಾದಂಥ ಒಂದು ಕಾರ್ಯಕ್ರಮ. ಆದ್ದರಿಂದ ಈ ಕಾರ್ಯಕ್ರಮವನ್ನು ಕೊಟ್ಟಂತಹ ಸನ್ಮಾನ್ಯ ಮುಖ್ಯಮಂತಿಗಳನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ.

ಇನ್ನು ಶ್ರೀ ಶಕ್ತಿ ಕಾರ್ಯಕ್ರಮ, ಒಂದು ರೀತಿಯಲ್ಲಿ ಸಾಮಾಜಿಕ ಬದಲಾವಣೆಗೆ ಅತ್ಯಂತ ಪೂರಕವಾದಂಥಾದ್ದು. ನಮ್ಮ ಸಮಾಜದಲ್ಲಿ ಸಮಸ್ಯೆಯಲ್ಲಿರತಕ್ಕಂಥ ಆರ್ಥಿಕವಾಗಿ ಚೈತನ್ಯವಿಲ್ಲದಿರತಕ್ಕಂಥ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೆ ಬಿದ್ದಂಥ ಮಹಿಳಾ ಸಮುದಾಯಕ್ಕೆ ವರದಾನದ ರೂಪದಲ್ಲಿ ಸ್ರೀ ಶಕ್ತಿ ಕಾರ್ಯಕ್ರಮ ಇವತ್ತು ನಮ್ಮಲ್ಲಿ ಬಂದಿದೆ.

5.50. ಪಿ.ಎಂ.

ನಮ್ಮ ಜಿಲ್ಲೆಯಲ್ಲಿ ಸಾಕಷ್ಟು 'ಸ್ತ್ರೀಶಕ್ತಿ' ಕಾರ್ಯಕ್ರಮದ ತಂಡಗಳನ್ನು ಮಾಡಿ ಆ ತಂಡಗಳು ಇವತ್ತು ಬಹಳ ಉತ್ತಮವಾಗಿ ಕಾರ್ಯಕ್ರಮವನ್ನು ನಿರ್ವಹಿಸುವುದರ ಜೊತೆಗೆ ಸ್ವಉದ್ಯೋಗ ಕಾರ್ಯಕ್ರಮವನ್ನು ಕೂಡ ಬಹಳ ವಿಶೇಷವಾಗಿ ಮಾಡಿಕೊಂಡಿದ್ದಾರೆ. ಅದರ ಜೊತೆಗೆ ಮಹಿಳಾ ಸಮುದಾಯದಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಇವತ್ತು ಬರತಕ್ಕಂತಹ ನಿಟ್ಟಿನಲ್ಲಿ ಈ ಕಾರ್ಯಕ್ರಮ

ಸಮಾಜದ ಒಂದು ಸಾಮಾಜಿಕ ಬದಲಾವಣೆಯಲ್ಲಿ ಬಹಳ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತದೆ. ಈ ಕಾರ್ಯಕ್ರಮವನ್ನು ಇನ್ನಷ್ಟು ಬಲವರ್ಧನೆ ಮಾಡಬೇಕಾದಂತಹ ಅವಶ್ಯಕತೆ ಇದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕೃಷಿಗೆ ಮತ್ತು ಕೃಷಿಗೆ ಸಂಬಂಧಿಸಿದ ವಲಯಕ್ಕೆ ಮಾನ್ಯ ಮುಖ್ಯಮಂತ್ರಿಗಳು 5100 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡತಕ್ಕಂತಹ ಒಂದು ಪ್ರಸ್ತಾಪವನ್ನು ಆಯವ್ಯಯದಲ್ಲಿ ಮಂಡಿಸಿದ್ದಾರೆ. ಇದರಿಂದಾಗಿ ಬಹುಶಃ ಆಯವ್ಯಯದ ಶೇಕಡ 25ರಷ್ಟು ಅನುದಾನವನ್ನು ಒದಗಿಸತಕ್ಕಂತಹ ಈ ಪ್ರಸ್ತಾಪ, ಕೃಷಿಕರಿಗೆ ಬಹಳ ಪೂರಕವಾದ ಒಂದು ಕಾರ್ಯಕ್ರಮವೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ರೈತರ ಸಮಸ್ಯೆ ಬಹುಶಃ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೆ, ರಾಷ್ಟ್ರದಾದ್ಯಂತ ಇವತ್ತು ರೈತರು ಬಹಳಷ್ಟು ಸಂಕಷ್ಟದಲ್ಲಿ ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡತಕ್ಕಂತಹ ಸಂದರ್ಭದಲ್ಲಿ ತಮ್ಮ ಬೆಳೆಗೆ, ಉತ್ಪನ್ನಗಳಿಗೆ ಹೆಚ್ಚು ಬೆಲೆಯಿಲ್ಲದೆ ಇರತಕ್ಕಂತಹ ಒಂದು ವಾತಾವರಣವು ಕೂಡ ನಿರ್ಮಾಣವಾಗಿದೆ. ಇಡೀ ದೇಶದಾದ್ಯಂತ ನಮ್ಮ ರಾಜ್ಯ, ನಮ್ಮ ಜಿಲ್ಲೆ, ನಮ್ಮ ಪ್ರದೇಶದ ಎಲ್ಲ ರೈತರುಗಳು ಕೂಡ ಇವತ್ತು ಸಂಕಷ್ಟದಲ್ಲಿರತಕ್ಕಂತಹ ಸಂದರ್ಭದಲ್ಲಿ ಅಂತಹ ರೈತರಿಗೆ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡತಕ್ಕಂತಹ ಒಂದು ಪ್ರಸ್ತಾಪವನ್ನು ಕೂಡ ಮಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ನಮ್ಮ ಕರಾವಳಿ ಜಿಲ್ಲೆಯಲ್ಲಿ ಅಡಿಕೆಯ ಬೆಲೆ ಬಹಳಷ್ಟು ಕುಸಿತವಾಗಿ, ಒಂದೆರಡು ಮೂರು ವರ್ಷಗಳ ಹಿಂದೆ ಈ ಬೆಲೆ ಬಿಳಿಗೋಟಿನ ಅಡಿಕೆ ಕೆಜಿಗೆ ಸುಮಾರು 160 ರೂಪಾಯಿಗಳಿಗೆ ಹೋಗಿ ಇವತ್ತು ಸುಮಾರು 30 ರೂಪಾಯಿಗಳಿಗೆ ಇಳಿದು ಇಡೀ ಜಿಲ್ಲೆಯ ಅಡಿಕೆ ಬೆಳೆಗಾರರು, ಇಡೀ ಜಿಲ್ಲೆಯ ಸಣ್ಣ ರೈತರು ಸಂಕಷ್ಟದಲ್ಲಿರತಕ್ಕಂತಹ ಸಂದರ್ಭದಲ್ಲಿ ಈ ಮಾರುಕಟ್ಟೆಯಲ್ಲಿ ಒಂದು ರೀತಿಯ ವೈಫಲ್ಯತೆಯನ್ನು ನಾವು ಕಂಡಿದ್ದೇವೆ. ಅದಕ್ಕೆ ಬೇಕಾಗಿ ಅನೇಕ ಸಂಸ್ಥೆಗಳು ಮಾಸ್ ನಂತಹ ಸಹಕಾರಿ ಸಂಸ್ಥೆಗಳು, ಕ್ಯಾಂಪ್ ಕೋದ ಜೊತೆಗೆ ಇವತ್ತು ಮಾರುಕಟ್ಟೆಯನ್ನು ಪ್ರವೇಶ ಮಾಡಿದರೂ ಕೂಡ ಯಶಸ್ಸನ್ನು ಇಷ್ಟರ ತನಕ ಕಾಣುವುದಕ್ಕೆ ಆಗಲಿಲ್ಲ. ರೈತರ ಪರಿಸ್ಥಿತಿ ಸಂಕಷ್ಟದಲ್ಲಿಯೇ ಇದೆ, ಅಂತಹ ರೈತರಿಗೆ ಅಡಿಕೆಗೆ ಕೂಡ ಒಂದು ಬೆಂಬಲ ಬೆಲೆಯನ್ನು ಕೊಡತಕ್ಕಂತಹ ಒಂದು ಪ್ರಸ್ತಾಪ ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಮಾಡಿದ್ದಾರೆ. ಇದು ನಮ್ಮ ಕರಾವಳಿ ಜಿಲ್ಲೆಯ, ನಮ್ಮ ಮಲೆನಾಡಿನಲ್ಲಿರತಕ್ಕಂತಹ ರೈತರಿಗೆ ಬಹಳ ಅನುಕೂಲವಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಬೆಂಬಲ ಬೆಲೆಯನ್ನು ಆದಷ್ಟು ಬೇಗ ಘೋಷಣೆ ಮಾಡುತ್ತಾರೆಂಬ ನಂಬಿಕೆಯ ಜೊತೆಗೆ ನಮ್ಮಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳಿಗೆ ರೈತರಿಗೆ ಅನುಕೂಲವಾಗುವಂತೆ ಸುಮಾರು 87 ಕೋಟಿ ರೂಪಾಯಿಗಳ ಅನುದಾನವಿದ್ದದ್ದನ್ನು 107 ಕೋಟಿ ರೂಪಾಯಿಗಳಿಗೆ ಇವತ್ತು ಹೆಚ್ಚಿಸತಕ್ಕಂತಹ ಪ್ರಸ್ತಾಪವನ್ನು ಇವತ್ತು ಮಾಡಿದ್ದಾರೆ. ಇದು ಬಹಳ ಅಗತ್ಯವಿದೆ, ಕೃಷಿಕರು ಇವತ್ತು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬೆಲೆ ಕುಸಿತದ ಸವಾಲುಗಳ ಜೊತೆಗೆ ಹೊಸ ಹೊಸ ರೋಗಗಳು ಬರತಕ್ಕಂತಹ ತನ್ನ ಉತ್ಪನ್ನಗಳ ಮೇಲೆ ಬೇರೆ ಬೇರೆ ದಾಳಿಗಳು ಆಗತಕ್ಕಂತಹ ಈ ಸಂದರ್ಭದಲ್ಲಿ ಅವುಗಳೆಲ್ಲವನ್ನು ಸಮರ್ಥವಾಗಿ ಇವತ್ತು ಎದುರಿಸತಕ್ಕಂತಹ ನಿಟ್ಟಿನಲ್ಲಿ ವೈಜ್ಞಾನಿಕವಾದಂತಹ ಹೊಸ ವಿಚಾರಗಳನ್ನು ರೈತರಿಗೆ ಕೊಡತಕ್ಕಂತಹ ವ್ಯವಸ್ಥೆಯ ಅವಶ್ಯಕತೆ ಇದೆ. ಇವತ್ತು 107 ಕೋಟಿ ರೂಪಾಯಿಗಳ ಅನುದಾನವನ್ನು

ಹೆಚ್ಚಿಸತಕ್ಕಂತಹ ಪ್ರಸ್ತಾಪ ಬಹಳ ಸೂಕ್ತವಾದಂತಹದ್ದು, ಇದರ ಜೊತೆಗೆ, ಗ್ರಾಮ ತೋಟಗಾರಿಕೆ, ನಮ್ಮ ಕರಾವಳಿ ಜಿಲ್ಲೆಗಂತೂ ಇದು ಅತ್ಯಂತ ಅವಶ್ಯಕವಾದಂತಹ ಕಾರ್ಯಕ್ರಮವಾಗಿದೆ. ನಮ್ಮಲ್ಲಿ ಭತ್ತದ ಬೆಳೆ ನಮ್ಮ ಕರಾವಳಿ ಜಿಲ್ಲೆ ಅತ್ಯಂತ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಭತ್ತದ ಬೆಳೆಯನ್ನು ಅವಲಂಬಿಸಿಕೊಂಡಿರತಕ್ಕಂತಹ ರೈತರ ಸಂಖ್ಯೆ ಜಾಸ್ತಿ, ಆದರೆ ಭತ್ತದ ಬೆಳೆ ಪಶ್ಚಿಮಘಟ್ಟದ ಮೇಲೆ ಬರತಕ್ಕಂತಹ ಬೆಳೆಯ ನಾಲ್ಕನೆಯ ಒಂದು ಭಾಗ ಆ ಭಾಗದಲ್ಲಿ ಬೆಳೆ ಬರುತ್ತದೆ. ಅಷ್ಟು ಮಳೆಯಿಂದಾಗಿ ಆ ಭಾಗದ ಭೂಮಿಯಲ್ಲಿರತಕ್ಕಂತಹ ಸಾರ, ರೈತರು ಹಾಕಿದಂತಹ ಸಾರ, ಎಲ್ಲವೂ ಕೂಡ ಕೊಚ್ಚಿಕೊಂಡು ಸಮುದ್ರಕ್ಕೆ ಹೋಗಿರತಕ್ಕಂತಹ ಒಂದು ಭೌಗೋಳಿಕವಾದಂತಹ ಒಂದು ವಾತಾವರಣ ಅಲ್ಲಿ ಇದೆ. ಅಂತಹ ವಾತಾವರಣದಲ್ಲಿ ಇವತ್ತು ತೋಟಗಾರಿಕಾ ಬೆಳೆಗೆ ಸ್ವಲ್ಪ ಅನುಕೂಲಕರವಾದಂತಹ ವಾತಾವರಣ ನಮ್ಮ ಕರಾವಳಿ ಜಿಲ್ಲೆಯಲ್ಲಿರುವುದರಿಂದ ಗ್ರಾಮ ತೋಟಗಾರಿಕೆ ಎನ್ನುವಂತಹ ಕಾರ್ಯಕ್ರಮವನ್ನು ಕೊಟ್ಟು ಸಣ್ಣ ಪುಟ್ಟ ರೈತರು, ಅರ್ಧ ಎಕರೆ, ಒಂದು ಎಕರೆ, ಜಮೀನು ಇರತಕ್ಕಂತಹ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಇದು ಬಹಳ ಸ್ವಾಗತಾರ್ಹವಾದಂತಹ ವಿಚಾರವಾಗಿದೆ.

ಇದರ ಜೊತೆಗೆ ಮೀನುಗಾರರಿಗೆ, ಡೀಸೆಲ್ ಸಬ್ಸಿಡಿ ಮುಂದಿನ ವರ್ಷದಾದ್ಯಂತ ಕೊಡತಕ್ಕಂತಹ ಒಂದು ಪ್ರಸ್ತಾಪ ಇದೆ. ಈ ನಮ್ಮ ಕರಾವಳಿ ಜಿಲ್ಲೆಯ ಮೀನುಗಾರರು, ಅವರಿಗೆ ಯಾವಾಗಲೂ ಆಗಾಗ ಸಬ್ಸಿಡಿಯನ್ನು ಕೊಡತಕ್ಕಂತಹ ಅವಧಿಯನ್ನು ವಿಸ್ತರಿಸತಕ್ಕಂತಹ ಒಂದು ಅತಂತ್ರದ ಪರಿಸ್ಥಿತಿ ಇತ್ತು. ಆದರೆ ಇವತ್ತು ಶಾಶ್ವತವಾಗಿ ಮುಂದಿನ ವರ್ಷದ ಒಂದು ಅವಧಿಗೆ ಆ ಡೀಸೆಲ್ ಸಬ್ಸಿಡಿಯನ್ನು ಕೊಡತಕ್ಕಂತಹ ವಾತಾವರಣ ಕರಾವಳಿ ಮೀನುಗಾರರಿಗೂ ಕೂಡ ಇದು ಒಂದು ರೀತಿಯ ವರದಾನವಾಗಿದೆ, ಮೀನುಗಾರರು ಕೂಡ ಇವತ್ತು ಮತ್ಸಕ್ಷಾಮದಿಂದ ಸಾಕಷ್ಟು ಸಮಸ್ಯೆಯಲ್ಲಿ ಇದ್ದಾರೆನ್ನುವಂತಹ ವಿಚಾರ ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತೇನೆ. ನೀರಾವರಿಯ ವೆಚ್ಚ ಸುಮಾರು 2790 ಕೋಟಿ ರೂಪಾಯಿಗಳಿಗೆ ನಿಗಧಿಮಾಡಿದ್ದಾರೆ, ಶೇಕಡ 32 ರಷ್ಟು ಹೆಚ್ಚಾಗಿದೆ ಎನ್ನತಕ್ಕಂತಹ ಪ್ರಸ್ತಾಪವನ್ನು ಕೂಡ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನನ್ನದು ಒಂದು ವಿನಂತಿ ಏನೆಂದರೆ, ನಮ್ಮ ಈ ಕರಾವಳಿ ಜಿಲ್ಲೆಗಳಲ್ಲಿ ಬಹಳ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಈಗಾಗಲೇ ನಮ್ಮಲ್ಲಿ ಈ ಯೋಜನೆಯನ್ನು ಇಷ್ಟು ದೊಡ್ಡ ಗಾತ್ರದಲ್ಲಿ ಹಮ್ಮಿಕೊಂಡಿರುವುದು ಖಂಡಿತವಾಗಿಯೂ ಕೂಡ ಸ್ವಾಗತಾರ್ಹವಾದುದು. ಆದರೆ ಕರಾವಳಿ ಜಿಲ್ಲೆಯ ಭೌಗೋಳಿಕವಾದಂತಹ ಪರಿಸ್ಥಿತಿ ಎತ್ತರ ತಗ್ಗಿನಲ್ಲಿರತಕ್ಕಂತಹ ಭೂಮಿ, ಬಹಳ ದೊಡ್ಡ ಯೋಜನೆಗಳನ್ನು ಅಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಬೇಕಾಗಿರುವಂತಹ ಪಶ್ಚಿಮವಾಹಿನಿ ಎನ್ನತಕ್ಕಂತಹ ಸಣ್ಣಸಣ್ಣ ಕಿಂಡಿ ಅಣೆಕಟ್ಟುಗಳನ್ನು ಮಾಡುವುದರ ಜೊತೆಗೆ ಅಂತರಜಲವನ್ನು ಎತ್ತರಿಸುವುದರ ಜೊತೆಗೆ ನಮ್ಮ ಜಲಮಟ್ಟವನ್ನು ಉಳಿಸಿಕೊಳ್ಳುವ ಪ್ರಯತ್ನದ ಜೊತೆಗೆ ಕೃಷಿಗೆ ಕೂಡ ಅನುಕೂಲ ಆಗತಕ್ಕಂತಹ ಒಂದು ಪ್ರಸ್ತಾಪವು ಕೂಡ ಇವತ್ತು ಸರ್ಕಾರದ ಮುಂದೆ ಇದೆ. ಅದು ಬಹುಶಃ ವಿಶ್ವಬ್ಯಾಂಕ್‌ನ ಅನುಮೋದನೆಯನ್ನು ಕಾಯುತ್ತಿದೆ. ಆ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ನಮ್ಮ ಈ ಕರಾವಳಿ ಪ್ರದೇಶದ ಭೌಗೋಳಿಕವಾಗಿ ಬಹಳ ಎತ್ತರದ ದೊಡ್ಡ ಯೋಜನೆಗಳನ್ನು ಅನುಷ್ಠಾನ ಮಾಡಲಿಕ್ಕೆ ಸಾಧ್ಯವಿಲ್ಲದಿರುವಂತಹ ಪ್ರದೇಶಗಳಿಗೂ ಕೂಡ ಈ ಪ್ರಸ್ತಾಪವನ್ನು ಇವತ್ತು ಸೇರಿಸಿಕೊಳ್ಳಬೇಕೆಂಬುದರ ಜೊತೆಗೆ, ಇನ್ನು ರಸ್ತೆಯ ಅಭಿವೃದ್ಧಿಗೆ

ಬಹುಶಃ ಸೂಕ್ತ ನಿರ್ವಹಣೆ ಇಲ್ಲದಿರುವಂತಹ ಗ್ರಾಮೀಣ ರಸ್ತೆಗಳು ಗಂಭೀರ ಸಮಸ್ಯೆಯಾಗಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸನ್ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ, ಮಾನ್ಯ ಲೋಕೋಪಯೋಗಿ ಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರು ಹಿರಿಯರು, ಅವರ ಒಂದು ಮಾರ್ಗದರ್ಶನದಲ್ಲಿ ಇವತ್ತು ರಾಜ್ಯ ಹೆದ್ದಾರಿಗಳೆಲ್ಲಾ ಅತ್ಯಂತ ಉತ್ತಮವಾದಂತಹ ಹೆದ್ದಾರಿಗಳಾಗಿ ಮಾರ್ಪಟ್ಟಿದೆ. ಅದೆಷ್ಟೋ ವರ್ಷಗಳಿಂದ ಇದು ಮರುಡಾಂಬರೀಕರಣವನ್ನು ಕಾಣದೆ ಇರತಕ್ಕಂತಹ ರಾಜ್ಯ ಹೆದ್ದಾರಿಗಳು ಇವತ್ತು ಸಂಪೂರ್ಣ ಫ್ಲ್ಯಾಟ್ ಟಾಪಿಂಗ್, ಮರುಡಾಂಬರೀಕರಣವನ್ನು ಮಾಡುವುದರ ಜೊತೆಗೆ ಬಹಳ ಉತ್ತಮವಾದಂತಹ ರಸ್ತೆಗಳಾಗಿವೆ. ನಮ್ಮ ಭಾಗದಲ್ಲಿಯೂ ಕೂಡ ರಾಜ್ಯಹೆದ್ದಾರಿಗಳಿಗೆ ಯಾಂತ್ರೀಕೃತ ವ್ಯವಸ್ಥೆಯಲ್ಲಿ ಡಾಂಬರೀಕರಣ ಮಾಡಿದ್ದರಿಂದ ರಸ್ತೆಗಳು ಇವತ್ತು ಬಹಳ ಉತ್ತಮವಾಗುವುದರ ಜೊತೆಗೆ ವಾಹನ ನಿರ್ವಹಣೆಯಲ್ಲಿಯೂ ಕೂಡ ಬಹಳಷ್ಟು ಉಳಿತಾಯ ಇವತ್ತು ಗ್ರಾಹಕರಿಗೆ ಆಗತಕ್ಕಂತಹ ಪರಿಸ್ಥಿತಿಯೂ ಕೂಡ ನಿರ್ಮಾಣವಾಗಿದೆ. ಇದರ ಜೊತೆಗೆ ಇನ್ನೂ ಕೂಡ ಗ್ರಾಮೀಣ ರಸ್ತೆಗಳಿಗೆ ಅದೇ ರೀತಿಯಾಗಿ ಹೆಚ್ಚಿನ ಒತ್ತನ್ನು ಕೊಡತಕ್ಕಂತಹ ಪ್ರಸ್ತಾಪ ಇದೆ. ಇದು ಬಹಳ ಸಂತೋಷದ ವಿಚಾರ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶಾಸಕರ ನಿಧಿ ಎಂದು ಕಳೆದ ವರ್ಷ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು, ಇದರಿಂದಾಗಿ ನಮಗೆಲ್ಲರಿಗೂ ಬಹಳ ಅನುಕೂಲವಾಗಿದೆ. ಅತ್ಯಂತ ಅವಶ್ಯಕವಾದಂತಹ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಿತ್ತು. ಅದನ್ನು ಈ ಸಾರಿ 40 ಲಕ್ಷ ರೂಪಾಯಿಗಳಿಗೆ ಏರಿಸಿರುವುದರಿಂದ ಬಹಳಷ್ಟು ಪ್ರಯೋಜನಗಳಾಗಿದೆ.

ನಿರುದ್ಯೋಗಿಗಳ ಸಮಸ್ಯೆಗಳ ಬಗ್ಗೆ ಹೇಳುವುದಾದರೆ, ಈ ನಿರುದ್ಯೋಗಿಗಳಿಗೆ ರುಡ್‌ಸೆಟ್. ನಮ್ಮ ಜಿಲ್ಲೆಗಳಲ್ಲಿ ಒಂದೆರಡು ರುಡ್ ಸೆಟ್ ಸಂಸ್ಥೆಗಳಿವೆ. ಕೆನರಾಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕಿನ ಸಹಕಾರದಿಂದ ನಮ್ಮ ಉಜಿರೆಯಲ್ಲಿ ಪೂಜ್ಯ ಶ್ರೀ ವೀರೇಂದ್ರಹೆಗಡೆಯವರ ಒಂದು ಸಹಕಾರದಿಂದ ಅಲ್ಲಿ ಒಂದು “ರುಡ್ ಸೆಟ್” ಸಂಸ್ಥೆಯಿದೆ. ಹಾಗೆಯೇ ಮಣಿಪಾಲ್‌ನಲ್ಲಿಯೂ ಕೂಡ ಸಿಂಡಿಕೇಟ್ ಬ್ಯಾಂಕ್‌ನ ಸಹಕಾರದಿಂದ ಅಲ್ಲಿಯೂ ಕೂಡ ಒಂದು “ರುಡ್ ಸೆಟ್” ಸಂಸ್ಥೆ ಇದೆ. ಇದರಿಂದಾಗಿ ಬಹಳಷ್ಟು ಪ್ರಯೋಜನಗಳಾಗುತ್ತವೆ. ಅದರ ಬಗ್ಗೆ ನಾವು ತಿಳಿದುಕೊಂಡಿದ್ದೇವೆ, ಸಾಕಷ್ಟು ಗ್ರಾಮೀಣ ನಿರುದ್ಯೋಗಿಗಳು ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿಯಾಗಿ, ಉದ್ಯೋಗ ಇಲ್ಲದೆ ಇರತಕ್ಕಂತಹ ಮತ್ತು ಅಲೆದಾಡತಕ್ಕಂತಹ ವಾತಾವರಣವಿದ್ದಾಗ ಅವರನ್ನು ಸ್ವಯಂ ಉದ್ಯೋಗಕ್ಕಾಗಿ ಪ್ರೇರೇಪಣೆ ಮಾಡುವುದಕ್ಕೆ, ಅವರಿಗೆ ಈ ಸಮಾಜದ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಉದ್ಯೋಗಾವಕಾಶಗಳನ್ನು ಅವರದನ್ನಾಗಿ ಮಾಡಿಸುವಂತಹ ವ್ಯವಸ್ಥೆಯಲ್ಲಿ ಈ ಕಾರ್ಯಕ್ರಮ ಅತ್ಯಂತ ಮಹತ್ತರವಾದಂತಹ ಕಾರ್ಯಕ್ರಮವಾಗಿದೆ. ಇದರಿಂದಾಗಿ ಒಂದು ಸಾಮಾಜಿಕ ಬದಲಾವಣೆ ಆಗತಕ್ಕಂತಹ ಸಾಧ್ಯತೆ ಇದೆ ಎನ್ನತಕ್ಕಂತಹ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಗರಗಳ ಅಡ್ಡಾದಿಡ್ಡಿ ಬೆಳವಣಿಗೆಯನ್ನು ನಿಯಂತ್ರಿಸಲು ಸಣ್ಣ ಪಟ್ಟಣಗಳ ಅಭಿವೃದ್ಧಿ ಯೋಜನೆ, ಏನಿದೆ ಇದು ಬಹಳ ಉತ್ತಮವಾದಂತಹ ಯೋಜನೆಯಾಗಿದೆ. ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಎಲ್ಲಾ ಪಟ್ಟಣಗಳು ಕೂಡ ಇವತ್ತು ಸಣ್ಣಪುಟ್ಟ ಪಟ್ಟಣಗಳಾಗಿದೆ.

ಅದೆಲ್ಲಕ್ಕಿತಲೂ ಮುಖ್ಯವಾಗಿ ಕರ್ನಾಟಕ ರೈಲು ಯೋಜನೆಯ ಅಭಿವೃದ್ಧಿಗೆ ಒಂದು ಪ್ರಸ್ತಾಪವನ್ನು ಇಲ್ಲಿ ಮಾಡಿದ್ದಾರೆ. ಇದು ಕೇಂದ್ರಸರ್ಕಾರದ ಯೋಜನೆಯಾದರೂ ಕೂಡ ಸಾರ್ವಜನಿಕ ಹಿತಾಸಕ್ತಿಯಿಂದ ಈ ಒಂದು ಪ್ರಸ್ತಾಪವನ್ನು ಮಾಡಿರುವುದು ಬಹಳ ಅಭಿನಂದನೀಯವಾದಂತಹ ವಿಚಾರವಾಗಿದೆ. ನಾವು ಇವತ್ತು ಕರಾವಳಿ ಜಿಲ್ಲೆಯ ಜನರು ಬಹಳ ವರ್ಷಗಳ ಹಿಂದೆ ಮಂಗಳೂರಿನಿಂದ ಒಂದು ಮೀಟರ್ ಗೇಜ್ ರೈಲು ಬೆಂಗಳೂರಿಗೆ ಬರುತ್ತಿತ್ತು. ಆ ಮೀಟರ್‌ಗೇಜ್ ರೈಲು ಸುಮಾರು 7 ಗಂಟೆಗೆ ಮಂಗಳೂರನ್ನು ಬಿಟ್ಟರೆ ಮಾರನೆ ದಿವಸ 8 ಗಂಟೆಗೆ ಬೆಂಗಳೂರಿಗೆ ಬರುತ್ತಿತ್ತು. ಆದರೂ ಕೂಡ ರೈಲಿನಲ್ಲಿ ಬರಲಿಕ್ಕೆ ಅವಕಾಶವಿತ್ತು. ಅನೇಕ ವರ್ಷಗಳ ಹಿಂದೆ ಇದ್ದಂತಹ ವ್ಯವಸ್ಥೆಯನ್ನು ಆ ಗೇಜ್ ಪರಿವರ್ತನೆ ಮಾಡುವಂತಹ ವ್ಯವಸ್ಥೆಗೆ ಹೋಗಿ ಬ್ರಾಡ್ ಗೇಜ್ ಮಾಡತಕ್ಕಂತಹ ವ್ಯವಸ್ಥೆ ಇವತ್ತು ಸುಮಾರು ಹತ್ತಾರು ವರ್ಷಗಳಿಂದ ಉಳಿದುಹೋಗಿದೆ. ಬಹುಶಃ 150 ಕೋಟಿ ರೂಪಾಯಿ ಅವಶ್ಯಕತೆ ಇರತಕ್ಕ ಗೇಜ್ ಪರಿವರ್ತನೆಗೆ ಬೇಕಾಗಿರತಕ್ಕ ಅನುದಾನವನ್ನು ಒದಗಿಸುವಲ್ಲಿ ನಾವು ವೈಫಲ್ಯತೆಯನ್ನು ಕಂಡಿದ್ದೇವೆ. ರಾಜಧಾನಿಯಾದ ಬೆಂಗಳೂರು ನಂತರದ ಬಹಳ ದೊಡ್ಡ ನಗರ ಮಂಗಳೂರು. ಅಲ್ಲಿ ಹಾರ್ಲರ್ ಇದೆ, ನ್ಯಾಷನಲ್ ಹೈವೇ ಎರಡು ಮೂರು ಬರುತ್ತಿದೆ. ಕೇರಳ, ಗೋವಾ ಮಹಾರಾಷ್ಟ್ರವನ್ನು ಸಂಪರ್ಕ ಮಾಡತಕ್ಕ ಕೊಂಕಣ ರೈಲ್ವೆ ಇದೆ. ಇದೆಲ್ಲವೂ ಕೂಡ ಇದ್ದರೂ ಕೇಂದ್ರ ಪ್ರದೇಶವನ್ನು ಸಂಪರ್ಕಿಸತಕ್ಕ ರೈಲ್ವೆ ಯೋಜನೆ ಇಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ ಎನ್ನುವುದು ವಿಷಾದನೀಯವಾದ ವಿಚಾರ. ಆದರೆ ಅದನ್ನು ಪ್ರಸ್ತಾಪ ಮಾಡಿ ಅದಕ್ಕೆ ಮುಂದೆ ಬರುತ್ತೇವೆಂದು ಮಾನ್ಯ ಮುಖ್ಯಮತ್ರಿಗಳು, ಕರ್ನಾಟಕ ಸರ್ಕಾರ ಹೇಳಿರುವುದು ಬಹಳ ಸಂತೋಷದ ವಿಚಾರ. ಸ್ವಲ್ಪಮಟ್ಟಿಗೆ ನಮ್ಮ ಭಾಗದ ಜನರಿಗೆ ಇದರಿಂದ ಬಹಳ ಸಂತೋಷವಾಗಿದೆ.

ಹಿಂದೆ ಅರಣ್ಯ ಇಲಾಖೆ 'ವನ ವಿಕಾಸ ಯೋಜನೆ' ಎಂದು ಜಾರಿಗೆ ತಂದಿತ್ತು. ಅದು ಬಹಳ ಅವಶ್ಯವಾದ ಕಾರ್ಯಕ್ರಮ. ಅದರ ಜೊತೆಗೆ ಅರಣ್ಯ ಇಲಾಖೆಯಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಅರಣ್ಯ ಇಲಾಖೆ ಇವತ್ತು ಕಂದಾಯ ಇಲಾಖೆ ಮತ್ತು ಬೇರೆ ಬೇರೆ ಇಲಾಖೆ ಜೊತೆ ಸಾಮರಸ್ಯದಿಂದ ವರ್ತಿಸಬೇಕಾದ ಅವಶ್ಯಕತೆಯಿದೆ. ನಮ್ಮಲ್ಲಿ ಸಾಕಷ್ಟು ದುರ್ಬಲವರ್ಗದ ಜನರಿಗೆ ಹಕ್ಕುಪತ್ರವನ್ನು ಕೊಟ್ಟಿದ್ದೇವೆ. 25-30 ವರ್ಷಗಳ ಹಿಂದೆ ನಿವೇಶನಗಳನ್ನು ಕೊಟ್ಟು ಅವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್ ಗಮನಕ್ಕೆ ಬಾರದೆ, ಅರಣ್ಯ ಇಲಾಖೆಯ ಯಾರ ಗಮನಕ್ಕೆ ಬಾರದೆ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಯಾವುದೇ ಸರ್ವೆ ಇಲಾಖೆಯವರು ಬಂದು ಎಲ್ಲಾ ಜಾಗವೂ ನಮ್ಮದೇ ಎಂದು ಏಕಪಕ್ಷೀಯವಾಗಿ ಹೇಳತಕ್ಕ ಮಾತು ಕೆಲವೊಮ್ಮೆ ಅಲ್ಲಲ್ಲಿ ಬರುತ್ತಿದೆ. ಆದ್ದರಿಂದ ಮಾನ್ಯ ಅರಣ್ಯ ಸಚಿವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಜೊತೆಯಾಗಿ ಅವರವರ ಜಾಗ ಅವರವರಿಗೆ ಹೋಗತಕ್ಕ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

"ನಮ್ಮ ಪರಂಪರೆ, ನಾನು ಪರಂಪರೆ" ಎನ್ನತಕ್ಕ ನೂತನ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇನೆಂದು ಹೇಳಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಗೆ 24 ಕೋಟಿ ರೂಪಾಯಿಗಳ

ಅನುದಾನ ಇದ್ದದ್ದನ್ನು 29 ಕೋಟಿ ರೂ.ಗೆ ಏರಿಸತಕ್ಕ ಒಂದು ಪ್ರಸ್ತಾಪ? ಬಹುಶಃ ನಮ್ಮ ಪರಂಪರೆ, ಸಂಸ್ಕೃತಿ ಅತ್ಯಂತ ಶ್ರೀಮಂತ ಪರಂಪರೆಯಿಂದ ಇರತಕ್ಕ ನಾಡು ನಮ್ಮ ಕನ್ನಡನಾಡು. ಅದರಲ್ಲಿ ಕರಾವಳಿ ಬಹಳ ವಿಶಿಷ್ಟವಾದ ಸಾಂಸ್ಕೃತಿಕ ಚಟುವಟಿಕೆಗಳು ವಿಶೇಷವಾಗಿ ನಿರಂತರವಾಗಿ ನಡೆಯುತ್ತವೆ. ಅಲ್ಲಿರತಕ್ಕ ಸಾಕಷ್ಟು ಪುಣ್ಯ ಕ್ಷೇತ್ರಗಳಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ಅವರ ಆಶ್ರಯದಲ್ಲಿ ನಡೆಯುತ್ತಿದೆ. ಉದಾಹರಣೆಗೆ ನಮ್ಮ ಕಾರ್ಕಳದಲ್ಲಿ ಇತ್ತೀಚೆಗೆ ನಡೆದಂತಹ ಇಡೀ ರಾಷ್ಟ್ರದ ಗಮನವನ್ನು ಸೆಳೆದಂತಹ ಭಗವಾನ್ ಬಾಹುಬಲಿ ಮಹಾಮಸ್ತಾಕಾಭಿಷೇಕದ ಸಂದರ್ಭದಲ್ಲಿ ನಮ್ಮ ಸಾಸ್ಕೃತಿಕ ಪರಂಪರೆಯ ಕಾರ್ಯಕ್ರಮಗಳನ್ನು ನಡೆಸಲಾಯಿತು. ಆ ಎಲ್ಲಾ ಕಾರ್ಯಕ್ರಮಗಳಿಗೆ ಇನ್ನಷ್ಟು ಪ್ರೋತ್ಸಾಹ ಪುರಸ್ಕಾರ ಮತ್ತು ಸಹಕಾರವನ್ನು ಇಲಾಖೆಯ ಮುಖೇನ ಕೊಟ್ಟರೆ ಇನ್ನಷ್ಟು ನಮ್ಮ ಸಂಸ್ಕೃತಿ ಶ್ರೀಮಂತವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡಲಿಕ್ಕೆ 12 ಕೋಟಿ ರೂ. ನಿಂದ 18 ಕೋಟಿ ರೂ. ಅನುದಾನ ಕೊಡಲಿಕ್ಕೆ ಪ್ರಸ್ತಾಪ ಮಾಡಿದ್ದಾರೆ. ಅದು ಬಹಳ ಹೆಚ್ಚು ಅಲ್ಲದಿದ್ದರೂ ಒಂದು ರೀತಿಯಲ್ಲಿ ನಾವು ಇದನ್ನು ಅಭಿನಂದಿಸಲೇಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಇದೆ. ಕರಾವಳಿಯಲ್ಲಿ ಸಾಕಷ್ಟು ಬೀಚುಗಳಿವೆ. ಬಹುಶಃ ಗೋವಾಕ್ಕಿಂತ ಉತ್ತಮವಾದ ಅನೇಕ ಬೀಚುಗಳು ನಮ್ಮಲ್ಲಿವೆ. ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವುದಕ್ಕೆ ಬೇಕಾದಂತಹ ಸಾಕಷ್ಟು ವ್ಯವಸ್ಥೆಗಳು ಇವೆ. ಇವತ್ತು ಪ್ರಾಕೃತಿಕವಾಗಿ ಪರಿಸರಧಾಮಗಳನ್ನು ಸೃಷ್ಟಿ ಮಾಡತಕ್ಕ ವ್ಯವಸ್ಥೆ ಕೂಡ ಆಗುಂಬೆ ಮತ್ತು ಮಲ್ಪೆ ಮಧ್ಯದಲ್ಲಿದೆ. ಪಶ್ಚಿಮಘಟ್ಟದಲ್ಲಿ ಸಾಕಷ್ಟು ಫಾಲ್ಸ್‌ಗಳಿವೆ. ಒಂದು ರೀತಿ ನೀರು ಸ್ಪ್ರೇ ಆಗಿ ಬೀಳತಕ್ಕ ಫಾಲ್ಸ್‌ಗಳಿವೆ. ಪ್ರವಾಸಗರನ್ನು ಬಹಳ ಆಕರ್ಷಣೆ ಮಾಡತಕ್ಕ ಇಂತಹ ಫಾಲ್ಸ್‌ಗಳನ್ನು ಕೂಡ ಇವತ್ತು ಪ್ರವಾಸೋದ್ಯಮದ ವ್ಯವಸ್ಥೆಯ ಜೊತೆಗೆ ಸೇರಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ.

ಈ ತೆರಿಗೆ ಬಗ್ಗೆ ಬ್ಯಾಂಕುಗಳ ಮೂಲಕ ತೆರಿಗೆ ಸಂಗ್ರಹಕ್ಕೆ ಪ್ರಸ್ತಾಪ ಮಾಡಿದ್ದಾರೆ. ಬಹಳ ಅಭಿನಂದನೀಯವಾದ ವ್ಯವಸ್ಥೆ. ಆದರಿಂದ ಹೆಚ್ಚು ತೆರಿಗೆಯ ಸೋರಿಕೆ ಕಡಿಮೆಯಾಗುತ್ತದೆ. ಇದರಿಂದ ಹೆಚ್ಚು ಜನರಿಗೆ ಅನುಕೂಲವಾಗುತ್ತದೆ. ಜೊತೆಗೆ ಮಧ್ಯಂತರ ತನಿಖಾ ಠಾಣೆಗಳ ರದ್ದತಿ ಪ್ರಸ್ತಾಪ. ಖಂಡಿತವಾಗಿಯೂ ಇದನ್ನು ಅಭಿನಂದಿಸಬೇಕಾಗುತ್ತದೆ. ಅನಾವಶ್ಯಕವಾಗಿರತಕ್ಕ ಠಾಣೆಗಳಿಂದ ಜನರಿಗೆ ಹಿಂಸೆ ಕೊಡತಕ್ಕ, ಸರ್ಕಾರಕ್ಕೆ ಆದಾಯವನ್ನು ಕೊಡದೇ ಇರತಕ್ಕ ಠಾಣೆಗಳಾಗಿತ್ತು. ನಮ್ಮಲ್ಲಿ ಗುಂಡ್ಯಾದಲ್ಲಿತ್ತು. ರಾಜ್ಯದ ಅನೇಕ ಕಡೆಗಳಲ್ಲಿ ಗಡಿಯನ್ನು ಬಿಟ್ಟು ಹೊರಗೆ ಇರತಕ್ಕ ಅನೇಕ ಠಾಣೆಗಳಿದ್ದವು. ಇಂತಹ ಠಾಣೆಗಳಿಂದ ಜನರಿಗೆ ಮತ್ತು ಸಾರ್ವಜನಿಕರಿಗೆ ಹೆಚ್ಚು ಭಾರ ಆಗುವುದರ ಜೊತೆಗೆ ಸರ್ಕಾರಕ್ಕೆ ತೊಂದರೆಯಾಗಿತ್ತು. ಇಂತಹ ಠಾಣೆಗಳನ್ನು ರದ್ದುಪಡಿಸಿರುವುದರಿಂದ ರಾಜ್ಯದ ಹಿತದೃಷ್ಟಿಯಿಂದ ಸಮಾಜದ ಹಿತದೃಷ್ಟಿಯಿಂದ ಇದು ಅಭಿನಂದನಾರ್ಹವಾಗಿದೆ. ಜೊತೆಗೆ ನನ್ನ ವಿನಂತಿ ಏನೆಂದರೆ ಠಾಣೆಗಳನ್ನು ರದ್ದು ಮಾಡುವುದರ ಜೊತೆಗೆ ಅಲ್ಲಲ್ಲಿ ಒಳ್ಳೆಯ ವಾಹನಗಳು ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದಾರೆ. ಒಂದು ರೀತಿಯಲ್ಲಿ ಅದು ಚೆಕ್‌ಪೋಸ್ಟ್ ಕಾರ್ಯ ನಿರ್ವಹಿಸುವ ರೀತಿಯಲ್ಲಿರುತ್ತದೆ. ಅದನ್ನು ಕೂಡ ಬಹಳ ಗಂಭೀರವಾಗಿ ನೋಡಿ, ಅದರಿಂದ ಜನರಿಗೆ ತೊಂದರೆಯಾಗಿದೆ. ಇಲಾಖೆ ಮತ್ತು ಸರ್ಕಾರಕ್ಕೆ ಹೆಚ್ಚು ಆದರಿಂದ ಸಂಪನ್ಮೂಲ ಕ್ರೋಢೀಕರಿಸುವ, ಅದಕ್ಕೆ ಪ್ರೋತ್ಸಾಹವಾಗುವ ರೀತಿಯಲ್ಲಿ ಇದು

ಅವಶ್ಯಕವೆಂದು ಹೇಳುತ್ತೇನೆ.

ಇವತ್ತು ಸಮಾಜವನ್ನು ಕಾಡುತ್ತಿರತಕ್ಕ ಅತ್ಯಂತ ಭೀಕರವಾದ ಏಡ್ಸ್ ಮತ್ತು ಮೂತ್ರಪಿಂಡದ ಕಸಿ ಇಂತಹ ಕಾಯಿಲೆಗಳಿಗೆ ದುರ್ಬಲವರ್ಗದ ಜನರಿಗೆ ಚಿಕಿತ್ಸೆಯನ್ನು ಪಡೆಯಲಿಕ್ಕೆ ಕಷ್ಟವಾಗುತ್ತದೆಂದು ಆ ಔಷಧಿಗಳ ಮೇಲಿಗತಕ್ಕ ತೆರಿಗೆಯನ್ನು ಸಂಪೂರ್ಣ ವಿನಾಯಿತಿ ಮಾಡಿರುವುದು ಕೂಡ ಬಹಳ ಅಭಿನಂದಿಸಬೇಕಾದ ಒಂದು ಪ್ರಸ್ತಾಪ. ಅದರ ಜೊತೆಗೆ ಅನೇಕ ಇಂತಹ ವಿಚಾರಗಳಿಗೆ ಈ ಆಯವ್ಯಯದಲ್ಲಿ ಸಮಾಜದ ದುರ್ಬಲವರ್ಗದವರಿಗೆ ಅನುಕೂಲವಾಗುವಂತಹ ಮತ್ತು ಸರ್ಕಾರದ ಸಂಪನ್ಮೂಲದ ಕ್ರೋಢೀಕರಣದಲ್ಲಿ ಬಹಳ ಮಹತ್ತರ ಸಾಧನೆ ಮಾಡತಕ್ಕ ಒಂದು ಪ್ರಸ್ತಾಪವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ ವ್ಯವಸ್ಥೆಯಲ್ಲಿ ಮಾಡಿದ್ದಾರೆ. ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ಬಜೆಟ್ ಬಹಳ ಉತ್ತಮವಾದ ಬಜೆಟ್. ರಾಷ್ಟ್ರದಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ನಾವು ಎಂದೂ ಕಾಣದಿರತಕ್ಕ ಬಹಳ ಉತ್ತಮವಾದ ಬಜೆಟ್‌ನ್ನು ನಮ್ಮ ಮುಖ್ಯಮಂತ್ರಿಗಳು ಮಂಡಿಸಿದ್ದಾರೆಂದು ಹೇಳಿ ಇದನ್ನು ಸ್ವಾಗತ ಮಾಡಿ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಎಸ್.ಎಸ್. ಪಾಟೀಲರು ಕೊನೆಯ ಭಾಷಣಕಾರರು.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) ಮಾನ್ಯ ಅಧ್ಯಕ್ಷರೆ, ಕೊನೆಗೂ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಮೊದಲನೆಯದಾಗಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಭೋದಿಸಿದ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಬ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್

ಯಾವಾಗ ಅನ್ಯಾಯ, ಅನೀತಿ, ಅನಾಚಾರ, ಅಧರ್ಮ ಬೆಳೆಯುತ್ತದೆಯೋ ಅವೊತ್ತು ನಾನು ಹುಟ್ಟಿ ಬರುತ್ತೇನೆಂದು ಶ್ರೀಕೃಷ್ಣ ಪರಮಾತ್ಮ ಹೇಳುತ್ತಾರೆ.

ಅದೇ ರೀತಿ ಬಸವಣ್ಣನವರು ಒಂದು ಮಾತು ಹೇಳುತ್ತಾರೆ.

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದರೆ ನಿಲಬಹುದೇನಯ್ಯ
ಏರಿ ನೀರಿಂಬೊಡೆ ಬೇಲಿ ಪೈರು ಮೇಯ್ದೊಡೆ
ನಾರಿ ತನ್ನ ಮನೆಯಲ್ಲಿ ಕಳವಡೆ
ತಾಯಿಯ ಮೊಲೆ ಹಾಲು ನಂಜಾಗಿ ಕೊಲ್ಲೊಡೆ
ಇನ್ನಾರಿಗೆ ದೂರನು ಕೊಡಲಿ ಕೂಡಲಸಂಗಮದೇವಾ

ಎಂದು ಬಸವಣ್ಣನವರು ಹೇಳಿದ್ದಾರೆ. ಇನ್ನೊಂದು ಮಾತನ್ನು ಹೇಳುತ್ತಾರೆ.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೇ

ತನ್ನ ಬಳಗವನ್ನ

ಕೋಳಿ ಒಂದು ಗುಟುಕ ಕಂಡರೆ ಕರೆಯದೇ

ತನ್ನ ಕುಲವನ್ನೆಲ್ಲವಾ

ಶಿವ ಭಕ್ತನಾಗಿ ಭಕ್ತಿ ಪಕ್ಷದಲ್ಲಿ ಇಲ್ಲದಿದ್ದರೆ

ಆ ಕಾಗೆ ಕೋಳಿಗಿಂತ ಕರಕಷ್ಟ ಕಾಣ ಕೂಡಲಸಂಗಮದೇವಾ

ನಾನು ಭಗವದ್ಗೀತೆ ಮತ್ತು ಬಸವಣ್ಣನವರ ವಚನಗಳಿಂದ ಪ್ರಾರಂಭ ಮಾಡುತ್ತೇನೆ. ಕೊನೆಯಲ್ಲಿ ಏಕೆ ಹೇಳಿದೆ ಎಂಬುದನ್ನು ಹೇಳುತ್ತೇನೆ. ಬಹುಶಃ ಈ ಆಯವ್ಯಯದ ಪುಸ್ತಕ ಹೋದ ವರ್ಷಕ್ಕಿಂತ ಬಹಳ ದಪ್ಪವಿದೆ. ಬಣ್ಣ ಬದಲಾವಣೆ ಮಾಡಿದ್ದಾರೆ. ಆದರೆ ನಿಜವಾಗಿ, ನಯವಾಗಿ ವಂಚಿಸಿದಂತಹ ನಯವಂಚನೆಯ ಆಯವ್ಯಯವೆಂದು ಹೇಳುತ್ತೇನೆ. ನಮ್ಮ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಾನು ಬಹಳ ದೀರ್ಘವಾಗಿ ಹೋಗುವುದಿಲ್ಲ. ಬಹುಶಃ ಇದು ಬಹಳ ಉತ್ತಮವಾದ ಬಜೆಟ್ ಎಂದು ನಮ್ಮ ಸ್ನೇಹಿತರಾದ ಸಭಾಪತಿಗಳು ಹೇಳಿದರು. ಅವರು ಈಗ ಸದನದಲ್ಲಿ ಕಾಣಿಸುತ್ತಿಲ್ಲ. ದುರ್ದೈವದಿಂದ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಕೆಟ್ಟದಾದ ಬಜೆಟ್ ಈ ರಾಜ್ಯಕ್ಕೆ ಇದ್ದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಕೆಲವು ಅಂಶಗಳು ಒಳ್ಳೆಯದಿರಬಹುದು. ಅವುಗಳನ್ನು ನಾನು ಸ್ವಾಗತ ಮಾಡುತ್ತೇನೆ. ರೈತರಿಗೆ ಇದು ಬಹಳ ಕೆಟ್ಟದಾದ ಬಜೆಟ್. ಜನರಿಗೆ ತಿಳಿಯದ ಹಾಗೆ, ಈ ರಾಜ್ಯದ ಸ್ಥಿತಿ ಮುಂದೆ ಏನಾಗುತ್ತದೆಂದು ಕಲ್ಪನೆ ಇಲ್ಲದಹಾಗೆ ಅವರೇ ಹೇಳಿದ್ದನ್ನು ಮರೆತು ಈ ಬಜೆಟ್‌ನಲ್ಲಿ ಹೇಳಿದ್ದಾರೆ. ತಾವೇ ಹೇಳಿದ್ದು. ಇಲ್ಲಿ ಬಹುಶಃ ಈ ಮಧ್ಯಂತರ ಆರ್ಥಿಕ ಯೋಜನೆಯಲ್ಲಿ ಇವರೇ ಹೇಳಿದ್ದಾರೆ. ಯೋಜನಾ ಆಯೋಗದವರು ಕೂಡ ಇವರಿಗೆ ಛೀಮಾರಿ ಹಾಕಿ ಕಳಿಸಿದ್ದಾರೆ. 'ಗ್ರಾಮೀಣಾಭಿವೃದ್ಧಿಗೆ 250 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಕೇಂದ್ರದ ಆಕ್ಷೇಪ'- ಇದರಲ್ಲಿ ಕೊನೆಯದಾಗಿ ಹೇಳುತ್ತೇನೆ; ಎಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹಾಗೆ ಮಾಡಿದರೆ ಬಹಳ ವೇಳೆ ತೆಗೆದುಕೊಂಡಹಾಗೆ ಆಗುತ್ತದೆ. ಇಲ್ಲಿ 'ಹದಗೆಟ್ಟೀತು ಎಚ್ಚರಿಕೆ' ಎಂದು ಎಚ್ಚರಿಕೆಯ ಮಾತನ್ನು ಹೇಳುತ್ತಾರೆ. ಏನು ತನ್ನ ವಾರ್ಷಿಕ ಯೋಜನೆಗೆ ಹಣ ಹೊಂದಿಸಲು ಸಾಲವನ್ನೇ ಅವಲಂಬಿಸಿರುವ ರಾಜ್ಯ ಸರ್ಕಾರದ ಪ್ರವೃತ್ತಿ ವರ್ಷವರ್ಷ ಹೆಚ್ಚುತ್ತಾ ನಡೆದಿದ್ದು ದೀರ್ಘ ಭವಿಷ್ಯದಲ್ಲಿ ರಾಜ್ಯದ ಹಣಕಾಸಿನ ಆರೋಗ್ಯಕ್ಕೆ ಮಾರಕ' ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಕೆ.ಎಸ್. ಪಂತ್ ಅವರು ಎಚ್ಚರಿಸಿದ್ದಾರೆ. ಬಹುಶಃ ಈ ರಾಜ್ಯವನ್ನು .....

ಶ್ರೀ ಕೆ. ಅಭಯಚಂದ್ರ:- ನೀವು ಸಾಲ ಮಾಡಿರಲಿಲ್ವಾ?

ಶ್ರೀ ಎಸ್.ಎಸ್.ಪಾಟೀಲ್:- ನಾವೇನೂ ಸಾಲ ಮಾಡಿಲ್ಲ, ನಾವು ಬಹಳ ಚಲೋ ಇದ್ದೇವೆ ಎಂದು ನಾನು ಹೇಳಿಲ್ಲ. ಅಧ್ಯಕ್ಷರೇ, ಅದನ್ನು ಮುಂದೆ ಹೇಳುತ್ತಾರೆ.....

(ಗೊಂದಲ)

ಅಧ್ಯಕ್ಷರು:- ನೀವು ಅಧ್ಯಕ್ಷರ ಕಡೆಗೆ ನೋಡಿ ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಅವರು ತಿವಿಯುತ್ತಾರೆ. ಹಾಗೆ ಮಾಡಿದಾಗ ಅವರಿಗೆ ಒಂದೊಂದು ಹೇಳಬೇಕಾಗುತ್ತದೆ. ನಾನು ಆದಷ್ಟು ತಮ್ಮ ಕಡೆ ನೋಡಿ ಮಾತನಾಡುತ್ತೇನೆ.

ಅಧ್ಯಕ್ಷರು:- ಅವರಿಗೆ ಉತ್ತರ ಕೊಡಿ. ಮುಖ ಇತ್ತ ಕಡೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಯಾವಾಗಲೂ ಆ ಕಡೆ ತಿರುಗುವುದಿಲ್ಲ. ಆಧ್ಯಕ್ಷರೇ, ಇಲ್ಲಿ ಇವರು ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ಮಂಡಿಸಿದ್ದಾರೆ. ಇದು ಎಷ್ಟು ಭಯಾನಕವಾಗಿದೆ ಎಂದರೆ ಅದನ್ನು ನೆನೆಸಿಕೊಂಡರೆ ಹೇಗೆ ಈ ರಾಜ್ಯ ಉಳಿಯುತ್ತದೆ? ಇಲ್ಲಿ ಒಂದು ಕಡೆ ಮುಖ್ಯಮಂತ್ರಿಗಳು ಹೇಳುತ್ತಾರೆ - 'ಬೇರೆ ರಾಜ್ಯಗಳನ್ನು ನೋಡಿದರೆ ಕರ್ನಾಟಕ ರಾಜ್ಯವು ಆರ್ಥಿಕ ಕೌಶಲ್ಯಕ್ಕೆ ರಾಷ್ಟ್ರದಲ್ಲಿಯೇ ಖ್ಯಾತಿಯನ್ನು ಗಳಿಸಿದೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ'. ನನಗೂ ಹೆಮ್ಮೆ ಎನ್ನಿಸುತ್ತದೆ. ಸನ್ಮಾನ್ಯ ಆದ್ಯಕ್ಷರೇ, ಈ ಬಜೆಟ್ ಹೇಗಿದೆ ಎಂದರೆ ಈ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಅಂತರಲ್ಲಾ, ಇದು ಖರೇ ಕೃಷ್ಣನ ಲೆಕ್ಕ. ನಿಜವಾಗಿಯೂ ಇದರಲ್ಲಿ ಕೃಷ್ಣನ ಲೆಕ್ಕ ಇದೆ, ರಾಮನ ಲೆಕ್ಕ ಇಲ್ಲವೇ ಇಲ್ಲ. ಇಲ್ಲಿ ನಮಗೆ ಹೇಳುತ್ತಾರೆ. ಸಂಚಯಿತ ಸಾಲದ ಮೊತ್ತ 1999-2000ರಲ್ಲಿ 28406 ಕೋಟಿ ರೂ.ಗಳು 2001ರಲ್ಲಿ 31525 ಕೋಟಿ ರೂ.ಗಳು ನಂತರ ಅವರು ಹೇಳುತ್ತಿರುವುದು-2004-05ಕ್ಕೆ 54, ಸಾವಿರ ಕೋಟಿ ರೂ.ಗಳು ಈ ರಾಜ್ಯಕ್ಕೆ ಸಾಲವಾಗುತ್ತದೆ. ಅಧ್ಯಕ್ಷರೇ, ಇದು ಬಹಳ ಭಯಾನಕವಾಗಿರುತ್ತದೆ. ನಾವು ಮುಂದೆ ಬಾಳ್ವೆ ಮಾಡುವುದು ಹೇಗೆ? ಈ ರಾಜ್ಯವನ್ನು ನಡೆಸುವುದು ಹೇಗೆ? ಪಗಾರಕ್ಕೂ ಗತಿ ಇಲ್ಲದಹಾಗೆ ಆಗುತ್ತದೆ. ಮುಂದೆ ಯಾರೂ ಬರುತ್ತಾರೆ ಎನ್ನುವುದು ಮುಂದಿನ ವಿಚಾರ. ಅದು ಬೇರೆ ವಿಚಾರ. ಅದರ ಬಗ್ಗೆ ಹೇಳಿದರೆ ಅದು ವಿವಾದಕ್ಕೆ ಕಾರಣವಾಗುತ್ತದೆ.

ಶ್ರೀ ಕೆ. ಅಭಯಚಂದ್ರ:- ನೀವಂತೂ ಬರುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಯೋಗ್ಯತೆ ನೋಡಿ ಸಾಲ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:- ಕೇರಳಕ್ಕೆ ಹೋಗಿ ನೋಡಿ, ಬಿಹಾರಕ್ಕೆ ಹೋಗಿ ನೋಡಿ. ಅಲ್ಲಿ ನಿಮ್ಮದೇ ರಾಜ್ಯ ಇದೆ. ಎಷ್ಟು ದಿವಸ ಯೋಗ್ಯತೆ ಇರುತ್ತದೆ ಎಂಬುದು ಗೊತ್ತಾಗುತ್ತದೆ. ಕೊರತೆ ನೀಗಿಸುವುದಕ್ಕೆ ಸಾಲ ಮಾಡುತ್ತೇವೆ ಎಂದರೆ ಹೇಗೆ? ನಮ್ಮ ಆರ್ಥಿಕ ಸಂಪನ್ಮೂಲಗಳನ್ನು ಯಾವ ರೀತಿಯಾಗಿ ಕ್ರೋಢೀಕರಿಸಬೇಕು., ನಾವು ಈ ಯೋಜನೆಯಲ್ಲಿ ಸಾಲ ಕಡಿಮೆ ಮಾಡುವುದಕ್ಕೆ ಏನೇನು ಮಾಡಬೇಕು, ನಮ್ಮ ಆರ್ಥಿಕ ಕೊರತೆ ಏನಿದೆ, ಅದನ್ನು ಯಾವ ರೀತಿಯಾಗಿ ನೀಗಿಸಬೇಕು ಎಂದು ನಿಮಗೆ ಗಮನ ಇಲ್ಲ. ಕೊರತೆ ನೀಗಿಸುವುದು ಹೇಗೆ ಎಂದರೆ ಸಾಲ ಹುಟ್ಟಿಸಿ ನೀಗಿಸಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಎಷ್ಟು ದಿವಸ ಎಂದು ಸಾಲ ಮಾಡುವುದು? ಮುಂದೆ ಯಾರೇ ಬರಬಹುದು, ಆ ಮಾತು ಬೇರೆ. ನೀವು ಇರುತ್ತೀರೋ, ಇಲ್ಲವೋ ಆ ಮಾತು ಬೇರೆ. ದುರ್ದೈವದಿಂವ ಯಾರಾದರೂ ಬದಲಿಯವರು ಬಂದರೆ ಅವರು ರಾಜ್ಯವನ್ನು ನಡೆಸುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಅವರಿಗೆ ಕನಕಪುರದ ಬಿಸಿ ತಟ್ಟಿದೆ ಎಂದು ನಾನು ತಿಳಿದುಕೊಂಡಿದ್ದೆ. ಆ ಬಿಸಿ ಇನ್ನೂ ತಟ್ಟಿಲ್ಲ. ಈ ಬಜೆಟ್ ಹೇಗಿದೆ ಎಂದರೆ ಮೇಲ್ಮನೆಯ ವಿರೋಧ ಪಕ್ಷದ ನಾಯಕರಿಗೆ

ಏನು ತಿಳಿಯಿತೋ ಏನೋ ....

(ಗೊಂದಲ)

(ಮಾನ್ಯ ಕಂದಾಯ ಸಚಿವರಾದ ಶ್ರೀ ಹೆಚ್.ಸಿ. ಶ್ರೀಕಂಠಯ್ಯ ಕುಳಿತುಕೊಂಡೇ ಮಾತನಾಡುತ್ತಿದ್ದರು ಹೇಳಿದರು)

ಶ್ರೀ ಎಸ್.ಎಸ್. ಪಾಟೀಲ್:- ಅವರಿಗೆ ಎದ್ದುನಿಂತು ಮಾತನಾಡುವ ಧೈರ್ಯ ಇಲ್ಲ. ಕುಳಿತುಕೊಂಡೇ ಮಾತನಾಡುತ್ತಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಎಕ್ಸೈಸ್ ಒಂದರಲ್ಲೇ ತೆಗೆಯಬಹುದು, ಸೋರಿಕೆಯನ್ನು ನಿಲ್ಲಿಸಬಹುದು ಎಂದು ಹೇಳಿದ್ದಾರೆ. ದುರ್ದೈವದಿಂದ ನೀವು ಅದನ್ನು ಮಾಡುತ್ತಿಲ್ಲ. ಇಲ್ಲಿ ನನಗೆ ಎಕ್ಸೈಸ್ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಸುಮ್ಮನೆ ಅಧಿಕಾರಿಗಳು ಕಳುಹಿಸಿದ್ದನ್ನು ಸಹಿಮಾಡಿ ಕಳುಹಿಸಿಕೊಡಬಾರದು. ನೀವೂ ಕೂಡ ಸ್ವಲ್ಪ ನೋಡಬೇಕು. ಇದು ನಮಗೆ ಏಕೆ ಬೇಕು ಎಂದರೆ ಎರಡು ಸಾವಿರ ಕೋಟಿ ರೂ. ಬರುತ್ತದೆ. ಅದರಲ್ಲಿ ಒಂದು ಸಾವಿರ ಕೋಟಿ ರೂ. ಸೋರಿಕೆಯೇ ಇದೆ. ಅದರ ಮೇಲೆಯೇ ಎಲ್ಲಾ ಬಜೆಟ್ ನಡೆದಿದೆ. ಈ ಕಾರಣದಿಂದ ಎಕ್ಸೈಸ್ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ .....

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಮಂತ್ರಿ):- ಪಾಟೀಲ ಸಾಹೇಬರೇ, ನೀವು ಎಲ್ಲಾ ಉತ್ತರವನ್ನು ಶ್ರೀ ಅಭಯಚಂದ್ರ ಅವರಿಗೆ ಹೇಳುತ್ತಿದ್ದೀರೋ, ಅಥವಾ ಅಧ್ಯಕ್ಷರಿಗೆ ಹೇಳುತ್ತಿದ್ದೀರೊ?

ಶ್ರೀ ಎಸ್.ಎಸ್. ಪಾಟೀಲ್:- ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ಅಧ್ಯಕ್ಷರಿಗೆ ಹೇಳಿದರೆ ನಿಮಗೆಲ್ಲಾ ಕೇಳಿದ ಹಾಗೆ ಆಗುತ್ತದೆ. ಏಕೆಂದರೆ ಇದು ಕಿವುಡು ಸರ್ಕಾರ. ಆದರೆ ವಿರೋಧ ಪಕ್ಷದವರು ಮೂಕರಾಗುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಕಿವುಡಾಗಿದೆ. ಏನು ಹೇಳಿದರೂ ನಿಮಗೆ ಗಮನ ಇಲ್ಲ.

ಶ್ರೀ ಎಂ. ಮಹಾದೇವ್:- ನಾವು ಕಿವುಡರಾದರೆ ನೀವು ಮೂಕರಾಗುತ್ತೀರಲ್ಲಾ?

(ಗೊಂದಲ)

ಅಧ್ಯಕ್ಷರು:- ಪಾಟೀಲರೇ, ನೀವು ಯೀಲ್ಡ್ ಆಗಬೇಡಿ, ಮುಂದುವರೆಸಿ. ನೀವೇ ಕೊನೆಯ ಭಾಷಣಕಾರರು.

ಶ್ರೀ ಎಸ್.ಎಸ್. ಪಾಟೀಲ್:- ನಾನು ಯೀಲ್ಡ್ ಆಗಿಲ್ಲ. ಆದರೆ ವಿಚಾರಗಳನ್ನು ಹೇಳಬೇಕಾಗುತ್ತದೆ. ಯಾವ್ಯಾವ ಮಂತ್ರಿಗಳು ಇಲ್ಲಿ ಇದ್ದಾರೆ, ಅವರ ಬಗ್ಗೆ ಅಷ್ಟೇ ನಾನು ಮಾತನಾಡುತ್ತೇನೆ. ಇಲ್ಲದ ಮಂತ್ರಿಗಳ ಬಗ್ಗೆ ಹೇಳಿದರೆ ಏನು ಪ್ರಯೋಜನ? ಇಲ್ಲಿ ಎಕ್ಸೈಸ್ ಮಂತ್ರಿಗಳು ನಮ್ಮ ಎದುರಿಗೆ ಇದ್ದಾರೆ. ಅದಕ್ಕೇ ನಾನು ಮಾತನಾಡುವುದಕ್ಕೆ ಹತ್ತಿದ್ದೇನೆ. 'ಇಲ್ಲಿ ಸೆಕೆಂಡ್ಸ್ ಮಾರಾಟದಲ್ಲಿ ತಡೆಯದಿರುವುದು ರಾಜ್ಯದಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?' ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. 'ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮ ಏನು?' ಎಂದರೆ 'ಯಾವಾಗ ಆಗುತ್ತದೆ, ಆಗ ನಾವು ಕ್ರಮ ತೆಗೆದುಕೊಳ್ಳುತ್ತೇವೆ'

ಎಂದು ಹೇಳಿದ್ದಾರೆ. 'ಸೆಕೆಂಡ್ಸ್ ಮಾರಾಟ ನಿಲ್ಲಿಸುವುದಿಂದ ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರುತ್ತದೆ. ಇದರ ಬಗ್ಗೆ ವಿವರ ನೀಡುವುದು' ಎಂದು ಕೇಳಿದರೆ' ಈ ವಿಷಯದಲ್ಲಿ ಯಾವುದೇ ಅಂದಾಜು ಮಾಡಿರುವುದಿಲ್ಲ.' ಇದು ಇವರ ಉತ್ತರ. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ ಒಂದು ಸಾವಿರ ಕೋಟಿ ರೂ. ಸೋರಿಕೆಯಾಗುತ್ತಿದೆ ಎಂದು. ನಿಮಗೆ ಒಂದು ಅಂದಾಜು ಇರಬೇಕಲ್ಲಾ? ಅಜಮಾಸು ಇಷ್ಟು ಇರಬಹುದು ಎಂದು ಹೇಳಬಹುದು. ಸುಮ್ಮನೆ ಅಧಿಕಾರಿಗಳು ಏನು ಬರೆದುಕೊಡುತ್ತಾರೆ, ಅದನ್ನು ಸಹಿಮಾಡಿ ಕಳಿಸಿಬಿಡುತ್ತೀರಾ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯಮಂತ್ರಿ):- ಸನ್ಮಾನ್ಯ ಅಧ್ಯಕ್ಷರೇ, ಈ ಸೆಕೆಂಡ್ಸ್ ಹೋಗುವುದನ್ನು ನಾವು ಹೇಗೆ ಅಂದಾಜು ಮಾಡುವುದಕ್ಕೆ ಆಗುತ್ತದೆ? When seconds or thirds are found we seize the whole lot. ಅದು ಬಿಟ್ಟು ಇಷ್ಟು ತೆಗೆದುಕೊಂಡು ಹೋಗುತ್ತಾರೆ, ಇಷ್ಟು ತೆಗೆದುಕೊಂಡು ಹೋಗಬಹುದು ಎಂದು ಅಂದಾಜು ಮಾಡುವುದಕ್ಕೆ ಆಗುವುದಿಲ್ಲ. Last year we have seized about Rs. 50 crore worth illicit liquor. ವ್ಯಾನ್ ಆಗಲಿ, ಸ್ಕೂಟರ್, ಲಾರಿಯಾಗಲಿ, ಬಸ್ ಆಗಲಿ, ಸುಮಾರು ಐವತ್ತು ಕೋಟಿ ರೂ.ಗೂ ಮಿಕ್ಕಿ ಮೌಲ್ಯದ ವಸ್ತುಗಳನ್ನು ನಮ್ಮ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ. This is the way the Excise Department is taking action. ನಮಗೆ ಒಂದು ಡಿಸ್ಟಿಲರಿಯವರು ಇಷ್ಟೇ ಪ್ರೊಡ್ಯೂಸ್ ಮಾಡಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದು ಅವರ ಕೆಪ್ಯಾಸಿಟಿ ಮೇಲೆ ಅವರು ಪ್ರೊಡ್ಯೂಸ್ ಮಾಡುತ್ತಾರೆ. We have our men posted for the supervision of distilleries. ಯಾವುದೇ ರೀತಿ ಅಕ್ರಮ ವ್ಯವಹಾರ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಏನದಾರೂ ಆಗಿ ಕಣ್ಣು ತಪ್ಪಿ ಹೋಗಿದ್ದರೂ ಕೂಡ ದಾರಿಯಲ್ಲಿ ಹಿಡಿದು ಸೀಜ್ ಮಾಡುತ್ತೇವೆ. ಇದಕ್ಕಿಂತ ದೊಡ್ಡದಾಗಿ ನಮ್ಮ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯವಿದೆ? ನಿರ್ದಿಷ್ಟವಾಗಿ 'ಇವರು ಬಿಡುತ್ತಾರೆ' ಎಂದು ಏನು ಹೇಳಿದ್ದಾರೆ, ಅದರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಇಷ್ಟು ಮಾತ್ರ ನಾನು ಹೇಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿ ಯವರು ವರದಿಯನ್ನು ಕೊಟ್ಟಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಇದೇ ಸರ್ಕಾರ ನೇಮಕ ಮಾಡಿದಂಥ ತೆರಿಗೆ ಸುಧಾರಣಾ ಸಮಿತಿಯ ಅಧ್ಯಕ್ಷರು. ಅವರ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 1100-1200 ಕೋಟಿ ರೂ.ಯಷ್ಟು ಯಾವ ರೀತಿ ಲಿಕೇಜ್ ಆಗುತ್ತಿದೆ ಎನ್ನುವಂಥಾದ್ದನ್ನು ಅವರು ಕ್ಲಿಯರ್ ಆಗಿ ಹೇಳಿದ್ದಾರೆ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಏನೂ ಕ್ರಮ ತೆಗೆದುಕೊಂಡಿಲ್ಲ. ನಿಮ್ಮ ಇನ್ ಕಮ್ ಎಷ್ಟು? 1500 ರಿಂದ 2000 ಕೋಟಿ ರೂ. ನಿಜವಾಗಿಯೂ ನೀವು ಸೆಕೆಂಡ್ಸ್ ಲೀಕೇಜ್‌ನ್ನು ತಡೆಹಿಡಿದರೆ ಮೂರು ಸಾವಿರ ಕೋಟಿ ರೂ.ಗಿಂತ ಜಾಸ್ತಿ ಇನ್ ಕಮ್ ಬರುತ್ತದೆ. ಆದರೆ ಇದನ್ನು ಮಾಡುವುದಕ್ಕೆ ನಿಮಗೆ ಮನಸ್ಸು ಇಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳು ಇರುತ್ತವೆ. ನಿಮ್ಮ ಎಕ್ಸೈಸ್ ಅಧಿಕಾರಿಗಳು ಇರಬಹುದು, ಪೋಲೀಸ್ ಸಿಬ್ಬಂದಿ ಇರಬಹುದು, ಕೆಲವೊಂದು ರಾಜಕಾರಣಿಗಳು ಇರಬಹುದು. ಎಲ್ಲರೂ ಇದರಲ್ಲಿ ಇನ್ವಾಲ್ವಮೆಂಟ್ ಆಗಿದ್ದಾರೆ. ನೀವು ಏನೂ ಮಾಡುವುದಿಲ್ಲ. ಆದರೆ ಸಾವಿರಾರು ಕೋಟಿ

ರೂಪಾಯಿಗಳ ಲೂಟಿಯಾಗುತ್ತಿದೆ. ಇದನ್ನು ತಡೆಯಲಿಕ್ಕೆ ನಿಮಗೆ ಆಗುತ್ತಿಲ್ಲ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯಮಂತ್ರಿ):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಬಹುಶಃ ಮಾನ್ಯ ಮೊಯಿಲಿಯವರು ಹೇಳಿರಬಹುದು, ಇಲ್ಲ ಅಂತ ಅಲ್ಲ. ಅವರು ಯಾವರೀತಿಯಾಗಿ ಲೆಕ್ಕಾಚಾರ ಹಾಕಿದ್ದಾರೆ ಎಂದು ನಮಗೆ ಹೇಳುವುದಕ್ಕೆ ಆಗುವುದಿಲ್ಲ. ಅವರು ಅಸೆಸ್‌ಮೆಂಟ್‌ನ್ನು ಯಾವುದೋ ರೀತಿಯಲ್ಲಿ ಮಾಡಿದ್ದಾರೆ. That doesn't mean actually that much leakage is there. It is only a suggestion or imagination. ಇರಬಹುದು, ಅವರ ಲೆಕ್ಕಾಚಾರದಲ್ಲಿ ಏನೋ ಹಾಕಿರಬಹುದು. ಆಗಿರಬಹುದು ಎಂದು ಹೇಳಿದ್ದಾರೆ. ಆದರೆ ಇವತ್ತು 2,102 ಕೋಟಿ ರೂ. ಉತ್ಪತ್ತಿಯಾಗಿದೆ.

6.20 ಪಿ.ಎಂ.

200-300 ಕೋಟಿ ರೂ. ಹೀಗೆ ಮುಂದಕ್ಕೆ ಬರುತ್ತಿದೆ, ಅಂದರೆ ಹೆಚ್ಚು ಹಣ ಬರುತ್ತಿದೆ. ಇವತ್ತು ಹೆಚ್ಚುವರಿ ಅಬ್ಕಾರಿ ಸುಂಕವೂ ಸುಮಾರು 250 ಕೋಟಿ ರೂ. ಜಾಸ್ತಿಯಾಗಿದೆ. We have towards that. ಏನು ತೆರಿಗೆ ಲೀಕೇಜ್ ಎಂದು ತಾವುಗಳು ಹೇಳುತ್ತೀರಿ ಅದನ್ನು ಪ್ಲಗ್ ಮಾಡುವುದಕ್ಕೆ ನಮ್ಮ ಸರ್ಕಾರ ಸರ್ವ ಕ್ರಮಗಳನ್ನೂ ತೆಗೆದುಕೊಂಡಿದೆ. ಇದರಲ್ಲಿ ಯಾವುದೇ ರೀತಿಯಲ್ಲಿ ತಾತ್ಸಾರವನ್ನು ನಾವು ತೋರಿಸುವುದಿಲ್ಲ. ಆದ್ದರಿಂದ ಈ ಸೋರಿಕೆ ಇವತ್ತಲ್ಲಾ ನಾಳೆ ನಿಲ್ಲುವಂಥದ್ದು. ಮಾನ್ಯ ವೀರಪ್ಪ ಮೊಯ್ಲಿರವರ ಅಸೆಸ್ ಮೆಂಟ್ ಏನಿದೆ ಅದು ನಿಜವಾಗಿದ್ದರೆ ಖಂಡಿತವಾಗಿ ಅದನ್ನು ತಡೆಹಾಕಲು ನಮ್ಮ ಸರ್ಕಾರ ಬದ್ಧವಾಗಿರುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಇದೇ ಸರ್ಕಾರ ರೈತರು ಉಪಯೋಗಿಸತಕ್ಕ ವಿದ್ಯುತ್ತನ್ನು 38 ಪರ್‌ಸೆಂಟ್ ಉಪಯೋಗಿಸುತ್ತಾರೆ, ಯಾವ ಅಳತೆ ಏನು ಎಂದು ಅದನ್ನು ತೋರಿಸುತ್ತಾರೆ. ಆದರೆ ಇದೇ ಎಕ್ಸೈಸ್ ಲಾಬಿ ಸೆಕೆಂಡ್ಸ್ ಹೋಗುವಂಥಾದ್ದನ್ನು ಇವರು ಆಗುವುದಿಲ್ಲವೆಂದರೆ ಹೇಗೆ? ಹಾಗಾದರೆ ರೈತರಿಗೊಂದು ನ್ಯಾಯ, ಎಕ್ಸೈಸ್‌ಗೆ ಒಂದು ನ್ಯಾಯವೇ? ಬಡ ರೈತ ಉಪಯೋಗಿಸುವ ವಿದ್ಯುತ್ 38 ಪರ್‌ಸೆಂಟ್ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಾರೆ, ಎಕ್ಸೈಸ್‌ನಲ್ಲಿ ಎಷ್ಟು ಸೆಕೆಂಡ್ಸ್ ಹೋಗುತ್ತದೆಂದರೆ ಗೊತ್ತಾಗುವುದಿಲ್ಲವೆಂದೆ ಇದನ್ನು ಎಕ್ಸೈಸ್ ಲಾಬಿಯ ಸರ್ಕಾರವೆಂದು ಹೇಳಬೇಕೋ? ರೈತರ ಸರ್ಕಾರವೆಂದು ಹೇಳಬೇಕೋ?

(ಗೊಂದಲ)

ಅಧ್ಯಕ್ಷರು: ಮಾನ್ಯ ಪಾಟೀಲರೆ ತಾವು ಮುಂದುವರೆಸಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಆರೂವರೆ ಮೇಲೆ ಎಕ್ಸೈಸ್ ವಿಚಾರ ಮಾತನಾಡಿದರೆ ಇದೇ ರೀತಿ ಆಗುವುದು.

ಅಧ್ಯಕ್ಷರು: ಇನ್ನೂ ಆಗಿಲ್ಲವಲ್ಲಾ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಮಂತ್ರಿಗಳ ಉತ್ತರವನ್ನು ನೋಡಿ ನಿಜವಾಗಿ ಬಹಳ ನೋವಾಗುತ್ತದೆ. ಶ್ರೀ ಮೊಯ್ಲಿರವರೆಂದರೆ ಈ ರಾಜ್ಯ ಕಂಡ ಒಳ್ಳೆಯ, ಬುದ್ಧಿವಂತ ಆರ್ಥಿಕ ಸಚಿವರಾಗಿದ್ದವರು, ಮುಖ್ಯಮಂತ್ರಿಗಳಾಗಿದ್ದವರು., ಅವರ ಅಧ್ಯಕ್ಷತೆಯಲ್ಲಿ ಇವರೇ ನೇಮಿಸಿದಂಥ ಆಯೋಗ, ಆ ಆಯೋಗದ ಅಧ್ಯಕ್ಷರು ವರದಿ ಕೊಟ್ಟರೆ, ಇವರು ಏನು ಹೇಳುವುದೆಂದರೆ ಅವರು ಸನ್ಮಾನ್ಯ ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ. ಎಂದು ಹೇಳಿದಂತೆ, ಆ ಶಬ್ದವನ್ನು ಉಪಯೋಗಿಸಲಿಲ್ಲ, ಆ ರೀತಿ ಹೇಳಿದ್ದಾರೆ.

ಶ್ರೀ ಎಂ.ಎಂ. ನಾಣಯ್ಯ: ನಮಗೆ ಮಾನ್ಯ ಮೊಯ್ಲಿಯವರ ಬಗ್ಗೆ ಬಹಳ ಗೌರವವಿದೆ. ಅವರು ನಮ್ಮ ಮಾಜಿ ಮುಖ್ಯಮಂತ್ರಿಗಳವರು ನಾನು ಆ ರೀತಿ ಅವರ ಬಗ್ಗೆ ಹೇಳಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ತಾವು ಆ ಶಬ್ದವನ್ನು ಹೇಳಿಲ್ಲ, ಸೂಕ್ಷ್ಮವಾಗಿ ಆ ರೀತಿ ಹೇಳಿದ್ದೀರಿ.

ಶ್ರೀ ಎಂ.ಎಂ. ನಾಣಯ್ಯ: ನೋ ಇಂಪಾಜಿಬಲ್, ನೋ.

ಅಧ್ಯಕ್ಷರು: ಅವರು ಹೇಳದಿರುವುದನ್ನು ನೀವೇಕೆ ಹೇಳುತ್ತೀರಿ ? I am very sorry. ಅವರು ಆ ರೀತಿ ಹೇಳಲಿಲ್ಲ. ಅವರು ಹೇಳದಿರುವುದನ್ನು ನೀವೇ ಹೇಳಿ ಕನ್‌ಫ್ಯೂಸ್ ಮಾಡುತ್ತಿದ್ದೀರಿ. You please continue.

ಶ್ರೀ ಎಂ. ಎಂ. ನಾಣಯ್ಯ: ನಾನು ಹೇಳದಿರುವುದನ್ನು ತಾವು ಹೇಳಬೇಡಿ.

ಶ್ರೀ ಎಸ್.ಎಸ್. ಪಾಟೀಲ್: ಅವರು ಆ ರೀತಿಯಲ್ಲಿ ಉಚ್ಚಾರ ಮಾಡಿದರು.

ಅಧ್ಯಕ್ಷರು: ತಾವು ಸೀನಿಯರ್ ಎಂ.ಎಲ್.ಎ. ದಯುವಿಟ್ಟು ಆ ರೀತಿ ಮಾತನಾಡಬಾರದು.

ಶ್ರೀ ಎಸ್.ಎಸ್. ಪಾಟೀಲ್: ನಾನು ಸೀನಿಯರ್ ಆಗಿಯೇ ಮಾತನಾಡುತ್ತೇನೆ. ಅವರು ಮೊಯ್ಲಿಯವರ ವರದಿಯನ್ನು ನೇರವಾಗಿ ಒಪ್ಪಿಕೊಳ್ಳಬೇಕಿತ್ತು. ಆದರೆ ಅವರು ಅದನ್ನು ಅಲ್ಲಗಳೆಯುತ್ತಿದ್ದಾರೆ. ಮೊಯ್ಲಿರವರನ್ನು ತೆಗೆದಾದರೂ ಬಿಡಿ. ಮುಖ್ಯಮಂತ್ರಿಯವರಿದ್ದರೆ ಅದರ ಅಧ್ಯಕ್ಷರನ್ನಾಗಿ ಮೊಯ್ಲಿಯವರನ್ನೇಕೆ ಇಟ್ಟಿದ್ದೀರಿ, ತೆಗೆದುಬಿಡಿ ಎಂದು ಕೇಳುತ್ತಿದ್ದೆ. ಮೊಯ್ಲಿರವರು ಇದ್ದಮೇಲೆ ಅವರು ಕೊಟ್ಟ ವರದಿಯನ್ನು ಇವರು ಒಪ್ಪಬೇಕಾಗುತ್ತದೆ.

ಅಧ್ಯಕ್ಷರು: ಅವರು ಯಾವ ಆಧಾರದ ಮೇಲೆ ಅಸೆಸ್ ಮಾಡಿದ್ದಾರೋ ಗೊತ್ತಿಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಜೆ.ಟಿ. ಪಾಟೀಲ್: ಅವರೇನು ಶಬ್ದವನ್ನು ಉಪಯೋಗಿಸಿದ್ದಾರೆ ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಅದನ್ನು ನಾನು ಹೇಳಿಲ್ಲ.

ಶ್ರೀ ಎಂ.ಎಂ. ನಾಣಯ್ಯ: ನಾನು ಹಾಗೆ ಹೇಳಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಅವರು ಹಾಗೆ ಹೇಳಿಲ್ಲ, ಆ ರೀತಿ ಅರ್ಥ ಬರುವಂತೆ

ಮಾತನಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಪಾಟೀಲರೆ, ಇಲ್ಲಿ ಪ್ರತಿಯೊಂದು ವಾಕ್ಯಕ್ಕೂ ಡಿಸ್‌ಕಷನ್ ಬೇಡಿ. ತಾವು ಮುಂದುವರೆಸಿಕೊಂಡು ಹೋಗಿ.

ಶ್ರೀ ಎಸ್.ಎಸ್. ಪಾಟೀಲ್: ಆ ಇಲಾಖೆಯನ್ನು ನೋಡಿಕೊಳ್ಳಲು ಒಬ್ಬರು ಸಚಿವರು ಇರುತ್ತಾರೆ, ಅಲ್ಲಿರತಕ್ಕ ಕಮೀಷನರ್‌ರವರು, ಕಾರ್ಯದರ್ಶಿಯವರು ಇದರ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಮಾನ್ಯ ವೀರಪ್ಪಮೊಯ್ಲಿರವರ ವರದಿಯೆಂದರೆ ಸುಮ್ಮನಲ್ಲ, ಆ ವರದಿಯ ಆಧಾರದ ಮೇಲೆ ಅವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಸಾವಿರಾರು ಕೋಟಿ ರೂಪಾಯಿಗಳ ಸೋರಿಕೆಯನ್ನು ಉಳಿಸಬೇಕಾಗುತ್ತದೆ.

ಅಧ್ಯಕ್ಷರು: That is a good suggestion, ಎಂದು ಹೇಳಿ, ಪುನಃ ಮಂತ್ರಿಗಳು ಎಂದರೆ ಅವರು ಮಾತನಾಡುವುದು, ತಾವು ಉತ್ತರ ಹೇಳುವುದು, ಅವರು ಮಾತನಾಡುವುದು ಇದರಿಂದ ಪ್ರಯೋಜನವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಸಲಹೆ ಕೊಡುತ್ತೇನೆ. ನಾನು ಒಂದು ಪ್ರಶ್ನೆ ಹಾಕಿದ್ದೆ. ಅದೇನೆಂದರೆ, ರಾಜ್ಯದಲ್ಲಿ ಸಿ.ಎಸ್. 4, ಸಿ.ಎಲ್.9, ಪರವಾನಗಿ ಕೊಡಲು ಇರುವ ಷರತ್ತುಗಳೇನು, ಅದಕ್ಕೆ ಇರುವ ಷರತ್ತುಗಳನ್ನು ಹೇಳಿದ್ದಾರೆ. ಮದ್ಯವನ್ನು ವಿತರಿಸಲು ವಿಶಾಲವಾದ ಪ್ರತ್ಯೇಕವಾದ ಕೊಠಡಿ ಇರಬೇಕು, ಆರೋಗ್ಯಕರವಾದ ಶೌಚಾಲಯ ವ್ಯವಸ್ಥೆ ಇರಬೇಕು, ಪ್ರತ್ಯೇಕ ಅಡುಗೆ ಕೋಣೆ ಇರತಕ್ಕದ್ದು, ಒಳಾಂಗಣ ಮತ್ತು ಹೊರಾಂಗಣ ಸೇರಿದಂತೆ ಸಾಕಷ್ಟು ಸ್ಥಳಾವಕಾಶವಿರಬೇಕು. ಸಿ.ಎಲ್.9 ರಲ್ಲಿ ಕುಳಿತುಕೊಳ್ಳಲು ಸಾಕಷ್ಟು ಸ್ಥಳಾವಕಾಶವಿರಬೇಕು, ಇವನ್ನೆಲ್ಲಾ ಹೇಳಿದರು, ಈ ರೀತಿ ಇದ್ದವರಿಗೆ ಮಾತ್ರ ಪರವಾನಗಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ತಾವೇನು ಪರವಾನಗಿ ಕೊಟ್ಟಿದ್ದೀರಿ ಅದು ಸಿ.ಎಲ್. 4, ಸಿ.ಎಲ್.9 ರ ರೀತಿ ಇದೆಯೇ ಎಂದು ಕೇಳಿದ್ದ, ಹೌದು ಎಂದು ಹೇಳಿದ್ದಾರೆ. ಬಾಕಿ ನನ್ನ ಪ್ರಶ್ನೆಗಳಿಗೆ ಉದ್ಭವಿಸುವುದಿಲ್ಲವೆಂದು ಉತ್ತರ ನೀಡಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ಸದನದ ಸಮಿತಿಯನ್ನು ಮಾಡಿ ಅದನ್ನು ಪರಿಶೀಲನೆ ಮಾಡಲು ಕಳುಹಿಸುತ್ತೀರ ನಿಯಮಾವಳಿಯ ಪ್ರಕಾರ ಇಲ್ಲದಿದ್ದರೆ ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ನನ್ನ ದುರ್ದೈವದಿಂದ ಆ ಎಲ್ಲವೂ ಅನ್ ಸ್ಟಾರ್ಡ್ ಆಗಿದೆ. ನನ್ನ ಪ್ರಶ್ನೆಗಳು ಒಂದೂ ಬಂದಿಲ್ಲ, ಎಲ್ಲವೂ ಅನ್ ಸ್ಟಾರ್ ಆಗಿದೆ. ಅಧಿಕಾರಿಗಳೇನು ಕಳುಹಿಸಿಕೊಡುತ್ತಾರೆ ಆ ರೀತಿ ಇವರೇನು ಉತ್ತರ ಕೊಡುತ್ತಾರಲ್ಲಾ, ಅದಕ್ಕೆ ನಾನು ಕೇಳಿಕೊಳ್ಳುತ್ತೇನೆ, ಸೆಕೆಂಡ್ಸ್ ಮುಂತಾದವನ್ನೆಲ್ಲಾ ಮಾರಾಟ ಮಾಡಲು ಇವು ಆಸರೆಗಳು, ಆ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಸರಿಯಾಗಿದ್ದವರಿಗೆ ಎಲ್ಲೋ ಕೆಲವಕ್ಕೆ ಕೊಟ್ಟಿದ್ದೀರಿ, ಎಲ್ಲೋ ಕಿರಾಣಿ ಅಂಗಡಿಯಲ್ಲಿ ನಡೆಯುತ್ತಿರುತ್ತದೆ, ಬೇರೆ ಕಡೆ ನಡೆಯುತ್ತಿರುತ್ತದೆ ಅಂಥವರಿಗೆಲ್ಲಾ ಪರವಾನಗಿ ಕೊಟ್ಟು ಈ ದೃಷ್ಟಿಯಿಂದ ಇವತ್ತು ಸಾವಿರಾರು ಕೋಟಿ ರೂ.ಗಳು ಸೋರಿಕೆಯಾಗುತ್ತದೆ. ಅದನ್ನು ಮೊಯ್ಲಿರವರು ಹೇಳಿದ್ದಾರೆ. ಆದರೆ ಇವರು ಇಲ್ಲ, ಎಲ್ಲಾ ಸರಿಯಾಗಿ ನಡೆಯುತ್ತಿದೆಯೆಂದೇನು ಹೇಳಿದ್ದಾರೆ, ಅದಕ್ಕೆ ಒಂದು ಸದನದ ಸಮಿತಿಯನ್ನು ದಯಮಾಡಿ ನೇಮಿಸಿ, ಅದನ್ನು ಹೋಗಿ ಪರಿಶೀಲನೆ ಮಾಡೋಣ, ಇವರ ಹೇಳಿಕೆಯ ಪ್ರಕಾರ ಒಂದು ಹತ್ತು ಭಾಗದಷ್ಟಾದರೂ ಇದೆಯೇ ಎಂಬುದನ್ನು ನೋಡೋಣ. ಈ ರೀತಿ ನಡೆಸಿದರೆ

ಆದರಿಂದ ಉತ್ಪನ್ನ ಬರುತ್ತದೆಂದರೆ ಹೇಗೆ ಬರುತ್ತದೆ? ಇದಕ್ಕೆ ಸಚಿವರು ತಯಾರಿದ್ದಾರೆಯೇ ಕೇಳಿ? ಅವರ ಅಧ್ಯಕ್ಷತೆಯಲ್ಲೇ ಒಂದು ಸದನದ ಸಮಿತಿಯನ್ನು ಮಾಡಿ. ಅವರೇನು ಇಲ್ಲಿ ಉತ್ತರ ಕೊಟ್ಟಿದ್ದಾರೆ ಅದರಲ್ಲಿ ಹತ್ತು ಭಾಗ ನಿಜವಿದ್ದರೆ ನಾನು ನಿಜವಾಗಿ ತಮಗೆ ಶರಣು ಹೋಗುತ್ತೇನೆ. ಎಲ್ಲಿ ಬೇಕಾದಲ್ಲಿ, ಚುಟ್ಟ, ಬೀಡಿಯ ಅಂಗಡಿಯಲ್ಲಿ ಅದನ್ನಿಟ್ಟುಕೊಂಡು ಕುಳಿತಿದ್ದಾರೆ. ಕಮೀಷನರ್ ಆಫೀಸ್‌ನಲ್ಲಿ ಏನು ನಡೆಯುತ್ತಿದೆ ಎಂಬುದು ತಮಗೂ ಗೊತ್ತಿದೆ. ಇಷ್ಟೆಂದು ವಿಪರೀತ ಭ್ರಷ್ಟಾಚಾರವಾದರೆ ಈ ದೇಶ, ರಾಜ್ಯವನ್ನು ನಾವು ಉಳಿಸುವುದೇ ಹೇಗೆ? ಸಾವಿರಾರು ಕೋಟಿ ರೂ. ಸೋರುತ್ತಿದೆಯೆಂದು, ಮಾನ್ಯ ಮೊಯ್ಲಿರವರು ಹೇಳಿದರೆ, ಅದು ಇಲ್ಲ ಅದರ ಬಗ್ಗೆ ಅಂದಾಜು ಇಲ್ಲವೆಂದು ಇವರು ಉತ್ತರ ಕೊಟ್ಟರೆ ಮೊಯ್ಲಿರವರ ವರದಿಯನ್ನು ಹೇಗೆ ಜಾರಿಗೆ ತರುತ್ತೀರಿ? ಅವರ ಸಮಿತಿ ಏತಕ್ಕೆ ಬೇಕು? ಅವರ ವರದಿ ಏಕೆ ಬೇಕು? ಮೊಯ್ಲಿರವರೇನು ದಡ್ಡರೆ? ಮೊಯ್ಲಿರವರು ಬಹಳ ಜಾಣರಿದ್ದಾರೆ, ಈ ಆರ್ಥಿಕ ವಿಚಾರದಲ್ಲಿ.

ಶ್ರೀ ಎಂ.ಎಂ. ನಾಣಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯ್ಲಿಯವರ ವರದಿಯಲ್ಲೇನು ಅಬ್ಕಾರಿ ವಿಭಾಗದಲ್ಲಿ ಸಾವಿರಾರು ಕೋಟಿ ರೂ. ಸೋರಿಕೆಯಾಗುತ್ತಿದೆಯೆಂದು ಹೇಳಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಂಡಿಲ್ಲ. ಇದರ ಬಗ್ಗೆ ಅವರ ಅಂಕಿಅಂಶಗಳು ಸರಿಯಾಗಿಲ್ಲವೆಂದು ತಿರಸ್ಕಾರ ಮಾಡಿದೆ. ಆದ್ದರಿಂದ ಅದನ್ನು ಬೇಸ್ ಆಗಿ ಇಟ್ಟುಕೊಂಡರೆ ತಮಗೆ ಉತ್ತಮವಾದ ವಸ್ತುಸ್ಥಿತಿ ಸಿಕ್ಕುವುದಿಲ್ಲ. ತಾವು ಮುಂದೆ ಏನು ಮಾಡಬೇಕೆಂದು ಹೇಳುತ್ತಿದ್ದೀರಿ ಅದರ ಬಗ್ಗೆ ನಾವು ಗಮನ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ವೀರಪ್ಪಮೊಯ್ಲಿರವರ ವರದಿ ಸರಿಯಲಿಲ್ಲ, ಆ ವರದಿಯನ್ನು ನಾವು ಒಪ್ಪಿಲ್ಲವೆಂದು ಸ್ಪಷ್ಟವಾಗಿ ಅವರು ತಿರಸ್ಕಾರ ಮಾಡುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಅವರು ಸಂಪೂರ್ಣವಾಗಿ ವರದಿಯನ್ನು ಒಪ್ಪುವುದಿಲ್ಲವೆಂದು ಹೇಳಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸಾವಿರಾರು ಕೋಟಿ ರೂ. ಸೋರಿಕೆಯೇನಿದೆ ಅದನ್ನು ಒಪ್ಪುವುದಿಲ್ಲವೆಂದು ಅವರು ಹೇಳಿದ್ದಾರೆ. ಇಷ್ಟು ಸೋರಿಕೆ ಇಲ್ಲವೆಂದು ಹೇಳಿದ್ದಾರೆ. ಈ ರೀತಿಯಾಗಿ ಇಂಥ ಇಲಾಖೆಗಳಲ್ಲಿ..

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇ ಆ ವರದಿಯನ್ನು ಪರಿಶೀಲಿಸುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಅವರು ಅದಕ್ಕೂ ಗಮನಹರಿಸಿದಂತೆ ಕಂಡುಬರುವುದಿಲ್ಲ. ಮುಖ್ಯಮಂತ್ರಿಗಳೇ ಪರಿಶೀಲಿಸುತ್ತೇವೆಂದು ಹೇಳಿರುವಾಗ ಅಬ್ಕಾರಿ ಸಚಿವರು ಹೀಗೆ ಹೇಳುವುದು ಹೇಗೆ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಆ ವರದಿಯ ಅಂಕಿಅಂಶದಲ್ಲಿ ಸತ್ಯವಿಲ್ಲವೆಂದರೆ ಆಯೋಗದ ಅಧ್ಯಕ್ಷರನ್ನಾಗಿ ವೀರಪ್ಪಮೊಯ್ಲಿರವರನ್ನೇಕೆ ಮುಂದುವರೆಸುತ್ತಾರೆ? ರಾಜೀನಾಮೆ ಕೊಡಿಸಿ.

ಶ್ರೀ ಎಸ್.ಎಸ್. ಪಾಟೀಲ್: 2005ನೇ ಇಸವಿಯ ಹೊತ್ತಿಗೆ ಸುಮಾರು 54 ಸಾವಿರ ಕೋಟಿ ಸಾಲ ಈ ರಾಜ್ಯದ ಮೇಲಿರುತ್ತದೆಂದು ಹೇಳಿದ್ದಾರೆ. ಅದನ್ನು ನಿಲ್ಲಿಸಲು ತಾವು ಬಜೆಟ್

ನಲ್ಲಿ ಏನು ಮಾಡಿದ್ದೀರಿ? ವರ್ಷ ವರ್ಷ ಇದನ್ನು ನಿಲ್ಲಿಸಬೇಕಾಗುತ್ತದೆ. 2005ನೇ ಇಸವಿಗೆ ಬಂದ ಯಾರೇ ಆದರೂ ಒಬ್ಬರೇ ಅದನ್ನು ನಿಲ್ಲಿಸಲು ಆಗುವುದಿಲ್ಲ. ಇದರ ಬಗ್ಗೆ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಮಧ್ಯಾಂತರ ಆರ್ಥಿಕ ನೀತಿಯನ್ನೇನು ಮಂಡಿಸಿದಿರಿ ಇದರ ನಂತರ ಈ ಬಜೆಟ್‌ನಲ್ಲಿ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಹೆಚ್ಚಿನ ಆಡಳಿತ ವೆಚ್ಚವನ್ನು ಕಡಿಮೆ ಮಾಡಲು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಇದು ನನ್ನ ವಾದ, ಇದರ ಬಗ್ಗೆ ಇದರಲ್ಲೇನೂ ಹೇಳಿಲ್ಲ. ಆದ್ದರಿಂದ ಈ ಬಜೆಟ್ ನಯಾವಂಚನೆಯಿಂದ ಕೂಡಿದ ಬಜೆಟ್, ರಾಜ್ಯದ ಜನತೆಗೆ ಸರಿಯಾದ ಚಿತ್ರವನ್ನು ಕೊಡದೆಯೇ ಎಲ್ಲವನ್ನೂ ಮರೆಮಾಚಿರತಕ್ಕ ಬಜೆಟ್. ಹನಿ ನೀರಾವರಿ ಮತ್ತು ಸ್ಪ್ರಿಂಕಲ್‌ರ್‌ಗಳ ಮೇಲೆ ಮಾರಾಟ ತೆರಿಗೆಯನ್ನು ರದ್ದು ಗೊಳಿಸಲು ನಾನು ಉದ್ದೇಶಿಸಿದ್ದೇನೆಂದು ಹೇಳುತ್ತಾರೆ, ಮತ್ತೆ ಮುಂದೆ ಅದರ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಹೀಗೆ ಹೇಳುವುದು ಒಂದು, ಮಾಡುವುದೊಂದಾದರೆ ಹೇಗೆ?

ಪಾಪ ನಮ್ಮವರು ಯಾರೂ ನೋಡಿಲ್ಲ, ನಾನು ಕುಳಿತುಕೊಂಡು ವಿಚಾರ ಮಾಡಿದೆ. ಅದೊಂದು ನನಗೆ ಸಿಕ್ಕಿತು. ಇಂಥಾದ್ದು ಬಹಳ ಇವೆ, ಹುಡುಕಿಕೊಂಡು ಹೇಳುತ್ತಾ ಹೋದರೆ ಟೈಮೂ ಇರುವುದಿಲ್ಲ. ತಾವು ಹೇಳಿ ಎಂದರೆ, ನಾಳೆ ಎಲ್ಲವನ್ನೂ ಹೇಳುತ್ತೇನೆ. ಅಧ್ಯಕ್ಷರೇ, ಇಲ್ಲಿ ಹೇಳುತ್ತಾರೆ, ಮಿಷನರಿ, ಕೃಷಿ ಮತ್ತು ತೋಟಗಾರಿಕೆಗೆ ಉಪಯೋಗಿಸುವ ಸ್ಪ್ರಿಂಕ್ಲರ್ ಮತ್ತು ಡ್ರಿಪ್‌ಇಂಗೇಷನ್ ಉಪಕರಣಗಳು 4 ಪರ್ಸೆಂಟ್ ಟ್ಯಾಕ್ಸ್. ಇದರಲ್ಲಿ ಪ್ರಪೋಸ್ ಮಾಡಿದ್ದಾರೆ. ಇಲ್ಲಿ ಮುಂದೆ ತೆಗೆದಿದ್ದೇವೆಂದು ಹೇಳುತ್ತಾರೆ, ಆದರೆ ಇಲ್ಲಿ ಟ್ಯಾಕ್ಸ್ ಹಾಕಿದ್ದಾರೆ. ಇದರಲ್ಲಿ ಯಾವುದು ಖರೆ? ಅನಂತರ, ಯಾವುಯಾವುದರ ಮೇಲೆ ಟ್ಯಾಕ್ಸ್ ಹಾಕಿದ್ದಾರೆಂಬುದನ್ನು ಹೇಳುತ್ತೇನೆ. ರೈತರ ಮೇಲೆ ಹಾಕಿರತಕ್ಕ ಹೊರೆ ನೋಡಬೇಕು. ಸುಮ್ಮನೆ ರೈತರಿಗೆ ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆಂದು ಇದರಲ್ಲಿ ಹೇಳುತ್ತಾರೆ. ನಾನು ವಿವರವಾಗಿ ಹೇಳುತ್ತೇನೆ ಅಧ್ಯಕ್ಷರೇ ಈ ಬಜೆಟ್ ನಲ್ಲಿ ರೈತರ ಮೇಲೆ ಬಿದ್ದಂಥ ಹೊರೆ, ಇನ್ನಾರ ಮೇಲೂ ಬಿದ್ದಿಲ್ಲ. ಸಂಪೂರ್ಣವಾಗಿ ರೈತ ಹಾಳಾಗಿ ಹೋಗುತ್ತಾನೆ. ಈಗ ಇವರು ಎಣ್ಣೆ ಮೇಲೆ 2 ಪರ್ಸೆಂಟ್ ಟ್ಯಾಕ್ಸ್ ಎಂದು ಮಾಡಿದ್ದಕ್ಕೆ ಒಂದು ಕ್ವಿಂಟಾಲ್ ಎಣ್ಣೆ ಬೀಜದ ಮೇಲೆ 50 ರಿಂದ 100 ರೂಪಾಯಿ ಧಾರಣೆ ಕಡಿಮೆಯಾಗಿದೆ. ರೈತರಿಗೆ ಇದಕ್ಕಿಂತ ಇನ್ನೆಂಥದು ಬೇಕು. ಇನ್ನು ಬೇರೆ ಬೇರೆ ಬಹಳ ಇವೆ. ಈ ಕಾರಣದಿಂದ ನಾನು ಹೇಳುತ್ತಾ ಇದ್ದೇನೆ. ಇಲ್ಲೊಂದು ಹೇಳಿದ್ದಾರೆ, ಇದು ಯಾವಾಗಲೂ ಸಿಕ್ಕಿರಲಿಲ್ಲ, ಇದನ್ನು ಯಾರು ಹುಡುಕಿದರೋ? ಜಿಪ್‌ಸಮ್ ಹುಡುಕಿದ್ದಾರೆ, ತಮಗೂ ಗೊತ್ತಿಲ್ಲ, ಬಯಲುಸೀಮೆಯವರಿಗೂ ಗೊತ್ತಿಲ್ಲ. ಕೃಷ್ಣಾ ಅವರದೇನೋ ಹೆಚ್ಚು ನೀರು ಹರಿಯುತ್ತದಲ್ಲಾ, ಅಲ್ಲಿ ಏನಾಗುತ್ತದೆಂದರೆ ಜೌಳು ಭೂಮಿಯಾಗುತ್ತದೆ, ಕರಲು ಆಗುತ್ತದೆ, ಅದಕ್ಕೆ ಈ ಜಿಪ್ ಸಮ್ ಉಪಯೋಗಿಸುತ್ತಾರೆ. ಈ ಕರಲು ಅಥವಾ ಜೌಳು ಭೂಮಿಗೆ ಈ ಜಿಪ್‌ಸಮ್ ಹಾಕುತ್ತಾರೆ.

ಶ್ರೀ ಕೆ.ಎನ್. ಗದ್ದಿ (ನವಲಗುಂದ):- ಮಾನ್ಯ ಎಸ್.ಎಸ್. ಪಾಟೀಲರು ಮಾಜಿ ಸಹಕಾರ ಮಂತ್ರಿಗಳು. 5 ವರ್ಷಗಳ ಕಾಲ ನಮ್ಮ ಜಿಲ್ಲೆಯೊಳಗೆ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಸರ್ಕಾರದ ಧ್ಯೇಯಧೋರಣೆಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಲಿ. ಅದನ್ನು ಬಿಟ್ಟು ವಿನಾಕಾರಣ ಟೈಮ್ ಕಳೆಯುತ್ತಿದ್ದಾರೆ. ಪ್ರತಿಸಲವೂ ಇದೇ ರೀತಿ ಮಾಡುತ್ತಾರೆ. ಇವರು ಸಹಕಾರ

ಮಂತ್ರಿಗಳಾಗಿದ್ದಾಗ ಏನು ಮಾಡಿದರು? ಇವರ ಮಗ ಧಾರವಾಡ ಜಿಲ್ಲೆ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ಮತ್ತು ಇವರು ಸಹಕಾರಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಇವತ್ತು ಆ ಡಿ.ಸಿ.ಸಿ. ಬ್ಯಾಂಕನ್ನು ಕದಹಾಕುವ ಪರಿಸ್ಥಿತಿಗೆ ತಂದಿದ್ದಾರೆ. ಇಂಥವರೆಲ್ಲಾ ಈ ಸರ್ಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಹೇಳುತ್ತಿದ್ದಾರೆ; ನೀವು ಹೇಗೆ ಮಾಡಿದ್ದಿರಿ ಎಂಬುದನ್ನು ಹೇಳಲಿ. ಅನಂತರ, ಈ ಸರ್ಕಾರ ಏನು ಮಾಡಿದೆ ಎಂಬುದನ್ನು ಹೇಳುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ನವಲಗುಂದ ಶಾಸಕರು ಬಹುಶಃ 8-10 ವರ್ಷಗಳಿಂದ ಹೊಲಕ್ಕೆ ಹೋಗುವುದನ್ನು ಬಿಟ್ಟಿದ್ದಾರೆಂದು ಕಾಣುತ್ತದೆ. ಜಿಪ್‌ಸಮ್ ಅವರ ತಾಲ್ಲೂಕಿನಲ್ಲಿ ಹೆಚ್ಚು ಉಪಯೋಗಿಸುತ್ತಾರೆ. ಈ ಜಿಪ್ ಸಮ್ ರೈತನಿಗೆ ನಿಜವಾಗಿಯೂ ವರದಾನ. ಇದನ್ನು ಸರ್ಕಾರ ಸಬ್ಸಿಡಿ ರೂಪದಲ್ಲಿ ಕೊಡಬೇಕು. ಶೇಂಗಾಕ್ಕೆ ಹಾಕುವುದರಿಂದ, ಶೇಂಗಾ ಎಣ್ಣೆ ಹೆಚ್ಚಾಗುತ್ತದೆ. ಆ ರೀತಿ ಪ್ರಚಾರ ಮಾಡುತ್ತಾರೆ. ಎಲ್ಲಿ ಹೊಲ ಜೌಳು ಅಥವಾ ಕರಲು ಇರುತ್ತದೆ ಅದಕ್ಕೆ ಹಾಕುತ್ತಾರೆ. ಇದು ಹೊಸದು, ಇದಕ್ಕೂ ಟ್ಯಾಕ್ಸ್ ಹಾಕುವುದನ್ನು ಹುಡುಕಿದ್ದಾರೆ. ಇವರು ಟ್ಯಾಕ್ಸ್ ಹಾಕಲಿ, ಟ್ಯಾಕ್ಸ್ ಹಾಕದೇ ಹೋದರೆ ಸರ್ಕಾರ ನಡೆಯುವುದಿಲ್ಲ. ಇದು ನಮಗೂ ಗೊತ್ತಿದೆ. ಟ್ಯಾಕ್ಸ್ ಹಾಕಬೇಕಾಗುತ್ತದೆ, ಆದರೆ ಯಾವುದಕ್ಕೆ ಹಾಕಬೇಕು, ಯಾವುದಕ್ಕೆ ಹಾಕಬಾರದು ಎಂಬುದನ್ನು ನೋಡಬೇಕು. ರೈತರಿಗೆ ಒಳ್ಳೆಯದು ಮಾಡಿದ್ದೇವೆಂದು ಹೇಳುವ ದೃಷ್ಟಿಯಿಂದ ಇದೂ ಕೂಡ ರೈತರಿಗೆ ತುಟ್ಟಿಯಾಗುತ್ತದೆ. ಇವರು ಗೊಬ್ಬರದ ಮೇಲೆ ಕಡಿಮೆ ಮಾಡಲಿಲ್ಲ, ಸೀಮೆಎಣ್ಣೆ ಮೇಲೆ ಹಾಕಿದ್ದಾರೆ, ಉಪ್ಪಿನ ಮೇಲೆ ಹಾಕಿದ್ದಾರೆ. ಎಲ್ಲವನ್ನೂ ನಾನು ಲಿಸ್ಟ್ ಮಾಡಿದ್ದನೆ ಒಟ್ಟು 189 ಐಟಂಗಳ ಮೇಲೆ ಹಾಕಿದ್ದಾರೆ. ಹಿಂದಿನ ವರ್ಷದಲ್ಲಿ ಎಷ್ಟು ಐಟಂ ಇತ್ತೆಂದು ಹೇಳಿದರೆ 1 ರಿಂದ 19 ಇತ್ತು. ಹಿಂದಿನ ವರ್ಷ ಒಟ್ಟು 19 ಐಟಂಗಳ ಮೇಲೆ ಇವರು ಟ್ಯಾಕ್ಸ್ ಹಾಕಿದ್ದರು. ಈ ಸಾರಿ 189 ಆಗಿವೆ. ಯಾವಯಾವುದರ ಮೇಲೆ ಹಾಕಬೇಕೆಂದು, ಎಲ್ಲವನ್ನೂ ಹುಡುಕಿದ್ದಾರೆ. ಅವುಗಳನ್ನೆಲ್ಲಾ ಓದಿಕೊಂಡು ಹೋದರೆ, ಇವುಗಳಲ್ಲಿ ಎಲ್ಲೆಲ್ಲಿ ತೆಗೆದಿದ್ದಾರೆ, ಹೇಗೆ ಮಾಡಿದ್ದಾರೋ ಗೊತ್ತಾಗುವುದಿಲ್ಲ. ಇವರು ಸೋರಿಕೆ ನಿಲ್ಲಿಸುವುದರ ಬದಲು ಬರೀ ಟ್ಯಾಕ್ಸನ್ನೇ ಹೆಚ್ಚು ಮಾಡಿಕೊಂಡು ಹೋದರೆ ಕಷ್ಟವಾಗುತ್ತದೆ. ಈಗಾಗಲೇ ನಮ್ಮ ರಾಜ್ಯದ ವ್ಯವಹಾರ ನಿಲ್ಲುತ್ತಾ ಬಂದಿದೆ. ಅತಿ ಟ್ಯಾಕ್ಸ್ ಹಾಕಿದರೆ, ವ್ಯವಹಾರ ಬೇರೆ ರಾಜ್ಯಗಳಿಗೆ ಹೋಗುತ್ತದೆ. ನಮ್ಮ ಸರ್ಕಾರ ಇದ್ದಾಗ ಬೆಲ್ಲದ ಮೇಲೆ 1 ಪರ್ಸೆಂಟ್ ಹಾಕಿತ್ತು, ಅದನ್ನೂ ತೆಗೆಯಿರಿ ಎಂದು ನಾವು ಹೇಳಿದ್ದೆವು. ನಾವು ಬೆಲ್ಲಕ್ಕೆ ಟ್ಯಾಕ್ಸ್ ಹಾಕುವುದರಿಂದ, ಬೆಲ್ಲದ ವ್ಯವಹಾರವೆಲ್ಲಾ ಅತ್ತಕಡೆ ಕೊಲ್ಲಾಪುರಕ್ಕೆ ಹೋಗುತ್ತದೆ. ಅಲ್ಲಿ ಟ್ಯಾಕ್ಸ್ ಇಲ್ಲ. ಇವರು ಒಟ್ಟು 347 ಐಟಂಗಳನ್ನು ಹುಡುಕಿದ್ದಾರೆ. ಅಂದರೆ, ಹೋದವರ್ಷ 19 ಇದ್ದಿದ್ದು ಈ ವರ್ಷ 347. ಈ ಜಿಪ್ ಸಮ್ ಮತ್ತು ಇನ್ನೂ ಬಹಳ ಇವೆ. ಅವುಗಳೆಲ್ಲವನ್ನೂ ಹೇಳಿಕೊಂಡು ಕೂತರೆ, ಬಹಳ ಹೊತ್ತಾಗುತ್ತದೆ. ಇದರಲ್ಲಿ ವರ್ಣನೆ ಮಾಡುವ ವಿಚಾರವೂ ಇದೆ, ಅದನ್ನು ಕೊನೆಗೆ ಹೇಳುತ್ತೇನೆ. ನೀವು ಬರೀ ಟೀಕೆ ಮಾಡುತ್ತಾರೆಂದು ಹೇಳುತ್ತೀರಿ. ಗೊಬ್ಬರದ ಮೇಲೆ ಹಾಕಿದ್ದಾರೆ, ಈ ರೀತಿ ಹೇಳುತ್ತಾ ಹೋದರೆ ಬಹಳ ಇವೆ. ಈ ತರಹ ರೈತನನ್ನು ಬಹಳ ಇಕ್ಕಟ್ಟಿಗೆ ಸಿಲುಕಿಸಿದರೆ ರೈತರು? ಏನು ಮಾಡುವುದು ಸಿಮೆಂಟ್, ಪೈಪು, ಬಾಗಿಲು-ಕಿಟಕಿ, ಬಡ ಹುಡುಗರು ತಿನ್ನುವ ಐಸ್ ಕ್ರೀಂ, ಹೆಂಚು, ಸಾಂಬಾರ, ಶೇಂಗಾ ಎಣ್ಣೆ, ಕೆಲವು ಎಲೆಕ್ಟ್ರಿಕ್ ಸಾಮಾನು, ಜಿಪ್ ಸಮ್,

ಬೇಳೆಕಾಳು, ಗೊಬ್ಬರ, ಬಿದಿರಿನ ಬುಟ್ಟಿ, ಬಡವರು ಬಿದಿರಿನ ಬುಟ್ಟಿಯಲ್ಲೇ ಬದುಕುವುದು, ಇದನ್ನೂ ಹುಡುಕಿದ್ದಾರೆ. ಸೋಪು, ಟೈಲರಿಂಗ್ ಸಾಮಾನು, ಶೇಂಗಾ ಹಿಂಡಿ, ಸೌದೆ, ಗೋಣಿಚೀಲ ಇದರಲ್ಲಿ ಯಾವುದು ರೈತನಿಗೆ ಬೇಕಾಗದೇ ಇರುವುದು? ಗೋಣಿಚೀಲ ರೈತನಿಗೆ ಅವಶ್ಯಕವಾಗಿ ಬೇಕೆಬೇಕು. ಅತ್ತ ಕಡೆ ಬೆಳೆ ಇಲ್ಲ, ಧಾರಣೆ ಇಲ್ಲ. ಆದರೆ ಆತ ಇವೆಲ್ಲವನ್ನೂ ಖರೀದಿ ಮಾಡಿಕೊಂಡು ಬರಬೇಕು. ಗೋಣಿಚೀಲದಲ್ಲಿ ಈರುಳ್ಳಿ ತುಂಬಿಕೊಂಡು ಬೆಂಗಳೂರಿಗೆ ತರುತ್ತೇವೆ, ಇಲ್ಲಿ ಮಾರಿದರೆ ಗೋಣಿಚೀಲಕ್ಕಿಂತ ಒಳ್ಳೆಯ ರೊಕ್ಕಬರುತ್ತದೆ. ಇವುಗಳಿಗೆಲ್ಲಾ ಟ್ಯಾಕ್ಸ್ ಹಾಕಿಕೊಂಡು ಕುಳಿತರೆ, ಪರೋಕ್ಷವಾಗಿ ಈ ಟ್ಯಾಕ್ಸ್ ಯಾರ ಮೇಲೆ ಬೀಳುತ್ತದೆ? ಇವರು, ಬೇರೆಯವರ ಮೇಲೆ ಹಾಕಿದ್ದೇವೆ, ರೈತರಿಗೆ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಆದರೆ, ದುರ್ದೈವದಿಂದ ಇವೆಲ್ಲಾ ರೈತರ ಮೇಲೆಯೇ ಬೀಳುವುದು. ಈಗಾಗಲೇ ಹೇಳಿದಂತೆ ಎಣ್ಣೆ ಮೇಲೆ 2 ಪರ್ಸೆಂಟ್ ಏನು ಮಾಡಿದ್ದೀರಿ, ನಾನು ನಿನ್ನೆ ಮಾರ್ಕೆಟ್‌ನಲ್ಲಿ ಕೇಳಿದೆ. 50 ರಿಂದ 100 ರೂಪಾಯಿ ಧಾರಣೆ ಕಡಿಮೆಯಾಗಿದೆ. ಅಲ್ಲಿ ಧಾರಣೆ ಕಡಿಮೆ ಮಾಡುತ್ತಾರೆ, ಇಲ್ಲಿ ಟ್ಯಾಕ್ಸ್ ತುಂಬುತ್ತಾರೆ ಅಷ್ಟೆ. ಎಲ್ಲಾ ಹೊರೆಯೂ ಬೀಳುವುದು ರೈತರ ಮೇಲೆಯೇ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿ ಬಂದಿದ್ದಾರೆ. ದಯಮಾಡಿ, ನೀವು ಸ್ಪ್ರಿಂಕ್ಲರ್ ಅವುಗಳಿಗೆಲ್ಲಾ ತೆಗೆಯುತ್ತೇವೆಂದು ಹೇಳಿದ್ದೀರಿ. ಅದು ಕೆಟ್ಟು ಬಿದ್ದಿದೆಯೋ, ಹೆಂಗಿದೆಯೋ ಗೊತ್ತಿಲ್ಲ. ಆ ಕಡೆ ಸ್ಪ್ರಿಂಕ್ಲರ್ ಮೇಲೆ 4 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ದಯವಿಟ್ಟು ಇದನ್ನು ತೆಗೆದು, ಪ್ರಕಟಣೆ ಮಾಡಬೇಕು. ಅದೇರೀತಿಯಿಂದ ಬೇರೆ ಬೇರೆ ಐಟಂಗಳಲ್ಲಿ ಹಾಕಿದ್ದಾರೆ.

ಅಧ್ಯಕ್ಷರು:- ಮಾನ್ಯ ಪಾಟೀಲರೇ, ನಾಳೆ ಮುಂದುವರಿಸುವುದು ಬೇಡ. ಈಗಾಗಲೇ ಅರ್ಧ ಗಂಟೆಯಾಯಿತು, ಮುಗಿಸಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಇನ್ನೂ ಸ್ವಲ್ಪ ವಿಷಯಗಳ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಶಿಕ್ಷಣ ಇಲಾಖೆ ಬಗ್ಗೆ ಮಾತನಾಡಬೇಕು, ಆದರೆ ಆ ಸಚಿವರು ಎಲ್ಲಿಯೋ ಹೋದರು. ಇಲ್ಲಿ ಯಾವ ಸಚಿವರು ಇದ್ದಾರೆ, ಅವರ ಇಲಾಖೆಗಳ ಬಗ್ಗೆ ಮಾತ್ರವೇ ಬೇಕಾದರೆ ಮಾತನಾಡುತ್ತೇನೆ. ಶಿಕ್ಷಣ ಸಚಿವರ ಮೇಲೆ ಮಾತನಾಡುವ ವಿಷಯಗಳು ಬಹಳ ಇವೆ. ಅವರು ಇಲ್ಲಿ ಇರಬೇಕು. ಮುಖ್ಯಮಂತ್ರಿಗಳು ಇದ್ದರೆ, ಅವರ ಮೇಲೆ ಹೇಳುತ್ತೇವೆ, ಆ ಮಾತು ಬೇರೆ. ಸನ್ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲೇ ಅತಿ ಬರಗಾಲ ಪೀಡಿತವಾದಂಥ ತಾಲ್ಲೂಕು ಮುಂಡರಗಿ ತಾಲ್ಲೂಕು. ಇಷ್ಟು ಬರದಲ್ಲಿ ಇದ್ದರೂ ಕೂಡ ಯಾವ ರೈತನೂ ನೇಣು ಹಾಕಿಕೊಂಡು ಸತ್ತು ಹೋಗಿದ್ದು ಇಲ್ಲ. ಏಕೆಂದರೆ, ನಮಗೆ ಸುಖವೇ ಗೊತ್ತಿಲ್ಲ, ಕಷ್ಟದಲ್ಲೇ ಸತ್ತವರು ನಾವು. ಅಂತಹ ಪರಿಸ್ಥಿತಿಯೊಳಗೆ ಮೊನ್ನೆ ಒಬ್ಬ, ನೇಣು ಹಾಕಿಕೊಂಡು ಸತ್ತ. ಇಡೀ ಇತಿಹಾಸದಲ್ಲಿ ಮುಂಡರಗಿ ತಾಲ್ಲೂಕಿನಲ್ಲಿ ಒಬ್ಬ ರೈತ ನೇಣು ಹಾಕಿಕೊಂಡ ಸತ್ತ, ಇದು ಮೊದಲನೆಯದು. ಅದು ಎಲ್ಲಿ, ರೇಷ್ಮೆಯ ಒಂದು ಮನೆಯಲ್ಲಿ. ಅವ ಬಾವಿ ತೋಡಿಸಿದ, ಅದೂ ಒಣಗಿತು. ಕರೆಂಟ್ ಬಿಲ್ ಇನ್ನೂ 10 ಸಾವಿರ ರೂಪಾಯಿ ಕಟ್ಟಬೇಕಾಗಿದೆ. ಆ ಬಾವಿಯಲ್ಲಿ ನೀರಿಲ್ಲ. ರೇಷ್ಮೆ ಸಾಲ ಮಾಡಿದ. ಇದರ ಜೊತೆಗೆ ಬೇರೆ ಸಾಲವೂ ಇದೆ. ಬ್ಯಾಂಕಿನಲ್ಲಿ ಸಾಲ ಇದೆ. ಬರೀ 30 ವರ್ಷದ ಹುಡುಗ ಆತನ ಹೆಂಡತಿ ಹಟ್ಟಿಯಲ್ಲಿದ್ದಳು, ನಾನು ನೋಡಿ ಕಣ್ಣೀರು ಬಂತು. ಆ ಬಾವಿ, ಅವನ ಪರಿಸ್ಥಿತಿ ನೋಡಿ ಕಣ್ಣೀರು ಬಂತು. ನಮ್ಮ ಮುಂಡರಗಿ ತಾಲ್ಲೂಕಿನಲ್ಲಿ ಯಾರೂ

ಇವತ್ತಿನವರೆಗೂ ವಿಷ ತೆಗೆದುಕೊಂಡಿಲ್ಲ, ಉರುಲು ಹಾಕಿಕೊಂಡು ಸತ್ತಿಲ್ಲ. ನಾನಂತು ಅದಕ್ಕೆ ವಿರೋಧಿ, ಯಾರೂ ಸಾಯಬೇಡಿ, ಅದು ಸರಿಯಲ್ಲ ಬದುಕಬೇಕು ಎಂದು ಹೇಳಿಕೊಂಡು ಬಂದಿದ್ದೇವೆ. ದುರ್ದೈವದಿಂದ, ನಾನು ಹೋಗಿ ನೋಡಿದೆ. ಮೊಟ್ಟಮೊದಲನೇ ಬಾರಿಗೆ ರೈತ ನೇಣು ಹಾಕಿಕೊಂಡು ಸತ್ತಿರುವುದು, ಮುಂಡರಗಿ ತಾಲ್ಲೂಕಿನಲ್ಲಿ ಇದೇ ಮೊದಲು. ಇವತ್ತಿನವರೆಗೂ, ಅವನ ಮನೆ ಹತ್ತಿರ ಹೋಗಿ ಯಾರೂ ನೋಡಿಲ್ಲ. ಅವನಿಗೆ ಏನಾದರೂ ಪರಿಹಾರ ಕೊಡಬೇಕೇ ಹೇಗೆ ಎಂಬ ಬಗ್ಗೆ ಯಾರೂ ಯೋಚಿಸಿಲ್ಲ. ಇದು ಆಗತಕ್ಕಂಥ ಸ್ಥಿತಿ. ದಯವಿಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಇದರ ಬಗ್ಗೆ ವಿಚಾರಣೆ ಬೇಕಾದರೆ ನಿಧಾನವಾಗಿ ಮಾಡಿ. ಇಂತಹ ಪರಿಸ್ಥಿತಿಯಲ್ಲಿ ತಾವು ಅರ್ಥ ಮಾಡಿಕೊಂಡು ತೀವ್ರದಲ್ಲೇ ಅವನಿಗೆ ಸಹಾಯ ಮಾಡಬೇಕು. ಹಿಂದೆ, ನಮ್ಮ ಸರ್ಕಾರ ಇದ್ದಾಗ, ಇಂತಹ ಸಂದರ್ಭದಲ್ಲಿ ಅವರಿಗೆ ತಕ್ಷಣ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೆವು. ಆದರೆ, ಇವತ್ತು ಅದು ಹೋಗಿಬಿಟ್ಟಿದೆ. ಅದರ ಬಗ್ಗೆ ವಿಚಾರಣೆ ಮಾಡಿ, ಸರ್ಕಾರದಿಂದ ಏನಾದರೂ ಕೊಡುವ ಹೊತ್ತಿಗೆ ತುಂಬಾ ತಡವಾಗುತ್ತದೆ. ಆತನ ಹೆಂಡತಿಗೆ ಒಂದು ಮಗು ಕೂಡ ಇದೆ. ಅವರು ಯಾವ ರೀತಿ ಬದುಕಬೇಕು? ಆತನದು ಎರಡು ಎಕರೆ ಜಮೀನು ಇದೆ. ರೇಷ್ಮೆ ಸಾಲ ಇದೆ. ತಾವು ಬೇಕಾದರೆ ವರದಿಯನ್ನು ತರಿಸಿಕೊಳ್ಳಬಹುದು. ಇಂತಹ ಪರಿಸ್ಥಿತಿ ರಾಜ್ಯದಲ್ಲಿದ್ದಾಗ ಇದರಲ್ಲಿ ರೈತರಿಗೆ ಏನನ್ನೂ ಹೇಳಲಿಲ್ಲ. ಸಾಲದ ಬಗ್ಗೆ ಹೇಳಿದ್ದಾರೆ, ನಾವು ನೇರವಾಗಿ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಬಡ್ಡಿ ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ. ಇದು ಒಳ್ಳೆಯ ಯೋಜನೆ. ಇದರ ಬಗ್ಗೆ ನಾನು ಕೊನೆಯಲ್ಲಿ ಹೇಳುತ್ತೇನೆ. ಇದರಲ್ಲಿ ಕೆಲವು ಒಳ್ಳೆಯ ಅಂಶಗಳು ಇವೆ. ಈಗ ಕೃಷಿಗೆ ಇನ್‌ಷ್ಯೂರೆನ್ಸ್ ಬರುತ್ತದೆ, ಎಂದು ಬಹಳ ಜನ ರೈತರು ನಂಬಿಕೊಂಡಿದ್ದಾರೆ. ಸಾಮಾನ್ಯವಾಗಿ ನಿಮಗೂ ಗೊತ್ತಿದೆ. ಎಲ್ಲಾ ಕಡೆಯೂ ತುಂಬಿದ್ದಾರೆ. ಅಧ್ಯಕ್ಷರೇ, ನಾನು ಮೊನ್ನೆ ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆ. ಹಾಕಿ ಥ್ರೆಶ್ ಹೋಲ್ಡ್ ಈಲ್ಡ್ ಎಷ್ಟು ಎಂದು ಕೇಳಿದ್ದೆ. ಆ ಥ್ರೆಶ್ ಹೋಲ್ಡ್ ಈಲ್ಡ್ ಎಷ್ಟು ಎಂದು ವಿವರ ನಮಗೆ ಕೊಡಿ ಎಂದು ಕೇಳಿದ್ದೆ. ಕೇಳಿದ ವಿಷಯವನ್ನು ಬಿಟ್ಟು ಬೇರೆ ಏನೇನೋ ಹೇಳಿ ಒಂದು ಉತ್ತರವನ್ನು ಕೊಟ್ಟರು. ಇದರಲ್ಲಿ ಏನಾಗಿದೆ ಅಂದರೆ ಇನ್ ಶ್ಯೂರೆನ್ಸ್ ನಲ್ಲಿ ಈಗಾಗಲೇ ಒಂದು ರೀತಿಯಲ್ಲಿ ಮೋಸ ಆಗುತ್ತಾ ಇದೆ. ರೈತರಿಗೆ ನಿಮ್ಮ ಶೇಂಗಾ ಬೆಳೆ, ಭತ್ತದ ಬೆಳೆ, ನಿಮ್ಮ ರಾಗಿ ಬೆಳೆ, ಥ್ರೆಶ್ ಹೋಲ್ಡ್ ಈಲ್ಡ್ ಇಷ್ಟು ಇದೆ ಎಂಬುದನ್ನು ತಿಳಿಸಬೇಕು. ಅದನ್ನು ಹೇಳುವುದಿಲ್ಲ, ಅದನ್ನು ಸೀಕ್ರೆಟ್ ಆಗಿ ಇಡುತ್ತೇವೆಂದು ಹೇಳುತ್ತಾರೆ. ಹಾಗಾದರೆ ರೈತರ ಬಗ್ಗೆ ಇದು ಯಾವ ನ್ಯಾಯ ಅಧ್ಯಕ್ಷರೇ? ಅದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ತರಿಸಿಕೊಳ್ಳಬೇಕು. ಥ್ರೆಶ್ ಹೋಲ್ಡ್ ಈಲ್ಡ್ ವಿಚಾರದಲ್ಲಿ ರೈತರಿಗೆ ಯಾವುದೇ ರೀತಿಯಲ್ಲಿ ಮೋಸವಾಗಬಾರದು. ಥ್ರೆಶ್ ಹೋಲ್ಡ್ ಈಲ್ಡ್‌ನ ವಿಚಾರವು ಕಂಪನಿಯವರ ಮತ್ತು ಸರಕಾರದವರಲ್ಲಿ ಸೀಕ್ರೆಟ್ ಆಗಿ ಇರುತ್ತದೆಯಂತೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಸ್ಟಾಟಿಸ್ಟ್ ಟಿಕ್ಸ್ ಡಿಪಾರ್ಟ್‌ಮೆಂಟ್ ನವರು, ಮುಂತಾಗಿ ಕುಳಿತುಕೊಂಡು ಇದನ್ನು ನಿರ್ಧರಿಸುತ್ತಾರೆ. ನಿರ್ಧರಿಸುವಾಗ ಒಂದು ಹೊಲ ನೋಡಿದರೆ ಅದರಲ್ಲಿ ಐದು ಕ್ವಿಂಟಾಲ್ ಬೆಳೆ ಬಂದಿದೆ ಎಂದು ಹೇಳಿದರು. ಇದನ್ನು ನೋಡಿ ನಾವು ಒಂದು ಸಮಿತಿಯನ್ನು ನೇಮಕ ಮಾಡಿದೆವು. ಮರುದಿವಸ ಎಲ್ಲರೂ ಹೋಗಿ ನೋಕೊಂಡು ಬನ್ನಿರಿ ಎಂದು ಹೇಳಿದೆವು. ಹೋಗಿ ಬಂದವರು ಐದು ಕೆ.ಜಿ. ತಂದರು. ಇದಕ್ಕಿಂತ ಎಂಥ ಮೋಸ ರೈತರಿಗೆ ಆಗಬೇಕು? ಇದನ್ನು ಮನೆಯಲ್ಲಿ ಕುಳಿತುಕೊಂಡು ನಿರ್ಧರಿಸುತ್ತಾರೆ. ಪಾಪ... ಪಂಚಾಯತ್ ಚೇರ್ಮನ್

ರಿಗೆ ಏನೂ ಗೊತ್ತಿಲ್ಲವೆಂದು ಇವರೇ ಮಾಡುತ್ತಾರೆ. ಹೀಗೆಲ್ಲಾ ರೈತರಿಗೆ ಅನ್ಯಾಯವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಗೆ ಒಳ್ಳೆಯದಾಗುವುದಿದ್ದರೆ ಇನ್ ಶ್ಯೂರೆನ್ಸ್ ಕೊಡಬೇಕಾಗಿದ್ದರೆ, ಮೊದಲು ಥ್ರೆಶ್ ಹೋಲ್ಡ್ ಈಲ್ಡ್‌ನ್ನು ತಿಳಿಸಿರಿ. ಉದಾಹರಣೆಗೆ ಗುಲ್ಬರ್ಗದಲ್ಲಿ ಒಂದು ಎಕರೆಗೆ ಇಷ್ಟು ಶೇಂಗಾ ಇಳುವರಿ ಬಂದಿದೆ, ಹೋಬಳಿಗೆ ಇಷ್ಟು ಬಂದಿದೆ ಎಂದು ಹೇಳಬೇಕು. ಈ ಹೋಬಳಿವೈಸ್ ಮಾಡಿರುವುದು ಒಳ್ಳೆಯ ಪದ್ಧತಿ. ಮೊದಲು ತಾಲ್ಲೂಕು ವೈಸ್ ಎಂದು ಇತ್ತು. ಹೀಗೆ ಉತ್ತರ ಕರ್ನಾಟಕ ಭಾಗದಲ್ಲಿ ಹೋಬಳಿ ಎಂದು ಮಾಡಿದರೂ ಅನ್ಯಾಯವೇ. ಇಲ್ಲಿ ಈ ಭಾಗದಲ್ಲಿ ಹೋಬಳಿಗೆ 3-4 ತಾಲ್ಲೂಕುಗಳು ಇವೆ. ನಮ್ಮಲ್ಲಿ ಒಂದು, ಎರಡು ಮಾತ್ರ ಬರುತ್ತವೆ. ನಮ್ಮ ಭಾಗದಲ್ಲಿ ಹೋಬಳಿಗಳು ಎಂದಿಲ್ಲ. ಮಾನ್ಯ ಸಣ್ಣ ನೀರಾವರಿ ಸಚಿವರು ಹೋಬಳಿಗೆ ಒಂದು ಕೆರೆ ಎಂದು ಪ್ರಕಟಿಸಿದರು. ಆಗ ನಮ್ಮ ತಾಲ್ಲೂಕಿಗೆ ಒಂದು ಅಥವಾ ಎರಡು ಕೆರೆಗಳು ಮಾತ್ರ ಬರುತ್ತವೆ. ಈ ಭಾಗದಲ್ಲಿ ಅದೇ 8-10 ಕೆರೆಗಳು ಬರುತ್ತವೆ. ಯೋಜನೆಯು ಚೆನ್ನಾಗಿದೆ, ಅದನ್ನು ಮಾಡುತ್ತಿದ್ದಾರೆ, ಎಲ್ಲವೂ ಸರಿ. ಆದರೆ ಹೋಬಳಿ ಎಂದಾಗ ಉತ್ತರ ಕರ್ನಾಟಕದ ಭಾಗಗಳಿಗೆ ಮತ್ತೆ ಅನ್ಯಾಯವಾಗುತ್ತದೆ ಈ ವಿಚಾದಲ್ಲಿ. ಬಹಳ ಕಡೆಗಳಲ್ಲಿ ರೈತರಿಗೆ ಇನ್ ಶ್ಯೂರೆನ್ಸ್ ಈ ಸಾರಿ ಸಿಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ಸಾರಿಯೂ ಅವರಿಗೆ ಇನ್ ಶ್ಯೂರೆನ್ಸ್ ಸಿಗುವುದಿಲ್ಲ. ಕೆಲವು ತಾಲ್ಲೂಕುಗಳಿಗೆ ಮೋಸ ಮಾಡುತ್ತಾರೆ. ಥ್ರೆಶ್‌ಹೋಲ್ಡ್ ಈಲ್ಡ್ ಎಷ್ಟು, ನಮ್ಮದು ಎಷ್ಟು ಬಂದಿದೆ ಎಂದು ಕೇಳಿಕೊಂಡು ಅವರ ಬಾಗಿಲ ಬಳಿಗೆ ನಾವು ಅಡ್ಡಾಡಬೇಕು. ಊರ ಪಂಚಾಯತ್‌ಗಳಿಗೆ ನಿಮ್ಮ ಊರಿನ ಥ್ರೆಶ್ ಹೋಲ್ಡ್ ಈಲ್ಡ್ ಇಷ್ಟು ಇದೆ ಎಂಬ ವಿವರಗಳನ್ನು ಕೊಡಬಹುದಲ್ಲವೇ? ಹೀಗಿರುವಾಗ ರೈತರಿಗೆ ಹೇಗೆ ನ್ಯಾಯ ದೊರಕಿಸಲು ಸಾಧ್ಯವಿದೆ? ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಥ್ರೆಶ್ ಹೋಲ್ಡ್‌ಯೀಲ್ಡ್ ಲಿಸ್ಟ್‌ನ್ನು ತರಿಸಿಕೊಂಡು ಸೂಕ್ತ ಕ್ರಮಗಳನ್ನು ತಾವೇ ಆಸಕ್ತಿ ವಹಿಸಿ ಮಾಡದಿದ್ದರೆ ಬಹಳ ಕಡೆಗಳಲ್ಲಿ ರೈತರಿಗೆ ಈ ವಿಚಾರದಲ್ಲಿ ಮೋಸವಾಗುತ್ತದೆ. ಥ್ರೆಶ್ ಹೋಲ್ಡ್ ಈಲ್ಡ್‌ನ್ನು ಹೇಗೆ ನಿರ್ಧರಿಸುತ್ತಾರೆ ಅಂದರೆ, ಉದಾಹರಣೆಗೆ ನಮ್ಮ ಗುಲ್ಬರ್ಗಾ ತೆಗೆದುಕೊಳ್ಳೋಣ. ಅದು ಮೊದಲೇ ಬರಗಾಲದ ಪ್ರದೇಶ. ಒಂದು ಎಕರೆಗೆ 10-20 ಕೆ.ಜಿ.ಗಳಷ್ಟು ಶೇಂಗಾ ಬಂದರೆ, ಅದಕ್ಕೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಅದೇ 21 ಕೆ.ಜಿ. ಯಷ್ಟು ಬಂತು ಅಂದೆ ನಿನಗೆ ಬೆಳೆ ಬಂತು ಎಂದು ಹೇಳುತ್ತಾರೆ. ಇದು ಇರತಕ್ಕಂಥ ವ್ಯವಸ್ಥೆಯಾಗಿದ್ದು ಅದರಲ್ಲಿ ಬದಲಾವಣೆಯಾಗಬೇಕು. ಇಲ್ಲವಾದರೆ ಸುಮಾರು ಇನ್‌ಶ್ಯೂರೆನ್ಸ್‌ನ್ನು ನಂಬಿ 10-12 ಕೋಟಿ ರೂಪಾಯಿಗಳಷ್ಟು ಹಣವನ್ನು ರೈತರು ತುಂಬಿದ್ದಾರೆ. ಅವರು ಹೇಳುವ ಪ್ರಕಾರ 100-175 ಕೋಟಿ ರೂಪಾಯಿಗಳಷ್ಟು ಸಿಗಬಹುದೆಂದು ಎಂಬ ಅಂದಾಜು ಹೇಳುತ್ತಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಪರ್ಸನಲಿ ಅಧಿಕಾರಿಗಳನ್ನು ಕರೆಸಿ ಥ್ರೆಶ್ ಹೋಲ್ಡ್ ಈಲ್ಡ್ ಎಷ್ಟು ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಬಂತು, ಎಂಬಿತ್ಯಾದಿ ವಿವರಗಳನ್ನು ತಿಳಿಸಬೇಕು. ಕೃಷಿ ಸಚಿವರಿಗೂ ಅದನ್ನು ತಿಳಿಸಬೇಕು. ಇದನ್ನು ವ್ಯವಸ್ಥೆಗೊಳಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಲ್ಲವಾದಲ್ಲಿ ನಿಜವಾಗಿಯೂ ಈ ಮೂಲಕ ತಮಗೆ ಕೆಟ್ಟ ಹೆಸರು ಬರಬಹುದು. ಈ ವರ್ಷ ಒಂದು ವೇಳೆ ರೈತರಿಗೆ ಇನ್ ಶ್ಯೂರೆನ್ಸ್ ಬಾರದಿದ್ದರೆ, ಬಹಳ ತೊಂದರೆಯಲ್ಲಿ ಸಿಕ್ಕಿಬೀಳುತ್ತಾರೆ. ಈ ಕಾರಣಗಳಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ

ಅಧ್ಯಕ್ಷರೇ ನನ್ನ ಮಾತನ್ನು ನಾಳೆ ತಮ್ಮ ಅಪ್ಪಣೆ ಪಡೆದುಕೊಂಡು ಮುಂದುವರಿಸಬಹುದೇ?

ಅಧ್ಯಕ್ಷರು:- ತಾವುಗಳು ಈಗಾಗಲೇ 40 ನಿಮಿಷಗಳ ಕಾಲ ಮಾತನಾಡಿದ್ದೀರಿ. ನಿಮ್ಮ ಒಂದು ವಾಕ್ಯಕ್ಕೆ ಐದಾರು ಜನರ ಪ್ರಶ್ನೆಗಳು, ಉಪಪ್ರಶ್ನೆಗಳು ಎಂದು, ಅದಕ್ಕೆ ಕ್ಲಾರಿಫಿಕೇಷನ್ ಎಂದು ತುಂಬ ಸಮಯ ಹೋಗುತ್ತದೆ. ನಿಮಗೆ ಮಾತನಾಡುವ ಶಕ್ತಿ ಇದೆ. ನಿಮ್ಮ ಪಕ್ಷದಲ್ಲಿ ಇನ್ನೂ ಕೆಲವರು ಮಾತನಾಡದಿದ್ದರೆ ನಾಳೆ ನೀವು ಹೆಚ್ಚು ಹೊತ್ತು ಮಾತನಾಡಬಹುದು.

ಶ್ರೀ ಎಸ್.ಎಸ್. ಪಾಟೀಲ್:- ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಹೇಳಿಕೊಂಡಿದ್ದೇನೆ. ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದೇನೆ. ಇದು ಸರಿಯೇ, ತಪ್ಪೇ ಎಂದು ತಾವು ಹೇಳಿ. ಇಂಥ ವಿಷಯಗಳನ್ನು ಅವರ ಗಮನಕ್ಕೆ ತರುವುದು ವಿರೋಧಪಕ್ಷದವರಾಗಿ ನಮ್ಮ ಜವಾಬ್ದಾರಿ ಅಲ್ಲವೇ? ಇಂಥ ಹಲವಾರು ವಿಚಾರಗಳಿವೆ. ಮಾನ್ಯ ಮುಖ್ಯಮಂತ್ರಿಯವರು ಉಪಸ್ಥಿತರಿರುವಾಗ ಅಬಕಾರಿ ಸಚಿವರು ಒಂದು ವಿಚಾರವನ್ನು ಹೇಳಿದರು. ಮೊಯ್ಲಿಯವರ ವರದಿಯನ್ನು ನಾವು ಒಪ್ಪಿಕೊಂಡಿಲ್ಲ ಎಂದು ಹೇಳಿದರು. ಏನೋ ಒಂದು ಸಾವಿರ ಕೋಟಿ ರೂ. ವಿಚಾರ ಮೋಯ್ಲಿಯವರು ಹೇಳಿದ್ದಾರೆ ಎಂಬ ವಿಚಾರವನ್ನು ನಾನು ಹೇಳಿದ್ದೇನೆ.

ಅಧ್ಯಕ್ಷರು:- ಆ ವಿಚಾರವು ಈಗಾಗಲೇ ಮುಗಿದುಹೋಗಿದೆ. ಈಗ ಪುನಃ ನೀವು ತೆಗೆದರೆ ಪುನಃ ಚರ್ಚೆಗೆ ಒಳಗಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸರಕಾರದವರು ಗ್ರಾಮೀಣಾಭಿವೃದ್ಧಿಗೆ ಮತ್ತು ಕೃಷಿಗೆ ಹೆಚ್ಚು ಒತ್ತು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಬಹುಶಃ ಮಾನ್ಯ ನಂಜುಂಡಪ್ಪನವರು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆಂದು ತಿಳಿದು ಬರುತ್ತದೆ. ಮಾನ್ಯ ಖರ್ಗೆಯವರೂ ಕೂಡ ಆ ಕುರಿತು ಹೆಚ್ಚು ಆಸಕ್ತಿ ಇದ್ದವರು. ಹೈದರಾಬಾದ್ ಕರ್ನಾಟಕದ ಬಗ್ಗೆ ಅವರು ಹೆಚ್ಚು ಆಸಕ್ತರು. ಹೈದರಾಬಾದ್ ಕರ್ನಾಟಕಕ್ಕೆ ಹೋದ ವರ್ಷಕ್ಕಿಂತ ಹಣವು ಕಡಿಮೆ ಇದೆ. ಅದನ್ನು ತಾವು ನೋಡಿದ್ದೀರಾ? ಈ ವರ್ಷದಲ್ಲಿ ಹೆಚ್ಚು ಆಗಬೇಕಾಗಿದುದ್ದು ಹೋಗ ವರ್ಷಕ್ಕಿಂತ ಕಡಿಮೆ ಇದೆ. ಹೀಗೆ ವಿರೋಧ ಪಕ್ಷದವರಾಗಿ ಸರಕಾರದ ತಪ್ಪುಗಳನ್ನು ಹುಡುಕಿ ತೋರಿಸುವ ಜವಾಬ್ದಾರಿ ನಮ್ಮದು. ಹಾಗೆಯೇ ನೀವು ಮಾಡಿದ ಒಳ್ಳೆಯ ವಿಚಾರಗಳನ್ನು ಕೂಡ ಹೇಳುತ್ತೇವೆ. ಕೆಲವೊಂದು ಒಳ್ಳೆಯ ಅಂಶಗಳೂ ಕೂಡ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹೈದರಾಬಾದ್ ಕರ್ನಾಟಕಕ್ಕೆ ಹೋದ ಸಲ 75 ಕೋಟಿ ರೂ. ಕೊಟ್ಟಿತು. ಈ ಸಾರಿಯೂ 75 ಕೋಟಿ ರೂ.ಗಳು ಇವೆ. ನಿಮ್ಮ ಕಾಲದಲ್ಲಿ ಕೇರಳ 35 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಅದೂ ಹೇಳಿ. ಕೇಂದ್ರ ಸರಕಾರದವರು ಕೊಡಬೇಕಾದ 600 ಕೋಟಿ ರೂಪಾಯಿಗಳೂ ಕೂಡ ಬರುತ್ತಿಲ್ಲ, ಈ ವರ್ಷ ಸಹ ಕಡಿಮೆ ಮಾಡಬಾರದೆಂದು ಪುನಃ 75 ಕೋಟಿ ರೂ.ಗಳನ್ನೇ ಇಟ್ಟಿದ್ದೇವೆ. ಸಬ್ಸಿಡಿ ಬರುತ್ತಾ ಇಲ್ಲ....

ಶ್ರೀ ಜಗದೀಶ ಶೆಟ್ಟರ್:- ಬಯಲು ಸೀಮೆಗೆ ನೀವು ಕಡಿಮೆ ಮಾಡಿದ್ದೀರಿ ಏಕೆ? ಮಲೆನಾಡು, ಬಯಲು ಸೀಮೆ, ಮತ್ತಿತರ ಮಂಡಳಿಗೆ ಹಣವನ್ನು ಅಲ್ಪಸ್ವಲ್ಪ ಕೊಡುತ್ತಾ ಇದ್ದರು. ಈಗ ಏನಾಗಿದೆ... ಎರಡು ವರ್ಷಗಳ ಪ್ರೋಗ್ರೆಸ್ ನೋಡಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಂಚಿಕೆಯಲ್ಲಿ ಅಲ್ಲಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಒಂದು ಮಾತನ್ನು ನಿಜವಾಗಿಯೂ ತಾವುಗಳು ಒಪ್ಪಬೇಕು. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ 1980 ಸ್ಥಾಪನೆಯಾಯಿತು. ಒಂದು ರಿಪೋರ್ಟ್ ತೆಗೆದುಕೊಂಡು ಎಲ್ಲಾ ಭಾಗಕ್ಕೆ ಅಭಿವೃದ್ಧಿಪರ ವಿಚಾರವು ಸರಿಸಮಾನವಾಗಿ ಬರಬೇಕೆನ್ನುವ ರೀತಿಯಲ್ಲಿ ಮತ್ತು ಉದ್ದೇಶದಿಂದ ಅದು ಪ್ರಾರಂಭವಾಯಿತು. ಅದು ಪ್ರಾರಂಭವಾದ ಕೂಡಲೇ ಎಲ್ಲರೂ ಎದ್ದು ನಿಂತರು. ಮಲೆನಾಡು, ಬಯಲುಸೀಮೆಯವರು ನಮಗೂ ಮಂಡಳಿ ಮಾಡಿ ಎಂದು ಹೇಳಿದವು. ಯಾರು ಅಶಕ್ತರಿದ್ದಾರೆ, ಅವರಿಗೆ ಸ್ವಲ್ಪ ಸಹಾಯ ಮಾಡಿ ಮೇಲೆ ಎತ್ತೋಣ ಎಂದು ಮಾಡಲಾಯಿತು. ಎಲ್ಲರಿಗೂ ಸರಿಸಮಾನವಾಗಿ ಹಂಚಬೇಕು. ಅದನ್ನು ಬಿಟ್ಟು ಕೊಟ್ಟವರಿಗೆ ಅಲ್ಲಿಗೆ ಏಕೆ ಇಷ್ಟು ಇಲ್ಲಿಗೆ ಏಕೆ ಇಷ್ಟು ಎಂದು ಹೇಳುವುದು ಸರಿಯೇ? ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೂಡ ವಿಜ್ಞಾಪಿಸಿಕೊಂಡಿದ್ದೇನೆ. ರಾಜ್ಯದ ಡೆವಲಪ್‌ಮೆಂಟ್ ದೃಷ್ಟಿಯಿಂದ ಮೂರು ಭಾಗ ಮಾಡಬೇಕು. ಎ-ಕ್ಲಾಸ್, ಬಿ-ಕ್ಲಾಸ್ ಮತ್ತು ಸಿ-ಕ್ಲಾಸ್ ಎಂದು ಮಾಡಿಕೊಳ್ಳಬೇಕು.

6.50 ಪಿ.ಎಂ.

ನೀವು ಬಿಕ್ಲಾಸಿನಲ್ಲಿ ಬರುತ್ತೀರಿ, ಎ ಕ್ಲಾಸಿಗೆ ಬರದಾಗ ಎಷ್ಟು ಸಹಾಯ ಕೊಡಬೇಕೋ ಆ ದೃಷ್ಟಿಯಿಂದ ಅಲೊಕೇಷನ್ ಬರಲಿ, ಆದರೆ ಸಿ ಕ್ಲಾಸಿನವರು ಬಿ ಮತ್ತು ಎ ಕ್ಲಾಸುಗಳನ್ನೂ ದಾಟಬೇಕು. ಅವರಿಗೇನು ಸಹಾಯ ಮಾಡಬೇಕೋ ಅದನ್ನೂ ಮಾಡಬೇಕಲ್ಲಾ. ಅದನ್ನು ಮಾತೇ ಆಡೋಲ್ಲ, ತಿರುಗಿಮುರುಗಿ ಹುಬ್ಬಳ್ಳಿ-ಧಾರವಾಡ ಎಂದು ಕೇಳಿ ಕೇಳಿ..

ಶ್ರೀ ಜಗದೀಶ ಶೆಟ್ಟರ್: ಹೈದರಾಬಾದ್ ಕರ್ನಾಟಕ ಎಲ್ಲಿ ಬ್ಯಾಕ್ ವರ್ಡ್ ಇದೆಯೋ ಮಾಡಿರಿ, ಮಂಡ್ಯ ಜಿಲ್ಲೆಗೆ 300 ಕೋಟಿ ರೂ. ಕೊಟ್ಟ ಹಾಗೆ ಅಲ್ಲ. ಮಂಡ್ಯ ಎ ನಲ್ಲಿ ಬರುವುದೋ ಬಿ ನಲ್ಲಿ ಬರುವುದೋ, ಸಿ ನಲ್ಲಿ ಬರುವುದೇ? 300 ಕೋಟಿ ರೂ. ಏಕೆ ಕೊಟ್ಟಿರಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನೀವು ಮುಖ್ಯಮಂತ್ರಿಗಳ ಪಕ್ಕ ಬಲಗಡೇನೆ ಕೂತಿದ್ದೀರಿ. ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಗೆ 300 ಕೋಟಿ ರೂ. ರಸ್ತೆಗಳಿಗೆ ತೆಗೆದುಕೊಂಡರಲ್ಲಾ ನಿಮ್ಮ ಲೆಕ್ಕದಲ್ಲಿ ಅದು ಎ ಕ್ಲಾಸ್ ತಾನೇ? ನಾವು ಹೊಟ್ಟೆಕಿಚ್ಚು ಬೀಳಲಿಲ್ಲ, ಸಿ ಕ್ಲಾಸಿಗೆ ಕೊಡಬೇಡಿರಿ ಎಂದು ಯಾರು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್:- ಮಂಡ್ಯ ಜಿಲ್ಲೆಗೆ 300 ಕೋಟಿ ರೂ.ಗಳನ್ನು ಯಾವ ಆಧಾರದಲ್ಲಿ ಕೊಟ್ಟಿರಿ ಹೇಳಿ. ಮಾನ್ಯ ಖರ್ಗೆಯವರು ಹೈದರಾಬಾದ್ ಕರ್ನಾಟಕದಿಂದ ಬಂದವರು, ಹೇಳಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಮಗೇನು ಸಿಕ್ಕಿದೆ ಎಂಬುದನ್ನು ಎಲ್ಲರ ಮುಂದೆ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಪಾಟೀಲರೇ ನೀವು ಮುಂದುವರೆಸಿ.

- ಗೊಂದಲ -

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಆಧಾರ ಸಹಿತ ಹೇಳುತ್ತಿದ್ದೇನೆ. ಸುಮ್ಮನೆ ಹೇಳುತ್ತಿಲ್ಲ. ವಿಶೇಷ ಪ್ರದೇಶ ಯೋಜನೆ, ಹೈದರಾಬಾದ್ ಕರ್ನಾಟಕದ ಬೆಳವಣಿಗೆ-ಹೋದ ವರ್ಷದ್ದು 220 ಕೋಟಿ ರೂ.ಗಳು ಈ ವರ್ಷ 171.10 ಕೋಟಿ, ರೂ.ಗಳು 1.99 ಶೇಕಡ. ನಿಮ್ಮ ಬಜೆಟ್‌ನಲ್ಲಿ ಎಷ್ಟು ಕಡಿಮೆಯಾಯಿತು. ತಾವೇ ಹೇಳಿ, ಇದು ಅನ್ಯಾಯವಾಗುವುದಿಲ್ಲವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಗೊಂದಲ ಮಾಡಿಕೊಳ್ಳಬೇಡಿ. ಅದು ಏರಿಯಾ ಅಭಿವೃದ್ಧಿ ನಿಧಿ, ಹಾಗೇ ಮಲೆನಾಡು ಬಂತು, ಬಾರ್ಡರ್ ಏರಿಯಾ ಬಂತು, ಬಯಲುಸೀಮೆ ಬಂತು ಈ ನಾಲ್ಕೈದು ಪ್ರೋಗ್ರಾಂ ಸೇರಿ ಹಾಗೆ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಈಗ ನಾನು ಹೇಳುತ್ತಿರುವುದು ವಿಶೇಷ ಪ್ರದೇಶ ಯೋಜನೆ ಬಗ್ಗೆ. ಹೈದರಾಬಾದ್ ಕರ್ನಾಟಕ ಗಡಿ ಪ್ರದೇಶದ ಬೆಳವಣಿಗೆ ಸತ್ತಿದೆ. ಅದೇ ರೀತಿ ಈ ವರ್ಷವೂ ಇದೆ. 171 ಕೋಟಿ ರೂ. ಈ ವರ್ಷ, 220 ಕೋಟಿ ರೂ.ಗಳು ಹೋದ ವರ್ಷ. ಈ ವರ್ಷ ಇವರೇ ಹೇಳಿದಂತೆ ಪ್ಲಾನ್ ಸೈಜ್ ಹೆಚ್ಚು ಮಾಡಿದ್ದಾರೆಂದರೆ 16 ಪರ್ಸೆಂಟ್ ಜಾಸ್ತಿಯಾಗಬೇಕಾಗಿತ್ತು. ಆದರೆ ಸುಮಾರು 100 ಕೋಟಿ ರೂ.ಯಷ್ಟು ಕಡಿಮೆಯಾಗಿದೆ. ಇದು ನನ್ನ ವಾದ. ಅಧ್ಯಕ್ಷರೇ, ಇನ್ನು ಗ್ರಾಮೀಣ ಅಭಿವೃದ್ಧಿ; ಇದಕ್ಕೆ ಹೆಚ್ಚು ಒತ್ತು ಕೊಟ್ಟು ಬಹಳ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಗ್ರಾಮೀಣ ಅಭಿವೃದ್ಧಿಗೆ ಹೋದ ವರ್ಷ ಎಷ್ಟು ಕೊಟ್ಟಿದ್ದರು, ಈ ವರ್ಷ ಎಷ್ಟು ಕೊಟಿದ್ದಾರೆ ಎಂದು ಹೇಳುತ್ತೇನೆ: ಈ ವರ್ಷ ಅದಕ್ಕೆ 2.74, ಹೋದ ವರ್ಷ 3.46 ಇತ್ತು. ಎಷ್ಟು ಕಡಿಮೆಯಾಯಿತು. ಇದು ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಡುವ ಬಜೆಟ್‌ಲ್ಲ ಎಂಬುದಕ್ಕೆ ಹೇಳುತ್ತಿದ್ದೇನೆ. ಹೋದ ವರ್ಷಕ್ಕಿಂತ ಒಂದು ಪಾಯಿಂಟ್ ಕಡಿಮೆ ಮಾಡಿದ್ದಾರೆ. ಹೇಗೆ ಗ್ರಾಮೀಣ ಅಭಿವೃದ್ಧಿ ಆಗುವುದು ಹೇಳಿ ನೋಡೋಣ. ವರ್ಷೇವರ್ಷೇ ಕಡಿಮೆ ಮಾಡಿಕೊಂಡು ಹೋದರೆ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ವರ್ಷವರ್ಷ ಅದು ಹೆಚ್ಚಾಗಬೇಕು. ಹೋದ ವರ್ಷದ 3.46 ಈ ವರ್ಷಕ್ಕೆ 5 ಆದರೂ ಆಗಬೇಕಾಗಿತ್ತು.

ಶ್ರೀ ಬಿ.ಆರ್. ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿಗೆ ಹೋದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಕೊಟ್ಟಿದ್ದಾರೆ. ಏಕೆಂದರೆ ಪ್ರತಿ ತಾಲ್ಲೂಕಿಗೆ ಒಂದು ಕೋಟಿ ರೂ.ಯನ್ನು ರಸ್ತೆಗಳಿಗೊಂದು ಡೈವರ್ಟ್ ಮಾಡಿ ಕೊಟ್ಟಿದ್ದಾರೆ. ಅದನ್ನೇನು ಬೆಂಗಳೂರಿಗೆ ಕೊಟ್ಟಿದ್ದಾರಾ? ಅದೇ 200 ಕೋಟಿ ರೂ.ಗಳಾಯಿತು.

- ಗೊಂದಲ -

ಅಧ್ಯಕ್ಷರು: ಒಬ್ಬೊಬ್ಬರು ಮಾತನಾಡಿ, ನಾಲ್ಕಾರು ಜನ ಮಾತನಾಡಿದರೆ ಅವರು ಬರೆದುಕೊಳ್ಳುವುದು ಹೇಗೆ? ಒಂದೊಂದು ತಾಲ್ಲೂಕಿಗೆ ಒಂದು ಕೋಟಿ ರೂ. ಗಳನ್ನು ಕೊಟ್ಟಿದ್ದಾರೆ, ಜಾರಿಗೆ ಬರಲಿ, ಆಮೇಲೆ ತಾನೇ ಗೊತ್ತಾಗುವುದು.

ಶ್ರೀ ಎಸ್.ಎಸ್. ಪಾಟೀಲ್: ಮುಂಡರಗಿ ಹೇಗಿದೆಯೋ ಕೋಲಾರ ಅದಕ್ಕಿಂತ ಕೆಟ್ಟದಾಗಿದೆ ನಿಮಗೂ ಕೂಡ ಕಷ್ಟವಿದೆ ಇದು, ನೀವು ಚೀಮಾರಿ ಹಾಕಬೇಕು; ಅಧ್ಯಕ್ಷರೇ, ಎಲ್ಲಾ

ಮಾಡೇ ಬಿಟ್ಟರು, ಆಗೇ ಹೋಯಿತು ಎನ್ನುವಂತೆ ಹೇಳಿದರು. ದುಡ್ಡಿಲ್ಲ, ಕೊಟ್ಟಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ನಮ್ಮ ಹೊಲ ನಮ್ಮ ರಸ್ತೆ ಎಂದು ಮಾಡಬೇಕಾಗಿತ್ತು, ಅದರೆ ನಮ್ಮ ಹೊಲ ಅವರ ರಸ್ತೆ ಇರುವುದರಿಂದ ಮಾಡುವುದಕ್ಕೆ ಆಗಿಲ್ಲ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ಇನ್ನು ಐದು ನಿಮಿಷವಿದೆ. ಈಗಾಗಲೇ 50 ನಿಮಿಷ ಮಾತನಾಡಿದ್ದೀರಿ, ಇನ್ನು 10 ನಿಮಿಷ ಬೇಕಾದರೆ ನಾಳೆ ತೆಗೆದುಕೊಳ್ಳಿ.

- ಗೊಂದಲ -

ಶ್ರೀ ಎಸ್.ಎಸ್. ಪಾಟೀಲ್: ರಾಜ್ಯಪಾಲರ ಭಾಷಣದ ಮೇಲೆ ನಾವು ಸಭಾತ್ಯಾಗ ಮಾಡಿದೆವು. ಆಗ ಚರ್ಚೆಯಾಗಲಿಲ್ಲ. ಅದರ ಟೈಮೆಲ್ಲಾ ಇಲ್ಲಿ ಕೊಡಬೇಕಾಗಿತ್ತು. ಎರಡು ದಿನ ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು: ಚರ್ಚೆ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲವಲ್ಲಾ. ನಿನ್ನೆಯಿಂದ ನಿಮ್ಮ ಪಕ್ಷದವರೇ ಮೂರು ಗಂಟೆ ಮಾತನಾಡಿದ್ದಾರೆ.

- ಗೊಂದಲ -

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಖರ್ಗೆಯವರಿಗೂ ಹೈದರಾಬಾದ್ ಪ್ರಾಂತ್ಯಕ್ಕೆ ಕಡಿಮೆ ಆದುದ್ದಕ್ಕೆ ನೋವಿದೆ. 300 ಕೋಟಿ ರೂ. ಮಂಡ್ಯಕ್ಕೆ ಕೊಟ್ಟಿರುವುದಕ್ಕೆ ನಿಮಗೂ ನೋವಿದೆ, ಎಂದು ನಾವು ಅನ್ನಬೇಕೇ ಹೊರತು ನೀವು ಅನ್ನುವುದಕ್ಕಾಗುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾವು ಆ ಕಡೆ ಇದ್ದಾಗ ಇವರ ನೋವೂ ನಮಗೆ ಅರ್ಥವಾಗುತ್ತಿತ್ತು. ಇವತ್ತು ನಮ್ಮ ನೋವು ಅವರಿಗೆ ಅರ್ಥವಾಗುತ್ತಿರುವುದರಿಂದ ನನಗೆ ಸಂತೋಷವಾಗಿದೆ.

ಅಧ್ಯಕ್ಷರು:- ನಾಳೆ ದಿವಸ ನೀವು ಹದಿನೈದು ನಿಮಿಷ ಮಾತನಾಡಿ. ಅದಕ್ಕೂ ಹೆಚ್ಚಾಗಿ ಮಾತನಾಡಬೇಕೆಂದರೆ ನಿಮ್ಮ ಕಡೆ ಬೇರೆ ಯಾರು ಮಾತನಾಡುತ್ತಾರೋ ಅವರಿಗೆ ಸಮಯ ಸಿಗುವುದಿಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 7-01 ನಿಮಿಷಕ್ಕೆ ಮುಂದೂಡಲ್ಪಟ್ಟು ನಾಳೆ ಅಂದರೆ ದಿನಾಂಕ 27-03-2002 ರಂದು ಬೆಳಿಗ್ಗೆ 10-00 ಮತ್ತೆ ಸಮಾವೇಶಗೊಳ್ಳಲು ನಿರ್ಧರಿಸಿತು).

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)